SUPREME AUDIT INSTITUTION OF INDIA
लोकहितार्थ सत्यनिष्ठा
Dedicated to Truth in Public Interest

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ

2024-25 ಕೊನೆಗೊಂಡ ವರ್ಷ

ಕರ್ನಾಟಕ ಸರ್ಕಾರ

2026ರ ವರದಿ ಸಂಖ್ಯೆ – 02

(ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ)

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ

ರಾಜ್ಯದ ಹಣಕಾಸಿನ ವ್ಯವಹಾರಗಳ

ಲೆಕ್ಕಪರಿಶೋಧನಾ ವರದಿ

2024–25 ಕೊನೆಗೊಂಡ ವರ್ಷ

ಕರ್ನಾಟಕ ಸರ್ಕಾರ

2026ರ ವರದಿ ಸಂಖ್ಯೆ – 02

(ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ)

ವಿಷಯಸೂಚಿ

ವಿಷಯಗಳು	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ
ಮುನ್ನುಡಿ		ix
ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ವಿಧಾನ		xiii
ಕಾರ್ಯನಿರ್ವಹಣಾ ಸಾರಾಂಶ		xix
ಅಧ್ಯಾಯ–1: ರಾಜ್ಯದ ಹಣಕಾಸಿನ ಸ್ಥೂಲ ಸಮೀಕ್ಷೆ		
ರಾಜ್ಯದ ಚಿತ್ರ	1.1	1
ರಾಜ್ಯದ ಜನಸಂಖ್ಯೆ	1.1.1	1
ರಾಜ್ಯದ ಆರ್ಥಿಕತೆ	1.1.2	2
ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾ ಆದಾಯ	1.1.2.1	2
ಜಿ ಎಸ್ ಡಿ ಪಿಗೆ ವಲಯವಾರು ಕೊಡುಗೆ	1.1.2.2	4
ಹಣಕಾಸಿನ ಕ್ಷಿಪ್ರನೋಟ	1.1.3	5
ನಿಧಿಗಳ ಮೂಲಗಳು ಮತ್ತು ಅನ್ವಯ	1.1.4	7
ಸರ್ಕಾರದ ಆಸ್ತಿ ಮತ್ತು ಹೊಣೆಗಾರಿಕೆಗಳ ಕ್ಷಿಪ್ರ ನೋಟ	1.1.5	7
ರಾಜ್ಯದ ಸಂಚಿತ ನಿಧಿ	1.2	9
ರಾಜಸ್ವ ಸ್ವೀಕೃತಿಗಳು	1.2.1	9
ಬಂಡವಾಳ ಸ್ವೀಕೃತಿಗಳು	1.2.2	22
ಹಣಕಾಸು ಆಯೋಗದ ಮುನ್ಸೂಚನೆಗಳು ಮತ್ತು ವಾಸ್ತವಗಳು	1.2.3	23
ವೆಚ್ಚ	1.2.4	24
ರಾಜಸ್ವ ವೆಚ್ಚ	1.2.4.1	26
ಬಂಡವಾಳ ವೆಚ್ಚ	1.2.4.2	36
ಸಾದಿಲ್ವಾರು ನಿಧಿ	1.3	39
ಸಾರ್ವಜನಿಕ ಲೆಕ್ಕ	1.4	40
ನಿವ್ವಳ ಸಾರ್ವಜನಿಕ ಲೆಕ್ಕ ಶಿಲ್ಕುಗಳು	1.4.1	40
ಮೀಸಲು ನಿಧಿಗಳು	1.4.2	41
ನಗದು ಶಿಲ್ಕು	1.4.3	43
ಹಣಕಾಸಿನ ಸುಸ್ಥಿರತೆ	1.5	44
ಸಾರ್ವಜನಿಕ ಹೊಣೆಗಾರಿಕೆ ನಿರ್ವಹಣೆ	1.5.1	45
ಹೊಣೆಗಾರಿಕೆ ಘಟಕಗಳು	1.5.1.1	46
ಎರವಲು ಪಡೆದ ನಿಧಿಗಳ ಬಳಕೆ	1.5.1.2	49
ಸಾಲದ ವಿವರ: ಅವಧಿ ಪೂರ್ಣ ಋಣ ಮತ್ತು ಮರುಪಾವತಿ	1.5.1.3	50
ವಿತ್ತೀಯ ಕೊರತೆಯನ್ನು ಭರಿಸುವ ರೀತಿ	1.5.1.4	50
ಲೆಕ್ಕಪರಿಶೋಧನೋತ್ತರದ ಕೊರತೆ ಸೂಚಕಗಳು	1.5.2	51
ಹಣಕಾಸಿನ ಸಮತೋಲನ: ಕೊರತೆ ಮತ್ತು ಒಟ್ಟು ಸಾಲದ ಗುರಿಗಳ ಸಾಧನೆ	1.5.3	52
ಎಲ್ಲಾ ರಾಜ್ಯಗಳ ಒಟ್ಟು ಮೊತ್ತದೊಂದಿಗೆ ರಾಜ್ಯದ ಪ್ರಮುಖ ವಿತ್ತೀಯ ಸೂಚಕಗಳ ಹೋಲಿಕೆ	1.5.4	54
ಸಾಲ ಸುಸ್ಥಿರತಾ ವಿಶ್ಲೇಷಣೆ	1.5.5	56
ಖಾತರಿಗಳ ಸ್ಥಿತಿ – ಆಕಸ್ಮಿಕ ಹೊಣೆಗಾರಿಕೆಗಳು	1.5.6	58

ವಿಷಯಗಳು	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ
ಹಣಕಾಸಿನ ಸ್ಥಿರತೆಗೆ ಮಾರ್ಗಗಳು	1.6	59
ರಾಜ್ಯದ ಆದಾಯವನ್ನು ಸುಧಾರಿಸುವುದು	1.6.1	59
ವೆಚ್ಚ ಭಾಗದ ಸಮಸ್ಯೆಗಳು	1.6.2	61
ಮುಕ್ತಾಯ	1.7	63
ಶಿಫಾರಸುಗಳು	1.8	64
ಅಧ್ಯಾಯ 2: ಆಯವ್ಯಯ ನಿರ್ವಹಣೆ		
ಆಯವ್ಯಯ ಪ್ರಕ್ರಿಯೆ	2.1	67
ಆಯವ್ಯಯ ಪ್ರಕ್ಷೇಪಣೆ ಮತ್ತು ನಿರೀಕ್ಷೆ ಹಾಗು ವಾಸ್ತವಿಕದ ನಡುವಿನ ಅಂತರ	2.2	68
ಆಯವ್ಯಯದ ಅವಕಾಶಗಳು ಮತ್ತು ವೆಚ್ಚಗಳ ಘಟಕ/ಸೇವೆಗಳವಾರು ವಿಶ್ಲೇಷಣೆ	2.2.1	69
ಆಯವ್ಯಯದಲ್ಲಿನ ವ್ಯತ್ಯಾಸದಲ್ಲಿ ವಿವರಣೆ ಕಾಣೆಯಾಗಿರುವ / ಅಪೂರ್ಣವಿವರಣೆ	2.2.2	70
ಆಯವ್ಯಯ ಗುರಿಗಾರಿಕೆ	2.3	71
ಧನವಿನಿಯೋಗ ಲೆಕ್ಕಗಳು	2.4	72
ಧನವಿನಿಯೋಗ ಲೆಕ್ಕಗಳು	2.5	72
ಕಾನೂನಿನ ಪ್ರಾಧಿಕಾರವಿಲ್ಲದೆ ಮಾಡಿದ ವೆಚ್ಚ	2.5.1	72
ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆ ಮಾಡಲಾದ ಹೆಚ್ಚುವರಿ ಮೊತ್ತ	2.5.1.1	72
ಹೆಚ್ಚುವರಿ ವೆಚ್ಚ ಮತ್ತು ಅದರ ಸಕ್ರಮಗೊಳಿಸುವಿಕೆ	2.5.2	73
ಅನಗತ್ಯ ಪೂರಕ ಬೇಡಿಕೆಗಳು	2.5.3	75
ಅನುದಾನ 10 – ಸಮಾಜ ಕಲ್ಯಾಣ	2.5.3.1	76
ಅನುದಾನ 19 – ನಗರಾಭಿವೃದ್ಧಿ	2.5.3.2	76
ನಿಧಿಯ ವಿವೇಚನಾರಹಿತ ಪುನರ್ವಿನಿಯೋಗ	2.5.4	77
ಆಯ್ದ ಅನುದಾನಗಳ ವಿಶ್ಲೇಷಣೆ	2.5.4.1	77
ವೆಚ್ಚ ಮಾಡದ ಅವಕಾಶ ಮತ್ತು ಅಧ್ಯರ್ಪಣೆಗಳು	2.5.5	77
ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚದ ನಡುವಿನ ತಪ್ಪು ವರ್ಗೀಕರಣ	2.5.6	80
ಆಯವ್ಯಯದನಲ್ಲಿನ ಪ್ರಮುಖ ಕಾರ್ಯನೀತಿ ಘೋಷಣೆಗಳು ಮತ್ತು ಅವುಗಳ ಅನುಷ್ಠಾನ	2.5.7	81
ತ್ರೈಮಾಸಿಕ ವೆಚ್ಚ ಮಿತಿಯನ್ನು ಪಾಲಿಸದಿರುವುದು	2.5.8	81
ಆಯ್ದ ಅನುದಾನ–ವಾರು ವೆಚ್ಚ ವಿಶ್ಲೇಷಣೆ	2.5.8.1	82
ರಾಜ್ಯದಲ್ಲಿ ಆಯ್ದ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನ	2.6	83
ರಾಜ್ಯ ಸಂಬಂಧಿತ ಕೇಂದ್ರ ಪ್ರಾಯೋಜಿತ ಯೋಜನೆಗಳು	2.6.1	83
ಏಕ ನೋಡಲ್ ಏಜೆನ್ಸಿ – ಕೇಂದ್ರ ಮತ್ತು ರಾಜ್ಯ ಷೇರು ವರ್ಗಾವಣೆ	2.6.2	84
ಏಕ ನೋಡಲ್ ಸಂಸ್ಥೆ, ಸಮಗ್ರ ತ್ವರಿತ ವರ್ಗಾವಣೆಗಳಿಗಾಗಿ ನೈಜ–ಸಮಯದ ವ್ಯವಸ್ಥೆ	2.6.3	87
ಆಯ್ದ ಅನುದಾನಗಳ ವಿವರವಾದ ವಿಮರ್ಶೆಯಲ್ಲಿ ಗಮನಿಸಲಾದ ಇತರ ಸಮಸ್ಯೆಗಳು	2.7	88
ಅನುದಾನ ಸಂಖ್ಯೆ 10ರ ವಿಮರ್ಶೆ – ಸಮಾಜ ಕಲ್ಯಾಣ	2.7.1	88
ಪರಿಚಯ	2.7.1.1	88

ವಿಷಯಗಳು	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ
ಆಯವ್ಯಯ ಮತ್ತು ವೆಚ್ಚ	2.7.1.2	89
ಕೇಂದ್ರ ನೆರವಿನ ನಷ್ಟ	2.7.1.3	91
ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ರಾಜ್ಯ ಹೊಂದಾಣಿಕೆಯ ಪಾಲನ್ನು ಬಿಡುಗಡೆ ಮಾಡದಿರುವುದು	2.7.1.4	92
ನಿಗಮಗಳು ಬ್ಯಾಂಕ್ ಖಾತೆಗಳನ್ನು ಮುಚ್ಚದಿರುವುದು	2.7.1.5	92
ಸಹಾಯಾನುದಾನ ವಹಿಯನ್ನು ನಿರ್ವಹಿಸದಿರುವುದು	2.7.1.6	92
ತೀರ್ಮಾನ	2.8	93
ಶಿಫಾರಸುಗಳು	2.9	94
ಅಧ್ಯಾಯ 3: ಆರ್ಥಿಕ ನಿರೂಪಣಾ ಪದ್ಧತಿಗಳು		
ರಾಜ್ಯ ಸರ್ಕಾರಿ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು (ಪಿಎಸ್‌ಯು) ಮತ್ತು ಪ್ರಾಧಿಕಾರ ಆಯವ್ಯಯೇತರ ಸಾಲಗಳು	3.1	97
ಸರ್ಕಾರ ಪಾವತಿಸದಿರುವ ಹೊಣೆಗಾರಿಕೆ	3.2	98
ಪಾವತಿಸದಿರುವ ಬಡ್ಡಿ ಹೊಣೆಗಾರಿಕೆಗಳು	3.2.1	98
ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯಲ್ಲಿ ಅಲ್ಪಾ ಕೊಡುಗೆ	3.2.2	99
ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಸೆಸ್ ವರ್ಗಾವಣೆ ಮಾಡದಿರುವುದು	3.2.3	100
ರಾಷ್ಟ್ರೀಯ ಖನಿಜ ಪರಿಶೋಧನಾ ಟ್ರಸ್ಟ್ ನಿಧಿ	3.2.4	100
ಮರುಪಾವತಿ ಪ್ರಕರಣಗಳ ಬಾಕಿ	3.2.5	100
ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಲ್ಲಿ ವಿಳಂಬ	3.3	101
ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು	3.4	102
ವೈಯಕ್ತಿಕ ಠೇವಣಿ ಖಾತೆಗಳು	3.5	104
ವೈಯಕ್ತಿಕ ಠೇವಣಿ ಖಾತೆಗಳ ಸ್ಥಿತಿ	3.5.1	104
ವೈಯುಕ್ತಿಕ ಖಾತೆಗಳ ಅಂತಿಮ ಬಾಕಿಯ ಪ್ರವೃತ್ತಿಗಳು	3.5.2	104
ಕಿರು ಶೀರ್ಷಿಕೆ–800ರ ನಿರ್ವಹಣೆ	3.6	106
ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು	3.7	107
ಇಲಾಖೆಗಳ ಅಂಕಿಅಂಶಗಳನ್ನು ಸಮನ್ವಯ ಮಾಡಿರುವುದು	3.8	109
ನಗದು ಶಿಲ್ಕುಗಳ ಸಮನ್ವಯ	3.9	110
ಲೆಕ್ಕಪತ್ರ ಮಾನದಂಡಗಳ ಅನುಸರಣೆ	3.10	110
ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ	3.11	111
ಹಣ ದುರ್ಬಳಕೆ, ನಷ್ಟಗಳು, ಕಳ್ಳತನ, ಇತ್ಯಾದಿ	3.12	112
ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ	3.13	114
ತೀರ್ಮಾನ	3.14	114
ಶಿಫಾರಸುಗಳು	3.15	115
ಅನುಬಂಧಗಳು		
ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು	1.1	119
2024–25ನೇ ಸಾಲಿನ ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ	1.2	124
31 ಮಾರ್ಚ್ 2025ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ	1.3	128

ವಿಷಯಗಳು	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ
ಆರ್ಥಿಕ ನೆರವು, ಪ್ರೋತ್ಸಾಹಧನ ಇತರೆ ರೂಪದಲ್ಲಿ ಸಹಾಯಧನಗಳು	1.4	130
ಉಳಿತಾಯದ ಮೊತ್ತಗಳಿಗೆ ನಿರ್ದಿಷ್ಟ ಮಾಹಿತಿ ಒದಗಿಸದ ಅನುದಾನಗಳ ವಿವರಗಳು	2.1	131
ಅನುದಾನವಾರು ವಿವರಗಳು ಆಯವ್ಯಯ ಹಂಚಿಕೆ/ಹೊರಹರಿವು ಮತ್ತು ಆಯವ್ಯಯ ಅಂದಾಜಿನಿಂದ ಹೊರಹರಿವಿನ ವಿಚಲನ	2.2	132
ಆಯವ್ಯಯ ಅವಕಾಶ ಅಥವಾ ಪುನರ್ವಿನಿಯೋಗ ವಿಲ್ಲದೆ ಮಾಡಿದ ವೆಚ್ಚ	2.3	134
ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ಕಾರ್ಯಕಾರಿ ಆದೇಶಗಳ ಮುಖಾಂತರ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಲಾದ ಹೆಚ್ಚುವರಿ ಅವಕಾಶಗಳು	2.4	135
ಪೂರಕ ಅಂದಾಜು (ಪ್ರತಿ ಪ್ರಕರಣದಲ್ಲಿ ₹ ಒಂದು ಕೋಟಿ ಅಥವಾ ಹೆಚ್ಚು) ಅನಗತ್ಯವೆಂದು ಸಾಬೀತಾದ ಪ್ರಕರಣಗಳು	2.5	136
ಪೂರಕ ಅಂದಾಜು (ಪ್ರತಿ ಪ್ರಕರಣದಲ್ಲಿ ₹ ಮೂರು ಕೋಟಿ ಅಥವಾ ಅದಕ್ಕಿಂತ ಹೆಚ್ಚು) ಮಿತಿಮೀರಿದ ಮೊತ್ತವೆಂದು ಸಾಬೀತಾದ ಪ್ರಕರಣಗಳು	2.6	137
2024–25ನೇ ಹಣಕಾಸು ವರ್ಷದಲ್ಲಿ ಅನಗತ್ಯ / ವಿವೇಚನಾರಹಿತ ನಿಧಿಯ ಪುನರ್ವಿನಿಯೋಗ	2.7	138
2024–25ನೇ ಹಣಕಾಸು ವರ್ಷದಲ್ಲಿ, ಅಧ್ಯರ್ಪಣೆಯ ನಂತರ (₹100 ಕೋಟಿ ಮೀರಿದ) ಭಾರಿ ಉಳಿತಾಯ ಹೊಂದಿರುವ ಅನುದಾನಗಳು	2.8	140
2022–23ರಿಂದ 2024–25ನೇ ಹಣಕಾಸು ವರ್ಷದವರೆಗೆ ನಿರಂತರ ಉಳಿತಾಯ (₹ ಒಂದು ಕೋಟಿಗಿಂತ ಹೆಚ್ಚು) ಹೊಂದಿರುವ ಅನುದಾನಗಳು	2.9	141
2024–25ನೇ ಹಣಕಾಸು ವರ್ಷದಲ್ಲಿ ಆಯವ್ಯಯ ಮತ್ತು ಉಳಿತಾಯದ ಅನುದಾನವಾರು ಬಳಕೆಯ ಶೇಕಡಾವಾರು	2.10	142
ಅಧ್ಯರ್ಪಣೆ ಮಾಡದ ಉಳಿತಾಯ	2.11	144
ಮಾರ್ಚ್ 2025ರ ಕೊನೆಯ ದಿನದಂದು ₹ 10 ಕೋಟಿಗಿಂತ ಹೆಚ್ಚಿನ ಹಣವನ್ನು ಅಧ್ಯರ್ಪಣೆ ಮಾಡಿರುವುದು	2.12	145
2024–25ನೇ ಹಣಕಾಸು ವರ್ಷದ ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚವೆಂದು ತಪ್ಪಾಗಿ ವರ್ಗೀಕರಿಸುವುದು	2.13	146
ಅನುದಾನ ಸಂಖ್ಯೆ 10 ಮತ್ತು ಅನುದಾನ ಸಂಖ್ಯೆ 19ರ ಅಡಿಯಲ್ಲಿ ನೀತಿ ಉಪಕ್ರಮ	2.14	148
2024–25ನೇ ಹಣಕಾಸು ವರ್ಷದ ನಿಗಮವಾರು ಬಿಡುಗಡೆಗಳ ವಿವರಗಳು	2.15	165
ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ ನಿಗಮಗಳು ನಿರ್ವಹಿಸುವ ಬ್ಯಾಂಕ್ ಖಾತೆಗಳ ವಿವರಗಳು	2.16	167
ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿದಿರುವ ಶಿಲ್ಕುಗಳು	3.1	169
ಋಣಾತ್ಮಕ ಶಿಲ್ಕುಗಳ ವೈಯಕ್ತಿಕ ಠೇವಣಿ ಖಾತೆಗಳು	3.2	171
ಪಾರಿಭಾಷಿಕ ಪದಕೋಶ		172

ಮುನ್ನುಡಿ

ಮುನ್ನುಡಿ

ಈ ವರದಿಯನ್ನು ಭಾರತದ ಸಂವಿಧಾನದ ಅನುಚ್ಛೇದ 151ರ ಅನ್ವಯ ಕರ್ನಾಟಕ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದ್ದು, ನಂತರ ಕರ್ನಾಟಕ ವಿಧಾನಮಂಡಲದಲ್ಲಿ ಮಂಡಿಸಲಾಗುತ್ತದೆ. ಕರ್ನಾಟಕ ಸರ್ಕಾರದ ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ 2024–25 ಆರ್ಥಿಕ ವರ್ಷದ ಅವಧಿಯಲ್ಲಿ ರಾಜ್ಯದ ಹಣಕಾಸಿನ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಉದ್ದೇಶವನ್ನು ಹೊಂದಿದ್ದು ಹಾಗೂ ಹಣಕಾಸು ಮಾಹಿತಿಯ ಪರಿಶೀಲನಾ ವಿಶ್ಲೇಷಣೆಯ ಆಧಾರದ ಮೇಲೆ ರಾಜ್ಯ ವಿಧಾನಮಂಡಲಕ್ಕೆ ಅಗತ್ಯ ಮಾಹಿತಿಯನ್ನು ಒದಗಿಸುತ್ತದೆ. ಈ ವರದಿ ಮೂರು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ 1 – ರಾಜ್ಯದ ಹಣಕಾಸಿನ ಸಮಗ್ರ ಅವಲೋಕನ

ಈ ಅಧ್ಯಾಯವು ವರದಿಯ ಆಧಾರ ಮತ್ತು ವಿಧಾನವನ್ನು ವಿವರಿಸುತ್ತದೆ ಹಾಗೂ ರಾಜ್ಯದ ಹಣಕಾಸಿನ ಸಮಗ್ರ ದೃಷ್ಟಿಕೋನವನ್ನು ನೀಡುತ್ತದೆ. ಇದರಲ್ಲಿ ಪ್ರಮುಖ ಸೂಚ್ಯಂಕಗಳ ವಿಸ್ತೃತ–ಹಣಕಾಸು ವಿಶ್ಲೇಷಣೆ ಹಾಗೂ ರಾಜ್ಯದ ಹಣಕಾಸಿನ ಸ್ಥಿತಿ, ಕೊರತೆ/ಹೆಚ್ಚಳ ಸಾಲದ ಸ್ವರೂಪ ಮತ್ತು ಸಾರ್ವಜನಿಕ ಖಾತೆಯ ಪ್ರಮುಖ ವ್ಯವಹಾರಗಳನ್ನು ಒಳಗೊಂಡಿದೆ.

ಅಧ್ಯಾಯ 2 – ಆಯವ್ಯಯ ನಿರ್ವಹಣೆ

ಈ ಅಧ್ಯಾಯವು ರಾಜ್ಯದ ಧನವಿನಿಯೋಗ ಲೆಕ್ಕಗಳ ಆಧಾರದ ಮೇಲೆ ಸಿದ್ಧಪಡಿಸಲ್ಪಟ್ಟಿದ್ದು, ರಾಜ್ಯ ಸರ್ಕಾರದ ಅನುದಾನ ಹಂಚಿಕೆ ಮತ್ತು ಪ್ರಾಧಾನ್ಯತೆಗಳನ್ನು ಪರಿಶೀಲಿಸುತ್ತದೆ ಹಾಗೂ ಆಯವ್ಯಯ ನಿರ್ವಹಣೆಗೆ ಸಂಬಂಧಿಸಿದ ಸಂವಿಧಾನಾತ್ಮಕ ನಿಯಮಗಳಿಂದ ಉಂಟಾದ ವಿಚಲನಗಳ ಬಗ್ಗೆ ವರದಿ ಮಾಡುತ್ತದೆ.

ಅಧ್ಯಾಯ 3 – ಆರ್ಥಿಕ ನಿರೂಪಣಾ ಪದ್ಧತಿಗಳು

ಈ ಅಧ್ಯಾಯವು ರಾಜ್ಯ ಸರ್ಕಾರದ ವಿವಿಧ ಅಧಿಕಾರಿಗಳು ಸಲ್ಲಿಸಿದ ಲೆಕ್ಕಪತ್ರಗಳ ಗುಣಮಟ್ಟದ ಬಗ್ಗೆ ಅಭಿಪ್ರಾಯ ನೀಡುತ್ತದೆ ಮತ್ತು ವಿವಿಧ ಇಲಾಖೆಗಳು ನಿರ್ದಿಷ್ಟ ಹಣಕಾಸು ನಿಯಮಗಳು ಮತ್ತು ನಿಯಮಾವಳಿಗಳನ್ನು ಪಾಲಿಸದಿರುವ ವಿಷಯಗಳನ್ನು ಉಲ್ಲೇಖಿಸುತ್ತದೆ.

ಈ ವರದಿಯನ್ನು (13ನೇ ವರದಿ – ಡಿಸೆಂಬರ್ 2011) ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಹಿಂದಿನ ಶಿಫಾರಸುಗಳಿಗೆ ಪ್ರತಿಕ್ರಿಯೆಯಾಗಿ ಸಲ್ಲಿಸಿದ ಕ್ರಮದ ಬಗ್ಗೆ ತೆಗೆದುಕೊಂಡಿರುವ ವರದಿ ಮೇಲೆ ನೀಡಿದ (5ನೇ ವರದಿ – ಜುಲೈ 2015) ಶಿಫಾರಸುಗಳನ್ನು ಒಳಗೊಂಡಿದೆ. ಜೊತೆಗೆ, 2011–12ರಿಂದ 2019–20ರವರೆಗಿನ ರಾಜ್ಯ ಹಣಕಾಸು ಪರಿಶೀಲನಾ ವರದಿ ಕುರಿತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ 10ನೇ ವರದಿ (ಫೆಬ್ರವರಿ 2023) ಯ ಶಿಫಾರಸುಗಳನ್ನೂ ಪರಿಗಣಿಸಲಾಗಿದೆ.

ವಿವಿಧ ಇಲಾಖೆಗಳ ಕಾರ್ಯಕ್ಷಮತಾ ಪರಿಶೀಲನೆ ಮತ್ತು ವ್ಯವಹಾರಗಳ ಪರಿಶೀಲನೆಯಿಂದ ಹೊರಬಂದ ಕಂಡುಬಂದ ವಿಷಯಗಳು, ಕಾನೂನುಬದ್ಧ ನಿಗಮಗಳು, ಮಂಡಳಿಗಳು ಹಾಗೂ ಸರ್ಕಾರಿ ಕಂಪನಿಗಳ ಪರಿಶೀಲನೆಗಳಿಂದ ಹೊರಬಂದ ಅಭಿಪ್ರಾಯಗಳನ್ನು ಒಳಗೊಂಡ ವರದಿಗಳು ಹಾಗೂ ಆದಾಯ ಸ್ವೀಕೃತಿಗಳ ಕುರಿತು ಮಾಡಲಾದ ಗಮನಾರ್ಹತೆಗಳನ್ನು ಒಳಗೊಂಡ ವರದಿ ಪ್ರತ್ಯೇಕವಾಗಿ ಮಂಡಿಸಲಾಗುತ್ತದೆ.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ

ಆಧಾರ ಮತ್ತು ಅನುಸರಿಸಿದ ವಿಧಾನ

ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ವಿಧಾನ

ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿಯನ್ನು ಭಾರತದ ಸಂವಿಧಾನದ ಅನುಚ್ಛೇದ 151(2)ರ ಪ್ರಕಾರ ಸಿದ್ಧಪಡಿಸಲಾಗಿದೆ. ಈ ಅನುಚ್ಛೇದದ ಅನ್ವಯ ರಾಜ್ಯದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ರಾಜ್ಯದ ಶಾಸಕಾಂಗದ ಮುಂದೆ ಮಂಡಿಸಲು ಕ್ರಮ ಕೈಗೊಳ್ಳಲು ಅನುವಾಗುವಂತೆ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುವುದು.

ಖಜಾನೆಗಳು, ಆರಂಭಿಕ ಮತ್ತು ಪೂರಕ ಲೆಕ್ಕ ನಿರ್ವಹಣಾ ಜವಾಬ್ದಾರಿಯನ್ನು ಹೊಂದಿರುವ ಕಛೇರಿಗಳು ಹಾಗೂ ಇತರ ಇಲಾಖೆಗಳು ಸಲ್ಲಿಸುವ ಲೆಕ್ಕಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದ ವಿವರಣಾ ಪಟ್ಟಿಗಳಿಂದ ಪ್ರತಿ ವರ್ಷ ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಸಿದ್ಧಪಡಿಸುತ್ತಾರೆ. ಈ ಲೆಕ್ಕಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ) ಸ್ವತಂತ್ರವಾಗಿ ಪರಿಶೀಲಿಸುತ್ತಾರೆ ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪ್ರಮಾಣೀಕರಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು ಈ ವರದಿಯ ಪ್ರಮುಖ ದತ್ತಾಂಶಗಳಾಗಿವೆ. ಇತರ ಮೂಲಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

- ಪ್ರಕ್ಷೇಪಣಗಳಿಗೆ ಪ್ರತಿಯಾಗಿ ವಿತ್ತೀಯ ಪ್ರಮಿತಿಗಳು ಮತ್ತು ಹಂಚಿಕೆಯ ಆದ್ಯತೆಗಳ ಹಾಗೂ ಆಯವ್ಯಯ ಅನುಷ್ಠಾನದ ಪರಿಣಾಮಕಾರಿತ್ವವನ್ನು ಹಾಗೂ ಸಂಬಂಧಪಟ್ಟ ನಿಯಮಗಳು ಮತ್ತು ನಿಗದಿತ ಕಾರ್ಯ ವಿಧಾನಗಳ ಅನುಸರಣೆಯನ್ನು ನಿರ್ಧರಿಸಲು ರಾಜ್ಯದ ಆಯವ್ಯಯ ಅಂದಾಜುಗಳು;
- ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ–I) ಮತ್ತು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ–II) ಕಚೇರಿಯಿಂದ ನಡೆಸಿದ ಲೆಕ್ಕ ಪರಿಶೋಧನಾ ಫಲಿತಾಂಶಗಳು;
- ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದ ಇತರ ಹಣಕಾಸು ದತ್ತಾಂಶ;
- ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯದಿಂದ ಪಡೆದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ದತ್ತಾಂಶ ಮತ್ತು ಇತರ ರಾಜ್ಯ ಸಂಬಂಧಿತ ಅಂಕಿ ಅಂಶಗಳು;
- ಹದಿನೈದನೆಯ ಹಣಕಾಸು ಆಯೋಗದ ಶಿಫಾರಸುಗಳು;
- ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002; ಮತ್ತು
- ಭಾರತ ಸರ್ಕಾರದ ಮಾರ್ಗಸೂಚಿಗಳು.

ಸರ್ಕಾರಿ ಲೆಕ್ಕಗಳ ರಚನೆ

ರಾಜ್ಯ ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ನಿರ್ವಹಿಸಲಾಗಿದೆ.

ಸಂಚಿತ ನಿಧಿ

•ರಾಜಸ್ವ ಮತ್ತು ಬಂಡವಾಳ ಲೆಕ್ಕ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳ ಎಲ್ಲ ಸ್ವೀಕೃತಿಗಳು ಮತ್ತು ವೆಚ್ಚಗಳು ಸಂವಿಧಾನದ 266(1)ನೇ ಅನುಚ್ಛೇದದಡಿ ಸ್ಥಾಪಿಸಲಾದ ರಾಜ್ಯದ ಸಂಚಿತ ನಿಧಿ ಎಂಬ ಹೆಸರಿನ ಒಂದು ಕ್ರೋಢೀಕೃತ ನಿಧಿಯಡಿ ಲೆಕ್ಕ ಮಾಡಲಾಗುತ್ತದೆ.

ಸಾದಿಲ್ವಾರು ನಿಧಿ

•ರಾಜ್ಯದ ಸಾದಿಲ್ವಾರು ನಿಧಿಯು ಸಂವಿಧಾನದ 267(2)ನೇ ಅನುಚ್ಛೇದದಡಿ ಸ್ಥಾಪಿಸಲಾಗಿರುವ ರಾಜ್ಯಪಾಲರ ವಿಲೇವಾರಿಯಲ್ಲಿರುವ ಮುಂಗಡ ಸ್ವರೂಪದ ನಿಧಿಯಾಗಿದ್ದು ಸರ್ಕಾರದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಶಾಸಕಾಂಗದ ನಂತರದ ಅನುಮೋದನೆಗೆ ಒಳಪಟ್ಟು ಮುಂಗಡವಾಗಿ ನೀಡಲು ಅವಕಾಶವನ್ನು ಒದಗಿಸುತ್ತದೆ. ರಾಜ್ಯ ಸಂಚಿತ ನಿಧಿಯ ಕ್ರಿಯಾ ಪ್ರಧಾನ ಲೆಕ್ಕ ಶೀರ್ಷಿಕೆಗೆ ವೆಚ್ಚ ಹಾಕಿ ನಿಧಿಗೆ ಪುನರ್ಭರ್ತಿ ಮಾಡಲಾಗುತ್ತದೆ.

ಸಾರ್ವಜನಿಕ ಲೆಕ್ಕ

•ರಾಜ್ಯ ಸಂಚಿತ ನಿಧಿಯ ಭಾಗವಲ್ಲದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿ, ಠೇವಣಿಗಳು, ಅಮಾನತ್ತು ಮತ್ತು ಇರಸಾಲುಗಳು ಮುಂತಾದವುಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ವೆಚ್ಚಗಳ ಲೆಕ್ಕವನ್ನು ಸಂವಿಧಾನದ 266(2)ನೇ ಅನುಚ್ಛೇದದಡಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಡಿ ಇಡಲಾಗುತ್ತದೆ ಮತ್ತು ಈ ಲೆಕ್ಕದಡಿಯ ವ್ಯವಹಾರಗಳು ಶಾಸಕಾಂಗದ ಅನುಮೋದನೆಗೆ ಒಳಪಟ್ಟಿರುವುದಿಲ್ಲ.

ಭಾರತದ ಸಂವಿಧಾನದ 202ನೇ ವಿಧಿಯ ಅನ್ವಯ ರಾಜ್ಯ ಶಾಸಕಾಂಗದ ಉಭಯ ಸದನಗಳಲ್ಲಿ ಆಯವ್ಯಯವನ್ನು ಮಂಡಿಸಬೇಕು. 'ವಾರ್ಷಿಕ ಹಣಕಾಸು ವಿವರಣಾ ಪಟ್ಟಿ'ಯು ಆಯವ್ಯಯದ ಮುಖ್ಯ ದಾಖಲೆಯಾಗಿದೆ. ಆಯವ್ಯಯವು ಕೆಳಗಿನವುಗಳನ್ನು ಒಳಗೊಂಡಿರುತ್ತದೆ.

- **ರಾಜಸ್ವ ಸ್ವೀಕೃತಿಗಳು:** ತೆರಿಗೆ ಆದಾಯ, (ಕೇಂದ್ರ ತೆರಿಗೆಗಳು/ಸುಂಕಗಳ ಪಾಲು) ತೆರಿಗೆಯೇತರ ಆದಾಯ, ಮತ್ತು ಭಾರತ ಸರ್ಕಾರದ ಅನುದಾನವನ್ನು ಒಳಗೊಂಡಿರುತ್ತದೆ.
- **ರಾಜಸ್ವ ವೆಚ್ಚ:** ಇದು ಭೌತಿಕ ಅಥವಾ ಹಣಕಾಸಿನ ಆಸ್ತಿಗಳ ಸೃಷ್ಟಿಗೆ ಕಾರಣವಾಗದ ಸರ್ಕಾರದ ಎಲ್ಲಾ ಖರ್ಚುಗಳನ್ನು ಒಳಗೊಂಡಿರುತ್ತದೆ. ಇದು ಸರ್ಕಾರಿ ಇಲಾಖೆಗಳು ಮತ್ತು ವಿವಿಧ ಸೇವೆಗಳ ಸಾಮಾನ್ಯ ಕಾರ್ಯ ನಿರ್ವಹಣೆಗೆ ತಗಲುವ ವೆಚ್ಚಗಳು, ಸರ್ಕಾರವು ಮಾಡಿದ ಸಾಲದ ಮೇಲಿನ ಬಡ್ಡಿ ಪಾವತಿಗಳು ಮತ್ತು ವಿವಿಧ ಸಂಸ್ಥೆಗಳಿಗೆ ನೀಡಿದ ಅನುದಾನಗಳಿಗೆ ಸಂಬಂಧಿಸಿದೆ (ಕೆಲವು ಅನುದಾನಗಳು ಆಸ್ತಿಗಳ ಸೃಷ್ಟಿಗೆ ಮೀಸಲಾಗಿರಬಹುದು).
- **ಬಂಡವಾಳ ಸ್ವೀಕೃತಿಗಳು:**
  - **ಋಣ ಸ್ವೀಕೃತಿಗಳು:** ಮಾರುಕಟ್ಟೆ ಸಾಲಗಳು, ಬಾಂಡ್‌ಗಳು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು, ಮಾರ್ಗೋಪಾಯಗಳ ನಿವ್ವಳ ವಹಿವಾಟು, ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.
  - **ಋಣೇತರ ಸ್ವೀಕೃತಿಗಳು:** ಬಂಡವಾಳ ಹಿಂತೆಗೆದುಕೊಳ್ಳುವಿಕೆ, ಸಾಲಗಳ ಮತ್ತು ಮುಂಗಡಗಳ ವಸೂಲಾತಿ.
- **ಬಂಡವಾಳ ವೆಚ್ಚ:** ಭೂಮಿ, ಕಟ್ಟಡ, ಯಂತ್ರೋಪಕರಣಗಳು, ಇತರ ಉಪಕರಣಗಳ ಖರೀದಿ, ಷೇರುಗಳಲ್ಲಿನ ಹೂಡಿಕೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಅಸ್ತಿತ್ವಗಳಿಗೆ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳನ್ನು ವೆಚ್ಚವನ್ನು ಒಳಗೊಂಡಿರುತ್ತದೆ.

ಸರ್ಕಾರಿ ಲೆಕ್ಕಪತ್ರಗಳ ರಚನೆ



ಕಾರ್ಯನಿರ್ವಹಣಾ
ಸಾರಾಂಶ

ಕಾರ್ಯನಿರ್ವಹಣಾ ಸಾರಾಂಶ

ಕರ್ನಾಟಕ ರಾಜ್ಯ ಸರ್ಕಾರದ ಈ ಹಣಕಾಸು ವರದಿಯು 2024–25ನೇ ಹಣಕಾಸು ವರ್ಷದ ರಾಜ್ಯದ ಆರ್ಥಿಕ ಸ್ಥಿತಿಯ ಸ್ವತಂತ್ರ ಮೌಲ್ಯಮಾಪನವನ್ನು ಒದಗಿಸುತ್ತದೆ. ಇದು ರಾಜ್ಯದ ಒಟ್ಟಾರೆ ಆರ್ಥಿಕ ಆರೋಗ್ಯವನ್ನು ವಿಶ್ಲೇಷಿಸುತ್ತದೆ ಮತ್ತು ಅದರ ಆದಾಯ ಮತ್ತು ವೆಚ್ಚದ ಪ್ರವೃತ್ತಿಗಳನ್ನು ಪರಿಶೀಲಿಸುತ್ತದೆ, ರಾಜ್ಯದ ಸಾಲದ ಸ್ಥಿತಿ ಮತ್ತು ಸಾಲ ಪಡೆಯುವ ಮಾದರಿಗಳನ್ನು ನಿರ್ಣಯಿಸುತ್ತದೆ, ಹಣಕಾಸಿನ ಜವಾಬ್ದಾರಿ ಕಾನೂನುಗಳೊಂದಿಗೆ ಅದರ ಅನುಸರಣೆಯನ್ನು ಮೌಲ್ಯಮಾಪನ ಮಾಡುತ್ತದೆ ಮತ್ತು ಹಣಕಾಸಿನ ಆರೋಗ್ಯ ಸೂಚಕಗಳೊಂದಿಗೆ ಅದರ ಕಾರ್ಯಕ್ಷಮತೆಯನ್ನು ಹೋಲಿಸುತ್ತದೆ. ವರದಿಯು ಆಯವ್ಯಯ ನಿರ್ವಹಣೆ ಮತ್ತು ಲೆಕ್ಕಗಳ ಗುಣಮಟ್ಟ, ಪಾರದರ್ಶಕತೆ, ವೆಚ್ಚಗಳ ಗುಣಮಟ್ಟ ಇತ್ಯಾದಿಗಳ ಬಗ್ಗೆಯೂ ಚರ್ಚಿಸುತ್ತದೆ.

2024–25ನೇ ಸಾಲಿನಲ್ಲಿ ಕರ್ನಾಟಕದ ಆರ್ಥಿಕತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ದಿಂದ ಅಳೆಯಲ್ಪಟ್ಟಿದ್ದು, ಇದು ಹಿಂದಿನ ವರ್ಷದ ಶೇಕಡಾ 10.24ರಷ್ಟು ಬೆಳವಣಿಗೆಗಿಂತ ಹೆಚ್ಚಾಗಿ ಶೇಕಡಾ 12.77ರಷ್ಟು ಬೆಳವಣಿಗೆ ಕಂಡಿದೆ. ಈ ವರ್ಷ ಭಾರತದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ದಲ್ಲಿ ರಾಜ್ಯವು ಶೇಕಡಾ 8.72ರಷ್ಟು ಕೊಡುಗೆ ನೀಡಿದ್ದು, ರಾಷ್ಟ್ರೀಯ ಸರಾಸರಿಗಿಂತ ಉತ್ತಮ ಸಾಧನೆ ಮಾಡಿದೆ.

ಆದಾಗ್ಯೂ, ರಾಜ್ಯದ ₹1,77,447 ಕೋಟಿಯಾದ ಸ್ವಂತ ತೆರಿಗೆ ರಾಜಸ್ವವು ಅದರ ಆರ್ಥಿಕತೆಯ ಬೆಳವಣಿಗೆಗೆ ಅನುಗುಣವಾಗಿರಲಿಲ್ಲ. ಈ ವರ್ಷ, ಅದರ ಸ್ವಂತ ರಾಜಸ್ವದ ಪ್ಲವನತೆಯು, ಅಂದರೆ, ಸ್ವಂತ ರಾಜಸ್ವದಲ್ಲಿನ ಬೆಳವಣಿಗೆಯ ಅನುಪಾತವು ಜಿಎಸ್‌ಡಿಪಿಯಲ್ಲಿನ ಬೆಳವಣಿಗೆಗೆ 0.75 ಆಗಿತ್ತು, ಇದು ಹಿಂದಿನ ಮೂರು ವರ್ಷಗಳಲ್ಲಿ 1.15ರಿಂದ 1.23ರ ವ್ಯಾಪ್ತಿಗೆ ವಿರುದ್ಧವಾಗಿ ಒಂದಕ್ಕಿಂತ ಕಡಿಮೆಯಾಗಿದೆ. 2017–18ರಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ಬಂದ ನಂತರ, ರಾಜ್ಯದ ಒಟ್ಟು ತೆರಿಗೆ ಸಂಗ್ರಹಕ್ಕೆ ತೆರಿಗೆಯ ಈ ಅಂಶವು ಶೇಕಡಾ 55ರಿಂದ (ಜಿಎಸ್‌ಟಿ ಪೂರ್ವ ಅವಧಿ 2016–17ರಲ್ಲಿ, ಮೌಲ್ಯವರ್ಧಿತ ತೆರಿಗೆ ಶೇಕಡಾ 55ರಷ್ಟಿತ್ತು) 2024–25ರಲ್ಲಿ ಶೇಕಡಾ 43ಕ್ಕೆ ಕುಗ್ಗಿತು. ಮತ್ತೊಂದು ಗಮನಾರ್ಹ ಕುಸಿತ ರಾಜ್ಯದ ಅಬಕಾರಿ ಸುಂಕದಲ್ಲಿ ಕಂಡುಬಂದಿದ್ದು, ಇದು ಅರ್ಥವ್ಯವಸ್ಥೆಯು ನೆರೆಯ ರಾಜ್ಯಗಳ ಹೆಚ್ಚು ಅನುಕೂಲಕರ ತೆರಿಗೆ ನೀತಿಗಳ ಲಾಭ ಪಡೆದು ಬಳಕೆಯನ್ನು ವರ್ಗಾಯಿಸಿದ್ದರಿಂದ ಸಂಭವಿಸಿದೆ. 2024–25ರ ಅವಧಿಯಲ್ಲಿ, ರಾಜ್ಯವು ಇ–ಖಾತಾವನ್ನು ಪರಿಚಯಿಸಿತು, ಇದು ಸ್ಥಿರಗೊಳ್ಳಲು ಸಮಯ ತೆಗೆದುಕೊಂಡಿತು, ಇದು ಆಸ್ತಿಗಳ ನೋಂದಣಿಯಲ್ಲಿ ಕುಸಿತಕ್ಕೆ ಕಾರಣವಾಯಿತು ಮತ್ತು ಆದ್ದರಿಂದ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳಲ್ಲಿ ಇಳಿಕೆ ಕಂಡುಬಂದಿತು.

ಒಟ್ಟಾರೆಯಾಗಿ, ರಾಜ್ಯದ ರಾಜಸ್ವ ಸ್ವೀಕೃತಿಗಳು ಶೇಕಡಾ 10.63ರಷ್ಟು ಬೆಳೆದವು ಆದರೆ ಆಯವ್ಯಯದ ಅಂದಾಜುಗಳನ್ನು ಮೀರಿದವು. ಸ್ವಂತ ತೆರಿಗೆ ರಾಜಸ್ವದ ಕ್ರೂಢೀಕರಣದಲ್ಲಿನ ಕೊರತೆಯನ್ನು ಗಮನಾರ್ಹ ತೆರಿಗೆಯೇತರ ಸಂಗ್ರಹದಿಂದ (ಕೇಂದ್ರ ವಿಕೇಂದ್ರೀಕರಣ ಮತ್ತು ಅನುದಾನ–ಸಹಾಯದ ಜೊತೆಗೆ) ಸರಿದೂಗಿಸಲಾಯಿತು. ಸರ್ಕಾರಿ ಆದೇಶದ ಮೂಲಕ ಸಾರ್ವಜನಿಕ ವಲಯದ ಸಂಸ್ಥೆಗಳಿಂದ 'ವಿಶೇಷ ಲಾಭಾಂಶ' (ಲಾಭದ ಮೇಲಿನ ಸಾಮಾನ್ಯ ಲಾಭಾಂಶಕ್ಕಿಂತ ಹೆಚ್ಚಿನದು) ಮಾಪ್–ಅಪ್‌ನಿಂದಾಗಿ ತೆರಿಗೆಯೇತರ ಆದಾಯದಲ್ಲಿ ಶೇಕಡಾ 23.11ರಷ್ಟು ಬೆಳವಣಿಗೆ ಕಂಡುಬಂದಿದ್ದು, ಹಿಂದಿನ ವರ್ಷದಲ್ಲಿ ₹284.88 ಕೋಟಿಗೆ ಹೋಲಿಸಿದರೆ 2024–25ರಲ್ಲಿ ಸಂಗ್ರಹ ₹970.02 ಕೋಟಿಯಾಗಿತ್ತು.

ಈ ಮಧ್ಯೆ, ಕಳೆದ ಆರು ವರ್ಷಗಳಲ್ಲಿ ಸರಾಸರಿ ₹12,425.17 ಕೋಟಿ ಕೊಡುಗೆ ನೀಡಿದ್ದ ಜಿಎಸ್‌ಟಿ ಪರಿಹಾರ ಸೆಸ್ 2023–24ರಿಂದ (₹1,191.41 ಕೋಟಿ) ಕಡಿಮೆಯಾಗಿದೆ, ಕೊನೆಯ ಕಂತು 2024–25ರಲ್ಲಿ ಬಾಕಿ (₹1.84 ಕೋಟಿ) ರೂಪದಲ್ಲಿ ಸ್ವೀಕರಿಸಲ್ಪಟ್ಟಿದೆ. ಸೆಪ್ಟೆಂಬರ್ 2025ರಲ್ಲಿ ಜಿಎಸ್‌ಟಿ ದರಗಳ ತರ್ಕಬದ್ಧಗೊಳಿಸುವಿಕೆಯಿಂದಾಗಿ ಮುಂದಿನ ವರ್ಷ ಜಿಎಸ್‌ಟಿ ರೂಪದಲ್ಲಿ ಒಳಹರಿವು ಮತ್ತಷ್ಟು ಕಡಿಮೆಯಾಗುತ್ತದೆ.

ಮತ್ತೊಂದೆಡೆ, ವೆಚ್ಚವು ಸ್ಥಿರವಾದ ಏರಿಕೆಯನ್ನು ದಾಖಲಿಸಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, 2024–25ರ ಅವಧಿಯಲ್ಲಿ ರಾಜ್ಯದ ಒಟ್ಟು ವೆಚ್ಚದ ಶೇಕಡಾ 81ರಷ್ಟಿದ್ದ ಆದಾಯ ವೆಚ್ಚದಲ್ಲಿ ಕಾಣಬಹುದು. ಇದರಲ್ಲಿ, ಸಂಬಳ, ಪಿಂಚಣಿ, ಸಹಾಯದನಗಳು (ಸ್ಪಷ್ಟ ಮತ್ತು ಸೂಚ್ಯ ಎರಡೂ) ಮತ್ತು ಬಡ್ಡಿ ಪಾವತಿಗಳಂತಹ ಬದ್ಧ ವೆಚ್ಚಗಳು, ಅಂದರೆ, ಸರ್ಕಾರವು ನಮ್ಯತೆಯನ್ನು ಅನುಭವಿಸದ ಬಾಬ್ತುಗಳು, ರಾಜಸ್ವ ವೆಚ್ಚದ ಸುಮಾರು ಶೇಕಡಾ 71ರಷ್ಟಿದೆ. ಇದರ ಜೊತೆಗೆ, ಕೇಂದ್ರ ಪ್ರಾಯೋಜಿತ ಯೋಜನೆಯಲ್ಲಿ (₹12,670.22 ಕೋಟಿ) ತನ್ನ ಪಾಲನ್ನು ನೀಡಲು ರಾಜ್ಯವು ಬದ್ಧವಾಗಿದೆ. ಒಟ್ಟಾರೆ, ರಾಜಸ್ವ ಸ್ವೀಕೃತಿಗಳ ಶೇಕಡಾ 82ರಷ್ಟನ್ನು ಒಟ್ಟು ಅನಮ್ಯ ವೆಚ್ಚಗಳು ಬಳಸಿಕೊಂಡಿದ್ದು ಆದ್ಯತೆಯ ಹಂಚಿಕೆಗಳಿಗೆ ಅಗತ್ಯ ಹೊಂದಾಣಿಕೆಯ ಅವಕಾಶವನ್ನು ಸೀಮಿತಗೊಳಿಸಿದೆ. ಮುಖ್ಯವಾಗಿ ರಾಜ್ಯದ ಐದು ಖಾತರಿ ಯೋಜನೆಗಳಿಂದ 2024–25ರ ಅವಧಿಯಲ್ಲಿ ಸಹಾಯದನಗಳು ತೀವ್ರವಾಗಿ ಹೆಚ್ಚಾದವು, ಒಟ್ಟು ಈ ಐದು ಖಾತರಿ ಯೋಜನೆಗಳ ವೆಚ್ಚ ₹52,525.60 ಕೋಟಿ ಯಾಗಿದ್ದು, ಇದು ವರ್ಷದಲ್ಲಿ ರಾಜಸ್ವ ವೆಚ್ಚದ ಶೇಕಡಾ 19ರಷ್ಟಿದೆ. 2023–24ರಲ್ಲಿ ಐದು ಖಾತರಿ ಯೋಜನೆಗಳನ್ನು ಪರಿಚಯಿಸುವುದರಿಂದ 2023–24 ಹಾಗು 2024–25ರಲ್ಲಿ ರಾಜ್ಯವು ರಾಜಸ್ವ ಹೆಚ್ಚುವರಿಯಿಂದ ರಾಜಸ್ವ ಕೊರತೆಗೆ ಬದಲಾಯಿತು; ನಂತರ ಕೊರತೆಯನ್ನು ಸಾಲದ ಮೊತ್ತದಿಂದ ಭರಿಸಲಾಗುತ್ತದೆ. ಇದು ಭವಿಷ್ಯದ ಸಾಲ ಮತ್ತು ಬಡ್ಡಿ ಹೊರೆಯನ್ನು ಹೆಚ್ಚಿಸುತ್ತದೆ, ಹೀಗಾಗಿ ಋಣದ ಚಕ್ರವನ್ನು ಸೃಷ್ಟಿಸುತ್ತದೆ. ಸಾಮಾನ್ಯವಾಗಿ, ಋಣಗಳನ್ನು ಅಭಿವೃದ್ಧಿ ವೆಚ್ಚಗಳಿಗೆ ಒದಗಿಸಲು ಬಳಸಬೇಕು. 2024–25ರಲ್ಲಿ, ರಾಜ್ಯದ ಸಾಲಗಳಲ್ಲಿ ಕೇವಲ ಶೇಕಡಾ 62.12ರಷ್ಟು ಮಾತ್ರ ಈ ಉದ್ದೇಶಕ್ಕಾಗಿ ಬಳಸಲಾಗಿದೆ ಮತ್ತು ಗಮನಾರ್ಹ ಭಾಗವನ್ನು ಆದಾಯ ಕೊರತೆ ಮತ್ತು ಹಿಂದಿನ ಸಾಲಗಳ ಮರುಪಾವತಿಯನ್ನು ಸರಿದೂಗಿಸಲು ಬಳಸಲಾಗಿದೆ.

ಈ ಸಹಾಯಧನಗಳಿಗೆ ಹಣದ ಹರಿವು ಹೆಚ್ಚಾದ ಕಾರಣ, ರಾಜ್ಯವು ಪೌಷ್ಟಿಕಾಂಶ, ಸ್ಥಳೀಯ ಸಂಸ್ಥೆಗಳಿಗೆ ನೆರವು, ನಿಗಮಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು, ಪಟ್ಟಣ ಸುಧಾರಣಾ ಮಂಡಳಿಗಳು ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೆರವು ಮುಂತಾದ ಕೆಲವು ಪ್ರಸ್ತುತ ಯೋಜನೆಗಳ ಮೇಲೆ ಒತ್ತಡ ಹೇರಬೇಕಾಯಿತು. ಅಭಿವೃದ್ಧಿ ಆಸ್ತಿಗಳ ಸೃಷ್ಟಿಯಲ್ಲಿನ ಹೂಡಿಕೆಯ ಮೇಲೂ ಸಹ ಪರಿಣಾಮ ಬೀರಿತು. 2024–25ರಲ್ಲಿ, ರಾಜ್ಯ ಸರ್ಕಾರವು ಬಂಡವಾಳ ವೆಚ್ಚಕ್ಕಾಗಿ ₹57,906 ಕೋಟಿ ಮತ್ತು ಸಾಲ ಮತ್ತು ಮುಂಗಡಗಳಿಗೆ ₹6,631 ಕೋಟಿ ವೆಚ್ಚ ಮಾಡಿದೆ. ಇದು ಒಟ್ಟು ಖರ್ಚಿನ ಸುಮಾರು ಶೇಕಡಾ 19ರಷ್ಟಿತ್ತು. 2023–24ರಲ್ಲಿ ಐದು ಖಾತರಿ ಯೋಜನೆಗಳ ಅನುಷ್ಠಾನದ ನಂತರ ಸಾಮಾಜಿಕ ಮತ್ತು ಸಾಮಾನ್ಯ ವಲಯದಲ್ಲಿನ ಅನುಗುಣವಾದ ಹೆಚ್ಚಳದಿಂದಾಗಿ ಈ ಪಾಲು ಕಡಿಮೆಯಾಗಿದೆ. 2016–18ರಲ್ಲಿ ಕಡಿಮೆಯಾಗಿದ್ದ ಸಾಮಾನ್ಯ ಸೇವೆಗಳ ಅಡಿಯ ಪಾಲು, ಬಡ್ಡಿ ಪಾವತಿಗಳಲ್ಲಿ ಹೆಚ್ಚಳದಿಂದಾಗಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಕಂಡಿತು. ಬಂಡವಾಳ ವೆಚ್ಚದಲ್ಲಿ ಆರ್ಥಿಕ ವಲಯದ ಪಾಲು (ರಸ್ತೆಗಳು, ನೀರಾವರಿ ಇತ್ಯಾದಿ) ಶೇಕಡಾ 65ರಷ್ಟಿತ್ತು. ಆರ್ಥಿಕ ವಲಯದಲ್ಲಿ, ಬಂಡವಾಳ ವೆಚ್ಚವು ಮುಖ್ಯವಾಗಿ ನೀರಾವರಿ (₹19,000 ಕೋಟಿ), ಸಾರಿಗೆ (₹8,236 ಕೋಟಿ) ಮತ್ತು ವಿಶೇಷ ಪ್ರದೇಶ ಕಾರ್ಯಕ್ರಮಗಳಿಗೆ (₹3,600 ಕೋಟಿ) ಮೀಸಲಾಗಿತ್ತು. ನೀರಾವರಿಗೆ ಗಮನಾರ್ಹ ಹಣ ದೊರೆತಿದ್ದರೂ, ಅನೇಕ ಕಾಮಗಾರಿಗಳು ಅಪೂರ್ಣವಾಗಿಯೇ ಉಳಿದಿವೆ (1,903 ಕಾಮಗಾರಿಗಳು) ಹೀಗಾಗಿ ವೆಚ್ಚದ ಗುಣಮಟ್ಟದ ಮೇಲೆ ಪರಿಣಾಮ ಬೀರಿದೆ.

ಒತ್ತಡದ ಹೊರತಾಗಿಯೂ, ಹಣಕಾಸಿನ ಬಲವರ್ಧನೆಯನ್ನು ಪಂಚಾಯತ್ ರಾಜ್ ಸಂಸ್ಥೆಗಳ ನಿಧಿ II ಖಾತೆಯಲ್ಲಿನ ₹5,000 ಕೋಟಿಗಳ ಖರ್ಚು ಮಾಡದ ಬಾಕಿಗಳನ್ನು ಮರಳಿ ಬರೆಯುವ ಮೂಲಕ ಮತ್ತು ಏಕ ನೋಡಲ್ ಏಜನ್ಸಿ (ಎಸ್ಎನ್ಎ) ಖಾತೆಯಲ್ಲಿನ ಖರ್ಚು ಮಾಡದ ಬಾಕಿಗಳನ್ನು (₹1,333 ಕೋಟಿ) ಮರುಪಾವತಿ ಮಾಡುವ ಮೂಲಕ, ರಾಜ್ಯ ಹಣಕಾಸಿನ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆ (ಎಫ್ ಆರ್ ಬಿ ಎಮ್) ಕಾಯ್ದೆಯ ಗುರಿ ಮಟ್ಟದೊಳಗೆ ವಿತ್ತೀಯ ಕೊರತೆಯನ್ನು ತಡೆಹಿಡಿಯಲು ರಾಜ್ಯಕ್ಕೆ ಸಾಧ್ಯವಾಯಿತು. ರಾಜ್ಯದ ಬಾಕಿ ಇರುವ ಸಾರ್ವಜನಿಕ ಹೊಣೆಗಾರಿಕೆಗಳು ₹6,92,115 ಕೋಟಿ ತಲುಪಿದ್ದು, ಇದು ಜಿಎಸ್‌ಡಿಪಿಯ ಶೇಕಡಾ 23.73ರಷ್ಟಿದ್ದು, ಇದು ರಾಷ್ಟ್ರೀಯ ಸರಾಸರಿ ಶೇಕಡಾ 27.63ಕ್ಕಿಂತ ಕಡಿಮೆಯಾಗಿದೆ. ಬಾಕಿ ಉಳಿದಿರುವ ಹೊಣೆಗಾರಿಕೆಗಳು ಸಂಖ್ಯಾತ್ಮಕ ಗುರಿಯ ಪರಿಮಿತಿಯೊಳಗೆ ಇದ್ದರೂ, ಇದನ್ನು ಸಾಲಗಳ ಮೇಲೆ ಅಧಿಕವಾಗಿ ಅವಲಂಬಿತವಾಗಿರುವ ಆಯವ್ಯಯ ಒತ್ತಡದ ಹಿನ್ನೆಲೆಯಲ್ಲಿ ಗಮನಿಸಬೇಕಾಗಿದೆ.

₹2,020.87 ಕೋಟಿ ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚವಾಗಿ ಮತ್ತು ₹72.46 ಕೋಟಿ ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚವೆಂದು ತಪ್ಪಾಗಿ ವರ್ಗೀಕರಿಸಿದ ಪರಿಣಾಮವಾಗಿ ₹1,948.41 ಕೋಟಿಗಳಷ್ಟು ರಾಜಸ್ವ ವೆಚ್ಚವನ್ನು ಆಮಟ್ಟಿಗೆ ಕಡಿಮೆ ಮಾಡಲಾಗಿದೆ ಮತ್ತು ರಾಜಸ್ವ ಕೊರತೆಯನ್ನು ಕಡಿಮೆಯಾಗಿ ಹೇಳಲಾಗಿದೆ.

ನಮ್ಮ ವಿವಿಧ ಲೆಕ್ಕಪರಿಶೋಧನಾ ವರದಿಗಳ ಮೂಲಕ, ತೆರಿಗೆ ಸ್ವೀಕೃತಿಗಳಲ್ಲಿನ ಬಾಕಿಗಳನ್ನು ವಸೂಲಿ ಮಾಡಲು ಮತ್ತು ತೆರಿಗೆಯಲ್ಲಿನ ಅನುಸರಣೆ ಅಪಾಯಗಳನ್ನು ತಗ್ಗಿಸಲು ರಾಜ್ಯವು ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ನಾವು ಗಮನಿಸಿದ್ದೇವೆ. ಆದರೆ ಮಾರ್ಚ್ 31, 2025ರಂತೆ, ರಾಜ್ಯದಲ್ಲಿ ₹24,917.22 ಕೋಟಿ ರಾಜಸ್ವ ಬಾಕಿಯನ್ನು ಹೊಂದಿತ್ತು (ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ನಿವ್ವಳ.)

2024–25ರ ಅವಧಿಯಲ್ಲಿ, ಸರ್ಕಾರವು ಹೆಚ್ಚಾಗಿ ಆಯವ್ಯಯದ ಪಥದಲ್ಲಿ ಉಳಿಯಿತು, ಬಜೆಟ್ ಅಂದಾಜುಗಳಿಗೆ ಹೋಲಿಸಿದರೆ ಐದು ಪ್ರತಿಶತದಷ್ಟು ಕಡಿಮೆ ಖರ್ಚು ಮಾಡಲಾಗಿತ್ತು. ಆದಾಗ್ಯೂ, ಈ ವ್ಯತ್ಯಾಸವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ. 2024–25ರ ಅವಧಿಯಲ್ಲಿ ಶಾಸಕಾಂಗದಿಂದ ಕ್ರಮಬದ್ಧಗೊಳಿಸಬೇಕಾದ ಮೂರು ಅನುದಾನಗಳ ಅಡಿಯಲ್ಲಿ ₹4,388.75 ಕೋಟಿ ಹೆಚ್ಚುವರಿ ವೆಚ್ಚವನ್ನು ನಾವು ಗಮನಿಸಿದ್ದೇವೆ, ಇದರಲ್ಲಿ ಸಹಾಯಧನ ಯೋಜನೆಗಳಿಗೆ ಸಂಬಂಧಿಸಿದ ಅನುದಾನಗಳು ಸೇರಿವೆ. 2020–21 ರಿಂದ 2023–24ರವರೆಗಿನ ₹5,175.21 ಕೋಟಿ ಹೆಚ್ಚುವರಿ ವೆಚ್ಚವು ಕ್ರಮಬದ್ಧಗೊಳಿಸಬೇಕಾಗಿದೆ. ಭಾರತದ ಸಂವಿಧಾನದ 266(3) ನೇ ವಿಧಿಗೆ ವಿರುದ್ಧವಾಗಿ, ಬಂಡವಾಳ/ರಾಜಸ್ವ ವಿಭಾಗದ ಅಡಿಯಲ್ಲಿ 21 ಅನುದಾನಗಳನ್ನು ಒಳಗೊಂಡ ₹10,035.13 ಕೋಟಿಗೆ ಶಾಸಕಾಂಗ ಅನುಮೋದನೆಗೆ ಮುಂಚಿತವಾಗಿ ವೆಚ್ಚಕ್ಕಾಗಿ ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸಲಾಗಿದೆ. ಇವುಗಳನ್ನು ವರ್ಷದ ಅವಧಿಯಲ್ಲಿ ಪೂರಕ ಅನುದಾನಗಳ ಮೂಲಕ ಕ್ರಮಬದ್ಧಗೊಳಿಸಲಾಯಿತು, ಇದು ಒಟ್ಟು ಪೂರಕ ಅಂದಾಜಿನ ಶೇಕಡಾ 36ರಷ್ಟಿದೆ. ಆದಾಗ್ಯೂ, ಈ ಪದ್ಧತಿಯು ಸಾಂವಿಧಾನಿಕ ನಿಬಂಧನೆಗಳಿಗೆ ವಿರುದ್ಧವಾಗಿದೆ; ಇದರ ಅನುಸರಣೆಯು ಬಜೆಟ್ ಶಿಸ್ತನ್ನು ಸಹ ಬೆಂಬಲಿಸುತ್ತದೆ.

ಬಳಕೆಯ ಪ್ರಮಾಣಪತ್ರಗಳು ಮತ್ತು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯನ್ನು ಮೇಲ್ವಿಚಾರಣೆ ಮಾಡುವ ಸರ್ಕಾರದ ಪ್ರಯತ್ನಗಳು ಫಲ ನೀಡಿವೆ ಮತ್ತು ಅವುಗಳ ಬಾಕಿ ಮೊತ್ತವನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿದೆ ಎಂದು ನಾವು ತೃಪ್ತಿಯಿಂದ ಗಮನಿಸಿದ್ದೇವೆ.

ಹೆಚ್ಚಿದ ತೆರಿಗೆ ಅನುಸರಣೆ (ಇ–ಖಾತಾ) ಮತ್ತು ಹೆಚ್ಚಿದ ತೆರಿಗೆ ದರ ವರ್ಧನೆಗಳ ಮೂಲಕ ಸಂಪನ್ಮೂಲಗಳ ಕ್ರೋಢೀಕರಣವು ಹೆಚ್ಚುತ್ತಿರುವ ಸಹಾಯಧನ ಮತ್ತು ಇತರ ಬದ್ಧ ವೆಚ್ಚಗಳಿಗೆ ಹಾಗೂ ಜಿಎಸ್‌ಡಿಪಿ ಬೆಳವಣಿಗೆಗೆ ಹೊಂದಿಕೆಯಾಗದ ಕಾರಣ, ಸುಸ್ಥಿರತೆಯ ನಿಯತಾಂಕಗಳಲ್ಲಿ ಸಾಲದ ಮಟ್ಟವನ್ನು ಮತ್ತು ಶಾಸನಬದ್ಧ ಮಿತಿಗಳಲ್ಲಿ ಹಣಕಾಸಿನ ಕೊರತೆಯನ್ನು ಕಾಯ್ದುಕೊಳ್ಳಲು ರಾಜ್ಯವು ಹೆಣಗಾಡುತ್ತಿದೆ. ರಾಜ್ಯವು ತನ್ನ ಸಾಮಾಜಿಕ ಕಲ್ಯಾಣ, ಅಭಿವೃದ್ಧಿ ಮತ್ತು ಬಾಕಿ ಇರುವ ಯೋಜನೆಗಳನ್ನು ಪೂರ್ಣಗೊಳಿಸುವ ಕಾರ್ಯಕ್ರಮಗಳನ್ನು ಬೆಂಬಲಿಸಲು ಸರಿಯಾದ ಗುರಿಯನ್ನು ನಿಗದಿಪಡಿಸುವ ಮೂಲಕ ವೆಚ್ಚವನ್ನು ಅತ್ಯುತ್ತಮವಾಗಿಸಲು ಪರಿಗಣಿಸಬೇಕಾಗಿದೆ. ಶಾಸಕಾಂಗದ ಅನುಮೋದನೆಯ ಮೊದಲು ರಾಜ್ಯವು ವೆಚ್ಚವನ್ನು ಭರಿಸಲು ಕಾರ್ಯಕಾರಿ ಮಾರ್ಗವನ್ನು ಆಶ್ರಯಿಸುವುದನ್ನು ತಪ್ಪಿಸಬೇಕು ಮತ್ತು ಪ್ರಸ್ತುತ ಮತ್ತು ಹಿಂದಿನ ವರ್ಷಗಳ ಹೆಚ್ಚುವರಿ ವೆಚ್ಚವನ್ನು ಶಾಸಕಾಂಗದ ಮೂಲಕ ಕ್ರಮಬದ್ಧಗೊಳಿಸಬೇಕು.

ಅಧ್ಯಾಯ 1

ರಾಜ್ಯದ ಹಣಕಾಸಿನ
ಸ್ಥೂಲ ಸಮೀಕ್ಷೆ

1

ರಾಜ್ಯದ ಹಣಕಾಸಿನ ಸ್ಥೂಲ ಸಮೀಕ್ಷೆ

ಈ ಅಧ್ಯಾಯವು ಕರ್ನಾಟಕ ರಾಜ್ಯದ ಜನಸಾಂದ್ರತೆ, ಆರ್ಥಿಕ ಸೂಚಕಗಳು ಮತ್ತು ವಿತ್ತೀಯ ರಚನೆಯನ್ನು ಒಳಗೊಂಡ 2024–25ರ ಹಣಕಾಸಿನ ಕ್ಷಿಪ್ರನೋಟವನ್ನು ಒದಗಿಸುತ್ತದೆ. ಇದು ರಾಜ್ಯದ ಆದಾಯ ಮತ್ತು ವೆಚ್ಚದಲ್ಲಿನ ಪ್ರವೃತ್ತಿಗಳು, ಋಣ ಪ್ರಮಾಣ ಮತ್ತು ಹಣಕಾಸಿನ ಕೊರತೆಗಳನ್ನು ವಿಶ್ಲೇಷಿಸಿ, ನಿರಂತರ ಅಸಮತೋಲನ ಮತ್ತು ಸಾಲಗಳ ಮೇಲಿನ ಅವಲಂಬನೆಯನ್ನು ಪ್ರಕಟಿಸುತ್ತದೆ. ಈ ಅಧ್ಯಾಯವು ಹೆಚ್ಚಿನ ಬದ್ಧ ವೆಚ್ಚ, ಹೂಡಿಕೆಗಳ ಮೇಲಿನ ಅಲ್ಪ ಆದಾಯ ಇತ್ಯಾದಿ ಸಮಸ್ಯೆಗಳನ್ನು ತೋರಿಸುತ್ತದೆ.

1.1 ರಾಜ್ಯದ ಚಿತ್ರ

ಕರ್ನಾಟಕವು ಭೌಗೋಳಿಕ ಪ್ರದೇಶದ (1,91,791 ಚದರ ಕಿ.ಮೀ) ವಿಷಯದಲ್ಲಿ ಭಾರತದ ಏಳನೇ ಅತಿದೊಡ್ಡ ರಾಜ್ಯವಾಗಿದ್ದು, 31 ಜಿಲ್ಲೆಗಳು ಮತ್ತು 29,340 ಹಳ್ಳಿಗಳನ್ನು ಒಳಗೊಂಡಿದೆ. ಜನಸಂಖ್ಯೆಯ ಪ್ರಕಾರ ಒಂಬತ್ತನೇ ಅತಿದೊಡ್ಡ ರಾಜ್ಯವಾಗಿದೆ. ರಾಜ್ಯದ ಜನಸಂಖ್ಯೆಯು 6.11 ಕೋಟಿ (2011 ಜನಗಣತಿ) ಯಷ್ಟಿದ್ದು, ಭಾರತದ ಜನಸಂಖ್ಯೆಯ ಒಟ್ಟು 121.09 ಕೋಟಿಯ ಶೇಕಡಾ 5.05 ರಷ್ಟಿದ್ದು, ಪ್ರತಿ ಚದರ ಕಿ.ಮೀ.ಗೆ 319 ಜನ ಸಾಂದ್ರತೆಯನ್ನು ಹೊಂದಿದೆ.

ಈ ವಿಭಾಗವು ರಾಜ್ಯದ ಜನಸಂಖ್ಯೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿ ಎಸ್ ಡಿ ಪಿ) ಮತ್ತು ರಾಜ್ಯದ ತಲಾ ಆದಾಯದ ಅವಲೋಕನವನ್ನು ಒದಗಿಸುತ್ತದೆ.

1.1.1 ರಾಜ್ಯದ ಜನಸಂಖ್ಯೆ

ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ ರಾಜ್ಯದ ಜನಸಂಖ್ಯಾ ವಿವರಗಳನ್ನು ಕೆಳಗಿನ **ಕೋಷ್ಟಕ 1.1**ರಲ್ಲಿ ಪ್ರಸ್ತುತಪಡಿಸಲಾಗಿದೆ.

ಕೋಷ್ಟಕ 1.1: ರಾಜ್ಯದ ಜನಸಂಖ್ಯಾ ವಿವರ

	ರಾಜ್ಯ	ರಾಷ್ಟ್ರೀಯ ಸರಾಸರಿ
ಗ್ರಾಮೀಣ ಜನಸಂಖ್ಯೆ (ಶೇಕಡಾ) *(ಭಾರತದ ಜನಗಣತಿ, 2011)*	61.33	68.86
ನಗರ ಜನಸಂಖ್ಯೆ (ಶೇಕಡಾ) *(ಭಾರತದ ಜನಗಣತಿ, 2011)*	38.67	31.14
ಜನಸಂಖ್ಯಾ ಸಾಂದ್ರತೆ *(ಪ್ರತಿ ಚದರ ಕಿ.ಮೀ.ಗೆ ವ್ಯಕ್ತಿಗಳು)*	319	430.00
ಲಿಂಗ ಅನುಪಾತ 1,000 ಪುರುಷರಿಗೆ *(ಭಾರತದ ಜನಗಣತಿ, 2011)*	973	943.00
ಶಿಶು ಮರಣ ದರ 1,000 ಜೀವಂತ ಜನನಗಳಿಗೆ *(ಮಾದರಿ ನೋಂದಣಿ ವ್ಯವಸ್ಥೆಯ ಬುಲೆಟಿನ್ (ಎಸ್ ಆರ್ ಎಸ್), ಸೆಪ್ಟೆಂಬರ್ 2025)*	14	25.00
15–49 ವಯೋಗುಂಪಿನ ಪ್ರತಿ ಲಕ್ಷ ಮಹಿಳೆಯರಲ್ಲಿ ತಾಯಂದಿರ ಮರಣ ದರ *(ತಾಯಂದಿರ ಮರಣದ ಮೇಲಿನ ಎಸ್ ಆರ್ ಎಸ್, ಸೆಪ್ಟೆಂಬರ್ 2021–23)*	03	05.00
ಒಟ್ಟು ಫಲವತ್ತತೆಯ ದರ *(ಪ್ರತಿ ಮಹಿಳೆಗೆ ಮಕ್ಕಳ ಸಂಖ್ಯೆ) (ಎನ್ ಎಫ್ ಹೆಚ್ ಎಸ್–5, 2019–21)*	1.67	1.99
ಜನನದ ಸಮಯದಲ್ಲಿ ಜೀವಿತಾವಧಿ (ವರ್ಷಗಳಲ್ಲಿ) *(ಎಸ್ ಆರ್ ಎಸ್ ಆಧಾರಿತ ಸಂಕ್ಷಿಪ್ತ ಜೀವನ ಕೋಷ್ಟಕಗಳು, 2019–23)*	70.00	70.30

	ರಾಜ್ಯ	ರಾಷ್ಟ್ರೀಯ ಸರಾಸರಿ
ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆ (ಶೇಕಡಾ) *(ಬಹುಮುಖಿ ಬಡತನ ಸೂಚ್ಯಂಕ, 2023, ನೀತಿ ಆಯೋಗ)*	7.58	14.96
ಸಾಕ್ಷರತಾ ದರ (ಶೇಕಡಾ) *(ಆವರ್ತಕ ಕಾರ್ಮಿಕ ಬಲ ಸಮೀಕ್ಷೆ, 2023–24)*	82.70	80.90

1.1.2 ರಾಜ್ಯದ ಆರ್ಥಿಕತೆ

ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ ಜಿ ಎಸ್ ಡಿ ಪಿ ಮತ್ತು ತಲಾ ಆದಾಯವು ರಾಜ್ಯದ ಆರ್ಥಿಕತೆಯ ಪ್ರಮುಖ ಸೂಚಕಗಳಾಗಿವೆ.

1.1.2.1 ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾ ಆದಾಯ

ಒಟ್ಟು ದೇಶೀಯ ಉತ್ಪನ್ನವು (ಜಿಡಿಪಿ) ಒಂದು ದೇಶದೊಳಗೆ ಉತ್ಪಾದಿಸುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಸೂಚಿಸುತ್ತದೆ. ಜಿ ಎಸ್ ಡಿ ಪಿಯು ರಾಜ್ಯ ಮಟ್ಟದಲ್ಲಿ ಅದೇ ರೀತಿ ಅಳೆಯುತ್ತದೆ ಮತ್ತು ಎರಡೂ ಆರ್ಥಿಕ ಅಭಿವೃದ್ಧಿ ಮತ್ತು ಒಟ್ಟಾರೆ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. ಜಿ ಎಸ್ ಡಿ ಪಿ ಮತ್ತು ಜಿಡಿಪಿಯ ಪ್ರವೃತ್ತಿಗಳನ್ನು **ಕೋಷ್ಟಕ 1.2**ರಲ್ಲಿ ನೀಡಲಾಗಿದೆ. ಜಿ ಎಸ್ ಡಿ ಪಿ ಮತ್ತು ಜಿಡಿಪಿಯ ವರ್ಷದಿಂದ ವರ್ಷಕ್ಕೆ ಬೆಳವಣಿಗೆ ಮತ್ತು ಜಿಡಿಪಿ ಯಲ್ಲಿ ಜಿ ಎಸ್ ಡಿ ಪಿ ಕೊಡುಗೆಯನ್ನು **ನಕ್ಷೆ 1.1** ರಲ್ಲಿ ನೀಡಲಾಗಿದೆ ಮತ್ತು ದೇಶದ ತಲಾ ಆದಾಯ ಮತ್ತು ರಾಜ್ಯದ ತಲಾ ಆದಾಯವನ್ನು ನಕ್ಷೆಯಲ್ಲಿ ಚಿತ್ರಿಸಲಾಗಿದೆ.

ಕರ್ನಾಟಕ ಸರ್ಕಾರದ ಜಿ ಎಸ್ ಡಿ ಪಿ ಬಳಕೆ

ಭಾರತ ಸರ್ಕಾರದ ಹಣಕಾಸು ಸಚಿವಾಲಯದ ವೆಚ್ಚ ಇಲಾಖೆಯು, ಪ್ರತಿ ಹಣಕಾಸು ವರ್ಷಕ್ಕೆ ರಾಜ್ಯದ ನಿವ್ವಳ ಸಾಲಗಳ ಮಿತಿಯನ್ನು ನಿರ್ಧರಿಸುವಾಗ 15ನೆಯ ಹಣಕಾಸು ಆಯೋಗವು ಸೂಚಿಸಿದ ವಿಧಾನದ ಪ್ರಕಾರ ರಾಜ್ಯದ ಜಿ ಎಸ್ ಡಿ ಪಿ ಅನ್ನು ಪ್ರಕ್ಷೇಪಿಸುತ್ತದೆ. ಸರ್ಕಾರಕ್ಕೆ, 2024–25ನೇ ಸಾಲಿನ ಪ್ರಕ್ಷೇಪಿತ ಜಿ ಎಸ್ ಡಿ ಪಿ**ಯು** ₹28,61,929 ಕೋಟಿ ಆಗಿದೆ. ಮಧ್ಯಮಾವಧಿಯ ಹಣಕಾಸು ಯೋಜನೆ ಮತ್ತು ಆಯವ್ಯಯದ ಅವಲೋಕನದಂತಹ ಆಯವ್ಯಯ ದಾಖಲೆಯಲ್ಲಿ ಹಣಕಾಸಿನ ನಿಯತಾಂಕಗಳನ್ನು ಅಂದಾಜು ಮಾಡಲು ರಾಜ್ಯವು ಇದನ್ನೇ ಅಳವಡಿಸಿಕೊಂಡಿದೆ. ಆದಾಗ್ಯೂ, ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯಲ್ಲಿ, ಜಿ ಎಸ್ ಡಿ ಪಿ ಅನ್ನು ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ (ಎಮ್ಓ ಎಸ್ ಪಿ ಐ) ಅನುಸಾರ ಲೆಕ್ಕಾಚಾರಗಳಿಗೆ ಅಳವಡಿಸಿಕೊಳ್ಳಲಾಗಿದೆ.

ಕೋಷ್ಟಕ 1.2: ಭಾರತದ ಜಿಡಿಪಿಗೆ ಹೋಲಿಸಿದರೆ ಜಿ ಎಸ್ ಡಿ ಪಿಯಲ್ಲಿನ ಪ್ರವೃತ್ತಿಗಳು (ಪ್ರಸ್ತುತ ಬೆಲೆಗಳಲ್ಲಿ)

ವರ್ಷ	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಭಾರತದ ಜಿಡಿಪಿ(₹ ಕೋಟಿಯಲ್ಲಿ)	1,37,71,875	1,53,91,668	1,70,90,042	1,88,99,668	2,01,03,593	1,98,54,096	2,35,97,399	2,68,90,473	3,01,22,956	3,30,68,145
ಕರ್ನಾಟಕದ ಜಿ ಎಸ್ ಡಿ ಪಿ(₹ ಕೋಟಿಯಲ್ಲಿ)	10,45,168	12,07,608	13,33,240	14,79,391	16,15,827	16,40,811	19,92,029	23,19,696	25,57,241	28,83,903
ಭಾರತದ ತಲಾದಾಯ (₹ ನಲ್ಲಿ)	94,797	1,04,880	1,15,224	1,25,946	1,32,341	1,46,480	1,72,422	1,69,145	1,88,892	2,05,324
ಕರ್ನಾಟಕದ ತಲಾದಾಯ (₹ ನಲ್ಲಿ	1,48,108	1,69,898	1,85,840	2,05,245	2,22,141	2,21,683	2,68,963	3,10,325	3,39,813	3,80,906

ಆಕರ: ಕರ್ನಾಟಕದ ಆರ್ಥಿಕ ಸಮೀಕ್ಷೆ 2024–25 ಮತ್ತು ಎಮ್ಓ ಎಸ್ ಪಿ ಐ

ಕೋಷ್ಟಕ 1.2ರಲ್ಲಿ ಕಂಡುಬರುವಂತೆ, ಕಳೆದ ದಶಕದಲ್ಲಿ ರಾಜ್ಯದ ಜಿ ಎಸ್ ಡಿ ಪಿ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದರೂ, 2020–21ರಲ್ಲಿ ಕೋವಿಡ್–19 ಲಾಕ್‌ಡೌನ್‌ನಿಂದಾಗಿ ದೇಶದ ಜಿಡಿಪಿ ಕುಸಿತ ಕಂಡಿದೆ.

ಕಳೆದ ದಶಕದಲ್ಲಿ ದೇಶದ ತಲಾ ಆದಾಯ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಕಂಡರೆ ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ರಾಜ್ಯದ ತಲಾ ಆದಾಯವು ತಾತ್ಕಾಲಿಕ ಹಿನ್ನಡೆಯನ್ನು ಕಂಡಿದೆ. ರಾಜ್ಯವು ತಲಾ ಆದಾಯದಲ್ಲಿ ರಾಷ್ಟ್ರೀಯ ಸರಾಸರಿಗಿಂತ ಸ್ಥಿರವಾಗಿ ಉತ್ತಮ ಪ್ರದರ್ಶನ ನೀಡಿದ್ದು, ಇದು ರಾಜ್ಯವು ಬಲವಾದ ಮತ್ತು ಹೆಚ್ಚು ಸ್ಥಿತಿಸ್ಥಾಪಕ ಆರ್ಥಿಕತೆಯನ್ನು ಹೊಂದಿದೆ ಎಂದು ಸೂಚಿಸುತ್ತದೆ.

ನಕ್ಷೆ 1.1 : ವರ್ಷೇ ವರ್ಷೇ ಜಿಡಿಪಿ ಮತ್ತು ಜಿ.ಎಸ್.ಡಿ.ಪಿ. ವೃದ್ಧಿ ಮತ್ತು ಜಿ.ಎಸ್.ಡಿ. ಪಿಗೆ ಜಿಡಿಪಿಯ ವೃದ್ಧಿ ದರ



ಆಕರ: ಕರ್ನಾಟಕದ ಆರ್ಥಿಕ ಸಮೀಕ್ಷೆ 2024–25 ಮತ್ತು ಎಮ್‌ಓ ಎಸ್ ಪಿ ಐ

ನಕ್ಷೆ 1.2 : ಭಾರತ ಮತ್ತು ಕರ್ನಾಟಕದ ತಲಾದಾಯ



ಆಕರ: ಕರ್ನಾಟಕದ ಆರ್ಥಿಕ ಸಮೀಕ್ಷೆ 2024–25 ಮತ್ತು ಎಮ್‌ಓ ಎಸ್ ಪಿ ಐ

ನಕ್ಷೆ 1.1ರಲ್ಲಿ ನೋಡಿದಂತೆ, 2023–24 ಹೊರತುಪಡಿಸಿ ಇಡೀ ದಶಕದಲ್ಲಿ ರಾಜ್ಯದ ಜಿ ಎಸ್ ಡಿ ಪಿ ಬೆಳವಣಿಗೆಯ ದರವು ದೇಶದ ಜಿಡಿಪಿ ಬೆಳವಣಿಗೆಯ ದರವನ್ನು ಸ್ಥಿರವಾಗಿ ಮೀರಿಸಿದೆ, ಇದು ಭಾರತದ ಜಿಡಿಪಿಯಲ್ಲಿ ರಾಜ್ಯದ ಪಾಲು ಹೆಚ್ಚಾಗಿದೆ ಎಂದು ಸೂಚಿಸುತ್ತದೆ. ಕೋವಿಡ್ 19 ಲಾಕ್‌ಡೌನ್ ಕಾರಣದಿಂದಾಗಿ 2020–21ರಲ್ಲಿ ಜಿಡಿಪಿಗೆ ಜಿ ಎಸ್ ಡಿ ಪಿ ಬೆಳವಣಿಗೆಯ ಅನುಪಾತವು ಋಣಾತ್ಮಕವಾಯಿತು. ಸಾಂಕ್ರಾಮಿಕ ರೋಗದ ನಂತರ ಭಾರತ ಮತ್ತು ರಾಜ್ಯ ಎರಡೂ V ಆಕಾರದ ಚೇತರಿಕೆಯನ್ನು ತೋರಿಸಿದವು. ಈ ಅನುಪಾತವು 2023–24ರಲ್ಲಿ ಕಡಿಮೆಯಾಗಿ, ನಂತರ 2024–25ರಲ್ಲಿ ಕೋವಿಡ್ ನಂತರದ ಐದು ವರ್ಷಗಳ ಗರಿಷ್ಠ 1.31ಕ್ಕೆ ತಲುಪಿತು. ಇದು ಕೃಷಿ ಮತ್ತು ಕೈಗಾರಿಕಾ ವಲಯ ಎರಡರಲ್ಲೂ ಹೆಚ್ಚಳದಿಂದಾಗಿ ಉಂಟಾಗಿದೆ.

ಈ ಹಿಂದೆ ಹೇಳಿದಂತೆ, **ನಕ್ಷೆ 1.2** ಇಡೀ ದಶಕದಲ್ಲಿ ರಾಜ್ಯದ ತಲಾ ಆದಾಯವು ರಾಷ್ಟ್ರಕ್ಕಿಂತ ಹೆಚ್ಚಾಗಿತ್ತು ಎಂದು ಸೂಚಿಸುತ್ತದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ತಲಾದಾಯ ಬೆಳವಣಿಗೆಯ ದರವು ಶೇಕಡಾ 157ರಷ್ಟಿದ್ದರೆ, ರಾಷ್ಟ್ರದಲ್ಲಿ ಶೇಕಡಾ 111ರಷ್ಟಿತ್ತು.

1.1.2.2 ಜಿ. ಎಸ್. ಡಿ. ಪಿ.ಗೆ ವಲಯವಾರು ಕೊಡುಗೆ

2024–25ರಲ್ಲಿ ವಿವಿಧ ವಲಯಗಳ ವಲಯವಾರು ಕೊಡುಗೆ ಮತ್ತು ಕಳೆದ ಐದು ವರ್ಷಗಳಲ್ಲಿ ಜಿ ಎಸ್ ಡಿ ಪಿಯಲ್ಲಿ ವಲಯವಾರು ಬೆಳವಣಿಗೆಯನ್ನು ಕ್ರಮವಾಗಿ **ನಕ್ಷೆ 1.3** ಮತ್ತು **ನಕ್ಷೆ 1.4**ರಲ್ಲಿ ಚಿತ್ರಿಸಲಾಗಿದೆ.

ನಕ್ಷೆ 1.3 2024–25 ವಲಯವಾರು ಕೊಡುಗೆ



ಆಕರ: ಕರ್ನಾಟಕದ ಆರ್ಥಿಕ ಸಮೀಕ್ಷೆ 2024–25

ನಕ್ಷೆ 1.4 ವಲಯವಾರು ಜಿ.ಎಸ್.ಡಿ.ಪಿ. ವೃದ್ಧಿ



ಆಕರ: ಕರ್ನಾಟಕದ ಆರ್ಥಿಕ ಸಮೀಕ್ಷೆ 2024–25

ನಕ್ಷೆ 1.3ರಲ್ಲಿ ನೋಡಿದಂತೆ, 2024–25ರಲ್ಲಿ ವಸ್ತುಗಳಿಗೆ ಬದಲಾಗಿ ಸೇವೆಗಳನ್ನು ಒದಗಿಸುವ ತೃತೀಯ ವಲಯವು ಜಿ ಎಸ್ ಡಿ ಪಿಗೆ ಸುಮಾರು ಶೇಕಡಾ 68ರಷ್ಟು ಪಾಲನ್ನು ಹೊಂದಿರುವ ಪ್ರಮುಖ ಕೊಡುಗೆಯಾಗಿದೆ, ನಂತರ ದ್ವಿತೀಯ ವಲಯವು ಶೇಕಡಾ 19ರಷ್ಟು ಪಾಲನ್ನು ಹೊಂದಿದೆ ಮತ್ತು ಕೊನೆಯದಾಗಿ ಪ್ರಾಥಮಿಕ ವಲಯವು ಶೇಕಡಾ 13ರಷ್ಟು ಪಾಲನ್ನು ಹೊಂದಿದೆ. ದ್ವಿತೀಯ ವಲಯವು ಸಿದ್ಧಪಡಿಸಿದ ಸರಕುಗಳಲ್ಲಿ ಕಚ್ಚಾ ವಸ್ತುಗಳನ್ನು ಸಂಸ್ಕರಿಸುವುದು ಮತ್ತು ತಯಾರಿಸುವುದನ್ನು

ಒಳಗೊಂಡಿರುತ್ತದೆ, ಅಂದರೆ ಕೈಗಾರಿಕಾ ವಲಯ ಮತ್ತು ನಿರ್ಮಾಣ. 2020–25ರ ಅವಧಿಯಲ್ಲಿ ಜಿ ಎಸ್ ಡಿ ಪಿಯಲ್ಲಿ ಎಲ್ಲಾ ವಲಯಗಳಲ್ಲಿನ ಬೆಳವಣಿಗೆ **ನಕ್ಷೆ 1.4**ರಲ್ಲಿ ನೋಡಿದಂತೆ ಅಲ್ಪವಾಗಿದೆ.

ನಕ್ಷೆ 1.5 2024–25ರ ಹಣಕಾಸು ವರ್ಷದಲ್ಲಿ ಪ್ರತಿಯೊಂದು ವಲಯದ ಸಂಯೋಜನೆಯನ್ನು ಅದರ ಪ್ರಮುಖ ಕೊಡುಗೆಯ ಪಾಲಿನ ಪ್ರಕಾರ ತೋರಿಸುತ್ತದೆ.

ನಕ್ಷೆ 1.5: ವಿಭಾಗವಾರು ವಿತರಣೆ, ಆರ್ಥಿಕ ವರ್ಷ 2024–25



ಆಕರ: ಕರ್ನಾಟಕದ ಆರ್ಥಿಕ ಸಮೀಕ್ಷೆ 2024–25

ತೃತೀಯ ವಲಯವು ಇಡೀ ವರ್ಷ ಅತಿದೊಡ್ಡ ಕೊಡುಗೆದಾರನಾಗಿ ಉಳಿದಿದೆ ಮತ್ತು ದ್ವಿತೀಯ ವಲಯದ ಜೊತೆಗೆ ಹಿಂದಿನ ವರ್ಷಕ್ಕಿಂತ ಸ್ಥಿರ ಬೆಳವಣಿಗೆಯನ್ನು ತೋರಿಸಿದೆ. ಈ ಅವಧಿಯಲ್ಲಿ ಕಡಿಮೆ ಕೊಡುಗೆ ನೀಡಿದ ಪ್ರಾಥಮಿಕ ವಲಯವು ಬೆಳವಣಿಗೆಯ ದರದಲ್ಲಿ ಇಳಿಕೆಯ ಪ್ರವೃತ್ತಿಯನ್ನು ತೋರಿಸಿದೆ ಮತ್ತು ಹಿಂದಿನ ವರ್ಷಕ್ಕಿಂತ ಶೇಕಡಾ 11ರಷ್ಟು ಬೆಳವಣಿಗೆ ಕಂಡಿದೆ. ಪ್ರಾಥಮಿಕ ವಲಯದಲ್ಲಿ, ಕೃಷಿಯು ರಾಜ್ಯದಲ್ಲಿ ಪ್ರಮುಖ ಪಾಲನ್ನು ಹೊಂದಿದೆ, ದ್ವಿತೀಯ ವಲಯದಲ್ಲಿ, ಉತ್ಪಾದನೆಯು ಪ್ರಮುಖ ಪಾಲನ್ನು ಹೊಂದಿದೆ ಮತ್ತು ತೃತೀಯ ವಲಯದಲ್ಲಿ, ರಿಯಲ್ ಎಸ್ಟೇಟ್, ವಾಸಸ್ಥಳಗಳ ಮಾಲೀಕತ್ವ ಮತ್ತು ವೃತ್ತಿಪರ ಸೇವೆಗಳು ಪ್ರಮುಖ ಕೊಡುಗೆ ನೀಡಿವೆ.

1.1.3 ಹಣಕಾಸಿನ ಕ್ಷಿಪ್ರನೋಟ

2023–24 ಮತ್ತು 2024–25ರ ಕರ್ನಾಟಕ ರಾಜ್ಯ ಸರ್ಕಾರದ ವಾಸ್ತವ ಹಣಕಾಸು ಫಲಿತಾಂಶಗಳ ವಿವರಗಳನ್ನು 2024–25ರ ಆಯವ್ಯಯ ಅಂದಾಜುಗಳು (ಬಿಇ), ಪರಿಷ್ಕೃತ ಅಂದಾಜುಗಳು (ಆರ್ ಇ) ಮತ್ತು ಜಿ ಎಸ್ ಡಿ ಪಿಗೆ ಹೋಲಿಸಿದುದನ್ನು **ಕೋಷ್ಟಕ 1.3** ತೋರಿಸುತ್ತದೆ.

ಕೋಷ್ಟಕ 1.3: ಹಣಕಾಸಿನ ಕ್ಷಿಪ್ರ ಚಿತ್ರ

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಘಟಕಗಳು	2023–24 (ವಾಸ್ತವ)	2024–25 (ಆಯವ್ಯಯ ಅವಕಾಶ)	2024–25 (ಪರಿಷ್ಕೃತ ಆಯವ್ಯಯ)	2024–25 (ವಾಸ್ತವ)	ವಾಸ್ತವಕ್ಕೆ ಆಯವ್ಯಯ ಅವಕಾಶದ ಶತಾಂಶ	ಜಿಎಸ್‌ಡಿಪಿಗೆ ವಾಸ್ತವ ಶತಾಂಶ
	ಭಾಗ – ಎ						
1.	ತೆರಿಗೆ ರಾಜಸ್ವ	2,04,698	2,34,378	2,27,301	2,24,380	95.73	7.78
(i)	*ಸ್ವಂತ ತೆರಿಗೆ ರಾಜಸ್ವ*	1,63,505	1,89,893	1,80,368	1,77,447	93.45	6.15
(ii)	*ಕೇಂದ್ರ ತೆರಿಗೆಗಳು / ಸುಂಕಗಳ ಪಾಲು*	41,193	44,485	46,933	46,933	105.50	1.63
2.	ತೆರಿಗೆಯೇತರ ರಾಜಸ್ವ	13,117	13,500	14,500	16,148	119.62	0.56
3.	ಸಹಾಯಾನುದಾನಗಳು ಮತ್ತು ವಂತಿಕೆಗಳು	15,528	15,300	16,000	17,625	115.19	0.61
4.	ರಾಜಸ್ವ ಸ್ವೀಕೃತಿಗಳು (1+2+3)	2,33,343	2,63,178	2,57,801	2,58,153	98.09	8.95
5.	ಸಾಲಗಳು ಮತ್ತು ಮುಂಗಡಗಳ ವಸೂಲಿ	306	213	112	322	151.01	0.01
6.	ಇತರ ಸ್ವೀಕೃತಿಗಳು	36	36	38	20	56.78	0.00
7.	ಋಣಗಳು ಮತ್ತು ಇತರ ಹೊಣೆಗಾರಿಕೆಗಳು*	1,12,166	96,694	82,656	79,741	82.47	2.77
8.	ಬಂಡವಾಳ ಸ್ವೀಕೃತಿಗಳು (5+6+7)	1,12,508	96,943	82,806	80,083	82.61	2.78
9.	ಒಟ್ಟು ಸ್ವೀಕೃತಿಗಳು (4+8)	3,45,851	3,60,121	3,40,607	3,38,236	93.92	11.73
10.	ರಾಜಸ್ವ ವೆಚ್ಚ	2,42,614	2,90,531	2,83,928	2,78,987	96.03	9.67
11.	ಬಡ್ಡಿ ಪಾವತಿಗಳು	31,872	39,234	36,634	37,552	95.71	1.30
12.	ಬಂಡವಾಳ ವೆಚ್ಚ	52,120	55,877	56,963	57,906	103.63	2.01
13.	ಸಾಲಗಳು ಮತ್ತು ಮುಂಗಡಗಳು	4,473	2,974	2,551	6,631	222.98	0.23
14.	ಒಟ್ಟು ವೆಚ್ಚ (10+12+13)	2,99,207	3,49,382	3,43,442	3,43,524	98.32	11.91
15.	ರಾಜಸ್ವ ಅಧಿಕ (+) ಕೊರತೆ (–) (4–10)**	(–)9,272	(–)27,354	(–)26,127	(–)20,834	(–)76.17	(–)0.72
16.	ಪ್ರಾರ್ಥಮಿಕ ಕೊರತೆ (+) ವಿತ್ತೀಯ ಕೊರತೆ (–) {(4+5+6)–14}	(–)65,522	(–)82,981	–)82,940	(–)85,030**	(–)102.47	(–)2.95
17.	ಪ್ರಾಥಮಿಕ ಕೊರತೆ(–) / ಪ್ಹೆಚ್ಚಳ(+) (16–11)	(–)33,650	(–)43,747	(–)46,306	(–)47,478	(–)108.53	(–)1.65

ಆಕರ: ಹಣಕಾಸು ಲೆಕ್ಕಗಳು, ವಾರ್ಷಿಕ ವಿತ್ತ ನಿರೂಪಣೆ ಮತ್ತು 2024–25ರ ಆಯವ್ಯಯ ಅವಲೋಕನ

**ಸಾಲಗಳು ಮತ್ತು ಇತರ ಹೊಣೆಗಾರಿಕೆಗಳು: ಸಾರ್ವಜನಿಕ ಸಾಲದ ನಿವ್ವಳ (ಸ್ವೀಕೃತಿಗಳು – ವಿತರಣೆಗಳು) + ಸಾದಿಲ್ವಾರು ನಿಧಿಯ ನಿವ್ವಳ + ಸಾರ್ವಜನಿಕ ಲೆಕ್ಕದ ನಿವ್ವಳ (ಸ್ವೀಕೃತಿಗಳು – ವಿತರಣೆಗಳು) + ಆರಂಭಿಕ ಮತ್ತು ಮುಕ್ತಾಯ ನಗದು ಶಿಲ್ಕಿನ ನಿವ್ವಳ.*

*** ವ್ಯತ್ಯಾಸವು ಪೂರ್ಣಾಂಕದಿಂದಾಗಿ.*

ರಾಜ್ಯವು ಆಯವ್ಯಯದಲ್ಲಿನ ರಾಜಸ್ವ ಸ್ವೀಕೃತಿಗಳ ಅಂದಾಜಿಗಿಂತ 1.91 ಪ್ರತಿಶತದಷ್ಟು ಕಡಿಮೆಯಾಗಿದೆ. ರಾಜಸ್ವ ವೆಚ್ಚಕ್ಕೆ ಸಂಬಂಧಿಸಿದಂತೆ, ರಾಜ್ಯವು ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ಅಡಿಯಲ್ಲಿ ತನ್ನ ಆಯವ್ಯಯ ಪ್ರಕ್ಷೇಪಣದಲ್ಲಿನ ವೆಚ್ಚವನ್ನು ಉತ್ತಮವಾಗಿ ನಿರ್ವಹಿಸಿದೆ. ರಾಜಸ್ವ ವೆಚ್ಚಕ್ಕಿಂತ (ಶೇಕಡಾ 15) ರಾಜಸ್ವ ಸ್ವೀಕೃತಿಗಳಲ್ಲಿ (ಶೇಕಡಾ 11) ಕಡಿಮೆ ಬೆಳವಣಿಗೆಯಿಂದಾಗಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜ್ಯವು ರಾಜಸ್ವ ಕೊರತೆಯಲ್ಲಿ (ಶೇಕಡಾ 125) ಹೆಚ್ಚಳವನ್ನು ಕಂಡಿದೆ.

ಹಿಂದಿನ ವರ್ಷಕ್ಕಿಂತ ರಾಜಸ್ವ ವೆಚ್ಚದಲ್ಲಿ ಹೆಚ್ಚಳವು ಮುಖ್ಯವಾಗಿ ಸಹಾಯದನ (ಸ್ಪಷ್ಟ ಮತ್ತು ಸೂಚ್ಯ ಎರಡೂ) ಮತ್ತು ಬದ್ಧ ವೆಚ್ಚಗಳು (ಪಿಂಚಣಿ ಮತ್ತು ಬಡ್ಡಿ ಪಾವತಿಗಳು) ಇವುಗಳ ಹೆಚ್ಚಳದಿಂದಾಗಿ

ಉಂಟಾಗಿದೆ. 2020–21ರಿಂದ 2024–25ರ ಆರ್ಥಿಕ ವರ್ಷದ ರಾಜ್ಯ ಸರ್ಕಾರದ ಹಣಕಾಸಿನ ವಿವರಗಳನ್ನು **ಅನುಬಂಧ 1.1**ರಲ್ಲಿ ನೀಡಲಾಗಿದೆ.

1.1.4 ನಿಧಿಗಳ ಮೂಲಗಳು ಮತ್ತು ಅನ್ವಯ

ಪ್ರಸಕ್ತ ವರ್ಷದಲ್ಲಿ ರಾಜ್ಯದ ನಿಧಿಗಳ ಮೂಲಗಳು ಮತ್ತು ಅನ್ವಯಗಳ ಘಟಕಗಳ ಹೋಲಿಕೆಯನ್ನು **ನಕ್ಷೆ 1.6**ರಲ್ಲಿ ನೀಡಲಾಗಿದೆ.

ನಕ್ಷೆ 1.6: 2024–25ರ ಅವಧಿಯಲ್ಲಿ ಮೂಲಗಳ ವಿವರಗಳು ಮತ್ತು ನಿಧಿಗಳ ಅನ್ವಯ

(₹ ಕೋಟಿಗಳಲ್ಲಿ)



ಆಕರ: ಹಣಕಾಸು ಲೆಕ್ಕಗಳು

ತೆರಿಗೆ ಆದಾಯ (ಸ್ವಂತ ತೆರಿಗೆ ಮತ್ತು ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು) ಮತ್ತು ಸಾರ್ವಜನಿಕ ಋಣದ ಸ್ವೀಕೃತಿಗಳು ರಾಜ್ಯಕ್ಕೆ ನಿಧಿಯ ಮೂಲದಲ್ಲಿ ಪ್ರಮುಖ ಕೊಡುಗೆ ನೀಡುತ್ತಿವೆ ಮತ್ತು ಪ್ರಸಕ್ತ ವರ್ಷದಲ್ಲಿ ಕ್ರಮವಾಗಿ ಶೇಕಡಾ 62 ಮತ್ತು ಶೇಕಡಾ 29ರಷ್ಟಿವೆ, ಇದು ಹಿಂದಿನ ವರ್ಷದಂತೆಯೇ ಇದ್ದು ಹಿಂದಿನ ವರ್ಷದಂತೆಯೇ ಸ್ವೀಕೃತಿಗಳಲ್ಲಿನ ಹೆಚ್ಚಳವನ್ನು ಸೂಚಿಸುತ್ತದೆ. ಆರ್ಥಿಕ ಮತ್ತು ಸಾಮಾನ್ಯ ವಲಯಕ್ಕೆ ಹೋಲಿಸಿದರೆ ರಾಜ್ಯದ ನಿಧಿಯ ಅನ್ವಯವು ಸಾಮಾಜಿಕ ವಲಯಕ್ಕೆ ಹೆಚ್ಚಾಗಿತ್ತು. ಇದು ಅಭಿವೃದ್ಧಿ ಚಟುವಟಿಕೆಗಳಿಗಿಂತ ರಾಜ್ಯವು ಕಲ್ಯಾಣ ಯೋಜನೆಗಳನ್ನು ಬೆಂಬಲಿಸಿದೆ ಎಂದು ಸೂಚಿಸುತ್ತದೆ. ಸರ್ಕಾರದ ಬಡ್ಡಿ ಪಾವತಿಗಳಲ್ಲಿ ಹೆಚ್ಚಳದಿಂದಾಗಿ ಸಾಮಾನ್ಯ ವಲಯದಲ್ಲಿನ ವೆಚ್ಚವು ಆರ್ಥಿಕ ವಲಯಕ್ಕಿಂತ ಹೆಚ್ಚಾಗಿದೆ.

ಅನುಬಂಧ 1.2 ಪ್ರಸ್ತುತ ವರ್ಷ ಮತ್ತು ಹಿಂದಿನ ವರ್ಷದಲ್ಲಿ ಸ್ವೀಕೃತಿಗಳು ಮತ್ತು ವಿತರಣೆಗಳು ಮತ್ತು ರಾಜ್ಯದ ಒಟ್ಟಾರೆ ಹಣಕಾಸಿನ ಸ್ಥಿತಿಯ ವಿವರಗಳನ್ನು ಒದಗಿಸುತ್ತದೆ

1.1.5 ಸರ್ಕಾರದ ಆಸ್ತಿ ಮತ್ತು ಹೊಣೆಗಾರಿಕೆಗಳ ಕ್ಷಿಪ್ರ ನೋಟ

ಸರ್ಕಾರಿ ಲೆಕ್ಕಗಳು ಸರ್ಕಾರದ ಹಣಕಾಸಿನ ಹೊಣೆಗಾರಿಕೆಗಳನ್ನು ಮತ್ತು ಮಾಡಿದ ವೆಚ್ಚದಿಂದ ರಚಿಸಲಾದ ಆಸ್ತಿಗಳನ್ನು ಬಿಂಬಿಸುತ್ತವೆ. **ಅನುಬಂಧ 1.3** ಮಾರ್ಚ್ 31, 2025 ರಂತೆ ಅಂತಹ ಹೊಣೆಗಾರಿಕೆಗಳು ಮತ್ತು ಸ್ವತ್ತುಗಳ ಸಾರಾಂಶವನ್ನು ನೀಡುತ್ತದೆ, ಹಿಂದಿನ ವರ್ಷದ ಅನುಗುಣವಾದ ಸ್ಥಿತಿಗೆ ಹೋಲಿಸಿದರೆ. ಹೊಣೆಗಾರಿಕೆಗಳು ಮುಖ್ಯವಾಗಿ ಆಂತರಿಕ ಸಾಲಗಳು, ಭಾರತ ಸರ್ಕಾರದಿಂದ ಸಾಲಗಳು ಮತ್ತು

ಮುಂಗಡಗಳು, ಸಾರ್ವಜನಿಕ ಲೆಕ್ಕ ಮತ್ತು ಮೀಸಲು ನಿಧಿಗಳಿಂದ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ. ಆಸ್ತಿಗಳು ಮುಖ್ಯವಾಗಿ ಬಂಡವಾಳ ವೆಚ್ಚ, ರಾಜ್ಯ ಸರ್ಕಾರವು ನೀಡುವ ಸಾಲಗಳು ಮತ್ತು ಮುಂಗಡಗಳು ಮತ್ತು ನಗದು ಬಾಕಿಗಳನ್ನು ಒಳಗೊಂಡಿರುತ್ತವೆ. 2023–24 ಮತ್ತು 2024–25ರ ಹಣಕಾಸು ವರ್ಷಕ್ಕೆ ಆಸ್ತಿ ಮತ್ತು ಹೊಣೆಗಾರಿಕೆಗಳ ಸಂಕ್ಷಿಪ್ತ ಸ್ಥಿತಿಯನ್ನು **ಕೋಷ್ಟಕ 1.4** ರಲ್ಲಿ ನೀಡಲಾಗಿದೆ.

ಕೋಷ್ಟಕ 1.4: ಸ್ವತ್ತು ಮತ್ತು ಹೊಣೆಗಾರಿಕೆಗಳ ಸಂಕ್ಷಿಪ್ತ ಸ್ಥಿತಿ

(₹ ಕೋಟಿಗಳಲ್ಲಿ)

ಹೊಣೆಗಾರಿಕೆಗಳು					ಆಸ್ತಿಗಳು				
		2023–24	**2024–25**	**ಶೇಕಡಾ ಹೆಚ್ಚಳ/ಇಳಿಕೆ**			**2023–24**	**2024–25**	**ಶೇಕಡಾ ಹೆಚ್ಚಳ/ಇಳಿಕೆ**
ಎ	ಆಂತರಿಕ ಋಣ	4,17,454.56	4,89,398.18	17.23	ಎ	ಒಟ್ಟು ಬಂಡವಾಳ ವೆಚ್ಚ	5,08,524.20	5,66,428.40	11.39
ಬಿ	ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು*	53,405.78	37,080.50	(–)30.57	ಬಿ	ಸಾಲಗಳು ಮತ್ತು ಮುಂಗಡಗಳು	42,268.12	48,577.82	14.93
ಸಾದಿಲ್ವಾರು ನಿಧಿ		**500.00**	**500.00**	**0.00**					
ಸಾರ್ವಜನಿಕ ಲೆಕ್ಕ									
ಎ	ಸಣ್ಣ ಉಳಿತಾಯ, ಭವಿಷ್ಯ ನಿಧಿ, ಇತ್ಯಾದಿ	49,290.49	52,787.02	7.09	ಎ	ಇಲಾಖಾ ಅಧಿಕಾರಿಗಳ ಬಳಿ ಮುಂಗಡಗಳು	6.94	6.94	0.00
ಬಿ	ಠೇವಣಿಗಳು	67,347.89	66,804.18	(–)0.81	ಬಿ	ಇರಸಾಲುಗಳು	991.79	1,088.12	9.71
ಸಿ	ಮೀಸಲು ನಿಧಿಗಳು	67,969.29	71,793.06	5.63	ಸಿ	ಅಮಾನತ್ತು ಮತ್ತು ಇತರೆ	–	–	
ಡಿ	ಇರಸಾಲುಗಳು	–	–		**ನಗದು ಶಿಲ್ಕು(ಮೀಸಲಿಟ್ಟ ನಿಧಿಗಳಲ್ಲಿನ ಹೂಡಿಕೆಗಳೂ ಸೇರಿದಂತೆ)**		1,07,264.47	1,04,619.04	(–)2.47
ಇ	ಅಮಾನತ್ತು ಮತ್ತು ಇತರೆ	6,026.44	3,283.53	(–)45.51	**ಒಟ್ಟು**		**6,59,055.52**	**7,20,720.32**	**9.36**
					ಪೂರ್ಣಾಂಕಗೊಳಿಸಿದರಿಂದ ಆದ ವ್ಯತ್ಯಾಸ				
					ರಾಜಸ್ವ ಲೆಕ್ಕದಲ್ಲಿನ ಕೊರತೆ		2,938.93	926.15	(–)68.49
	ಒಟ್ಟು	**6,61,994.45**	**7,21,646.47**	**9.01**			**6,61,994.45**	**7,21,646.47**	**9.01**

ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು

** 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ಜಿ ಎಸ್ ಟಿ ಪರಿಹಾರದ ಬದಲಾಗಿ ಭಾರತ ಸರ್ಕಾರದಿಂದ ಪಡೆದ ₹18,109 ಕೋಟಿ ಬ್ಯಾಕ್–ಟು–ಬ್ಯಾಕ್ ಸಾಲವನ್ನು 2021–22, 2022–23 ಮತ್ತು 2023–24ನೇ ಸಾಲಿನ ಸಾಲ/ಜಿ ಎಸ್ ಡಿ ಪಿ ಅನುಪಾತವನ್ನು ಕಾರ್ಯಗತಗೊಳಿಸುವ ಸಾಲವೆಂದು ಪರಿಗಣಿಸಲಾಗಿಲ್ಲ ಮತ್ತು, 2024–25ರಲ್ಲಿ ಭಾರತ ಸರ್ಕಾರ ₹22,829 ಕೋಟಿ ಮರುಪಾವತಿಸಿದ ನಂತರ, ಉಳಿದ ₹7,687 ಕೋಟಿಯನ್ನು ಸಾಲ/ಜಿ ಎಸ್ ಡಿ ಪಿ ಅನುಪಾತ ಲೆಕ್ಕಕ್ಕೆ ಸಾಲವೆಂದು ಪರಿಗಣಿಸಲಾಗಿಲ್ಲ.*

2024–25ನೇ ವರ್ಷದಲ್ಲಿ, ಸಂಚಿತ ನಿಧಿಯಲ್ಲಿನ ಆಸ್ತಿಗಳು ಒಟ್ಟು ಬಂಡವಾಳ ವೆಚ್ಚದ ಅಡಿಯಲ್ಲಿ ಸುಮಾರು 11 ಪ್ರತಿಶತದಷ್ಟು ಮತ್ತು ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸುಮಾರು 15 ಪ್ರತಿಶತದಷ್ಟು ಹೆಚ್ಚಾಗಿದೆ. ಆಯವ್ಯಯೇತರ ಸಾಲಗಳನ್ನು ಹೊರತುಪಡಿಸಿ ಆಂತರಿಕ ಸಾಲದ ಅಡಿಯಲ್ಲಿ ಹೊಣೆಗಾರಿಕೆಗಳ ಬೆಳವಣಿಗೆಯ ದರವು ಸುಮಾರು 17 ಪ್ರತಿಶತದಷ್ಟು ಹೆಚ್ಚಾಗಿದೆ, ಆದರೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಭಾರತ ಸರ್ಕಾರದ ಸಾಲಗಳು ಮತ್ತು ಮುಂಗಡಗಳು ಶೇಕಡಾ 31ರಷ್ಟು ಕಡಿಮೆಯಾಗಿದೆ. ಸಾರ್ವಜನಿಕ ಲೆಕ್ಕದ ಅಡಿಯಲ್ಲಿ, ಹೊಣೆಗಾರಿಕೆಗಳು ಶೇಕಡಾ 2.12ರಷ್ಟು ಮತ್ತು ಆಸ್ತಿಗಳು ಶೇಕಡಾ 9.71ರಷ್ಟು ಹೆಚ್ಚಾಗಿದೆ. ಮಾರ್ಚ್ 2025ರ ಅಂತ್ಯದ ವೇಳೆಗೆ ಮೀಸಲಿಟ್ಟ ನಿಧಿಗಳಲ್ಲಿನ ಹೂಡಿಕೆ ಸೇರಿದಂತೆ ನಗದು ಬಾಕಿ ಶೇಕಡಾ 2.47ರಷ್ಟು ಕಡಿಮೆಯಾಗಿದೆ.

1.2 ರಾಜ್ಯದ ಸಂಚಿತ ನಿಧಿ

ರಾಜ್ಯ ಸರ್ಕಾರವು ಸ್ವೀಕರಿಸುವ ಎಲ್ಲಾ ಆದಾಯಗಳು, ರಾಜ್ಯ ಸರ್ಕಾರವು ಸಂಗ್ರಹಿಸಿದ ಎಲ್ಲಾ ಸಾಲಗಳು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿ ಐ) ನೀಡಿದ ಅರ್ಥೋಪಾಯ ಮುಂಗಡಗಳು ಮತ್ತು ಸಾಲಗಳ ಮರುಪಾವತಿಗಾಗಿ ರಾಜ್ಯ ಸರ್ಕಾರವು ಪಡೆದ ಎಲ್ಲಾ ಹಣವು ರಾಜ್ಯದ ಸಂಚಿತ ನಿಧಿಯ ಭಾಗವಾಗಿದೆ.

1.2.1 ರಾಜಸ್ವ ಸ್ವೀಕೃತಿಗಳು

2015–25ರ ಅವಧಿಯಲ್ಲಿ ಜಿ ಎಸ್ ಡಿ ಪಿಗೆ ಸಂಬಂಧಿಸಿದಂತೆ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು ಮತ್ತು ಬೆಳವಣಿಗೆಯನ್ನು **ಕೋಷ್ಟಕ 1.5**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 1.5: ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳು

(₹ ಕೋಟಿಗಳಲ್ಲಿ)

ನಿಯತಾಂಕಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ರಾಜಸ್ವ ಸ್ವೀಕೃತಿಗಳು	**1,18,817**	**1,33,214**	**1,47,000**	**1,64,979**	**1,75,442**	**1,56,716**	**1,95,762**	**2,29,080**	**2,33,343**	**2,58,153**
ತೆರಿಗೆ ರಾಜಸ್ವ	**99,533**	**1,11,716**	**1,18,882**	**1,32,725**	**1,33,281**	**1,18,746**	**1,54,023**	**1,78,298**	**2,04,698**	**2,24,380**
ಸ್ವಂತ ತೆರಿಗೆ ರಾಜಸ್ವ	75,550	82,956	87,130	96,830	1,02,362	97,052	1,20,739	1,43,702	1,63,505	1,77,447
ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು	23,983	28,760	31,752	35,895	30,919	21,694	33,284	34,596	41,193	46,933
ತೆರಿಗೆಯೇತರ ರಾಜಸ್ವ	**5,355**	**5,795**	**6,477**	**6,773**	**7,681**	**7,894**	**11,777**	**13,914**	**13,117**	**16,148**
ಭಾರತ ಸರ್ಕಾರದಿಂದ ಸಹಾಯಧನ	**13,929**	**15,703**	**21,641**	**25,481**	**34,480**	**30,076**	**29,962**	**36,868**	**15,528**	**17,625**
ರಾಜ್ಯದ ಸ್ವಂತ ರಾಜಸ್ವ (ಸ್ವಂತ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ)	80,905	88,751	93,607	1,03,603	1,10,043	1,04,946	1,32,516	1,57,616	1,76,622	1,93,595
ಜಿ ಎಸ್ ಡಿ ಪಿ (2011–12 ಸರಣಿ)	10,45,168	12,07,608	13,33,240	14,79,391	16,15,827	16,40,811	19,92,029	23,19,696	25,57,241	28,83,903
ವರ್ಷ ವರ್ಷೇ ವೃದ್ಧಿಯ ದರ										
ರಾಜಸ್ವ ಸ್ವೀಕೃತಿಗಳು	14.09	12.12	10.35	12.23	6.34	(–)10.67	24.92	17.02	1.86	10.63
ರಾಜ್ಯದ ಸ್ವಂತ ರಾಜಸ್ವ	8.06	9.70	5.47	10.68	6.22	(–)4.63	26.27	18.94	12.06	9.62
ಜಿಎಸ್‌ಡಿಪಿ	14.36	15.54	10.40	10.96	9.44	1.55	21.41	16.45	10.24	12.77
ಪ್ಲವನತೆ ಅನುಪಾತಗಳು										
ಜಿ ಎಸ್ ಡಿ ಪಿ ಯೊಂದಿಗೆ ರಾಜಸ್ವದ ಪ್ಲವನತೆ	0.98	0.78	0.99	1.12	0.67	*	1.16	1.03	0.18	0.83
ಜಿ ಎಸ್ ಡಿ ಪಿ ಯೊಂದಿಗೆ ರಾಜ್ಯದ ಸ್ವಂತ ರಾಜಸ್ವದ ಪ್ಲವನತೆ	0.56	0.62	0.53	0.97	0.66	*	1.23	1.15	1.18	0.75

ಆಕರ: ರಾಜಸ್ವ ಸ್ವೀಕೃತಿಗಳಿಗಾಗಿ ಹಣಕಾಸು ಲೆಕ್ಕಗಳು ಮತ್ತು ಜಿ ಎಸ್ ಡಿ ಪಿ ಅಂಕಿಅಂಶಗಳಿಗಾಗಿ ಕರ್ನಾಟಕದ ಆರ್ಥಿಕ ಸಮೀಕ್ಷೆ 2024–25

* ಜಿ ಎಸ್ ಡಿ ಪಿ ಬೆಳವಣಿಗೆ ಋಣಾತ್ಮಕವಾಗಿದ್ದರಿಂದ ಪ್ಲವನತೆಯ ಅನುಪಾತವನ್ನು ಲೆಕ್ಕಹಾಕಲಾಗಿಲ್ಲ.

ನಕ್ಷೆ 1.7 ಜಿ.ಎಸ್.ಡಿ.ಪಿ.ಯ ಶತಾಂಶವಾಗಿ ರಾಜಸ್ವ ಸ್ವೀಕೃತಿಗಳು



ಆಕರ: ಆವರ್ಷದ ಹಣಕಾಸು ಲೆಕ್ಕಗಳು

ನಕ್ಷೆ 1.8: ರಾಜಸ್ವ ಸ್ವೀಕೃತಿಗಳಿಗೆ ಕೊಡುಗೆಗಳು



ಆಕರ: ಆ ವರ್ಷದ ಹಣಕಾಸು ಲೆಕ್ಕಗಳು

ರಾಜಸ್ವ ಸ್ವೀಕೃತಿಗಳು ಸುಮಾರು ₹1.19 ಲಕ್ಷ ಕೋಟಿ (2015–16)ರಿಂದ ₹2.58 ಲಕ್ಷ ಕೋಟಿ (2024–25)ಗೆ ದ್ವಿಗುಣಗೊಂಡಿವೆ. 2019–20ರವರೆಗೆ ಸ್ಥಿರವಾಗಿದ್ದ ಬೆಳವಣಿಗೆಯು 2020–21ರಲ್ಲಿ ಕೋವಿಡ್–19 ಲಾಕ್‌ಡೌನ್‌ನಿಂದಾಗಿ ತೀವ್ರವಾಗಿ ಕುಸಿದಿದ್ದು 2021–22ರಲ್ಲಿ ಆರ್ಥಿಕತೆಯ ಚೇತರಿಕೆಯಿಂದಾಗಿ ಪುಟಿಯಿತು. 2023–24ರಲ್ಲಿ ಮಧ್ಯಮವಾಗಿದ್ದ ಬೆಳವಣಿಗೆ 2024–25ರಲ್ಲಿ ಸುಧಾರಿಸಿತು.

ಕಳೆದ ದಶಕದಲ್ಲಿ, ಜಿ ಎಸ್ ಡಿ ಪಿಯ ಪಾಲಿನಂತೆ ರಾಜಸ್ವ ಸ್ವೀಕೃತಿಗಳಲ್ಲಿ ಇಳಿಕೆಯ ಪ್ರವೃತ್ತಿ ಕಂಡುಬಂದಿದೆ. ಕೋವಿಡ್–19 ಕಾರಣದಿಂದಾಗಿ 2020–21ರಲ್ಲಿ ಈ ಕುಸಿತವು ತೀವ್ರವಾಗಿತ್ತು ಮತ್ತು ಈ ಅನುಪಾತವು ಕೋವಿಡ್ ಪೂರ್ವ ಮಟ್ಟಕ್ಕೆ ಮರಳಲಿಲ್ಲ. ಇದು ಮೂಲತಃ ಸರಕು ಮತ್ತು ಸೇವಾ ತೆರಿಗೆ (ಜಿ ಎಸ್ ಟಿ) ಜಾರಿ, ಜಿ ಎಸ್ ಟಿ ಬದಲಿಗೆ ಪರಿಹಾರದ ಪೂರ್ಣತೆ ಮತ್ತು ಕೇಂದ್ರ ಸರ್ಕಾರದಿಂದ ಅನುದಾನ–ಸಹಾಯದಲ್ಲಿನ ಕುಸಿತದಿಂದಾಗಿ ಉಂಟಾಗಿತ್ತು.

ಪ್ಲವನತೆ ಅಂಶಕ್ಕೆ ಸಂಬಂಧಿಸಿದಂತೆ, ಸಾಂಕ್ರಾಮಿಕವಲ್ಲದ ವರ್ಷಗಳಲ್ಲಿ ಜಿ ಎಸ್ ಡಿ ಪಿಗೆ ಸಂಬಂಧಿಸಿದಂತೆ ರಾಜಸ್ವದ ಪ್ಲವನ ಪ್ರಮಾಣವು ಸುಮಾರು 1.0ರಷ್ಟಿತ್ತು, ಇದು ಆರ್ಥಿಕತೆಗೆ ಅನುಗುಣವಾಗಿ ಬೆಳೆದಿದೆ ಎಂದು ಸೂಚಿಸುತ್ತದೆ. 2024–25ರ ಅವಧಿಯಲ್ಲಿ ಜಿ ಎಸ್ ಡಿ ಪಿಗೆ ಸಂಬಂಧಿಸಿದಂತೆ ರಾಜಸ್ವದ ಪ್ಲವನತೆ ಪ್ರಮಾಣವು ಹೆಚ್ಚಾದರೂ, ರಾಜ್ಯದ ಸ್ವಂತ ರಾಜಸ್ವದ ಪ್ಲವನತೆ ಪ್ರಮಾಣವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿದೆ, ಇದಕ್ಕೆ ರಾಜ್ಯದ ಸ್ವಂತ ರಾಜಸ್ವ, ವಿಶೇಷವಾಗಿ ರಾಜ್ಯದ ತೆರಿಗೆ ರಾಜಸ್ವದ ಬೆಳವಣಿಗೆಯ ದರ ಕಡಿಮೆಯಾಗಿದ್ದು ಕಾರಣ.

ಎ. ರಾಜ್ಯದ ಸ್ವಂತ ಸಂಪನ್ಮೂಲಗಳು

ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ತನ್ನದೇ ಆದ ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಬರುವ ಆದಾಯವನ್ನು ಒಳಗೊಂಡಿರುವ ತನ್ನದೇ ಆದ ಸಂಪನ್ಮೂಲಗಳ ಪರಿಭಾಷೆಯಲ್ಲಿ ನಿರ್ಣಯಿಸಬೇಕು. ರಾಜ್ಯದ ಸ್ವಂತ ಆದಾಯದ ಅಂಶಗಳನ್ನು **ಚಾರ್ಟ್ 1.9**ರಲ್ಲಿ ವಿವರಿಸಲಾಗಿದೆ.

ನಕ್ಷೆ 1.9: ರಾಜ್ಯದ ಸ್ವಂತ ರಾಜಸ್ವದ ವಿವರಗಳು



(i) ಸ್ವಂತ ತೆರಿಗೆ ಆದಾಯ

ರಾಜ್ಯ ಸರ್ಕಾರವು ಸಂವಿಧಾನದಡಿಯಲ್ಲಿ ವಿಧಿಸಲು ಅಧಿಕಾರ ಹೊಂದಿರುವ ತೆರಿಗೆಗಳ ಮೂಲಕ ಸಂಗ್ರಹಿಸುವ ಆದಾಯವೇ ಸ್ವಂತ ತೆರಿಗೆ ರಾಜಸ್ವ. 2023–24ನೇ ಹಣಕಾಸು ವರ್ಷದ ವಾಸ್ತವಿಕ ಮಾಹಿತಿ, ಆಯವ್ಯಯ ಅಂದಾಜು (ಬಿಇ), ಪರಿಷ್ಕೃತ ಅಂದಾಜು (ಆರ್ ಇ), ಮತ್ತು 2024–25ನೇ ಹಣಕಾಸು ವರ್ಷದ ಸ್ವಂತ ತೆರಿಗೆ ರಾಜಸ್ವ ದ ವಾಸ್ತವಿಕ ಮಾಹಿತಿಯನ್ನು ಕೋಷ್ಟಕ 1.6ರಲ್ಲಿ ನೀಡಲಾಗಿದೆ.

ಕೋಷ್ಟಕ 1.6: ಸ್ವಂತ ತೆರಿಗೆ ಆದಾಯ: 2023–24 (ವಾಸ್ತವಿಕ) ಮತ್ತು 2024–25 (ಆಯವ್ಯಯ ಅಂದಾಜು, ಪರಿಷ್ಕೃತ ಅಂದಾಜು ಮತ್ತು ವಾಸ್ತವ)

(₹ ಕೋಟಿಗಳಲ್ಲಿ)

ತೆರಿಗೆ ಆದಾಯ	2023–24 (ವಾಸ್ತವ)	2024–25 (ಆಯವ್ಯಯ ಅಂದಾಜು)	2024–25 (ಪರಿಷ್ಕೃತ ಅಂದಾಜು)	2024–25 (ವಾಸ್ತವ)
ರಾಜ್ಯ ಸರಕು ಮತ್ತು ಸೇವಾ ತೆರಿಗೆ (SGST)	71,041	86,475	80,116	77,169
ರಾಜ್ಯ ಅಬಕಾರಿ	34,629	38,525	36,500	35,784
ಭೂಕಂದಾಯ	860	362	362	499
ಸ್ಟಾಂಪ್ ಡ್ಯೂಟಿ ಮತ್ತು ನೋಂದಣಿ ಶುಲ್ಕಗಳು	20,147	26,000	24,000	22,353
ವಾಹನ ತೆರಿಗೆ	11,287	13,000	12,500	12,516
ಇತರೆ	25,541	25,601	26,965	29,126
ಒಟ್ಟು	**1,63,505**	**1,89,963**	**1,80,443**	**1,77,447**

ಆರಕ: ಕರ್ನಾಟಕದ ಹಣಕಾಸು ಲೆಕ್ಕಪತ್ರಗಳು ಮತ್ತು ಆಯವ್ಯಯ ದಾಖಲೆಗಳು

ನಕ್ಷೆ 1.8ರಿಂದ, 2015–25ರಿಂದ ಎಲ್ಲಾ ವರ್ಷಗಳಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿ ಸ್ವಂತ ತೆರಿಗೆ ರಾಜಸ್ವದ ಪಾಲು ಗರಿಷ್ಠವಾಗಿದೆ ಎಂದು ಸ್ಪಷ್ಟವಾಗುತ್ತದೆ. ಹಿಂದಿನ ವರ್ಷಕ್ಕಿಂತ ಪ್ರಸಕ್ತ ವರ್ಷದಲ್ಲಿ ಸ್ವಂತ ತೆರಿಗೆ ರಾಜಸ್ವವು ಸುಮಾರು ಒಂಬತ್ತು ಪ್ರತಿಶತದಷ್ಟು ಹೆಚ್ಚಾಗಿದೆ. ಆದಾಗ್ಯೂ, ಇದು ಆಯವ್ಯಯ ಅಂದಾಜು ಮತ್ತು ಪರಿಷ್ಕೃತ ಅಂದಾಜುಗಳಿಗಿಂತ ಕ್ರಮವಾಗಿ ಸುಮಾರು ಏಳು ಪ್ರತಿಶತ ಮತ್ತು ಎರಡು ಪ್ರತಿಶತ ಕಡಿಮೆಯಾಗಿದೆ.

2015–16ರಿಂದ 2024–25ರ ಅವಧಿಯಲ್ಲಿ ಸ್ವಂತ ತೆರಿಗೆ ರಾಜಸ್ವ ಮತ್ತು ಅದರ ಘಟಕಗಳ ಪ್ರವೃತ್ತಿಗಳನ್ನು ಕ್ರಮವಾಗಿ **ನಕ್ಷೆ 1.10** ಮತ್ತು **ನಕ್ಷೆ 1.11**ರಲ್ಲಿ ತೋರಿಸಲಾಗಿದೆ.

ನಕ್ಷೆ 1.10 2015–16ರಿಂದ 2024–25ರ ಅವಧಿಯ ಸ್ವಂತ ತೆರಿಗೆ ರಾಜಸ್ವದ ಪ್ರವೃತ್ತಿ



ಆಕರ: ಆ ವರ್ಷದ ಹಣಕಾಸು ಲೆಕ್ಕಗಳು

ರಾಜ್ಯದ ಸ್ವಂತ ತೆರಿಗೆ ರಾಜಸ್ವವು ದಶಕದಲ್ಲಿ ಬಲವಾದ ಏರಿಕೆಯ ಪ್ರವೃತ್ತಿಯನ್ನು ತೋರಿಸಿದೆ. 2020–21ರಲ್ಲಿ (₹97,052 ಕೋಟಿ) ಕುಸಿತದ ನಂತರ, ರಾಜ್ಯದ ಸ್ವಂತ ತೆರಿಗೆ ರಾಜಸ್ವವು ತೀವ್ರವಾಗಿ ಚೇತರಿಸಿಕೊಂಡಿತು, ವಿಶೇಷವಾಗಿ 2021–22 ನಂತರದಿಂದ ಸಂಪೂರ್ಣ ಪರಿಭಾಷೆಯಲ್ಲಿ ಬೆಳವಣಿಗೆಯ ಹೊರತಾಗಿಯೂ, ಜಿ ಎಸ್ ಡಿ ಪಿಯ ಪಾಲಾಗಿ ಸ್ವಂತ ತೆರಿಗೆ ಆದಾಯವು ಒಟ್ಟಾರೆಯಾಗಿ ಕುಸಿಯಿತು. 2020–21ರಲ್ಲಿ ಕನಿಷ್ಠವಾಗಿದ್ದರೂ ಪುನರುಜ್ಜೀವನಗೊಂಡ ಪಾಲು 2023–24ರಲ್ಲಿ ಕೋವಿಡ್ ಪೂರ್ವ ಮಟ್ಟದಲ್ಲಿತ್ತು. ಆದಾಗ್ಯೂ, 2024–25ರ ಅವಧಿಯಲ್ಲಿ, ಅದು ಮತ್ತೊಮ್ಮೆ ಕುಸಿದು ಸ್ವಂತ ತೆರಿಗೆ ರಾಜಸ್ವದಲ್ಲಿ ಕಡಿಮೆ ಬೆಳವಣಿಗೆಯ ದರವನ್ನು ಸೂಚಿಸುತ್ತದೆ.

ನಕ್ಷೆ 1.11 ರಾಜ್ಯದ ಸ್ವಂತ ತೆರಿಗೆಯ ಪ್ರಮುಖ ಘಟಕಗಳು

(₹ ಕೋಟಿಗಳಲ್ಲಿ)





ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು

ಸಂಪೂರ್ಣ ಪರಿಭಾಷೆಯಲ್ಲಿ, ಭೂ ಕಂದಾಯವನ್ನು ಹೊರತುಪಡಿಸಿ ವರ್ಷದಲ್ಲಿ ಸ್ವಂತ ತೆರಿಗೆ ಆದಾಯದಲ್ಲಿನ ಹೆಚ್ಚಳವು ಎಲ್ಲಾ ಅಂಶಗಳಲ್ಲಿ ಕಂಡುಬಂದಿದೆ. ಆದಾಗ್ಯೂ, 2024–25ರ ಅವಧಿಯಲ್ಲಿ ಸ್ವಂತ ತೆರಿಗೆ ಆದಾಯದ ಬೆಳವಣಿಗೆಯ ದರದಲ್ಲಿ ಇಳಿಕೆ ಕಂಡುಬಂದಿದೆ, ಇದು ಮುಖ್ಯವಾಗಿ ಎಸ್ ಜಿ ಎಸ್ ಟಿ, ರಾಜ್ಯ ಅಬಕಾರಿ ಮತ್ತು ಮುದ್ರಾಂಕಗಳು ಮತ್ತು ನೋಂದಣಿಯ ಬೆಳವಣಿಗೆಯ ದರದಲ್ಲಿನ ಇಳಿಕೆಯಿಂದಾಗಿದೆ. ದತ್ತಾಂಶ (2015–2025) ವಿಶ್ಲೇಷಣೆಯ ಮೇಲೆ ಅಂದರೆ ವಲಯವಾರು ಎಸ್ ಜಿ ಎಸ್ ಟಿ ಸಂಗ್ರಹ, ಮದ್ಯ/ಬಿಯರ್ ಮಾರಾಟ, ನೋಂದಣಿ ವಿವರಗಳು ಇತ್ಯಾದಿ ಮತ್ತು ಸಂಬಂಧಿತ ಇಲಾಖೆಗಳು ಹೊರಡಿಸಿದ ಆದೇಶಗಳ ಮೇಲೆ, ಲೆಕ್ಕಪರಿಶೋಧನೆಯು ಈ ಕೆಳಗಿನವುಗಳನ್ನು ಗಮನಿಸಿದೆ;

- **ಎಸ್ ಜಿ ಎಸ್ ಟಿ:** 2021–24ರ ವಲಯವಾರು ಎಸ್ ಜಿ ಎಸ್ ಟಿ ಸಂಗ್ರಹದ ವಿಶ್ಲೇಷಣೆಯು ವಸತಿ, ಆಹಾರ ಮತ್ತು ಪಾನೀಯ ಸೇವೆಗಳು, ಆಟೋಮೊಬೈಲ್‌ಗಳು, ನಿರ್ಮಾಣ ಸೇವೆಗಳು, ಕಬ್ಬಿಣ ಹಾಗು ಉಕ್ಕು ಮತ್ತು ವಸ್ತುಗಳು ಮತ್ತು ಸಾರಿಗೆ ಸೇವೆಗಳಂತಹ ವಲಯಗಳಲ್ಲಿ ಗಮನಾರ್ಹ ಏರಿಕೆ ಕಂಡುಬಂದಿದೆ ಎಂದು ಬಹಿರಂಗಪಡಿಸಿದೆ. 2021–22ರ ಅವಧಿಯಲ್ಲಿ ಆರ್ಥಿಕತೆಯಲ್ಲಿನ ನಿಧಾನಗತಿ ಮತ್ತು ಅದರ ಪರಿಣಾಮವಾಗಿ ಉಂಟಾದ ಮೂಲ ಪರಿಣಾಮದಿಂದಾಗಿ 2022–23ರಲ್ಲಿ ಹೆಚ್ಚಳ ಹೆಚ್ಚಾಗಿತ್ತು. 2023–24ರಲ್ಲಿ ಮೇಲಿನ ವಲಯಗಳಲ್ಲಿಯೂ ಹೆಚ್ಚಳ ಕಂಡುಬಂದಿದ್ದರೂ, ಆರ್ಥಿಕತೆಯಲ್ಲಿನ ಸ್ಥಿರತೆಯಿಂದಾಗಿ ಬೆಳವಣಿಗೆ ಕಡಿಮೆಯಾಗಿದೆ. 2015–16 ಮತ್ತು 2016–17ರ ಜಿ ಎಸ್ ಟಿ ಪೂರ್ವ ಅವಧಿಯಲ್ಲಿ, ಮೌಲ್ಯವರ್ಧಿತ ತೆರಿಗೆಯು ರಾಜ್ಯದ ಸ್ವಂತ ತೆರಿಗೆ ರಾಜಸ್ವದ ಶೇಕಡಾ 55ರಷ್ಟಿತ್ತು. 2017–18ರಲ್ಲಿ ಜಿ ಎಸ್ ಟಿ ಯನ್ನು ಪರಿಚಯಿಸಿದಾಗ ಸ್ವಂತ ತೆರಿಗೆ ರಾಜಸ್ವಕ್ಕೆ ಅದರ ಕೊಡುಗೆ ಕಡಿಮೆಯಾಯಿತು ಮತ್ತು 2024–25ರಲ್ಲಿ ಇದು ಶೇಕಡಾ 43ರಷ್ಟಿತ್ತು. ಈ ನಷ್ಟವನ್ನು ಸರಿದೂಗಿಸಲು, ರಾಜ್ಯವು 2017–23ರಲ್ಲಿ ₹74,550.99 ಕೋಟಿ ಮೊತ್ತದ ಜಿಎಸ್‌ಟಿ ಪರಿಹಾರ ಸೆಸ್ ಅನ್ನು ಪಡೆಯಿತು. ಕೊನೆಯ ಎರಡು ಕಂತುಗಳಾದ ₹1,191.41 ಕೋಟಿ ಮತ್ತು ₹1.84 ಕೋಟಿ ಬಾಕಿಯನ್ನು ಕ್ರಮವಾಗಿ 2023–24 ಮತ್ತು 2024–25ರಲ್ಲಿ ಸ್ವೀಕರಿಸಲಾಗಿದೆ. ಸೆಪ್ಟೆಂಬರ್ 2025ರಲ್ಲಿ ಜಿಎಸ್‌ಟಿ ದರಗಳನ್ನು

ತರ್ಕಬದ್ಧಗೊಳಿಸುವುದರಿಂದ ಮುಂದಿನ ವರ್ಷ ಜಿಎಸ್‌ಟಿ ರೂಪದಲ್ಲಿ ಒಳಹರಿವು ಮತ್ತಷ್ಟು ಕಡಿಮೆಯಾಗಬಹುದು.

- **ಮುದ್ರಾಂಕ ಮತ್ತು ನೋಂದಣಿ**: 2015–25ರಲ್ಲಿ, ಸಂಪೂರ್ಣ ಆದಾಯದಲ್ಲಿ ಹೆಚ್ಚಳ ಕಂಡುಬಂದರೂ (2016–17 ಹೊರತುಪಡಿಸಿ), ಬೆಳವಣಿಗೆಯ ದರದಲ್ಲಿ ಅಂತರ–ವರ್ಷ ವ್ಯತ್ಯಾಸವಿತ್ತು. ಮಾರ್ಗಸೂಚಿ ಮೌಲ್ಯ ಪರಿಷ್ಕರಣೆಯನ್ನು 2011 (ಬೆಂಗಳೂರು ಮತ್ತು ಸುತ್ತಮುತ್ತಲಿನ ಸ್ಥಳಗಳು), ಮಾರ್ಚ್ 2016, ಜನವರಿ 2019 ಮತ್ತು ಅಕ್ಟೋಬರ್ 2023ರಲ್ಲಿ ಜಾರಿಗೆ ತರಲಾಯಿತು. 2011, 2016 ಮತ್ತು 2019ರ ಹಣಕಾಸು ವರ್ಷಗಳ ಕೊನೆಯಲ್ಲಿ ಹೊಸ ಮಾರ್ಗಸೂಚಿಗಳ ಅನುಷ್ಠಾನದಿಂದಾಗಿ, ನೋಂದಣಿ ಪ್ರಕ್ರಿಯೆಯಲ್ಲಿ ಕುಸಿತ ಕಂಡುಬಂದಿತು ಮತ್ತು ಇದರ ಪರಿಣಾಮವಾಗಿ, 2012–13, 2016–17 ಮತ್ತು 2019–20ರ ಅವಧಿಯಲ್ಲಿ ಬೆಳವಣಿಗೆಯ ದರ ಗಣನೀಯವಾಗಿ ಕಡಿಮೆಯಾಯಿತು. 2020–21ರಲ್ಲಿ ಕೋವಿಡ್ 19 ಸಾಂಕ್ರಾಮಿಕ ಲಾಕ್‌ಡೌನ್ ನೋಂದಣಿ ಪ್ರಕ್ರಿಯೆಯನ್ನು ವರ್ಷದಲ್ಲಿ ಭಾಗಶಾಹ ಮುಚ್ಚಲು ಕಾರಣವಾಯಿತು ಮತ್ತು ಪರಿಣಾಮವಾಗಿ ವರ್ಷದಲ್ಲಿ ನೋಂದಣಿ ಕಡಿಮೆಯಾಗಿತ್ತು. 2021–23ರಲ್ಲಿ ಆರ್ಥಿಕತೆ ಚೇತರಿಸಿಕೊಂಡರೂ, 2023–24ರ ಮಧ್ಯದಲ್ಲಿ ಹೊಸ ಮಾರ್ಗಸೂಚಿ ಮೌಲ್ಯವನ್ನು (ಅಕ್ಟೋಬರ್ 2023) ಜಾರಿಗೆ ತರಲಾಯಿತು, ಇದು ಅದೇ ಹಣಕಾಸು ವರ್ಷದಲ್ಲಿ ಬೆಳವಣಿಗೆಯ ದರದಲ್ಲಿ ಇಳಿಕೆಗೆ ಕಾರಣವಾಯಿತು. 2024–25ರ ಅವಧಿಯಲ್ಲಿ, ನೋಂದಣಿಗೆ ಮೊದಲು ಇ–ಖಾತಾದ ಅವಶ್ಯಕತೆ ಮತ್ತು ಕಾವೇರಿ ಪೋರ್ಟಲ್‌ನಲ್ಲಿನ ತಾಂತ್ರಿಕ ದೋಷಗಳು ಅಡಚಣೆಗಳನ್ನು ಸೃಷ್ಟಿಸಿದವು, ಇದು ನೋಂದಣಿ ಪ್ರಕ್ರಿಯೆಯನ್ನು ನಿಧಾನಗೊಳಿಸಿತು ಮತ್ತು ಪರಿಣಾಮವಾಗಿ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಆದಾಯದಲ್ಲಿ ಬೆಳವಣಿಗೆಯ ದರ ಕಡಿಮೆಯಾಯಿತು.
- **ರಾಜ್ಯ ಅಬಕಾರಿ**: 2015–2025ರ ಅವಧಿಯ ಮೊದಲಾರ್ಧದಲ್ಲಿ, ರಾಜ್ಯವು ಅಬಕಾರಿ ಸಂಗ್ರಹದಲ್ಲಿ ಸ್ಥಿರವಾದ ಹೆಚ್ಚಳವನ್ನು ಕಂಡಿತು ಆದರೆ ಬೆಳವಣಿಗೆಯ ದರದಲ್ಲಿ ಅಂತರ–ವರ್ಷ ವ್ಯತ್ಯಾಸವಿತ್ತು. ಈ ಅವಧಿಯ ದ್ವಿತೀಯಾರ್ಧದಲ್ಲಿ, ರಾಜ್ಯ ಅಬಕಾರಿ ಆದಾಯದಲ್ಲಿನ ಬೆಳವಣಿಗೆಯ ದರವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿತ್ತು, ಆದರೂ 2022–23ರಲ್ಲಿ ನಾಮಮಾತ್ರವಾಗಿತ್ತು. 2023–24ರಲ್ಲಿ, ತೆರಿಗೆಗಳ ಪರಿಷ್ಕರಣೆಯಿಂದಾಗಿ ಅಂದರೆ ಬಿಯರ್ ಮತ್ತು ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ಸುಂಕ ವಿಧಿಸುವಿಕೆಯಿಂದಾಗಿ ಬೆಳವಣಿಗೆಯ ದರ ಹೆಚ್ಚಾಗಿದೆ. ರಾಜ್ಯ ಅಬಕಾರಿ ಇಲಾಖೆಯು 2024–25ರಲ್ಲಿ ಅತ್ಯಂತ ಕಡಿಮೆ ಬೆಳವಣಿಗೆಯ ದರವನ್ನು ಕಂಡಿತು. ನಿಧಾನಗತಿಯ ಬೆಳವಣಿಗೆಯ ದರಕ್ಕೆ ಪ್ರಮುಖ ಕಾರಣವೆಂದರೆ ಮದ್ಯ ಮತ್ತು ಬಿಯರ್ ಮೇಲಿನ ಪುನರಾವರ್ತಿತ ತೆರಿಗೆ ಹೆಚ್ಚಳ, ಇದು ಆರಂಭದಲ್ಲಿ ಆದಾಯವನ್ನು ಹೆಚ್ಚಿಸಿದರೂ (2023–24), ಇದು 2024–25ರಲ್ಲಿ ಗಮನಾರ್ಹವಾಗಿ ಕಡಿಮೆಯಾಯಿತು. ಇದರ ಜೊತೆಗೆ, ನೆರೆಯ ರಾಜ್ಯಗಳಲ್ಲಿನ ಅಬಕಾರಿ ನೀತಿಯಲ್ಲಿನ ಬದಲಾವಣೆಗಳು ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಬಳಕೆ ಕಡಿಮೆಯಾಗಲು ಕಾರಣವಾಗಿರಬಹುದು
- **ವಾಹನಗಳ ಮೇಲಿನ ತೆರಿಗೆಗಳು**: 2020–21 ಹೊರತುಪಡಿಸಿ ಕಳೆದ ದಶಕದಲ್ಲಿ ವಾಹನಗಳ ಮೇಲಿನ ತೆರಿಗೆಗಳು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದರೂ, 2016–17ರಿಂದ 2020–21ರವರೆಗೆ ಬೆಳವಣಿಗೆಯ ದರವು ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು. 2020–21 ಮತ್ತು 2021–22ರ ಅವಧಿಯಲ್ಲಿ, ಕೋವಿಡ್ 19 ನಿರ್ಬಂಧಗಳಿಂದಾಗಿ ಲ್ಯಾಪ್‌ಟಾಪ್/ಮೊಬೈಲ್‌ಗಳ ಮೇಲಿನ ಬೇಡಿಕೆ ಹೆಚ್ಚಿತ್ತು. ಅದೇ ಸಮಯದಲ್ಲಿ, ವಾಹನಗಳ ಉತ್ಪಾದನೆಗೆ ಅಗತ್ಯವಾದ ಸೆಮಿಕಂಡಕ್ಟರ್ ಚಿಪ್‌ಗಳ ಪೂರೈಕೆಯಲ್ಲಿ ಸಮಸ್ಯೆಗಳೂ ಇದ್ದವು. ಆದ್ದರಿಂದ, ವಾಹನಗಳಿಗೆ ಬೇಡಿಕೆ ಇದ್ದರೂ, ಪೂರೈಕೆ ಕಡಿಮೆಯಾಗಿತ್ತು. ಇದರ ಜೊತೆಗೆ, ಸರ್ಕಾರವು ಪ್ರಯಾಣಿಕ ಸಾರಿಗೆ ವಾಹನಗಳಿಗೆ ತೆರಿಗೆ ರಿಯಾಯಿತಿಯನ್ನು ವಿಸ್ತರಿಸಿತ್ತು. ಕೋವಿಡ್–19 ಲಾಕ್‌ಡೌನ್ ಜೊತೆಗೆ ಈ ಅಂಶಗಳು 2020–21 ಮತ್ತು 2021–22ರ ಅವಧಿಯಲ್ಲಿ ಸ್ವೀಕೃತಿ ಗಳಲ್ಲಿ ಇಳಿಕೆಗೆ ಕಾರಣವಾಯಿತು. 2022–23ರಲ್ಲಿ ವಾಹನಗಳ ಪೂರೈಕೆ ಮತ್ತು ಬಾಕಿ ಉಳಿದ ಬೇಡಿಕೆಯಿಂದಾಗಿ 2022–23ರಲ್ಲಿ ವಾಹನಗಳ ಮೇಲಿನ ತೆರಿಗೆ ಅಡಿಯಲ್ಲಿ ಆದಾಯವು 2021–22ಕ್ಕೆ ಹೋಲಿಸಿದರೆ ಶೇಕಡಾ 50ರಷ್ಟು ಹೆಚ್ಚಾಗಿದೆ. 2023–24ರಲ್ಲಿ ಆರ್ಥಿಕತೆಯ ಸ್ಥಿರೀಕರಣದಿಂದಾಗಿ, ಆದಾಯದ ಬೆಳವಣಿಗೆ ಕಡಿಮೆಯಾಗಿದೆ. ಇದಲ್ಲದೆ, 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ವಿದ್ಯುತ್ ವಾಹನಗಳ ನೋಂದಣಿ ಹೆಚ್ಚಾಗಿದೆ, ಇದರಲ್ಲಿ ₹25 ಲಕ್ಷಕ್ಕಿಂತ ಕಡಿಮೆ ಬೆಲೆಯ ವಾಹನಗಳಿಗೆ ವಿನಾಯಿತಿ ಇದೆ. ಈ ಅಂಶಗಳು 2023–24ರಲ್ಲಿ ಕಡಿಮೆ ಬೆಳವಣಿಗೆಯ ದರಕ್ಕೆ ಕಾರಣವಾಯಿತು. ಇದಕ್ಕೆ ವ್ಯತಿರಿಕ್ತವಾಗಿ, 2024–25ರ

ಅವಧಿಯಲ್ಲಿ, ವಿದ್ಯುತ್ ವಾಹನಗಳ ನೋಂದಣಿಯಲ್ಲಿ ಕುಸಿತ ಕಂಡುಬಂದಿದ್ದು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ನಾಮಮಾತ್ರ ಬೆಳವಣಿಗೆಗೆ ಕಾರಣವಾಗಿದೆ.

2024–25 ಮತ್ತು 2023–24ನೇ ಸಾಲಿನ ರಾಜ್ಯ ಅಬಕಾರಿ ಇಲಾಖೆ ಕಚೇರಿಗಳು ಮತ್ತು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ ಇಲಾಖೆಗಳ ದಾಖಲೆಗಳ ಪರೀಕ್ಷಾ ಪರಿಶೀಲನೆಯು ಕ್ರಮವಾಗಿ ₹191.30 ಕೋಟಿ **(ಕೋಷ್ಟಕ 1.6(ಎ))** ಮೊತ್ತದ ಆದಾಯ ಸಂಗ್ರಹಣೆಯಲ್ಲಿ ಅಕ್ರಮಗಳನ್ನು ತೋರಿಸಿದೆ, ಇದನ್ನು ಇಲಾಖೆಗಳು ಸ್ವೀಕರಿಸಿವೆ ಮತ್ತು ಎಲ್ಲಾ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿವೆ.

ಕೋಷ್ಟಕ 1.6(ಎ): ರಾಜಸ್ವ ಸಂಗ್ರಹದಲ್ಲಿನ ಅಕ್ರಮಗಳು

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ವರ್ಗ	ಪ್ರಕರಣಗಳ ಸಂಖ್ಯೆ	ಮೊತ್ತ
	ರಾಜ್ಯ ಅಬಕಾರಿ ಇಲಾಖೆ		
01	ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕದ ಅಲ್ಪಾವಧಿ ತೆರಿಗೆ	08	14.42
02	ಪರವಾನಗಿ ಶುಲ್ಕದ ಅಲ್ಪಾವಧಿ ಸಂಗ್ರಹ/ ವರ್ಗಾವಣೆ	02	1.54
03	ಇತರೆ	08	11.52
	ಮುದ್ರಾಂಕ ಮತ್ತು ನೋಂದಣಿ ಇಲಾಖೆ		
01	ಮೌಲ್ಯಮಾಪನದ ಅಡಿಯಲ್ಲಿ	90	86.46
02	ನಿಗ್ರಹ	26	24.21
03	ಜಂಟಿ ಅಭಿವೃದ್ಧಿ ಒಪ್ಪಂದ	31	22.14
04	ತಪ್ಪಾದ ಮೌಲ್ಯಮಾಪನ	23	3.69
05	ತಪ್ಪು ವರ್ಗೀಕರಣ	31	21.00
06	ಇತರೆ	36	6.32
	ಒಟ್ಟು	**255**	**191.30**

ಆಕರ: ಆಯಾ ಇಲಾಖೆಗಳು ಒದಗಿಸಿದ ಮಾಹಿತಿ

ಸ್ವಂತ ತೆರಿಗೆ ರಾಜಸ್ವದಲ್ಲಿನ ಇಳಿಕೆಗೆ ಕಾರಣ, ಗ್ರಾಹಕರ ನೆಲೆಯಲ್ಲಿನ ಹೆಚ್ಚಳವಿಲ್ಲದಿರುವುದು ರಾಜ್ಯ ಅಬಕಾರಿಯ ಬೆಳವಣಿಗೆಯ ದರ ಕುಸಿಯುತ್ತಿರುವುದಕ್ಕೆ ಒಂದು ಕಾರಣ ಎಂದು ನಿರ್ಗಮನದ ಸಭೆ (ಜನವರಿ 2026)ರಲ್ಲಿ ಒಪ್ಪುತ್ತಾ ಎಂದು ರಾಜ್ಯ ಸರ್ಕಾರ ಹೇಳಿತು.

(ii) ತೆರಿಗೆಯೇತರ ರಾಜಸ್ವ

ರಾಜ್ಯದ ತೆರಿಗೆಯೇತರ ಆದಾಯವು ತೆರಿಗೆಗಳನ್ನು ಹೊರತುಪಡಿಸಿ ಇತರ ಮೂಲಗಳಿಂದ ರಾಜ್ಯ ಸರ್ಕಾರದ ಬಾಡಿಗೆ, ಶುಲ್ಕಗಳು, ರಾಯಧನಗಳು ಮತ್ತು ಇತರ ಸ್ವೀಕೃತಿಗಳನ್ನು ಸೂಚಿಸುತ್ತದೆ.

2023–24ನೇ ಹಣಕಾಸು ವರ್ಷದ ವಾಸ್ತವಿಕ ಮಾಹಿತಿ, ಆಯವ್ಯಯ ಅಂದಾಜು, ಪರಿಷ್ಕೃತ ಅಂದಾಜು, ಮತ್ತು 2024–25ನೇ ಹಣಕಾಸು ವರ್ಷದ ತೆರಿಗೆಯೇತರ ರಾಜಸ್ವದ ವಾಸ್ತವಿಕ ಮಾಹಿತಿಗಳನ್ನು **ಕೋಷ್ಟಕ 1.7**ರಲ್ಲಿ ನೀಡಲಾಗಿದೆ.

ಕೋಷ್ಟಕ 1.7: ಪ್ರಮುಖ ತೆರಿಗೆಯೇತರ ರಾಜಸ್ವ: 2023–24 (ಆಯವ್ಯಯ ಮತ್ತು ಪರಿಶ್ಕೃತ ಅಂದಜು ಹಾಗು ವಾಸ್ತವಿಕ) ಮತ್ತು 2024–25 (ಆಯವ್ಯಯ ಮತ್ತು ಪರಿಶ್ಕೃತ ಅಂದಜು ಹಾಗು ವಾಸ್ತವಿಕ)

(₹ ಕೋಟಿಗಳಲ್ಲಿ)

ತೆರಿಗೆಯೇತರ ರಾಜಸ್ವ	2023–24 (ವಾಸ್ತವಿಕ)	2024–25 (ಆಯವ್ಯಯ ಅಂದಾಜು)	2024–25 (ಪರಿಷ್ಕೃತ ಅಂದಾಜು)	2024–25 (ವಾಸ್ತವಿಕ)
ಬಡ್ಡಿ ಸ್ವೀಕೃತಿಗಳು	1,492.70	417.53	3,008.41	3,238.27
ಲಾಭಾಂಶ ಮತ್ತು ಲಾಭಗಳು	302.87	477	849.72	986.28
ಬಳಕೆದಾರರ ಶುಲ್ಕಗಳು	703.74	627.58	827.16	816.96
ಇತರೆ	10,617.26	11,977.02	718.84	11,106.87
ಒಟ್ಟು	13,117.37	13,499.60	14,499.98	16,148.38

ಆಕರ: ಹಣಕಾಸು ಖಾತೆಗಳು

2024–25ನೇ ವರ್ಷದಲ್ಲಿ, ತೆರಿಗೆಯೇತರ ರಾಜಸ್ವವು ಹಿಂದಿನ ವರ್ಷಕ್ಕಿಂತ ಸುಮಾರು ಶೇಕಡಾ 23.11ರಷ್ಟು ಹೆಚ್ಚಾಗಿದೆ ಮತ್ತು ಆಯವ್ಯಯದಲ್ಲಿನ ಅಂದಾಜಿಗಿಂತ ಸ್ವೀಕೃತಿಗಳು ಶೇಕಡಾ 20ರಷ್ಟು ಮತ್ತು ಪರಿಷ್ಕೃತಕ್ಕಿಂತ ಶೇಕಡಾ 11ರಷ್ಟು ಹೆಚ್ಚಾಗಿದೆ.

ತೆರಿಗೆಯೇತರ ರಾಜಸ್ವದಲ್ಲಿನ ಹೆಚ್ಚಳವು ಮುಖ್ಯವಾಗಿ ಬಡ್ಡಿ ರಶೀದಿಗಳು, ಲಾಭಾಂಶಗಳು ಮತ್ತು ಇತರ ಆಡಳಿತ ಸೇವೆಗಳ ಅಡಿಯಲ್ಲಿತ್ತು. 2015–16ರಿಂದ 2024–25ರ ಅವಧಿಯಲ್ಲಿ ತೆರಿಗೆಯೇತರ ರಾಜಸ್ವ ಮತ್ತು ಅದರ ಘಟಕಗಳ ಪ್ರವೃತ್ತಿಗಳನ್ನು ಕ್ರಮವಾಗಿ **ನಕ್ಷೆ 1.12** ಮತ್ತು **ನಕ್ಷೆ 1.13**ರಲ್ಲಿ ತೋರಿಸಲಾಗಿದೆ.

ನಕ್ಷೆ 1.12: ತೆರಿಗೆಯೇತರ ರಾಜಸ್ವದಲ್ಲಿನ ಪ್ರವೃತ್ತಿಗಳು

(₹ ಕೋಟಿಗಳಲ್ಲಿ)



ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು

2023–24 ವರ್ಷವನ್ನು ಹೊರತುಪಡಿಸಿ, ತೆರಿಗೆಯೇತರ ಆದಾಯವು ಜಿ ಎಸ್ ಡಿ ಪಿ ಯ ಶೇಕಡಾವಾರು ಪ್ರಮಾಣದಲ್ಲಿ ಸಾಮಾನ್ಯವಾಗಿ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿತ್ತು, ಅಲ್ಲಿ ತೆರಿಗೆಯೇತರ ಆದಾಯದ ಬೆಳವಣಿಗೆಯ ದರವು ನಕಾರಾತ್ಮಕವಾಗಿತ್ತು. 2020–21ರ ನಂತರ, ವಿಶೇಷವಾಗಿ 2021–22, 2022–23 ಮತ್ತು 2024–25ರಲ್ಲಿ ತೆರಿಗೆಯೇತರ ಆದಾಯವು ತೀವ್ರವಾಗಿ ಹೆಚ್ಚಾಗಿದೆ.

ನಕ್ಷೆ 1.13: ರಾಜ್ಯದ ತೆರಿಗೆಯೇತರ ರಾಜಸ್ವದ ಪ್ರಮುಖ ಅಂಶಗಳು

(₹ ಕೋಟಿಗಳಲ್ಲಿ)





ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು

2015–25ರ ಅವಧಿಯಲ್ಲಿ ಫೆರಸ್ ಅಲ್ಲದ ಗಣಿಗಾರಿಕೆ ಮತ್ತು ಮೆಟಲರ್ಜಿಕಲ್ ಕೈಗಾರಿಕೆಗಳಿಂದ ಬಂದ ರಾಜಸ್ವಗಳು ತೆರಿಗೆಯೇತರ ರಾಜಸ್ವದಲ್ಲಿ ಪ್ರಮುಖ ಪಾಲನ್ನು ಹೊಂದಿದ್ದವು, ಇದು ಸುಮಾರು 37 ಪ್ರತಿಶತದಿಂದ 56 ಪ್ರತಿಶತದಷ್ಟಿತ್ತು ಮತ್ತು ಇತರ ಪ್ರಮುಖ ಕೊಡುಗೆದಾರರು ಬಳಕೆದಾರರ ಶುಲ್ಕಗಳು ಮತ್ತು ಬಡ್ಡಿ ರಶೀದಿಗಳು.

2021–22ರಲ್ಲಿ ಬಡ್ಡಿ ರಶೀದಿಗಳು, ಲಾಭಾಂಶಗಳು ಮತ್ತು ಲಾಭಗಳಲ್ಲಿನ ಹೆಚ್ಚಳ ಮತ್ತು ಫೆರಸ್ ಅಲ್ಲದ ಗಣಿಗಾರಿಕೆ ಮತ್ತು ಮೆಟಲರ್ಜಿಕಲ್ ಕೈಗಾರಿಕೆಗಳು ಲಾಭಾಂಶ ದರಗಳು ಮತ್ತು ರಾಯಧನ ಶುಲ್ಕಗಳಲ್ಲಿನ ಪರಿಷ್ಕರಣೆ ಮತ್ತು ಗಣಿಗಾರಿಕೆ ಪರವಾನಗಿಗಳ ನವೀಕರಣದಿಂದಾಗಿ ತೆರಿಗೆಯೇತರ ಆದಾಯವು ದ್ವಿಗುಣಗೊಂಡಿತ್ತು. 2022–23ರಲ್ಲಿ, ತೆರಿಗೆಯೇತರವು ಸಂಪೂರ್ಣ ಪರಿಭಾಷೆಯಲ್ಲಿ ಹೆಚ್ಚಾದರೂ, ಫೆರಸ್ ಅಲ್ಲದ ಗಣಿಗಾರಿಕೆ ಮತ್ತು ಮೆಟಲರ್ಜಿಕಲ್ ಕೈಗಾರಿಕೆಗಳಲ್ಲಿನ ನಕಾರಾತ್ಮಕ ಬೆಳವಣಿಗೆಯ ಕಾರಣದಿಂದಾಗಿ ಬೆಳವಣಿಗೆಯ ದರವು ಕಡಿಮೆಯಾಯಿತು ಏಕೆಂದರೆ ಪರವಾನಗಿ ನವೀಕರಣವು ಒಂದು ಬಾರಿ ಮಾತ್ರವಾಗಿತ್ತು. 2023–24ರಲ್ಲಿ, ಬಳಕೆದಾರರ ಶುಲ್ಕಗಳ ಅಡಿಯಲ್ಲಿ ಮತ್ತು 2022–23ರಲ್ಲಿ ಗಣನೀಯವಾಗಿ ಹೆಚ್ಚಿದ ಇತರ ತೆರಿಗೆಯೇತರ ರಶೀದಿಗಳ ಅಡಿಯಲ್ಲಿ ಬೆಳವಣಿಗೆಯ ದರವು ಋಣಾತ್ಮಕವಾಗಿತ್ತು. 2024–25ರ ಅವಧಿಯಲ್ಲಿ, ತೆರಿಗೆಯೇತರ ಆದಾಯವು ಮತ್ತೊಮ್ಮೆ ಹೆಚ್ಚಾಗಿದ್ದು, ಮೂಲತಃ ಬಡ್ಡಿ ರಶೀದಿಗಳು ಮತ್ತು ಲಾಭಾಂಶಗಳ ಅಡಿಯಲ್ಲಿ ಇದನ್ನು **ಕೋಷ್ಟಕ 1.2.4.2(ಬಿ)**ನಲ್ಲಿ ಚರ್ಚಿಸಲಾಗಿದೆ.

ಎ. ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು

ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲಿನ ಅಂಶಗಳಲ್ಲಿನ ಪ್ರವೃತ್ತಿಗಳನ್ನು **ಕೋಷ್ಟಕ 1.8**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 1.8: ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು

(₹ ಕೋಟಿಗಳಲ್ಲಿ)

ಘಟಕಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿ ಜಿ ಎಸ್ ಟಿ)	–	–	447.56	8,858.76	8,773.82	6,236.01	9,158.36	9,786.19	12,501.46	13,707.21
ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐ ಜಿ ಎಸ್ ಟಿ)	–	–	3,204.72	707.00	–					
ಕಾರ್ಪೊರೇಷನ್ ತೆರಿಗೆ	7,547.57	9211.05	9,721.29	12,481.94	10,542.17	6,656.01	9,823.19	11,574.64	12,364.18	13,317.48
ಕಾರ್ಪೊರೇಷನ್ ತೆರಿಗೆ ಹೊರತುಪಡಿಸಿ ಇತರ ಆದಾಯದ ಮೇಲಿನ ತೆರಿಗೆಗಳು	5,252.47	6,401.72	8,208.94	9,192.40	8,260.51	6,837.75	9,623.93	11,335.59	14,279.02	16,983.66
ಕಸ್ಟಮ್ಸ್	3,830.22	3,962.25	3,203.80	2,544.18	1,959.84	1,110.05	2,573.81	1,361.47	1,443.54	2,387.76
ಯೂನಿಯನ್ ಅಬಕಾರಿ ಸುಂಕಗಳು	3,181.60	4,524.54	3,348.80	1,690.77	1,362.62	714.26	1,539.33	427.12	546.27	459.57
ಸೇವಾ ತೆರಿಗೆ	4,153.56	4,639.22	3,617.15	331.65	–	119.03	528.33	54.17	7.66	1.53
ಇತರ ತೆರಿಗೆಗಳು	17.92	21.16	–0.30	88.13	20.04	20.89	37.05	56.82	50.5	75.51
ಒಟ್ಟು	**23,983.00**	**28,760.00**	**31,752.00**	**35,895.00**	**30,919.00**	**21,694.00**	**33,284.00**	**34,596.00**	**41,192.63**	**46,932.72**

ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು

ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಸಂಪೂರ್ಣ ಪರಿಭಾಷೆಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿತ್ತು ಮತ್ತು ದಶಕದಲ್ಲಿ ಗಣನೀಯವಾಗಿ ಬೆಳೆಯಿತು. ಕಾರ್ಪೊರೇಷನ್ ತೆರಿಗೆ ಹೊರತುಪಡಿಸಿ ಇತರ ಆದಾಯದ ಮೇಲಿನ ತೆರಿಗೆಗಳು ಕಾರ್ಪೊರೇಷನ್ ತೆರಿಗೆ ಮತ್ತು ಸಿ ಜಿ ಎಸ್ ಟಿ ಪ್ರಮುಖ ಕೊಡುಗೆ ನೀಡುತ್ತವೆ. ಕೋಷ್ಟಕದಿಂದ ಜಿ ಎಸ್ ಟಿ ಅನುಷ್ಠಾನವು ರಚನಾತ್ಮಕ ಬದಲಾವಣೆಗೆ ಕಾರಣವಾದರೆ, ಕೋವಿಡ್–19 ತಾತ್ಕಾಲಿಕ ಹಿನ್ನಡೆಗೆ ಕಾರಣವಾಯಿತು ಎಂಬುದು ಸ್ಪಷ್ಟವಾಗುತ್ತದೆ. ಜಿ ಎಸ್ ಟಿ ಪೂರ್ವದ ಅವಧಿಯಲ್ಲಿ, ಆದಾಯವು ಮುಖ್ಯವಾಗಿ ಕಾರ್ಪೊರೇಷನ್ ತೆರಿಗೆ, ಯೂನಿಯನ್ ಅಬಕಾರಿ ಸುಂಕಗಳು, ಕಸ್ಟಮ್ಸ್, ಸೇವಾ ತೆರಿಗೆ ಮತ್ತು ಇತರ ತೆರಿಗೆಗಳನ್ನು ಹೊರತುಪಡಿಸಿ ಇತರ ಆದಾಯದ ಮೇಲಿನ ತೆರಿಗೆಗಳಿಂದ ಬಂದಿತು. ಆದಾಗ್ಯೂ, ಜಿ ಎಸ್ ಟಿ ನಂತರ, ಹೆಚ್ಚಿನ ತೆರಿಗೆಗಳು ಜಿ ಎಸ್ ಟಿ ಅಡಿಯಲ್ಲಿ ವಿಲೀನಗೊಂಡಿದ್ದರಿಂದ ಸಿ ಜಿ ಎಸ್ ಟಿ, ಕಾರ್ಪೊರೇಷನ್ ತೆರಿಗೆ ಮತ್ತು ಕಾರ್ಪೊರೇಷನ್ ತೆರಿಗೆ ಹೊರತುಪಡಿಸಿ ಇತರ ಆದಾಯದ ಮೇಲಿನ ತೆರಿಗೆಗಳ ಕಡೆಗೆ ಬದಲಾವಣೆಯಾಯಿತು. ಪ್ರಸ್ತುತ ವರ್ಷದಲ್ಲಿ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಹಿಂದಿನ ವರ್ಷಕ್ಕಿಂತ ಸುಮಾರು 14 ಪ್ರತಿಶತದಷ್ಟು ಹೆಚ್ಚಳವನ್ನು ತೋರಿಸಿದೆ ಮತ್ತು ಇದು ಮುಖ್ಯವಾಗಿ ಸಿ ಜಿ ಎಸ್ ಟಿ (ಶೇಕಡಾ 9.64), ಕಾರ್ಪೊರೇಷನ್ ತೆರಿಗೆ (ಶೇಕಡಾ 7.71) ಮತ್ತು ಕಾರ್ಪೊರೇಷನ್ ತೆರಿಗೆ ಹೊರತುಪಡಿಸಿ ಇತರ ಆದಾಯದ ಮೇಲಿನ ತೆರಿಗೆಗಳು (ಶೇಕಡಾ 18.94) ಅಡಿಯಲ್ಲಿತ್ತು.

ರಾಜಸ್ವ ಸ್ವೀಕೃತಿಯ ಶೇಕಡಾವಾರು ಪಾಲನ್ನು ಹೇಳುವುದಾದರೆ, 2022–23ರಲ್ಲಿ ಕಡಿಮೆಯಾಗಿದ್ದ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು 2023–24ರಲ್ಲಿ ಹೆಚ್ಚಾಯಿತು ಮತ್ತು 2024–25ರಲ್ಲಿಯೂ ಸಹ ಬಹುತೇಕ ಹಾಗೆಯೇ ಮುಂದುವರೆಯಿತು.

ಜಿ ಎಸ್ ಡಿ ಪಿ ಗೆ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಒಟ್ಟು ಪಾಲಿನ ಶೇಕಡಾವಾರು ಪ್ರಮಾಣವನ್ನು **ನಕ್ಷೆ 1.14**ರಲ್ಲಿ ನೀಡಲಾಗಿದೆ.

ನಕ್ಷೆ 1.14: ಜಿ ಎಸ್ ಡಿ ಪಿಗೆ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಒಟ್ಟು ಪಾಲಿನ ಶೇಕಡಾವಾರು ಪ್ರಮಾಣ



ಆಕರ: ಆಯಾ ವರ್ಷಗಳ ಹಣ ಕಾಸು ಲೆಕ್ಕಪತ್ರಗಳು ಮತ್ತು ಆರ್ಥಿಕ ಸಮೀಕ್ಷೆ,

ಜಿ ಎಸ್ ಟಿ ಪೂರ್ವ ಅವಧಿಯಲ್ಲಿ ಕೇಂದ್ರ ತೆರಿಗೆಗಳು ಮತ್ತು ಜಿ ಎಸ್ ಡಿ ಪಿಗೆ ಸುಂಕಗಳಲ್ಲಿ ರಾಜ್ಯದ ಒಟ್ಟು ಪಾಲು ಶೇಕಡಾ 2.29ರಿಂದ ಶೇಕಡಾ 2.43ರ ನಡುವೆ ಹೆಚ್ಚಾಗಿ ಮತ್ತು ಸ್ಥಿರವಾಗಿತ್ತು, ಇದು ಕರ್ನಾಟಕದ ಆರ್ಥಿಕತೆಗೆ ಕೇಂದ್ರ ತೆರಿಗೆ ವಿಕೇಂದ್ರೀಕರಣದ ಬಲವಾದ ಕೊಡುಗೆಯನ್ನು ಸೂಚಿಸುತ್ತದೆ. ಜಿ ಎಸ್ ಟಿ ನಂತರದ ಅವಧಿಯಲ್ಲಿ, ಇದು ಏರಿಳಿತದ ಪ್ರವೃತ್ತಿಯನ್ನು ತೋರಿಸಿದೆ. ತೆರಿಗೆ ಸಂಗ್ರಹದ ಮೇಲೆ ಕೋವಿಡ್–19 ಪ್ರಭಾವದಿಂದಾಗಿ 2020–21ರಲ್ಲಿ ಇದು ಶೇಕಡಾ 1.32ರಷ್ಟು ಕನಿಷ್ಠಕ್ಕೆ ಇಳಿಯಿತು. ನಂತರ, ಅದು ಹೆಚ್ಚಾದರೂ, ಅದು ಇನ್ನೂ ಕೋವಿಡ್ ಪೂರ್ವ ಮಟ್ಟಕ್ಕಿಂತ ಕೆಳಗಿದೆ. 2024–25ರ ಅವಧಿಯಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾವಾರು ಬೆಳವಣಿಗೆ ಕನಿಷ್ಠವಾಗಿತ್ತು.

ಸಿ. ಭಾರತ ಸರ್ಕಾರದಿಂದ ಸಹಾಯಾನುದಾನಗಳು

ಭಾರತ ಸರ್ಕಾರಮತ್ತು ಅದರ ಘಟಕಗಳಿಂದ ಸಹಾಯಾನುದಾನಗಳ ಪ್ರವೃತ್ತಿಯನ್ನು **ಕೋಷ್ಟಕ 1.9**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 1.9: ಭಾರತ ಸರ್ಕಾರದಿಂದ ಸಹಾಯಾನುದಾನಗಳು

(₹ ಕೋಟಿಗಳಲ್ಲಿ)

ಶೀರ್ಷಿಕೆ	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಕೇಂದ್ರ ಪ್ರಾಯೋಜಿತ ಯೋಜನಾ ಯೋಜನೆಗಳಿಗೆ ಅನುದಾನಗಳು	139.00	116.00	–	–	–	–	–	–	–	–
ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನಗಳು	137.00	440.00	11,617.00	10,393.00	12,214.00	9,852.00	12,659.00	11,629.00	9,865.95	9,375.52
ಹಣಕಾಸು ಆಯೋಗದ ಅನುದಾನಗಳು	–	–	2,708.00	3,374.00	4,673.00	5,557.00	6,239.00	3,495.00	3,768.63	4,218.67
ಶಾಸಕಾಂಗ ಹೊಂದಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಇತರ ವರ್ಗಾವಣೆಗಳು/ಅನುದಾನಗಳು	–	–	7,316.00	11,714.00	17,593.00	14,667.00	11,064.00	21,744.00	1,893.27	4,030.54
ರಾಜ್ಯ ಯೋಜನಾ ಯೋಜನೆಗಳಿಗೆ ಅನುದಾನಗಳು	8,105.00	8,102.00	–	–	–	–	–	–	–	–
ಯೋಜನೇತರ ಅನುದಾನಗಳು	5,548.00	7,045.00	–	–	–	–	–	–	–	–
ಒಟ್ಟು	**13,929.00**	**15,703.00**	**21,641.00**	**25,481.00**	**34,480.00**	**30,076.00**	**29,962.00**	**36,868.00**	**15,527.85**	**17,624.73**

ಆಕರ: ಆಯಾ ವರ್ಷಗಳ ಹಣ ಕಾಸು ಲೆಕ್ಕಪತ್ರಗಳು

ಕರ್ನಾಟಕಕ್ಕೆ ಸಂಬಂಧಿಸಿದಂತೆ, ಕಳೆದ ದಶಕದಲ್ಲಿ ಕೇಂದ್ರ ವರ್ಗಾವಣೆಗಳು ಸಂಪೂರ್ಣ ಪ್ರಮಾಣದಲ್ಲಿ ಹೆಚ್ಚಾಗಿದೆ. 2017–18ರಿಂದ 2022–23ರ ಅವಧಿಯಲ್ಲಿ ಹೆಚ್ಚಳವು ಜಿ ಎಸ್ ಟಿಗೆ ಬದಲಾಗಿ ಕೇಂದ್ರವು ನೀಡಿದ ಪರಿಹಾರದ ಕಾರಣದಿಂದಾಗಿತ್ತು. ಪರಿಹಾರದಲ್ಲಿನ ಇಳಿಕೆಯಿಂದಾಗಿ 2023–24ರಲ್ಲಿ ಕೇಂದ್ರದಿಂದ ಅನುದಾನದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಆದಾಗ್ಯೂ, ಎನ್ ಡಿ ಆರ್ ಎಫ್ ಅಡಿಯಲ್ಲಿ

ಕೇಂದ್ರದಿಂದ ಕೊಡುಗೆಗಾಗಿ ಪಡೆದ ಅನುದಾನಗಳಿಂದಾಗಿ ಪ್ರಸ್ತುತ ವರ್ಷವು ಹಿಂದಿನ ವರ್ಷಕ್ಕಿಂತ ಹೆಚ್ಚಳವನ್ನು ತೋರಿಸಿದೆ.

ಕೇಂದ್ರ ಅನುದಾನದ ದಿಂದ ಜಿ ಎಸ್ ಡಿ ಪಿಗೆ ಶೇಕಡಾವಾರು ಪ್ರಮಾಣವನ್ನು **ನಕ್ಷೆ 1.15**ರಲ್ಲಿ ನೀಡಲಾಗಿದೆ.

ನಕ್ಷೆ 1.15: ಭಾರತ ಸರ್ಕಾರದ ಜಿ ಎಸ್ ಡಿ ಪಿಗೆ ಸಹಾಯಾನುದಾನದ ಶೇಕಡಾವಾರು



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಪತ್ರಗಳು ಮತ್ತು ಆರ್ಥಿಕ ಸಮೀಕ್ಷೆ, ರಾಜ್ಯ ಸರ್ಕಾರ

2015–16ರಿಂದ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದ ಭಾರತ ಸರ್ಕಾರದ ಜಿ ಎಸ್ ಡಿ ಪಿಗೆ ಸಹಾಯಾನುದಾನದ ಶೇಕಡಾವಾರು 2019–20ರಲ್ಲಿ ಗರಿಷ್ಠ ಮಟ್ಟವನ್ನು ತಲುಪಿತ್ತು ಮತ್ತು ನಂತರ ತೀವ್ರವಾಗಿ ಕುಸಿದಿದೆ, 2022–23ರಲ್ಲಿ ಹೊರತುಪಡಿಸಿ, ಕನಿಷ್ಠ ಹೆಚ್ಚಳ ಕಂಡುಬಂದಿತು. ಜಿ ಎಸ್ ಟಿ ಪರಿಹಾರ ಅವಧಿ ಪೂರ್ಣಗೊಂಡ ಕಾರಣ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಭಾರತ ಸರ್ಕಾರದಿಂದ ಅನುದಾನ ಬಿಡುಗಡೆಯಲ್ಲಿನ ಇಳಿಕೆಯೂ ಇದಕ್ಕೆ ಕಾರಣ. ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಬಿಡುಗಡೆ ಕಡಿಮೆಯಾಗಲು ಕಾರಣಗಳು ಮೂಲತಃ ಏಕ ನೋಡಲ್ ಏಜೆನ್ಸಿ ಯಿಂದ ಏಕ ನೋಡಲ್ ಏಜೆನ್ಸಿ – ಸ್ವರ್ಷ್ ಗೆ ಸ್ಥಳಾಂತರಗೊಂಡ ಯೋಜನೆಗಳು.

(i) ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನಗಳು

2024–25ನೇ ಸಾಲಿನಲ್ಲಿ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಭಾರತ ಸರ್ಕಾರ ಬಿಡುಗಡೆ ಮಾಡಿದ ₹9,375.52 ಕೋಟಿ ಅನುದಾನದಲ್ಲಿ, **ಕೋಷ್ಟಕ 1.10**ರಲ್ಲಿ ತೋರಿಸಿರುವ ಯೋಜನೆಗಳಿಗೆ ಪ್ರಮುಖ ಹಂಚಿಕೆಗಳನ್ನು ಮಾಡಲಾಗಿದೆ.

ಕೋಷ್ಟಕ 1.10: ಅನುದಾನ ಪಡೆಯುವ ಪ್ರಮುಖ ಯೋಜನೆಗಳು

ಯೋಜನೆಯ ಹೆಸರು	2024–25 ಮೊತ್ತ (₹ ಕೋಟಿಗಳಲ್ಲಿ)	2023–24 ಮೊತ್ತ (₹ ಕೋಟಿಗಳಲ್ಲಿ)	ಹಿಂದಿನ ವರ್ಷಕ್ಕಿಂತ ಶೇಕಡಾವಾರು ಬದಲಾವಣೆ
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (MGNREGA)	1,513.38	1,636.96	(–)7.54
ಸಮಗ್ರ ಶಿಕ್ಷಾ	893.56	828.08	7.91
RCH ಮತ್ತು ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಮಿಷನ್‌ಗಾಗಿ ಹೊಂದಿಕೊಳ್ಳುವ ಪೂಲ್	879.38	750.28	17.21
ನಗರ ಪುನರುಜ್ಜೀವನ ಮಿಷನ್–500 ನಗರಗಳು	723.10	82.50	776.48
ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್	573.03	559.73	2.38
ಪ್ರಧಾನ ಮಂತ್ರಿ ಆವಾಸ್ ಯೋಜನೆ –ಗ್ರಾಮೀಣ	414.03	–	–
ಸಾಕ್ಷಂ ಅಂಗನವಾಡಿ ಮತ್ತು ಪೋಷಣ 2.0	886.82	918.57	(–)3.46

ಆಕರ: ಹಣಕಾಸು ಖಾತೆಗಳು

ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಭಾರತ ಸರ್ಕಾರ ಮಾಡಿದ ಹಂಚಿಕೆಗಳು ಕಳೆದ ವರ್ಷಕ್ಕಿಂತ ಪ್ರಸ್ತುತ ವರ್ಷದಲ್ಲಿ ಸುಮಾರು ಐದು ಪ್ರತಿಶತದಷ್ಟು ಕುಸಿತವನ್ನು ತೋರಿಸಿವೆ. ಭಾರತ ಸರ್ಕಾರದಿಂದ ಅನುದಾನ ಪಡೆಯುವ ಪ್ರಮುಖ ಯೋಜನೆಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಮತ್ತು ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 ನಂತಹ ಯೋಜನೆಗಳಲ್ಲಿ ಈ ಇಳಿಕೆ ಕಂಡುಬಂದಿದೆ. *MGNREGA* ಅಡಿಯಲ್ಲಿ ಕಡಿಮೆ ಬಿಡುಗಡೆಗೆ ಕಾರಣವೆಂದರೆ ಈ ಯೋಜನೆ ಬೇಡಿಕೆ ಆಧಾರಿತವಾಗಿದ್ದು ಮತ್ತು ಕೋವಿಡ್ 19 ಸಾಂಕ್ರಾಮಿಕ ಸಮಯದಲ್ಲಿ, ಹೆಚ್ಚಿನ ಸಂಖ್ಯೆಯ ಜನಸಂಖ್ಯೆ ಗ್ರಾಮೀಣ ಪ್ರದೇಶಗಳಿಗೆ ಮರಳಿದ್ದು ಬೇಡಿಕೆ ಹೆಚ್ಚಾಗಿತ್ತು. ನಂತರದ ವರ್ಷಗಳಲ್ಲಿ, ಜನಸಂಖ್ಯೆಯು ಮತ್ತೊಮ್ಮೆ ನಗರ ಪ್ರದೇಶಗಳಿಗೆ ಮರಳಿದೆ ಮತ್ತು ಆದ್ದರಿಂದ ಬೇಡಿಕೆಯಲ್ಲಿ ಕುಸಿತ ಕಂಡುಬಂದಿದೆ, ಇದು ಕಡಿಮೆ ಬಿಡುಗಡೆಗಳಿಗೆ ಕಾರಣವಾಗಿದೆ.

(ii) ಹದಿನೈದನೆಯ ಹಣಕಾಸು ಆಯೋಗದ ಅನುದಾನಗಳು

ಹದಿನೈದನೇ ಹಣಕಾಸು ಆಯೋಗದ (15 ಎಫ್ ಸಿ) ಅನುದಾನಗಳನ್ನು ಸ್ಥಳೀಯ ಸಂಸ್ಥೆಗಳು ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್ ಡಿ ಆರ್ ಎಫ್), ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್ ಡಿ ಎಮ್ ಎಫ್) ಮತ್ತು ಆರೋಗ್ಯ ವಲಯಕ್ಕಾಗಿ ರಾಜ್ಯಗಳಿಗೆ ಒದಗಿಸಲಾಗಿದೆ. ಭಾರತ ಸರ್ಕಾರ ಒದಗಿಸಿದ ಅನುದಾನಗಳ ವಿವರಗಳನ್ನು **ಕೋಷ್ಟಕ 1.11**ರಲ್ಲಿ ನೀಡಲಾಗಿದೆ.

ಕೋಷ್ಟಕ 1.11: ಶಿಫಾರಸು ಮಾಡಲಾದ ಮೊತ್ತ, ವಾಸ್ತವಿಕ ಬಿಡುಗಡೆ ಮತ್ತು ಸಹಾಯಾನುದಾನ ವರ್ಗಾವಣೆಗಳು

(₹ ಕೋಟಿಗಳಲ್ಲಿ)

ವರ್ಗಾವಣೆಗಳು	2024–25 ರ ಅವಧಿಯಲ್ಲಿ 15 ನೇ ಹಣಕಾಸು ಆಯೋಗದ ವರ್ಗಾವಣೆ ಶಿಫಾರಸು	ಭಾರತ ಸರ್ಕಾರದಿಂದ ನಿಜವಾದ ಬಿಡುಗಡೆ, ರಾಜ್ಯ ಸರ್ಕಾರದಿಂದ ಬಿಡುಗಡೆ	ರಾಜ್ಯ ಸರ್ಕಾರದಿಂದ ಬಿಡುಗಡೆ (ಭಾರತಸರ್ಕಾರ ಬಿಡುಗಡೆ ಮಾಡಿದ ಮೊತ್ತದ ಒಟ್ಟು ಶೇಕಡಾವಾರು)
(i) ಪಿ ಆರ್ ಐ ಗಳಿಗೆ ಅನುದಾನಗಳು	**2637.00**	**2,133.25**	**2,133.25 (100)**
(ಎ) ಕಾರ್ಯಕ್ಷಮತೆ/ಸಂಬಂಧಿತ ಅನುದಾನಗಳು	1,582.20	1,279.95	1,279.95 (100)
(ಬಿ) ಅನ್‌ಟೈಡ್ ಅನುದಾನಗಳು	1,054.80	853.30	853.30 (100)
(ii) ಯು ಎಲ್ ಬಿ ಗಳಿಗೆ ಅನುದಾನಗಳು	**1,358.00**	**1,001.52**	**1,001.52 (100)**
(ಎ) ಮಿಲಿಯನ್ ಪ್ಲಸ್ ನಗರಗಳು (ಕಾರ್ಯಕ್ಷಮತೆ/ಸಂಬಂಧಿತ ಅನುದಾನ)	488.00	600.91	600.91 (100)
(ಬಿ) ಮಿಲಿಯನ್ ಪ್ಲಸ್ ಅಲ್ಲದ ನಗರಗಳು (ಸಾಮಾನ್ಯಮೂಲ/ಸಂಬಂಧಿತ ಅನುದಾನ)	870.00	400.61	400.61 (100)
(iii) ಆರೋಗ್ಯ ವಲಯಕ್ಕೆ ಅನುದಾನ	**608.00**	**277.67**	**277.67** (100)
	4,603.00	**3,412.44**	**3,412.44 (100)**
ರಾಜ್ಯ ವಿಪತ್ತು ನಿರ್ವಹಣಾ ನಿಧಿ	732.00	732.00	732.00(100)
ರಾಜ್ಯ ವಿಪತ್ತು ಉಪಶಮನ ನಿಧಿ	183.00	0.00	0.0 0
ರಾಜ್ಯದಲ್ಲಿ ಅಗ್ನಿಶಾಮಕ ಸೇವೆಗಳ ವಿಸ್ತರಣೆ ಮತ್ತು ಆಧುನೀಕರಣ (ಎನ್ ಡಿ ಆರ್ ಎಫ್ ನಿಂದ ಅನುದಾನಗಳು)	0.00	74.23	74.23(100)
ಎಸ್ ಡಿ ಆರ್ ಎಮ್ ಎಫ್ ಗೆ ಒಟ್ಟು	**915.00**	**806.23**	**806.23 (100)**

ಆಕರ: 15ನೇ ಹಣಕಾಸು ವರದಿ ಮತ್ತು ಇಲಾಖಾ ಮಾಹಿತಿ

ಪಿಆರ್‌ಐಗಳು – ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಯು ಎಲ್ ಬಿ ಗಳು – ನಗರ ಸ್ಥಳೀಯ ಸಂಸ್ಥೆಗಳು

ಕೇಂದ್ರದಿಂದ ಪಡೆದ ಸಂಪೂರ್ಣ 15 ಹಣಕಾಸು ಅನುದಾನಗಳನ್ನು ರಾಜ್ಯವು ಬಿಡುಗಡೆ ಮಾಡಿದೆ. ಆದಾಗ್ಯೂ, 2024–25ರ ಅವಧಿಯಲ್ಲಿ, ಶಿಫಾರಸುಗಳ ವಿರುದ್ಧ ಅನುದಾನಗಳ ಸ್ವೀಕೃತಿಯಲ್ಲಿ ಕೊರತೆ ಕಂಡುಬಂದಿದೆ, ಇವು ಮುಖ್ಯವಾಗಿ ಈ ಕೆಳಗಿನ ಕಾರಣಗಳಿಂದಾಗಿವೆ:

- ಭಾರತ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ, ಆರ್‌ಎಲ್‌ಬಿಗಳಿಗೆ ಬಿಡುಗಡೆ ಮಾಡಬೇಕಾದ ಅನುದಾನಗಳಿಗೆ, ಆರ್‌ಎಲ್‌ಬಿಗಳು ಸರಿಯಾಗಿ ರಚನೆಯಾಗಿದ್ದರೆ ಅನುದಾನಗಳಿಗೆ ಅರ್ಹವಾಗಿರುತ್ತವೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯತ್‌ಗಳನ್ನು ರಚಿಸಲಾಗಿಲ್ಲ ಮತ್ತು ಆದ್ದರಿಂದ ಅನುದಾನಗಳನ್ನು ಪ್ರೋ–ರೇಟಾ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ.
- ಆಡಿಟ್ ಮಾಡಿದ ಹಣಕಾಸು ವರದಿಗಳ ಅನುಪಸ್ಥಿತಿ ಮತ್ತು 60 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆ ಹೆಚ್ಚಳವನ್ನು ಅನುಸರಿಸದ ಕಾರಣ, ಸಂಸ್ಥೆಗಳ ಸಂಖ್ಯೆಗೆ ಪ್ರೋ–ರೇಟಾ ಆಧಾರದ ಮೇಲೆ ರಾಜ್ಯಕ್ಕೆ ಅನುದಾನಗಳನ್ನು ಬಿಡುಗಡೆ ಮಾಡಲಾಗಿದೆ.
- ಎಸ್‌ಡಿಆರ್‌ಎಂಎಫ್ ಅಡಿಯಲ್ಲಿ, ಭಾರತ ಸರ್ಕಾರವು ಮಾಡಿದ ಹಂಚಿಕೆಯು ಶಿಫಾರಸಿಗಿಂತ ಶೇಕಡಾ 20ರಷ್ಟು ಕಡಿಮೆಯಾಗಿದೆ, ಇದು ಎಸ್‌ಡಿಎಂಎಫ್ ಅಡಿಯಲ್ಲಿ ಹಣವನ್ನು ಬಿಡುಗಡೆ ಮಾಡದ ಕಾರಣ.

1.2.2 ಬಂಡವಾಳ ಸ್ವೀಕೃತಿಗಳು

ಬಂಡವಾಳ ರಶೀದಿಗಳು ಹೂಡಿಕೆ ಹಿಂತೆಗೆತದಿಂದ ಬಂದ ಆದಾಯ, ಸಾಲಗಳು ಮತ್ತು ಮುಂಗಡಗಳ ವಸೂಲಿ, ಆಂತರಿಕ ಮೂಲಗಳಿಂದ ಪಡೆದ ಸಾಲ ಸ್ವೀಕೃತಿಗಳು (ಮಾರುಕಟ್ಟೆ ಸಾಲಗಳು, ಹಣಕಾಸು ಸಂಸ್ಥೆಗಳು/ವಾಣಿಜ್ಯ ಬ್ಯಾಂಕುಗಳಿಂದ ಪಡೆದ ಸಾಲಗಳು) ಹಾಗು ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳಂತಹ ವಿವಿಧ ಬಂಡವಾಳ ಸ್ವೀಕೃತಿಗಳನ್ನು ಒಳಗೊಂಡಿವೆ.

2015–16ರಿಂದ 2024–25ರ ವರೆಗಿನ ಅವಧಿಯಲ್ಲಿ ಬಂಡವಾಳ ಸ್ವೀಕೃತಿಗಳು ಮತ್ತು ಅವುಗಳ ಘಟಕಗಳ ಪ್ರವೃತ್ತಿಗಳನ್ನು ಕೋಷ್ಟಕ 1.12ರಲ್ಲಿ ತೋರಿಸಲಾಗಿದೆ.

ಕೋಷ್ಟಕ 1.12: ಬಂಡವಾಳ ಸ್ವೀಕೃತಿಗಳ ಬೆಳವಣಿಗೆ ಮತ್ತು ಸಂಯೋಜನೆಯಲ್ಲಿನ ಪ್ರವೃತ್ತಿಗಳು

(₹ ಕೋಟಿಗಳಲ್ಲಿ)

ರಾಜ್ಯದ ಸ್ವೀಕೃತಿಗಳ ಮೂಲಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಬಂಡವಾಳ ಸ್ವೀಕೃತಿಗಳು	**21,484**	**31,283**	**25,263**	**41,939**	**50,707**	**84,843**	**80,774**	**45,029**	**90,622**	**1,03,684**
ವಿವಿಧ ಬಂಡವಾಳ ಸ್ವೀಕೃತಿಗಳು	352	27	4	–6	45	45	6	2	36	20
ಸಾಲಗಳು ಮತ್ತು ಮುಂಗಡಗಳ ವಸೂಲಿ	60	100	137	31	203	270	127	478	306	322
ಸಾರ್ವಜನಿಕ ಸಾಲ ಸ್ವೀಕೃತಿಗಳು	**21,072**	**31,156**	**25,122**	**41,914**	**50,459**	**84,528**	**80,641**	**44,549**	**90,280**	**1,03,342**
ಆಂತರಿಕ ಸಾಲ*	19,801	29,238	23,179	40,470	49,474	70,414	60,462	39,283	84,334	95,278
ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು	1,271	1,918	1,943	1,444	675	14,114	20,179	5,266	5,946	8,064
ವಾರ್ಷಿಕ ಬೆಳವಣಿಗೆಯ ದರಗಳು (ಶೇಕಡಾದಲ್ಲಿ)										
ಜಿ ಎಸ್ ಡಿ ಪಿ	**10.97**	**11.81**	**15.76**	**6.24**	**9.22**	**1.55**	**21.41**	**16.45**	**10.24**	**12.77**
ಬಂಡವಾಳ ಸ್ವೀಕೃತಿಗಳು	**(–)2.20**	**45.61**	**(–)19.24**	**66.01**	**20.91**	**67.32**	**(–)4.80**	**(–)44.25**	**101.25**	**14.41**
ಸಾಲ ಬಂಡವಾಳ ಸ್ವೀಕೃತಿಗಳು	(–)3.67	47.85	(–)19.37	66.84	20.39	67.52	(–)4.60	(–)44.76	102.65	14.47
ಆಂತರಿಕ ಸಾಲ	(–)3.45	47.66	(–)20.72	74.60	22.25	42.33	(–)14.13	(–)35.03	114.68	12.98
ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು	(–)6.89	50.90	1.30	(–)25.68	(–) 53.25	1,990.96	42.97	(–)73.90	12.91	35.62

ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು

** ಮಾರ್ಗೋಪಾಯ ಮುಂಗಡಗಳು/ಓವರ್‌ಡ್ರಾಫ್ಟ್/ವಿಶೇಷ ಡ್ರಾಯಿಂಗ್ ಸೌಲಭ್ಯದ ಅಡಿಯಲ್ಲಿ ನಿವ್ವಳ ಅಂಕಿಅಂಶವನ್ನು ಒಳಗೊಂಡಂತೆ*

ಕಳೆದ ದಶಕದಲ್ಲಿ ಅಂದರೆ 2015–25ರಿಂದ ಬಂಡವಾಳ ರಶೀದಿಗಳು ಏರಿಳಿತದ ಪ್ರವೃತ್ತಿಯನ್ನು ತೋರಿಸಿವೆ. ಇದು ಮುಖ್ಯವಾಗಿ ಬಂಡವಾಳ ವೆಚ್ಚ ಮತ್ತು ಆದಾಯ ಕೊರತೆಯನ್ನು ಪೂರೈಸಲು ರಾಜ್ಯವು ಪಡೆದ

ಸಾಲಕ್ಕೆ ಕಾರಣವಾಗಿದೆ. ಇದು ರಾಜ್ಯದ ಬಂಡವಾಳ ರಶೀದಿಗಳು ಸಾಲ–ಚಾಲಿತವಾಗಿದ್ದು, ಆಂತರಿಕ ಸಾಲವನ್ನು ಪ್ರಮುಖ ಮೂಲವಾಗಿ ಹೊಂದಿದೆ ಎಂದು ಸೂಚಿಸುತ್ತದೆ. ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ 2020–21 ಮತ್ತು 2021–22ರಲ್ಲಿ ರಾಜ್ಯವು ಆದಾಯ ಕೊರತೆಯನ್ನು ಕಂಡಿತು, ಇದು ಸಾಲಗಳಲ್ಲಿ ಹೆಚ್ಚಳಕ್ಕೆ ಕಾರಣವಾಯಿತು. ಆರ್ಥಿಕತೆಯ ಪುನರುಜ್ಜೀವನದಿಂದಾಗಿ, 2022–23ರಲ್ಲಿ ರಾಜ್ಯವು ಮತ್ತೊಮ್ಮೆ ಆದಾಯ ಹೆಚ್ಚುವರಿಯನ್ನು ಕಂಡಿತು. ಇದರ ಪರಿಣಾಮವಾಗಿ, ಆ ವರ್ಷದಲ್ಲಿ ರಾಜ್ಯದ ಸಾಲಗಳು ಕಡಿಮೆಯಾದವು. ಆದಾಗ್ಯೂ, 2023–24 ರ ನಂತರ, ರಾಜ್ಯದ ಐದು ಖಾತರಿ ಯೋಜನೆಗಳ ಅನುಷ್ಠಾನದಿಂದಾಗಿ ಆದಾಯ ಕೊರತೆಯನ್ನು ನೀಗಿಸಲು ರಾಜ್ಯದ ಸಾಲವು ತೀವ್ರವಾಗಿ ಹೆಚ್ಚಾಗಿದೆ. ಜಿ ಎಸ್ ಡಿ ಪಿ ಯ ಶೇಕಡಾವಾರು ರೂಪದಲ್ಲಿ ಬಂಡವಾಳ ಸ್ವೀಕೃತಿಗಳನ್ನು **ನಕ್ಷೆ 1.16**ರಲ್ಲಿ ಚಿತ್ರಿಸಲಾಗಿದೆ.

ನಕ್ಷೆ 1.16: ಜಿ ಎಸ್ ಡಿ ಪಿ ಯ ಶತಾಂಶವಾಗಿ ಬಂಡವಾಳ ಸ್ವೀಕೃತಿಗಳು



ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು ಮತ್ತು ಆರ್ಥಿಕ ಸಮೀಕ್ಷೆ

ಜಿಎಸ್‌ಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಬಂಡವಾಳ ರಶೀದಿಗಳು ಮತ್ತು ಸಾಲ ರಶೀದಿಗಳು ಇದೇ ರೀತಿಯ ಚಲನೆಯನ್ನು ಅನುಸರಿಸುತ್ತವೆ, ಇದು ಸಾಲಗಳು ರಾಜ್ಯದ ಬಂಡವಾಳ ರಶೀದಿಗಳ ಪ್ರಮುಖ ಭಾಗವಾಗಿದೆ ಎಂದು ಸೂಚಿಸುತ್ತದೆ.

ಜಿಎಸ್‌ಡಿಪಿಗೆ ಬಂಡವಾಳ ರಶೀದಿಗಳ ಅನುಪಾತವು 2015–16 (ಶೇಕಡಾ 2.06)ರಿಂದ 2019–20 (ಶೇಕಡಾ 3.14)ಕ್ಕೆ ಕ್ರಮೇಣ ಏರಿಕೆ ಕಂಡಿತು. ಈ ಅವಧಿಯಲ್ಲಿ ರಾಜ್ಯವು ರಾಜಸ್ವ ಹೆಚ್ಚಳದಿಂದ, ಈ ಏರಿಕೆಯು ವಿಸ್ತರಿಸುತ್ತಿರುವ ಬಂಡವಾಳ ಹೂಡುವಿಕೆಯನ್ನು ಸೂಚಿಸಿತು. 2020–21ರಲ್ಲಿ ಅನುಪಾತವು ತೀವ್ರವಾಗಿ ಉತ್ತುಂಗಕ್ಕೇರಿತು (ಶೇಕಡಾ 5.17), ಇದು ಕೋವಿಡ್–19ರ ಆರ್ಥಿಕ ಆಘಾತವನ್ನು ನಿರ್ವಹಿಸಲು ಹೆಚ್ಚಿದ ಸಾಲವನ್ನು ಪ್ರತಿಬಿಂಬಿಸುತ್ತದೆ. 2022–23ರಲ್ಲಿ ಜಿಎಸ್‌ಡಿಪಿ ಶೇಕಡಾವಾರುಗೆ ಬಂಡವಾಳ ರಶೀದಿಗಳಲ್ಲಿ ಭಾರಿ ಕುಸಿತವು ಆ ವರ್ಷದಲ್ಲಿ ಕಡಿಮೆ ಸಾಲಗಳಿಂದಾಗಿ ಸಂಭವಿಸಿದೆ. 2023–24 ಮತ್ತು 2024–25ರ ಅವಧಿಯಲ್ಲಿ, ಆ ಎರಡು ವರ್ಷಗಳಲ್ಲಿ ಮತ್ತೊಮ್ಮೆ ರಾಜ್ಯವು ಆದಾಯ ಕೊರತೆಯನ್ನು ಕಂಡ ಕಾರಣ ರಾಜ್ಯವು ಮತ್ತೊಮ್ಮೆ ಬಂಡವಾಳ ರಶೀದಿಗಳಿಗೆ ಜಿಎಸ್‌ಡಿಪಿ ಅನುಪಾತದಲ್ಲಿ ಹೆಚ್ಚಳ ಕಂಡಿತು.

ಎಲ್ಲಾ ವರ್ಷಗಳಲ್ಲಿ ಎರಡು ಸಾಲುಗಳ ನಡುವಿನ ಕಿರಿದಾದ ಅಂತರವು ಸಾಲೇತರ ಬಂಡವಾಳ ರಶೀದಿಗಳು ಕಡಿಮೆ ಮತ್ತು ಸಾಲದ ಮೇಲಿನ ರಾಜ್ಯದ ರಚನಾತ್ಮಕ ಅವಲಂಬನೆಯು ಆಸ್ತಿ ಮಾರಾಟ ಅಥವಾ ಬಂಡವಾಳ ಹಣಕಾಸುಗಾಗಿ ಸಾಲದ ವಸೂಲಿಗಿಂತ ಗರಿಷ್ಠವಾಗಿದೆ ಎಂದು ಸೂಚಿಸುತ್ತದೆ.

1.2.3 ಹಣಕಾಸು ಆಯೋಗದ ಮುನ್ಸೂಚನೆಗಳು ಮತ್ತು ವಾಸ್ತವಗಳು

15ನೇ ಹಣಕಾಸು ಆಯೋಗದ ಪ್ರಕ್ಷೇಪಣಾ ರಾಜಸ್ವ, ಕೊರತೆಗಳು ಮತ್ತು ಜಿ ಎಸ್ ಡಿ ಪಿ ಮತ್ತು ಹಣಕಾಸು ವರ್ಷ 2020–21ರಿಂದ ಹಣಕಾಸು ವರ್ಷ 2024–25ರ ವರೆಗಿನ ವಾಸ್ತವಗಳನ್ನು **ಕೋಷ್ಟಕ 1.13**ರಲ್ಲಿ ನೀಡಲಾಗಿದೆ.

ಕೋಷ್ಟಕ 1.13: ವಾಸ್ತವಕ್ಕೆ ಹೋಲಿಸಿದರೆ15ನೇ ಹಣಕಾಸು ಆಯೋಗದ ಪ್ರಕ್ಷೇಪಣ

(₹ ಕೋಟಿಗಳಲ್ಲಿ)

	2020–21		2021–22		2022–23		2023–24		2024–25	
	ಪ್ರಕ್ಷೇಪಣ	ವಾಸ್ತವ	ಪ್ರಕ್ಷೇಪಣ	ವಾಸ್ತವ	ಪ್ರಕ್ಷೇಪಣ	ವಾಸ್ತವ	ಪ್ರಕ್ಷೇಪಣ	ವಾಸ್ತವ	ಪ್ರಕ್ಷೇಪಣ	ವಾಸ್ತವ
ಜಿ ಎಸ್ ಡಿ ಪಿ (2011–12 ಸರಣಿ ಪ್ರಸ್ತುತ ಬೆಲೆಗಳು)	18,80,033	16,40,811	17,02,227	19,92,029	18,85,750	23,19,696	23,19,696	25,57,241	23,72,009	28,83,903
ಸ್ವಂತ ಆದಾಯ ಸ್ವೀಕೃತಿಗಳು	1,53,883	1,04,946	1,12,573	1,32,516	1,26,891	1,57,616	1,44,740	1,76,622	1,65,919	1,93,595
ರಾಜ್ಯದ ಸ್ವಂತ ತೆರಿಗೆ ಆದಾಯ	1,45,103	97,052	1,04,835	1,20,739	1,18,236	1,43,702	1,34,950	1,63,505	1,54,794	1,77,447
ರಾಜ್ಯದ ಸ್ವಂತ ತೆರಿಗೆಯೇತರ ಆದಾಯ	8,780	7,894	7,738	11,777	8,655	13,914	9,790	13,117	11,125	16,148
ಕೇಂದ್ರ ತೆರಿಗೆಗಳು/ಸುಂಕಗಳಲ್ಲಿ ರಾಜ್ಯದ ಪಾಲು	31,180	21,694	24,019	33,284	26,719	34,596	30,065	41,193	34,157	46,933
ಜಿ ಎಸ್ ಡಿ ಪಿ ಯ ಶೇಕಡಾವಾರು ಆದಾಯ ಕೊರತೆ (–) / ಹೆಚ್ಚುವರಿ (+)	(–)1.20	(+)1.29	(–)1	(+)0.71	(–)0.10	(–)0.59	(–)0.58	(+)0.38	(–)0.07	(+)0.79
ವಿತ್ತೀಯ ಕೊರತೆ (ಜಿ ಎಸ್ ಡಿ ಪಿ ಯ ಶೇಕಡಾವಾರು)	3.0	4.19	3.0	3.34	3.0	2.06	3.00	2.53	3.0	2.95

ಆಕರ: ರಾಜ್ಯ ಸರ್ಕಾರದ ಆಯಾ ವರ್ಷಗಳ ಹಣಕಾಸು ಲೆಕ್ಕಗಳು ಮತ್ತು ಆರ್ಥಿಕ ಸಮೀಕ್ಷೆ ಮತ್ತು 15ನೇ ಹಣಕಾಸು ಆಯೋಗದ ವರದಿ

ಗಮನಿಸಿ: ಆದಾಯ ಮತ್ತು ಹಣಕಾಸಿನ ಕೊರತೆಯು ಲೆಕ್ಕಪರಿಶೋಧನೆಯ ನಂತರದ ಅಂಕಿಅಂಶಗಳಾಗಿವೆ.

1.2.4 ವೆಚ್ಚ

ಸರ್ಕಾರಿ ವೆಚ್ಚವನ್ನು ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳು ಎಂದು ವರ್ಗೀಕರಿಸಲಾಗಿದೆ. ರಾಜಸ್ವ ವೆಚ್ಚವು ಆಡಳಿತ ಮತ್ತು ಸ್ಥಾಪನಾ ವೆಚ್ಚಗಳು ಸೇರಿದಂತೆ ಇಲಾಖೆಗಳ ನಿರ್ವಹಣೆ, ದುರಸ್ತಿ ಮತ್ತು ದಿನನಿತ್ಯದ ಕಾರ್ಯನಿರ್ವಹಣೆಗೆ ಸಂಬಂಧಿಸಿದ ವೆಚ್ಚಗಳನ್ನು ಒಳಗೊಂಡಿದೆ. ಬಂಡವಾಳ ವೆಚ್ಚವು ಯೋಜನೆಗಳ ಆರಂಭಿಕ ನಿರ್ಮಾಣ ಮತ್ತು ಅನುಮೋದಿತ ಸುಧಾರಣೆಗಳು ಅಥವಾ ಸ್ವತ್ತುಗಳಿಗೆ ಸೇರ್ಪಡೆಗಳಿಗೆ ಸಂಬಂಧಿಸಿದೆ. ಸಾಲಗಳು ಮತ್ತು ಮುಂಗಡಗಳು ಸರ್ಕಾರವು ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಘಟಕಗಳಿಗೆ ಒದಗಿಸುವ ಹಣವನ್ನು ಒಳಗೊಂಡಿರುತ್ತವೆ, ಇವುಗಳನ್ನು ಕಾಲಾನಂತರದಲ್ಲಿ ಮರುಪಡೆಯಬಹುದು. ವೆಚ್ಚದ ವಿವರಗಳು, ಜಿ ಎಸ್ ಡಿ ಪಿಯ ಶೇಕಡಾವಾರು ರೂಪದಲ್ಲಿ ಒಟ್ಟು ವೆಚ್ಚ ಮತ್ತು ಅದರ ಘಟಕಗಳ ಪಾಲನ್ನು ಕ್ರಮವಾಗಿ **ಕೋಷ್ಟಕ 1.14, ನಕ್ಷೆ 1.17** ಮತ್ತು **ನಕ್ಷೆ 1.18**ರಲ್ಲಿ ನೀಡಲಾಗಿದೆ.

ಕೋಷ್ಟಕ 1.14: ಒಟ್ಟು ವೆಚ್ಚ ಮತ್ತು ಅದರ ಸಂಯೋಜನೆ

(₹ ಕೋಟಿಗಳಲ್ಲಿ)

ಪ್ರಮಿತಿಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಒಟ್ಟು ವೆಚ್ಚ	1,38,398	1,62,005	1,78,242	2,03,446	2,13,857	2,24,129	2,61,511	2,76,183	2,99,207	3,43,524
ರಾಜಸ್ವ ವೆಚ್ಚ	1,17,028	1,31,921	1,42,482	1,64,300	1,74,258	1,76,054	2,09,428	2,15,584	2,42,614	2,78,987
ಬಂಡವಾಳ ವೆಚ್ಚ	20,713	28,150	30,667	34,659	35,530	45,406	47,874	57,349	52,120	57,906
ಸಾಲ ಮತ್ತು ಮುಂಗಡಗಳು	657	1,934	5,093	4,487	4,069	2,669	4,209	3,250	4,473	6,631
ಸಂಚಿತ ನಿಧಿಗೆ ವಿನಿಯೋಗ	–	–	–	–	–	–	420	–	–	–

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

2015–25ರ ಸಂಪೂರ್ಣ ದಶಕದ ಅವಧಿಯಲ್ಲಿ ರಾಜ್ಯದ ಒಟ್ಟು ವೆಚ್ಚ ರಚನೆಯಲ್ಲಿ ರಾಜಸ್ವ ವೆಚ್ಚವು ಪ್ರಾಬಲ್ಯ ಹೊಂದಿದೆ. ಇದು ಒಟ್ಟು ವೆಚ್ಚದ ಸುಮಾರು ಶೇಕಡಾ 80ರಿಂದ 82ರಷ್ಟಿದೆ. 2015–25ರ ಅವಧಿಯಲ್ಲಿ ಒಟ್ಟು ವೆಚ್ಚವು ಸ್ಥಿರವಾಗಿ ಹೆಚ್ಚಾಗಿದೆ. ಆದಾಗ್ಯೂ, ಬೆಳವಣಿಗೆಯ ದರದಲ್ಲಿ ಅಂತರ ವರ್ಷ ವ್ಯತ್ಯಾಸವಿದ್ದರೂ, 2022–23ರಿಂದ ರಾಜಸ್ವ ವೆಚ್ಚದಲ್ಲಿನ ಹೆಚ್ಚಳದಿಂದಾಗಿ ಇದು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ. ಅದೇ ರೀತಿ, ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚದ ಬೆಳವಣಿಗೆಯ ದರದಲ್ಲಿ ಅಂತರ ವರ್ಷ ವ್ಯತ್ಯಾಸವಿತ್ತು. 2022–23ರಲ್ಲಿ ರಾಜಸ್ವ ವೆಚ್ಚದ ಬೆಳವಣಿಗೆಯ ದರವು ಕಡಿಮೆಯಾಗಿತ್ತು, ಇದರ ಪರಿಣಾಮವಾಗಿ ಬಂಡವಾಳ ವೆಚ್ಚದಲ್ಲಿ ಹೆಚ್ಚಿನ ಬೆಳವಣಿಗೆಯ ದರವನ್ನು ಕಂಡಿತು. ಬಂಡವಾಳ ರಾಜಸ್ವ ವೆಚ್ಚದ ಅನುಪಾತ – ವೆಚ್ಚದ

ಗುಣಮಟ್ಟವನ್ನು ಅಳೆಯುವ ಮಾನದಂಡವು ಆದರ್ಶಪ್ರಾಯವಾಗಿ ಹೆಚ್ಚಾಗಬೇಕು ಏಕೆಂದರೆ ಇದು ಆರೋಗ್ಯಕರವೆಂದು ಪರಿಗಣಿಸಲಾಗಿದೆ ಏಕೆಂದರೆ ಇದು ಸಾಲಗಳನ್ನು ರಾಜಸ್ವ ವೆಚ್ಚಕ್ಕಿಂತ ಬಂಡವಾಳ ವೆಚ್ಚಕ್ಕಾಗಿ ಬಳಸಲಾಗುತ್ತದೆ ಎಂದು ಸೂಚಿಸುತ್ತದೆ. ಆದಾಗ್ಯೂ, 2022–23 ಹೊರತುಪಡಿಸಿ, 2020–25ರ ಅವಧಿಯಲ್ಲಿ ಅನುಪಾತವು ಕಡಿಮೆಯಾಗುವ ಪ್ರವೃತ್ತಿಯಲ್ಲಿದೆ, ಇದು ಎರವಲು ಪಡೆದ ಹಣವನ್ನು ರಾಜಸ್ವ ವೆಚ್ಚಕ್ಕಾಗಿ ಬಳಸಲಾಗಿದೆ ಎಂದು ಸೂಚಿಸುತ್ತದೆ. ಇದು ರಾಜ್ಯದ ಆರ್ಥಿಕ ಸುಸ್ಥಿರತೆಯ ಮೇಲೆ ಪರಿಣಾಮ ಬೀರುತ್ತದೆ.



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು ಮತ್ತು ಆರ್ಥಿಕ ಸಮೀಕ್ಷೆ



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು ಮತ್ತು ಆರ್ಥಿಕ ಸಮೀಕ್ಷೆ

ಸಾಂಕ್ರಾಮಿಕ ಪೂರ್ವ ಅವಧಿಯಲ್ಲಿ (2015–2020), ಜಿ ಎಸ್ ಡಿ ಪಿ ಯ ಶೇಕಡಾವಾರು ಪ್ರಮಾಣದಲ್ಲಿ ಒಟ್ಟು ವೆಚ್ಚವು ಸುಮಾರು 13 ಪ್ರತಿಶತದಷ್ಟಿತ್ತು. ಅನುಪಾತದ ಈ ಸ್ಥಿರತೆಯು ವೆಚ್ಚದ ಬೆಳವಣಿಗೆಯು ವ್ಯಾಪಕವಾಗಿ ಜಿ ಎಸ್ ಡಿ ಪಿ ಬೆಳವಣಿಗೆಗೆ ಅನುಗುಣವಾಗಿ ಚಲಿಸಿದೆ ಎಂದು ಸೂಚಿಸುತ್ತದೆ. ಸಾಂಕ್ರಾಮಿಕ ನಂತರದ ಅವಧಿಯಲ್ಲಿ (2020–25), ಆರ್ಥಿಕ ಮಂದಗತಿಯಿಂದಾಗಿ 2020–21ರಲ್ಲಿ 13.66ರಷ್ಟಿದ್ದ ಜಿ ಎಸ್ ಡಿ ಪಿ ಯ ಶೇಕಡಾವಾರು ಪ್ರಮಾಣದಲ್ಲಿ ಒಟ್ಟು ವೆಚ್ಚವು 2023–24ರ ವರೆಗೆ ಕಡಿಮೆಯಾಗುವ ಪ್ರವೃತ್ತಿಯನ್ನು ತೋರಿಸಿದೆ. ಜಿ ಎಸ್ ಡಿ ಪಿ ಯಲ್ಲಿನ ಸುಧಾರಿತ ಬೆಳವಣಿಗೆಯಿಂದಾಗಿ ಈ ಕುಸಿತ ಕಂಡುಬಂದಿದೆ. ಹಿಂದಿನ ವರ್ಷಕ್ಕಿಂತ ವರ್ಷದಲ್ಲಿನ ಶೇಕಡಾವಾರು ಹೆಚ್ಚಳವು ಒಟ್ಟು ವೆಚ್ಚದ ಬೆಳವಣಿಗೆಯ ದರವು ಜಿ ಎಸ್ ಡಿ ಪಿ ಯ ಬೆಳವಣಿಗೆಯ ದರಕ್ಕಿಂತ ಹೆಚ್ಚಾಗಿದೆ ಎಂದು ಸೂಚಿಸುತ್ತದೆ. ರಾಜಸ್ವ,

ಬಂಡವಾಳ ಮತ್ತು ಸಾಲಗಳು ಮತ್ತು ಮುಂಗಡಗಳ ನಡುವಿನ ವೆಚ್ಚದ ಪಾಲು ಈ ಅವಧಿಯಲ್ಲಿ ಸ್ಥಿರವಾಗಿತ್ತು.

ಹಣಕಾಸು ವರ್ಷದಲ್ಲಿ ರಾಜ್ಯವು ಮಾಡಿದ ಒಟ್ಟು ₹3,43,524 ಕೋಟಿ ವೆಚ್ಚದಲ್ಲಿ, ₹17,574 ಕೋಟಿಗಳಲ್ಲಿ ಒಂದು ಭಾಗವು ಹಣಕಾಸು ಆಯೋಗದ ಅನುದಾನಗಳು, ಕೇಂದ್ರ ಪ್ರಾಯೋಜಿತ ಯೋಜನೆಗಳು ಮತ್ತು ರಾಜ್ಯಕ್ಕೆ ಇತರ ಅನುದಾನಗಳು ಇತ್ಯಾದಿಗಳಂತಹ ಪಾಸ್-ಥ್ರೂ ವಹಿವಾಟುಗಳಿಗೆ ಸಂಬಂಧಿಸಿದೆ.

ಎ. ವಲಯವಾರು ಒಟ್ಟು ವೆಚ್ಚ

ವಲಯವಾರು ವೆಚ್ಚದ ಸಂಯೋಜನೆಯನ್ನು **ಕೋಷ್ಟಕ 1.15**ರಲ್ಲಿ ನೀಡಲಾಗಿದೆ ಮತ್ತು ಒಟ್ಟು ವೆಚ್ಚದಲ್ಲಿ ವಿವಿಧ ವಲಯಗಳ ಸಾಪೇಕ್ಷ ಪಾಲನ್ನು **ನಕ್ಷೆ 1.19**ರಲ್ಲಿ ಚಿತ್ರಿಸಲಾಗಿದೆ.

ಕೋಷ್ಟಕ 1.15: ವಲಯವಾರು ಒಟ್ಟು ವೆಚ್ಚ

(₹ ಕೋಟಿಗಳಲ್ಲಿ)

ಪ್ರಮಿತಿಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಸಾಮಾನ್ಯ ಸೇವೆಗಳು	31,790	32,325	35,461	43,482	49,603	56,224	63,609	73,468	78,671	90,531
ಸಾಮಾಜಿಕ ಸೇವೆಗಳು	51,621	61,446	67,329	77,729	75,565	73,273	93,032	93,488	1,05,749	1,28,571
ಆರ್ಥಿಕ ಸೇವೆಗಳು	48,254	60,614	63,869	72,323	78,195	86,282	94,045	1,00,315	1,04,084	1,11,126
ಸ್ಥಳೀಯ ಸಂಸ್ಥೆಗಳಿಗೆ ಅನುದಾನ	6,076	5,686	6,490	5,425	6,425	5,681	6,616	5,662	6,229	6,665
ಸಾಲಗಳು ಮತ್ತು ಮುಂಗಡಗಳು	657	1,934	5,093	4,487	4,069	2,669	4,209	3,250	4,473	6,631

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ನಕ್ಷೆ 1.19: ಒಟ್ಟು ವೆಚ್ಚದಲ್ಲಿ ವಿವಿಧ ವಲಯಗಳ ಸಾಪೇಕ್ಷ ಪಾಲು



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

2019–2023ರ ಅವಧಿಯಲ್ಲಿ ಆರ್ಥಿಕ ವಲಯಕ್ಕೆ ವೆಚ್ಚದ ಪಾಲು ಹೆಚ್ಚಾಗಿತ್ತು. ಆದಾಗ್ಯೂ, 2023–24 ಮತ್ತು 2024–25ರ ವರ್ಷಗಳಲ್ಲಿ, ಹೊಸ ಸಾಮಾಜಿಕ ವಲಯ ಯೋಜನೆಗಳ ಅನುಷ್ಠಾನದೊಂದಿಗೆ, ಸಾಮಾಜಿಕ ವಲಯದ ಅಡಿಯಲ್ಲಿ ವೆಚ್ಚದ ಪಾಲು ಹೆಚ್ಚಾಗಿದೆ ಮತ್ತು ಪರಿಣಾಮವಾಗಿ ಆರ್ಥಿಕ ವಲಯದಲ್ಲಿ ಇಳಿಕೆ ಕಂಡುಬಂದಿದೆ. ಆದ್ದರಿಂದ ಕಳೆದ ಎರಡು ವರ್ಷಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ಇಳಿಕೆ ಕಂಡುಬಂದಿದೆ. 2016–18ರಲ್ಲಿ ಕಡಿಮೆಯಾಗಿದ್ದ ಸಾಮಾನ್ಯ ಸೇವೆಗಳ ಅಡಿಯಲ್ಲಿ ಪಾಲು ಬಡ್ಡಿ ಪಾವತಿಗಳಲ್ಲಿನ ಹೆಚ್ಚಳದಿಂದಾಗಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಕಂಡಿತು.

1.2.4.1 ರಾಜಸ್ವ ವೆಚ್ಚ

ಹಿಂದಿನ ಬಾಧ್ಯತೆಗಾಗಿ ಸೇವೆಗಳು ಮತ್ತು ಪಾವತಿಯ ಪ್ರಸ್ತುತ ಮಟ್ಟವನ್ನು ಕಾಯ್ದುಕೊಳ್ಳಲು ರಾಜಸ್ವ ವೆಚ್ಚವನ್ನು ಭರಿಸಲಾಗುತ್ತದೆ. ಹೀಗಾಗಿ, ಇದು ರಾಜ್ಯದ ಮೂಲಸೌಕರ್ಯ ಮತ್ತು ಸೇವಾ ಜಾಲಕ್ಕೆ

ಯಾವುದೇ ಸೇರ್ಪಡೆಗೆ ಕಾರಣವಾಗುವುದಿಲ್ಲ. ಆದಾಯ ವೆಚ್ಚದ ಬೆಳವಣಿಗೆ, ಒಟ್ಟು ವೆಚ್ಚ ಜಿ ಎಸ್ ಡಿ ಪಿ ಮತ್ತು ರಾಜಸ್ವ ಸ್ವೀಕೃತಿಗಳಿಗೆ ಅದರ ಅನುಪಾತ, **ಕೋಷ್ಟಕ 1.16**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 1.16: ರಾಜಸ್ವ ವೆಚ್ಚ – ಮೂಲ ಪ್ರಮಿತಿಗಳು

(₹ ಕೋಟಿಗಳಲ್ಲಿ)

ಪ್ರಮಿತಿಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಒಟ್ಟು ವೆಚ್ಚ	1,38,398	1,62,005	1,78,242	2,03,446	2,13,857	2,24,129	2,61,511	2,76,183	2,99,207	3,43,524
ರಾಜಸ್ವ ವೆಚ್ಚ	1,17,028	1,31,921	1,42,482	1,64,300	1,74,258	1,76,054	2,09,428	2,15,584	2,42,614	2,78,987
ರಾಜಸ್ವ ವೆಚ್ಚ ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ	98.49	99.03	96.93	99.59	99.32	112.34	106.98	94.11	103.97	108.07
ರಾಜಸ್ವ ವೆಚ್ಚ ಒಟ್ಟು ವೆಚ್ಚದ ಶತಾಂಶವಾಗಿ	84.56	81.43	79.94	80.76	81.48	78.55	80.08	78.06	81.09	81.21
ರಾಜಸ್ವ ವೆಚ್ಚ/ ಜಿ ಎಸ್ ಡಿ ಪಿ (ಶತಾಂಶ)	11.20	10.92	10.69	11.13	10.78	10.73	10.51	9.29	9.49	9.67
ವರ್ಷೇ ವರ್ಷೇ ವೃದ್ಧಿ(ಶೇಕಡಾ)										
ರಾಜಸ್ವ ವೆಚ್ಚ	12.95	12.73	8.01	15.31	6.06	1.03	18.96	2.94	12.54	14.99
ಜಿ ಎಸ್ ಡಿ ಪಿ ವೃದ್ಧಿ	10.97	11.81	15.76	6.24	9.22	1.55	21.41	16.45	10.24	12.77

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ಸಂಪೂರ್ಣ ಪರಿಭಾಷೆಯಲ್ಲಿ ಹೇಳುವುದಾದರೆ, ರಾಜಸ್ವ ವೆಚ್ಚವು ಹೆಚ್ಚುತ್ತಿರುವ ಪ್ರವೃತ್ತಿಯನ್ನು ಕಂಡಿದ್ದು, ಸಂಬಳ, ಪಿಂಚಣಿ, ಬಡ್ಡಿ ಪಾವತಿ ಮತ್ತು ಸಾಮಾಜಿಕ ವಲಯದ ಯೋಜನೆಗಳ ಕಡೆಗೆ ರಾಜ್ಯದ ವಿಸ್ತರಿಸುತ್ತಿರುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಕೋವಿಡ್ ಪೂರ್ವದ ಅವಧಿಯಲ್ಲಿ (2015–2020), ರಾಜಸ್ವ ವೆಚ್ಚವು ರಾಜಸ್ವ ಸ್ವೀಕೃತಿಗಳಿಗಿಂತ ಸ್ಥಿರವಾಗಿ ಕಡಿಮೆಯಾಗಿತ್ತು, ಇದರಿಂದಾಗಿ ರಾಜ್ಯವು ರಾಜಸ್ವ ಹೆಚ್ಚಳವನ್ನು ಸಾಧಿಸಿತು. ಕೋವಿಡ್ ನಂತರದ ಅವಧಿಯಲ್ಲಿ (2020–2025), 2022–23 ವರ್ಷವನ್ನು ಹೊರತುಪಡಿಸಿ, ರಾಜಸ್ವ ವೆಚ್ಚವು ರಾಜಸ್ವ ಸ್ವೀಕೃತಿಗಳನ್ನು ಮೀರಿದೆ. ಆದ್ದರಿಂದ, ರಾಜಸ್ವ ಸ್ವೀಕೃತಿಗಳಿಗೆ ರಾಜಸ್ವ ವೆಚ್ಚದ ಅನುಪಾತವು ಶೇಕಡಾ 100 ಮೀರಿದೆ ಮತ್ತು ಇದರಿಂದಾಗಿ ಆ ವರ್ಷಗಳಲ್ಲಿ ರಾಜಸ್ವ ಕೊರತೆಯನ್ನು ಸೂಚಿಸುತ್ತದೆ. ಪರಿಣಾಮವಾಗಿ, ಬಂಡವಾಳ ಹೂಡಿಕೆಗಳ ಜೊತೆಗೆ ರಾಜಸ್ವ ಕೊರತೆಯನ್ನು ಸರಿದೂಗಿಸಲು ರಾಜ್ಯವು ಸಾಲಗಳನ್ನು ಆಶ್ರಯಿಸಬೇಕಾಯಿತು. ಒಟ್ಟು ವೆಚ್ಚದ ಶೇಕಡಾವಾರು ರಾಜಸ್ವ ವೆಚ್ಚವು ಸರಾಸರಿ 80 ಪ್ರತಿಶತದಷ್ಟಿತ್ತು ಮತ್ತು ಆದ್ದರಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ಕಡಿಮೆ ವಿತ್ತೀಯ ಅವಕಾಶ ಉಳಿಸಿಕೊಂಡಿದೆ.

2021–22ರಿಂದ ಜಿ ಎಸ್ ಡಿ ಪಿ ಯ ಶೇಕಡಾವಾರು ಆದಾಯ ವೆಚ್ಚವು ಕಡಿಮೆಯಾಗುವ ಪ್ರವೃತ್ತಿಯನ್ನು ತೋರಿಸಿದೆ, ಪ್ರಸಕ್ತ ವರ್ಷವನ್ನು ಹೊರತುಪಡಿಸಿ, ಇದು ಮಧ್ಯಮವಾಗಿ ಹೆಚ್ಚಾಗಿದೆ. ಈ ಕುಸಿತವು ಜಿ ಎಸ್ ಡಿ ಪಿ ಬೆಳವಣಿಗೆ ವೇಗವಾಗಿದೆ ಎಂದು ಪ್ರತಿಬಿಂಬಿಸುತ್ತದೆ.

ಎ. ವಲಯವಾರು ರಾಜಸ್ವ ವೆಚ್ಚ

ರಾಜಸ್ವ ವೆಚ್ಚದ ವಲಯವಾರು ಸಂಯೋಜನೆಯನ್ನು **ಕೋಷ್ಟಕ 1.17**ರಲ್ಲಿ ನೀಡಲಾಗಿದೆ ಮತ್ತು ರಾಜಸ್ವ ವೆಚ್ಚದಲ್ಲಿ ವಿವಿಧ ವಲಯಗಳ ಸಾಪೇಕ್ಷ ಪಾಲನ್ನು **ನಕ್ಷೆ 1.20**ರಲ್ಲಿ ಚಿತ್ರಿಸಲಾಗಿದೆ. ವಿವರವಾದ ವಲಯವಾರು ವೆಚ್ಚವನ್ನು **ಅನುಬಂಧ 1.2**ರಲ್ಲಿ ನೀಡಲಾಗಿದೆ.

ಕೋಷ್ಟಕ 1.17: ವಲಯವಾರು ಆದಾಯ ವೆಚ್ಚ

(₹ ಕೋಟಿಗಳಲ್ಲಿ)

ಪ್ರಮಿತಿಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಸಾಮಾನ್ಯ ಸೇವೆಗಳು	30,799	31,265	34,484	42,655	48,824	55,018	62,669	71,816	75,700	87,750
ಸಾಮಾಜಿಕ ಸೇವೆಗಳು	46,307	54,549	58,652	67,935	66,373	61,726	79,804	81,011	93,723	1,11,105
ಆರ್ಥಿಕ ಸೇವೆಗಳು	33,846	40,421	42,856	48,285	52,636	53,629	60,339	57,095	66,962	73,467
ಸಹಾಯಾನುದಾನ ಮತ್ತು ವಂತಿಗೆಗಳು	6,076	5,686	6,490	5,425	6,425	5,681	6,616	5,662	6,229	6,665

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ನಕ್ಷೆ 1.20: ರಾಜಸ್ವ ವೆಚ್ಚದಲ್ಲಿ ವಿವಿಧ ವಲಯಗಳ ಸಾಪೇಕ್ಷ ಪಾಲು



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ಇಡೀ ದಶಕದಲ್ಲಿ, ಸಾಮಾಜಿಕ ಸೇವೆಗಳು ನಿರಂತರವಾಗಿ ಅತಿದೊಡ್ಡ ಪಾಲನ್ನು ಹೊಂದಿದ್ದರೆ, ಆರ್ಥಿಕ ಸೇವೆಗಳು ಕನಿಷ್ಠ ಪಾಲನ್ನು ಹೊಂದಿವೆ ಮತ್ತು ಇದು ರಾಜ್ಯದ ಕಲ್ಯಾಣ–ಆಧಾರಿತ ಹಣಕಾಸು ವಿಧಾನವನ್ನು ಎತ್ತಿ ತೋರಿಸುತ್ತದೆ. ಆರ್ಥಿಕ ಸೇವೆಗಳ ವೆಚ್ಚದಲ್ಲಿನ ಇಳಿಕೆಯು ಬೆಳವಣಿಗೆಯನ್ನು ಬೆಂಬಲಿಸುವ ವೆಚ್ಚಗಳಿಗೆ ಸೀಮಿತ ಹಣಕಾಸಿನ ಅವಕಾಶವನ್ನು ಸೂಚಿಸುತ್ತದೆ, ಇದು ದೀರ್ಘಾವಧಿಯ ಬೆಳವಣಿಗೆಯ ಮೇಲೆ ಪರಿಣಾಮ ಬೀರಬಹುದು. ಸಾಮಾನ್ಯ ಸೇವೆಗಳಲ್ಲಿನ ಹೆಚ್ಚಳವು ಬಡ್ಡಿ ಪಾವತಿಗಳು, ಆಡಳಿತ ಮತ್ತು ಪಿಂಚಣಿಗಳಂತಹ ಬದ್ಧ ವೆಚ್ಚಗಳಿಗೆ ಹೆಚ್ಚಿನ ವೆಚ್ಚವನ್ನು ಸೂಚಿಸುತ್ತದೆ.

ಆದಾಗ್ಯೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಸಾಮಾನ್ಯ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಹಂಚಿಕೆಯು ಕ್ರಮವಾಗಿ ಶೇಕಡಾ 15.92, ಶೇಕಡಾ 18.55 ಮತ್ತು ಶೇಕಡಾ 9.71ರಷ್ಟು ಹೆಚ್ಚಾಗಿದೆ. ಸಾಮಾನ್ಯ ಸೇವೆಗಳಲ್ಲಿನ ಹೆಚ್ಚಳವು ಮುಖ್ಯವಾಗಿ ಸರ್ಕಾರವು ಪಡೆದ ಸಾಲಗಳಿಗೆ ಬಡ್ಡಿ ಪಾವತಿಗಳಲ್ಲಿನ ಹೆಚ್ಚಳದಿಂದಾಗಿ ಸಂಭವಿಸಿದೆ. ಇದು ಹಣಕಾಸಿನ ಲಭ್ಯತೆಯ ಹರಹನ್ನು ಕುಗ್ಗಿಸಿತು ಮತ್ತು ಇದರ ಪರಿಣಾಮವಾಗಿ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಪನ್ಮೂಲಗಳನ್ನು ಹಂಚಿಕೆ ಮಾಡುವ ರಾಜ್ಯದ ಸಾಮರ್ಥ್ಯವನ್ನು ಸೀಮಿತಗೊಳಿಸಿತು. ಸಾಮಾಜಿಕ ಸೇವೆಗಳಲ್ಲಿನ ಹೆಚ್ಚಳವು ಮುಖ್ಯವಾಗಿ ಐದು ಖಾತರಿ ಯೋಜನೆಗಳಿಗೆ ಸಬ್ಸಿಡಿಗಳ ಕಾರಣದಿಂದಾಗಿತ್ತು.

ಬಿ. ಬದ್ಧ ವೆಚ್ಚ

ರಾಜ್ಯ ಸರ್ಕಾರದ ರಾಜಸ್ವ ಖಾತೆಯ ಮೇಲಿನ ಬದ್ಧ ವೆಚ್ಚವು ಬಡ್ಡಿ ಪಾವತಿಗಳು, ಸಂಬಳ ಮತ್ತು ವೇತನಗಳ ಮೇಲಿನ ವೆಚ್ಚಗಳು ಮತ್ತು ಪಿಂಚಣಿಗಳನ್ನು ಒಳಗೊಂಡಿರುತ್ತದೆ. ಇದು ಸರ್ಕಾರಿ ಸಂಪನ್ಮೂಲಗಳ ಮೇಲೆ ಮೊದಲ ಶುಲ್ಕವನ್ನು ಹೊಂದಿದೆ. ಬದ್ಧ ವೆಚ್ಚದ ಅಂಶವನ್ನು **ಕೋಷ್ಟಕ 1.18**ರಲ್ಲಿ ನೀಡಲಾಗಿದೆ ಮತ್ತು ಬದ್ಧ ವೆಚ್ಚವನ್ನು ಕಂದಾಯ ಸ್ವೀಕೃತಿಗಳ ಶೇಕಡಾವಾರು ಮತ್ತು ಇತರ ವೆಚ್ಚಗಳಿಗೆ ಉಳಿದ ವಿತ್ತೀಯ ಅವಕಾಶವನ್ನು **ನಕ್ಷೆ 1.21**ರಲ್ಲಿ ನೀಡಲಾಗಿದೆ.

ಕೋಷ್ಟಕ 1.18: ಬದ್ಧ ವೆಚ್ಚದ ಅಂಶಗಳು

(₹ ಕೋಟಿಗಳಲ್ಲಿ)

ಬದ್ಧ ವೆಚ್ಚದ ಅಂಶಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಸಂಬಳ ಮತ್ತು ಮಜೂರಿ	15,262	18,977	22,691	26,406	30,120	33,832	37,647	40,663	45,906	48,276*
ಪಿಂಚಣಿ ಮೇಲಿನ ವೆಚ್ಚ	4,490	7,253	10,015	12,777	15,540	18,936	20,666	24,020	24,859	30,651
ಬಡ್ಡಿ ಪಾವತಿ	11,343	12,850	14,973	16,614	19,903	23,433	26,276	29,643	31,872	37,552
ಒಟ್ಟು	**31,095**	**39,079**	**47,679**	**39,183**	**65,563**	**76,201**	**84,589**	**94,326**	**1,02,637**	**1,16,479**
ರಾಜಸ್ವ ವೆಚ್ಚದ ಶತಾಂಶವಾಗಿ ಬದ್ಧ ವೆಚ್ಚ	**26.57**	**29.62**	**33.46**	**23.85**	**37.62**	**43.28**	**40.39**	**43.75**	**42.30**	**41.75**

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

** ಪಂಚಾಯತ್ ರಾಜ್ ಸಂಸ್ಥೆಗಳ ಸಂಬಳ (ರೂ 22,318.50 ಕೋಟಿ), ನಗರ ಸ್ಥಳೀಯ ಸಂಸ್ಥೆಗಳ ಸಂಬಳ (ರೂ 1,840.31 ಕೋಟಿ) ಮತ್ತು ಮಜೂರಿ ಮತ್ತು ಗುತ್ತಿಗೆ (ರೂ 1,471.43 ಕೋಟಿ) ಯನ್ನು ಒಳಗೊಂಡಿದೆ.*

ನಕ್ಷೆ 1.21: ರಾಜಸ್ವ ಸ್ವೀಕೃತಿಯ ಶತಾಂಶವಾಗಿ ಬದ್ಧ ವೆಚ್ಚ ಮತ್ತು ಉಳಿದ ವಿತ್ತೀಯ ಅವಕಾಶ



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

2015–16ರಿಂದ 2024–25ರ ಅವಧಿಯಲ್ಲಿ ರಾಜ್ಯದಲ್ಲಿ ಬದ್ಧ ವೆಚ್ಚವು ಸ್ಥಿರ ಮತ್ತು ಗಮನಾರ್ಹ ಹೆಚ್ಚಳವನ್ನು ತೋರಿಸಿದೆ. ಇದರ ಪರಿಣಾಮವಾಗಿ, ರಾಜಸ್ವ ವೆಚ್ಚದ ಶೇಕಡಾವಾರು ಪ್ರಮಾಣದಲ್ಲಿ ಬದ್ಧ ವೆಚ್ಚವು 2015–16ರಲ್ಲಿ ಶೇಕಡಾ 26.57ರಿಂದ 2024–25ರಲ್ಲಿ ಶೇಕಡಾ 41.75ಕ್ಕೆ ಏರಿದ್ದು, ಇದು ಕೋವಿಡ್ ವರ್ಷದಲ್ಲಿನ ಶೇಕಡಾ 43ಕ್ಕಿಂತ ಹೆಚ್ಚಾಗಿದೆ. ರಾಜಸ್ವ ವೆಚ್ಚದ ಹೆಚ್ಚಿನ ಪಾಲನ್ನು ಪೂರ್ವಭಾವಿಯಾಗಿ ಮಾಡಲಾಗಿದ್ದರಿಂದ, ಅದು ಮೂಲಸೌಕರ್ಯ, ಶಿಕ್ಷಣ ಮತ್ತು ಆರೋಗ್ಯದಂತಹ ಅಭಿವೃದ್ಧಿ ವೆಚ್ಚಗಳಿಗೆ ಸೀಮಿತ ಹಣಕಾಸಿನ ಅವಕಾಶ ಕಲ್ಪಿಸಿತು. ಸಂಬಳದ ನಂತರ, ಮುಂದಿನ ಅತ್ಯಧಿಕ ಬದ್ಧ ವೆಚ್ಚವೆಂದರೆ ಬಡ್ಡಿ ಪಾವತಿಗಳು, ಇದು ಬದ್ಧ ವೆಚ್ಚದ ಶೇಕಡಾ 32ರಷ್ಟಿತ್ತು. ಸಾಲಗಳ ಹೆಚ್ಚಳದಿಂದಾಗಿ ಬಡ್ಡಿ ಪಾವತಿಗಳಲ್ಲಿ ಬೆಳೆಯುತ್ತಿರುವ ಪ್ರವೃತ್ತಿಯು ಆದಾಯದ ಮೇಲೆ ಒತ್ತಡವನ್ನುಂಟುಮಾಡುತ್ತಿದೆ. ಆದ್ದರಿಂದ, ರಾಜ್ಯವು ಹೆಚ್ಚಿನ ಸಾಲಗಳನ್ನು ಆಶ್ರಯಿಸಿದ್ದು, ಇದು ಬಡ್ಡಿ ಪಾವತಿಗಳಲ್ಲಿ ಹೆಚ್ಚಳಕ್ಕೆ ಕಾರಣವಾಯಿತು, ಹೀಗಾಗಿ ಋಣಗ್ರಸ್ತತೆಯ ಅನಿವಾರ್ಯತೆಯನ್ನು ಸೃಷ್ಟಿಸಿದೆ.

ಸಿ. ಸಹಾಯಧನಗಳು

ಸಹಾಯಧನಗಳು ಸರ್ಕಾರವು ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಹೊರೆಗಳನ್ನು ಕಡಿಮೆ ಮಾಡಲು ಅಥವಾ ಸಾಮಾಜಿಕ–ಆರ್ಥಿಕ ನೀತಿಗಳನ್ನು ಉತ್ತೇಜಿಸಲು ನೀಡುವ ಆರ್ಥಿಕ ಪ್ರಯೋಜನಗಳಾಗಿವೆ. ಸರ್ಕಾರವು ಒದಗಿಸುವ ಸಹಾಯಧನಗಳು ಎರಡು ವಿಧಗಳಾಗಿರಬಹುದು, ಅಂದರೆ ಸ್ಪಷ್ಟ ಮತ್ತು ಸೂಚ್ಯ ಸಹಾಯಧನಗಳು. ಹಣಕಾಸು ಲೆಕ್ಕಗಳು ಆಯವ್ಯಯದಲ್ಲಿ ಸ್ಪಷ್ಟವಾಗಿ ಒದಗಿಸಲಾದ ಸಹಾಯಧನಗಳನ್ನು ಸೆರೆಹಿಡಿಯುತ್ತವೆ, ಗಣನೀಯ ಸಹಾಯಧನಗಳನ್ನು ಆಯವ್ಯಯದ ವೆಚ್ಚದಲ್ಲಿ ಸೂಚ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಅವಕಾಶದ ಅಡಿಯಲ್ಲಿ ಮರೆಮಾಡಲಾಗಿದೆ.

2015–25ರ ಅವಧಿಯಲ್ಲಿ, 2017–18 ಮತ್ತು 2022–23 ವರ್ಷಗಳನ್ನು ಹೊರತುಪಡಿಸಿ ಸಹಾಯಧನಗಳು (ಸ್ಪಷ್ಟ) ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿವೆ.

2024–25ರಲ್ಲಿನ ₹17,687 ಕೋಟಿ ಹೆಚ್ಚಳ (ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 55) ಮುಖ್ಯವಾಗಿ ವಿದ್ಯುತ್ ಸಹಾಯಧನದಿಂದಾಗಿ, ₹8,098 ಕೋಟಿ ಮತ್ತು ರಸ್ತೆ ಸಾರಿಗೆ ಸಹಾಯಧನದಿಂದಾಗಿ ₹4,332 ಕೋಟಿ ಹೆಚ್ಚಳವಾಗಿದೆ. 2015–16ರಿಂದ 2024–25ರ ವರೆಗಿನ ಹಣಕಾಸು ವರ್ಷಗಳ ಇಲಾಖಾವಾರು ಪ್ರಮುಖ ಸಹಾಯಧನಗಳನ್ನು **ಕೋಷ್ಟಕ 1.19**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 1.19: 2015–16ರಿಂದ 2024–25ರ ವರೆಗಿನ ಇಲಾಖಾವಾರು ಸಹಾಯಧನಗಳು

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಇಲಾಖೆ	2015–16	2016–17	2017–18	2018–19	2019–20	2020–21	2021–22	2022–23	2023–24	2024–25	ಷರಾ
1	ಇಂಧನ	8,693	8,647	7,957	7,593	9,110	9,139	14,736	11,512	18,603	26,701	ಎಸ್ಕಾಂಗಳಿಗೆ ಐಪಿ ಸೆಟ್‌ಗಳಿಗೆ ಸಹಾಯಧನ, ಗೃಹಜ್ಯೋತಿಬಳಕೆದಾರರಿಗೆ (ರೂ 9,157.66ಕೋಟಿ) ಸಹಾಯಧನ ಇತ್ಯಾದಿಗಳನ್ನು ಒಳಗೊಂಡಿದೆ
2	ಆಹಾರ ಮತ್ತು ನಾಗರಿಕ ಸರಬರಾಜು	2,196	1,854	1,917	2,404	2,692	2,324	6,057	2,015	5,680	9,719	*ಇದು ಬಿಪಿಎಲ್ ಮತ್ತು ಎಪಿಎಲ್ ಫಲಾನುಭವಿಗಳಿಗೆ ಅನ್ನ ಭಾಗ್ಯ (₹7,857.63 ಕೋಟಿ) ಸಬ್ಸಿಡಿ ಮತ್ತು ಸೂಕ್ಷ್ಮ ಆಹಾರ ಸಂಸ್ಕರಣೆಯ ಔಪಚಾರಿಕೀಕರಣವನ್ನು ಒಳಗೊಂಡಿದೆ.*
3	ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು	31	1,335	1,455	2,336	2,253	2,774	2,447	3,687	2,998	3,568	ಇದು ಬೆಳೆ ಸಾಕಣೆ, ಮೀನುಗಾರಿಕೆ, ಅರಣ್ಯ, ಮಣ್ಣು ಮತ್ತು ಜಲ ಸಂರಕ್ಷಣೆ ಮತ್ತು ವನ್ಯಜೀವಿ ಇತ್ಯಾದಿಗಳಿಗೆ ಸಹಾಯಧನ ವನ್ನು ಒಳಗೊಂಡಿದೆ.
4	ಸಹಕಾರ	729	824	778	777	1,074	1,231	1,026	1,006	1,161	1,552	ಅಸಲು ಮತ್ತು ಬಡ್ಡಿ ಎರಡರಲ್ಲೂ ಬಾಕಿ ಉಳಿದಿರುವ ಸಾಲಗಳ ಮನ್ನಾವನ್ನು ಪ್ರತಿನಿಧಿಸುತ್ತದೆ.
5	ಸಾರಿಗೆ	748	799	757	820	728	1,529	1,705	3,053	2,656	6,988	ಶಕ್ತಿ ಯೋಜನೆಯ (₹5,615 ಕೋಟಿ) ವಿದ್ಯಾರ್ಥಿಗಳು ಮತ್ತು ಗ್ರಾಹಕರಿಗೆ ವಿಸ್ತರಿಸಲಾದ ಶುಲ್ಕ ರಿಯಾಯಿತಿಗೆ ಸಹಾಯಧನ ಅನ್ವಯಿಸುತ್ತದೆ.
6	ವಸತಿ	223	402	362	459	943	450	1,150	513	435	650	ಆಶ್ರಯ ಯೋಜನೆ ಇತ್ಯಾದಿಗಳಿಗೆ ನೀಡಿದ ಸಹಾಯಧನ.
7	ಇತರೆ	528	527	922	1,011	734	985	1,098	968	857	899	ಇದು ಬೆಳೆ ಸಾಲ ಮತ್ತು ಸ್ವ–ಸಹಾಯ ಗುಂಪು, ಸಮಾಜ ಕಲ್ಯಾಣ, ಇತ್ಯಾದಿಗಳಿಗೆ ಬಡ್ಡಿ ಸಹಾಯಧನವನ್ನು ಒಳಗೊಂಡಿದೆ.
ಒಟ್ಟು		**13,148**	**14,388**	**14,148**	**15,400**	**17,534**	**18432**	**28,219**	**22,754**	**32,390**	**50,077**	

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ಅತಿ ಹೆಚ್ಚಿನ ಸಹಾಯಧನ ಅಂಶವೆಂದರೆ ವಿದ್ಯುತ್ ಸಹಾಯಧನ, ಇದರಲ್ಲಿ ಗೃಹ ಜ್ಯೋತಿ ಮತ್ತು ರೈತರಿಗೆ ಕೃಷಿ ಪಂಪ್ ಸೆಟ್‌ಗಳ ಬಳಕೆಯ ಉಚಿತ ವಿದ್ಯುತ್ ಸೇರಿದೆ. ₹50,077 ಕೋಟಿ ಸಹಾಯಧನದಲ್ಲಿ, ₹22,631 ಕೋಟಿ (ಶೇಕಡಾ 45) ಕರ್ನಾಟಕದ ಐದು ಖಾತರಿ ಯೋಜನೆಗಳಲ್ಲಿ ಮೂರು ಯೋಜನೆಗಳನ್ನು ಒಳಗೊಂಡಿದೆ.

ನಕ್ಷೆ 1.22 ಸಹಾಯಧನಗಳ ಪ್ರವೃತ್ತಿಯ ವಿಶ್ಲೇಷಣೆ



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು ಮತ್ತು ಆರ್ಥಿಕ ಸಮೀಕ್ಷೆ

ಕೋವಿಡ್ ಪೂರ್ವ ಅವಧಿಯಲ್ಲಿ (2015–2020) ರಾಜಸ್ವ ಸ್ವೀಕೃತಿಗಳು, ರಾಜಸ್ವ ವೆಚ್ಚ ಮತ್ತು ಒಟ್ಟು ವೆಚ್ಚದ ಶೇಕಡಾವಾರು ಸಹಾಯಧನಗಳು ಸ್ಥಿರವಾಗಿದ್ದರೆ, ಕೋವಿಡ್ ನಂತರದ ಅವಧಿಯಲ್ಲಿ (2020–25) ಇದು ಅಂತರ–ವರ್ಷ ವ್ಯತ್ಯಾಸವನ್ನು ತೋರಿಸಿದೆ. 2022–23ರ ನಂತರದ ಅವಧಿಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿ ಕಂಡುಬಂದಿದೆ. ಜಿ ಎಸ್ ಡಿ ಪಿಯ ಶೇಕಡಾವಾರು ಸಹಾಯಧನಗಳು ತುಲನಾತ್ಮಕವಾಗಿ ಕಡಿಮೆ, ಸ್ಥಿರವಾಗಿ ಒಂದರ ಸಮೀಪದಲ್ಲಿಯೇ ಇದ್ದವು. ಇತ್ತೀಚಿನ ಕಳೆದ ಎರಡು ವರ್ಷಗಳಲ್ಲಿನ ಹೆಚ್ಚಳವು ಐದು ಖಾತರಿ ಯೋಜನೆಗಳ ಕಡೆಗೆ ವಿಸ್ತೃತ ಸಾಮಾಜಿಕ ಕಲ್ಯಾಣ ಬದ್ಧತೆಗಳನ್ನು ಪ್ರತಿಬಿಂಬಿಸುತ್ತದೆ. ಪ್ರಸ್ತುತ ವರ್ಷದಲ್ಲಿ, ರಾಜಸ್ವ ವೆಚ್ಚಕ್ಕೆ ಸಹಾಯಧನಗಳು (ಶೇಕಡಾ 18) ಮತ್ತು ಬದ್ಧ ವೆಚ್ಚ (ಶೇಕಡಾ 42) ಸುಮಾರು 60 ಪ್ರತಿಶತದಷ್ಟಿದ್ದು, ಇದು ಗಣನೀಯವಾಗಿದೆ, ಇದರಿಂದಾಗಿ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗುವ ಇತರ ಸರ್ಕಾರಿ ಯೋಜನೆಗಳ ವೆಚ್ಚಕ್ಕೆ ಆದ್ಯತೆ ನೀಡುವಲ್ಲಿ ರಾಜ್ಯದ ಕುಶಲತೆಯ ಮೇಲೆ ಪರಿಣಾಮ ಬೀರುತ್ತದೆ.

ಆಯವ್ಯಯದಲ್ಲಿ ಸ್ಪಷ್ಟವಾಗಿ ಒದಗಿಸಲಾದ ಮೇಲಿನ ಸಹಾಯಧನಗಳ ಜೊತೆಗೆ, ರಾಜ್ಯ ಸರ್ಕಾರವು ಸೂಚ್ಯ ಸಹಾಯಧನಗಳ ಸ್ವರೂಪದ ವೆಚ್ಚವನ್ನು ಸಹ ಭರಿಸುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸುವಲ್ಲಿ ಸರ್ಕಾರವು ವಿಸ್ತೃತ ಪ್ರಯೋಜನಗಳನ್ನು ಹೊಂದಿದ್ದರೂ ಸಹ, ಅದು ಮಾಡುವ ವೆಚ್ಚವನ್ನು ಮರುಪಡೆಯಲು ಸಾಧ್ಯವಾಗದಿದ್ದಾಗ ಇದು ಉದ್ಭವಿಸುತ್ತದೆ. ಈ ಸಹಾಯಧನಗಳು ವಸ್ತು ರೂಪದಲ್ಲಿ, ಹಣಕಾಸಿನ ನೆರವಿನ ರೂಪದಲ್ಲಿ ಅಥವಾ ತೆರಿಗೆ ರಿಯಾಯಿತಿಗಳ ರೂಪದಲ್ಲಿರಬಹುದು. 2015–25ರ ಅವಧಿಯಲ್ಲಿ ಸೂಚ್ಯ ಸಹಾಯಧನಗಳನ್ನು **ಅನುಬಂಧ 1.4**ರಲ್ಲಿ ಸೂಚಿಸಲಾಗಿದೆ. ಹೀಗಾಗಿ, ಸೂಚ್ಯ ಸಹಾಯಧನಗಳನ್ನು ಪರಿಗಣಿಸಿದರೆ ವಾಸ್ತವ ಸಹಾಯಧನಗಳು ₹81,880 ಕೋಟಿಗೆ ಹೆಚ್ಚಾಗುತ್ತವೆ, ಇದು ರಾಜಸ್ವ ವೆಚ್ಚದ ಸುಮಾರು 29 ಪ್ರತಿಶತದಷ್ಟಿರುತ್ತದೆ.

ಒಟ್ಟು ₹81,800 ಕೋಟಿಗಳಲ್ಲಿ, ₹52,526 ಕೋಟಿಗಳು ಐದು ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ್ದು, ಇದು ಒಟ್ಟು ಸಹಾಯಧನ ಸುಮಾರು 64 ಪ್ರತಿಶತ ಮತ್ತು ರಾಜಸ್ವ ವೆಚ್ಚದ 19 ಪ್ರತಿಶತದಷ್ಟಿದೆ.

ಸಹಾಯಧನಗಳ ಹೆಚ್ಚಳವು ಮುಖ್ಯವಾಗಿ ಕರ್ನಾಟಕದ ಐದು ಗ್ಯಾರಂಟಿ ಯೋಜನೆಗಳಿಂದಾಗಿದ್ದು. ಯೋಜನೆಗಳ ಪರಿಣಾಮವನ್ನು ಕೆಳಗೆ ವಿವರಿಸಲಾಗಿದೆ:

ಕರ್ನಾಟಕದ ಐದು ಖಾತರಿ ಯೋಜನೆಗಳ ಪರಿಣಾಮ

2023–24ರಲ್ಲಿ ಸರ್ಕಾರವು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾದ ಐದು ಖಾತರಿ ಯೋಜನೆಗಳನ್ನು ಜಾರಿಗೆ ತಂದಿತು. 2023–24ರಲ್ಲಿ ರಾಜ್ಯವು ಈ ಯೋಜನೆಗಳಿಗೆ ₹36,538 ಕೋಟಿ ಆಯವ್ಯಯ ಮಾಡಿತ್ತು, ಇದು 2024–25ರಲ್ಲಿ ₹51,646 ಕೋಟಿಗೆ ಏರಿದೆ. ಈ ಯೋಜನೆಗಳು ರಾಜ್ಯದ ಪ್ರಮುಖ ಸಾಮಾಜಿಕ ಕಲ್ಯಾಣ ಯೋಜನೆಗಳಾಗಿವೆ ಎಂಬುದನ್ನು ಇದು ಸೂಚಿಸುತ್ತದೆ. ಈ ಐದು ಯೋಜನೆಗಳ ವೆಚ್ಚದ ವಿವರಗಳನ್ನು **ಕೋಷ್ಟಕ 1.20**ರಲ್ಲಿ ಸೂಚಿಸಲಾಗಿದೆ

ಕೋಷ್ಟಕ 1.20: ಐದು ಖಾತರಿ ಯೋಜನೆಗಳ ವಿವರಗಳು

(₹ ಕೋಟಿಗಳಲ್ಲಿ)

ಯೋಜನೆ	ಸೌಲಭ್ಯಗಳು	ವೆಚ್ಚ 2023–24*	ಒಟ್ಟು ಆಯವ್ಯಯ	ವೆಚ್ಚ 2024–25
ಗೃಹ ಲಕ್ಷ್ಮಿ	ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ತಿಂಗಳಿಗೆ ₹2,000 ವರ್ಗಾವಣೆ	16,964.40	28,608.41	29,608.40
ಗೃಹ ಜ್ಯೋತಿ	ತಿಂಗಳಿಗೆ 200 ಯೂನಿಟ್‌ಗಳವರೆಗೆ ವಿದ್ಯುತ್ ಬಳಸುವ ಮನೆಗಳಿಗೆ ಉಚಿತ ವಿದ್ಯುತ್ ಸರಬರಾಜು	8,900.00	9,657.00	9,157.66
ಅನ್ನ ಭಾಗ್ಯ	ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರತಿ ತಿಂಗಳು ತಲಾ 5 ಕೆಜಿ ಅಕ್ಕಿ ಹೆಚ್ಚುವರಿಯಾಗಿ	5,706.00	8,079.00	7,857.63
ಶಕ್ತಿ	ರಾಜ್ಯದ ಎಲ್ಲಾ ವಸತಿ ಮಹಿಳೆಯರಿಗೆ ಐಷಾರಾಮಿ ಬಸ್‌ಗಳನ್ನು ಹೊರತುಪಡಿಸಿ ಉಳಿದೆಲ್ಲದರಲ್ಲೂ ಉಚಿತ ಪ್ರಯಾಣ	3,200.00	5,015.00	5,615.00

ಯೋಜನೆ	ಸೌಲಭ್ಯಗಳು	ವೆಚ್ಚ 2023–24*	ಒಟ್ಟು ಆಯವ್ಯಯ	ವೆಚ್ಚ 2024–25
ಯುವ ನಿಧಿ	ಪದವಿ ಪಡೆದವರಿಗೆ ₹3,000 ಮತ್ತು ಡಿಪ್ಲೊಮಾ ಪಡೆದವರಿಗೆ ₹1,500 ಸೀಮಿತ ಅವಧಿಗೆ ನಿರುದ್ಯೋಗ ಭತ್ಯೆ	88.88	650.00	286.91
ಒಟ್ಟು		**34,859.28**	**55,009.41**	**52,525.60**

ಆಕರ:ಆಯವ್ಯಯ ದಾಖಲೆಗಳು ಮತ್ತು ಅನುದಾನ ವಹಿ
**2023–24ರ ವೆಚ್ಚವು ಆಗಸ್ಟ್ 2024ರಿಂದ*

2023–24 ಮತ್ತು 2024–25ರ ರಾಜ್ಯ ಹಣಕಾಸು ವಿಶ್ಲೇಷಣೆಯು ಸರ್ಕಾರಿ ಆದೇಶಗಳು ಮತ್ತು ಮಾಧ್ಯಮಗಳಲ್ಲಿನ ವರದಿಯನ್ನು ಪರಿಶೀಲಿಸಿ ಈ ಕೆಳಗಿನವುಗಳನ್ನು ತಿಳಿಯ ಪಡಿಸಿತ.

ಸಾಮಾಜಿಕ ಪ್ರಯೋಜನಗಳು:

ಮಾಧ್ಯಮ ವರದಿಯಿಂದ, ಯೋಜನೆಗಳು ಸಾಮಾಜಿಕ ಪ್ರಯೋಜನಗಳ ವಿಷಯದಲ್ಲಿ ಗಮನಾರ್ಹ ಸಕಾರಾತ್ಮಕ ಫಲಿತಾಂಶಗಳನ್ನು ಹೊಂದಿವೆ ಎಂದು ತಿಳಿದುಬಂದಿದೆ:

- ಮಹಿಳೆಯರ ಆರ್ಥಿಕ ಸೇರ್ಪಡೆ: ಗೃಹ ಲಕ್ಷ್ಮಿ ಅಡಿಯಲ್ಲಿ ನೇರ ನಗದು ವರ್ಗಾವಣೆಯು ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ಹೆಚ್ಚುವರಿ ದ್ರವ್ಯತೆಯನ್ನು ಒದಗಿಸಿದೆ.
- ಮಹಿಳಾ ಸಬಲೀಕರಣ: ಶಕ್ತಿ ಯೋಜನೆಯು ಮಹಿಳೆಯರಿಗೆ ಚಲನಶೀಲತೆಯನ್ನು ನೀಡಿದೆ ಮತ್ತು ಆ ಮೂಲಕ ಸಬಲೀಕರಣವನ್ನು ನೀಡಿದೆ.
- ಆಹಾರ ಭದ್ರತೆ: ಅನ್ನಭಾಗ್ಯ ಪೌಷ್ಠಿಕಾಂಶದ ಪ್ರಯೋಜನಗಳನ್ನು ಖಚಿತಪಡಿಸಿಕೊಳ್ಳಲು ಪ್ರಾರಂಭಿಸಿದರೂ, ನಗದು ವರ್ಗಾವಣೆಯಲ್ಲಿ ಕೊನೆಗೊಂಡಿದೆ.
- ಯುವ ಬೆಂಬಲ: ಯುವ ನಿಧಿ ನಿರುದ್ಯೋಗಿ ಪದವೀಧರರಿಗೆ ತಾತ್ಕಾಲಿಕ ಸುರಕ್ಷತಾ ಜಾಲವನ್ನು ನೀಡಿದೆ.
- ಗೃಹ ಪರಿಹಾರ: ಗೃಹ ಜ್ಯೋತಿ ಯೋಜನೆಯು ಮನೆಗಳ ಮಾಸಿಕ ವಿದ್ಯುತ್ ಬಿಲ್‌ಗಳನ್ನು ಉಳಿಸಲು ಸಹಾಯ ಮಾಡಿದೆ.

ಕರ್ನಾಟಕದ ಐದು ಖಾತರಿ ಯೋಜನೆಗಳು ಸಾರ್ವತ್ರಿಕ ಸ್ವರೂಪದ್ದಾಗಿದ್ದು, ಅನ್ಯ ರಾಜ್ಯದ ಉದ್ದೇಶಿತ ಯೋಜನೆಗಳಿಗಿಂತ ಭಿನ್ನವಾಗಿದೆ. ಇದು ಕೆಳಗೆ ಚರ್ಚಿಸಿದಂತೆ ರಾಜ್ಯದ ಮೇಲಿನ ಹಣಕಾಸಿನ ಒತ್ತಡವನ್ನು ಹೆಚ್ಚಾಗಿಸಿದೆ:

ಆದಾಯದ ಒತ್ತಡ:

1. ಐದು ಖಾತರಿ ಯೋಜನೆಗಳ ಒಟ್ಟು ವೆಚ್ಚವು ರಾಜ್ಯದ ಆದಾಯದ ಸುಮಾರು 20 ಪ್ರತಿಶತ ಮತ್ತು ಸ್ವಂತ ಆದಾಯದ 27 ಪ್ರತಿಶತದಷ್ಟಿತ್ತು.

2. 2024–25ನೇ ವರ್ಷದಲ್ಲಿ, ರಾಜ್ಯದ ಆದಾಯವು ಹಿಂದಿನ ವರ್ಷಕ್ಕಿಂತ ಶೇಕಡಾ 10.63ರಷ್ಟು ಬೆಳೆದಿದ್ದರೂ, ಅದರ ಖರ್ಚು ಶೇಕಡಾ 14.99ರಷ್ಟು ಹೆಚ್ಚಾಗಿದೆ. ರಾಜಸ್ವ ವೆಚ್ಚದ ಬೆಳವಣಿಗೆಯು ಮುಖ್ಯವಾಗಿ ಖಾತರಿ ಯೋಜನೆಗಳಿಂದಾಗಿದೆ.

3. ರಾಜಸ್ವದ ವೃದ್ಧಿ ಸ್ಥಿರವಾಗಿದ್ದರೂ, ಖಾತರಿ ಯೋಜನೆಗಳ ಪುನರಾವರ್ತಿತ ವೆಚ್ಚಗಳನ್ನು ಒಳಗೊಳ್ಳಲು ಅದು ಸಾಕಾಗುವುದಿಲ್ಲ ಮತ್ತು ಆದ್ದರಿಂದ ರಾಜ್ಯವು ಖಾತರಿ ಯೋಜನೆಗಳಿಗೆ ಆರ್ಥಿಕವನ್ನು ಒದಗಿಸಲು ಸಾಲಗಳ ಮೇಲೆ ಅವಲಂಬಿಸಬೇಕಾಗಿದೆ.

4. ಸಹಾಯಧನಗಳಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯಿಂದಾಗಿ, ಪೌಷ್ಟಿಕಾಂಶ, ಸ್ಥಳೀಯ ಸಂಸ್ಥೆಗಳು/ನಿಗಮಗಳು/ನಗರಾಭಿವೃದ್ಧಿ ಪ್ರಾಧಿಕಾರಗಳು/ಕೊಳೆಗೇರಿ ಸುಧಾರಣಾ ಮಂಡಳಿಗಳಿಗೆ ಸಹಾಯ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸಹಾಯ ಇತ್ಯಾದಿಗಳಂತಹ ಕೆಲವು ನಡೆಯುತ್ತಿರುವ ಯೋಜನೆಗಳಿಗೆ ರಾಜ್ಯವು ತನ್ನ ಹಣವನ್ನು ಕಡಿತಗೊಳಿಸಬೇಕಾಯಿತು.

ಹಣಕಾಸಿನ ಸುಸ್ಥಿರತೆ:

5. ಆದಾಯ ಮತ್ತು ವೆಚ್ಚದ ನಡುವಿನ ಅಸಮತೋಲನವು ₹20,834 ಕೋಟಿಗಳ ಆದಾಯ ಕೊರತೆಗೆ ಕಾರಣವಾಯಿತು.

6. ಪರಿಣಾಮವಾಗಿ, ರಾಜ್ಯದ ವಿತ್ತೀಯ ಕೊರತೆಯು 2023–24ರಲ್ಲಿ ₹65,522 ಕೋಟಿಗಳಿಂದ 2024–25ರಲ್ಲಿ ₹85,030 ಕೋಟಿಗಳಿಗೆ ಏರಿತು.

7. ಖಾತರಿ ಯೋಜನೆಗಳು ಮತ್ತು ಅದರಿಂದ ಉಂಟಾಗುವ ಕೊರತೆಗಳಿಗೆ ಆರ್ಥಿಕಸಹಾಯ ಒದಗಿಸಲು, ರಾಜ್ಯವು ₹71,525.15 ಕೋಟಿಗಳ ನಿವ್ವಳ ಮಾರುಕಟ್ಟೆ ಸಾಲವನ್ನು ಪಡೆದುಕೊಂಡಿತು, ಇದು ಹಿಂದಿನ ವರ್ಷದ (₹63,000 ಕೋಟಿ) ನಿವ್ವಳ ಸಾಲಗಳಿಗಿಂತ ₹8,525.15 ಕೋಟಿ ಹೆಚ್ಚಾಗಿದೆ.

- **ಆರ್ಥಿಕ ಅಪಾಯ:**

8. ಹಿಂದಿನ ವರ್ಷಕ್ಕೆ ಹೋಲಿಸಿದರೆ 2024–25ರಲ್ಲಿ ರಾಜ್ಯದ ಒಟ್ಟಾರೆ ಬಂಡವಾಳ ವೆಚ್ಚ ₹5,786 ಕೋಟಿಗಳಷ್ಟು ಹೆಚ್ಚಾಗಿದ್ದರೂ, ಮೂಲಸೌಕರ್ಯಕ್ಕಾಗಿ ರಾಜ್ಯದಿಂದ ವಾಸ್ತವಿಕ ವೆಚ್ಚ/ನೆರವು ₹3,284 ಕೋಟಿಗಳಷ್ಟು ಹೆಚ್ಚಾಗಿದೆ (ಭಾರತ ಸರ್ಕಾರದಿಂದ ನೆರವು, ಹೂಡಿಕೆ ಮತ್ತು ಆಯವ್ಯಯೇತರ ಸಾಲವನ್ನು ಕಡಿಮೆ ಮಾಡಿದ ನಂತರ). ಸ್ಥೂಲ ಬಂಡವಾಳ ರಚನೆಯಲ್ಲಿನ ಈ ಕುಗ್ಗುವಿಕೆ ಭವಿಷ್ಯದ ಬೆಳವಣಿಗೆಯ ನಿರೀಕ್ಷೆಗಳಿಗೆ ಹಾನಿಕಾರಕವೆಂದು ಸಾಬೀತುಪಡಿಸಬಹುದು.

ಭವಿಷ್ಯದ ಹೊರೆ:

9. ಸಾಲದ ಹೆಚ್ಚಳವು ಋಣ ಸೇವೆ ಬಾಧ್ಯತೆಗಳಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತದೆ.

10. ಅಸಲು ಮತ್ತು ಬಡ್ಡಿ ಬಾಧ್ಯತೆಗಳ ಹೆಚ್ಚಿನ ಮರುಪಾವತಿಯು ಅಭಿವೃದ್ಧಿ/ಮೂಲಸೌಕರ್ಯ ಹೂಡಿಕೆ ಮತ್ತು ಇತರ ಕಲ್ಯಾಣ ಕ್ರಮಗಳಂತಹ ಬಂಡವಾಳ ವೆಚ್ಚವನ್ನು ಹಿಮ್ಮೆಟ್ಟಿಸಬಹುದು.

11. ಹೆಚ್ಚಿದ ಸಾಲಗಳು ಕೆ ಎಫ್ ಆರ್ ಎನಲ್ಲಿ ನಿರ್ದಿಷ್ಟಪಡಿಸಿದ ಆರ್ಥಿಕ ಗುರಿಗಳನ್ನು ಉಲ್ಲಂಘಿಸುವ ಅಪಾಯವನ್ನು ಹೊಂದಿರುತ್ತವೆ.

ಹೀಗಾಗಿ, ಅಸ್ತಿತ್ವದಲ್ಲಿರುವ ಸಹಾಯಧನಗಳು/ಆರ್ಥಿಕ ನೆರವನ್ನು ತರ್ಕಬದ್ಧಗೊಳಿಸದೆ ಅಥವಾ ಉತ್ತಮ ಗುರಿಯನ್ನು ನಿಗದಿಪಡಿಸದೆ ಪ್ರಸ್ತುತ ರೂಪದಲ್ಲಿ ಐದು ಖಾತರಿ ಯೋಜನೆಗಳ ಅನುಷ್ಠಾನವು ರಾಜ್ಯದ ಹಣಕಾಸಿನ ಮೇಲೆ ಒತ್ತಡವನ್ನುಂಟು ಮಾಡುತ್ತದೆ.

ಡಿ. ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ಹಣಕಾಸಿನ ನೆರವು

2015–16ರಿಂದ 2024–25ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಅನುದಾನದ ಮೂಲಕ ಒದಗಿಸಲಾದ ಸಹಾಯವನ್ನು ಕೋಷ್ಟಕ 1.21ರಲ್ಲಿ ಪ್ರಸ್ತುತಪಡಿಸಲಾಗಿದೆ.

ಕೋಷ್ಟಕ 1.21: ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು

(₹ ಕೋಟಿಗಳಲ್ಲಿ)

ಸಂಸ್ಥೆಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
(ಎ) ಸ್ಥಳೀಯ ಸಂಸ್ಥೆಗಳು										
ನಿಗಮಗಳು ಮತ್ತು ಪುರಸಭೆಗಳು	6,076.05	5,685.58	6,489.76	5,425.31	6,424.72	5,681.04	6,615.83	5,661.86	6,229.10	6,665.00
ನಿಗಮಗಳು ಮತ್ತು ಪುರಸಭೆಗಳಿಗೆ ಬಂಡವಾಳ ಆಸ್ತಿಗಳ ಸೃಷ್ಟಿಗೆ ಅನುದಾನ	–	–	–	–	–	636.04	1,070.00	956.59	963.41	1,314.84
ಜಿಲ್ಲಾ ಪರಿಷತ್‌ಗಳು ಮತ್ತು ಇತರ ಪಂಚಾಯತ್ ರಾಜ್ ಸಂಸ್ಥೆಗಳು	26,694.94	29,697.94	31,054.63	35,897.61	38,049.61	38,106.18	39,835.19	44,947.51	47,898.31	60,801.52
ಇತರ ಪಂಚಾಯತ್ ರಾಜ್ ಸಂಸ್ಥೆಗಳಿಗೆ	–	–	–	–	–	–	–	443.13	278.26	–

ಸಂಸ್ಥೆಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಬಂಡವಾಳ ಆಸ್ತಿಗಳ ಸೃಷ್ಟಿಗೆ ಅನುದಾನ										
ಒಟ್ಟು (ಎ)	**32,770.99**	**35,383.52**	**37,544.39**	**41,322.92**	**44,474.33**	**43,787.22**	**46,451.02**	**50,609.37**	**54,127.41**	**67,466.52**
(ಬಿ) ಇತರೆ										
ಶಿಕ್ಷಣ ಸಂಸ್ಥೆಗಳು (ಅನುದಾನಿತ ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಇತ್ಯಾದಿ)	1,406.50	1,449.75	1,293.70	1,081.29	1,405.90	1,140.43	1,134.75	1,217.01	1,865.62	1,888.35
ಅಭಿವೃದ್ಧಿ ಪ್ರಾಧಿಕಾರಗಳು	748.07	1,853.38	2,339.77	1,848.83	184.66	1,864.88	2,564.04	2,586.85	1,031.72	498.70
ಇತರ ಸಂಸ್ಥೆಗಳು	5,095.94	5,812.38	5,918.63	6,349.52	6,848.00	6,978.06	7,432.23	8,294.53	9,014.52	9,676,49
ಒಟ್ಟು (ಬಿ)	**7,250.51**	**9,115.51**	**9,552.10**	**9,279.64**	**8,438.56**	**9,983.37**	**11,131.02**	**12,098.39**	**11,911.86**	**12,063.54**
ಒಟ್ಟು (ಎ+ಬಿ)	**40,021.50**	**44,499.03**	**47,096.49**	**50,602.56**	**52,912.89**	**53,770.59**	**57,582.04**	**62,707.76**	**66,039.27**	**79,530.06**
ಬಂಡವಾಳ ಆಸ್ತಿಗಳ ಸೃಷ್ಟಿಗೆ ಒಟ್ಟು ಅನುದಾನ	**3,140.64**	**2,684.82**	**2,795.91**	**2,479.67**	2,724.70	1,862.66	1,815.24	2,722.46	1,272.33	1,353.31
ರಾಜಸ್ವ ವೆಚ್ಚ	1,17,028	1,31,921	1,42,482	1,64,300	1,74,258	1,76,054	2,09,428	2,15,584	2,42,614	2,78,987
ರಾಜಸ್ವ ವೆಚ್ಚದ ಶೇಕಡಾವಾರು ಸಹಾಯ	34.20	33.73	33.05	30.80	30.36	30.54	27.49	29.09	27.22	28.51

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

2015–25ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ ಮತ್ತು ಪ್ರಸಕ್ತ ವರ್ಷದಲ್ಲಿ ಈ ಹೆಚ್ಚಳವು ಹಿಂದಿನ ವರ್ಷಕ್ಕಿಂತ ಸುಮಾರು 20 ಪ್ರತಿಶತದಷ್ಟಿತ್ತು. ರಾಜಸ್ವ ವೆಚ್ಚದ ಶೇಕಡಾವಾರು ಪ್ರಮಾಣದಲ್ಲಿ, ಇದು ಬಹುತೇಕ ಸ್ಥಿರವಾಗಿತ್ತು ಮತ್ತು ಸರಾಸರಿ 30 ಪ್ರತಿಶತದಷ್ಟಿತ್ತು. 2024–25ರ ವರ್ಷದಲ್ಲಿ ಆಸ್ತಿ ಸೃಷ್ಟಿಗೆ ಅನುದಾನವು ಸುಮಾರು ಶೇಕಡಾ ಎರಡರಷ್ಟಿತ್ತು.

ಐದನೇ ರಾಜ್ಯ ಹಣಕಾಸು ಆಯೋಗವು ಮಾಡಿದ ಶಿಫಾರಸುಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಗಳನ್ನು ವಿಶ್ಲೇಷಿಸಲಾಗಿದೆ ಮತ್ತು ಗಮನಿಕೆಗಳನ್ನು ಕೆಳಗೆ ಚರ್ಚಿಸಲಾಗಿದೆ:

ಭಾರತದ ಸಂವಿಧಾನದ 243 (ಐ) ಮತ್ತು (ವೈ) ವಿಧಿಗಳನ್ನು 2015ರಲ್ಲಿ ತಿದ್ದುಪಡಿ ಮಾಡಲಾದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ವಿಭಾಗ 267 ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ 1976ರ ವಿಭಾಗ 503ಸಿ ಮತ್ತು ಕರ್ನಾಟಕ ಪುರಸಭೆ ಕಾಯ್ದೆ 1964ರ ವಿಭಾಗ 302ಬಿ ಗಳ ಅನ್ವಯ ಪಿ ಆರ್ ಐ ಗಳು ಮತ್ತು ಯು ಎಲ್ ಬಿ ಗಳು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಹಣಕಾಸು ಆಯೋಗ (ಎಸ್ ಎಫ್ ಸಿ)ವನ್ನು ರಚಿಸಲಾಗಿದೆ. ರಾಜ್ಯ ಹಣಕಾಸು ಆಯೋಗಗಳು ಪಿ ಆರ್ ಐಗಳು ಮತ್ತು ಯು ಎಲ್ ಬಿಗಳೆರಡರ ಹಣಕಾಸಿನ ಸಮಸ್ಯೆಗಳನ್ನು ನೋಡಿಕೊಳ್ಳಬೇಕಾಗಿದೆ. ಈ ಕಾರ್ಯವಿಧಾನವು ಅಸ್ತಿತ್ವಕ್ಕೆ ಬರುವ ಮೊದಲು, ರಾಜ್ಯ ಸರ್ಕಾರಗಳು ರಾಜ್ಯ ಕಾನೂನುಗಳು ಮತ್ತು ವಿವೇಚನೆಯ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಹಣವನ್ನು ವರ್ಗಾಯಿಸುತ್ತಿದ್ದವು. ರಾಜ್ಯದ ರಾಜ್ಯಪಾಲರು 73ನೇ (1992) ಸಂವಿಧಾನ ತಿದ್ದುಪಡಿಯಿಂದ ಒಂದು ವರ್ಷದೊಳಗೆ 243(ಐ)ನೇ ವಿಧಿಯ ಅಡಿಯಲ್ಲಿ ಎಸ್ ಎಫ್ ಸಿ ಅನ್ನು ರಚಿಸಬೇಕು ಮತ್ತು ನಂತರ ಪ್ರತಿ ಐದನೇ ವರ್ಷದ ಅವಧಿ ಮುಗಿದ ನಂತರ ಪಂಚಾಯತ್‌ಗಳ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಲು ಎಸ್ ಎಫ್ ಸಿ ಅನ್ನು ರಚಿಸಬೇಕು ಮತ್ತು ಅದೇ ರೀತಿ, 74ನೇ ತಿದ್ದುಪಡಿಯ 243 (ವೈ)ನೇ ವಿಧಿಯ ಅಡಿಯಲ್ಲಿ ರಚಿಸಲಾದ ಎಸ್ ಎಫ್ ಸಿ ಸಹ ಪುರಸಭೆಗಳ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸುತ್ತದೆ ಮತ್ತು ರಾಜ್ಯಪಾಲರಿಗೆ ಶಿಫಾರಸುಗಳನ್ನು ಮಾಡುತ್ತದೆ.

ಕರ್ನಾಟಕದ ರಾಜ್ಯಪಾಲರು ಇಲ್ಲಿಯವರೆಗೆ ಐದು ಎಸ್ ಎಫ್ ಸಿಗಳನ್ನು ನೇಮಿಸಿದ್ದಾರೆ. ಎಸ್ ಎಫ್ ಸಿಗಳ ವಿವರಗಳನ್ನು **ಕೋಷ್ಟಕ 1.22**ರಲ್ಲಿ ನೀಡಲಾಗಿದೆ.

ಕೋಷ್ಟಕ 1.22 ರಾಜ್ಯದಲ್ಲಿ ರಚನೆಯಾದ ವಿವಿಧ ಹಣಕಾಸು ಆಯೋಗಗಳ ವಿವರಗಳು

ವಿವರಗಳು	ಮೊದಲನೆ ಎಸ್ ಎಫ್ ಸಿ	ಎರಡನೆ ಎಸ್ ಎಫ್ ಸಿ	ಮೂರನೆ ಎಸ್ ಎಫ್ ಸಿ	ನಾಲ್ಕನೆ ಎಸ್ ಎಫ್ ಸಿ	ಐದನೆ ಎಸ್ ಎಫ್ ಸಿ
ರಚನೆಯ ದಿನಾಂಕ	10 ಜೂನ್ 1994	25 ಅಕ್ಟೋಬರ್ 2000	28 ಆಗಸ್ಟ್ 2006	21 ಡಿಸಂಬರ್ 2015	11 ಡಿಸಂಬರ್ 2023
ವರದಿ ಸಲ್ಲಿಸಿದ ದಿನಾಂಕ	ಆಗಸ್ಟ್ 1996	ಡಿಸಂಬರ್ 2002	ಡಿಸಂಬರ್ 2008	ಮೇ 2018	19 ಫೆಬ್ರವರಿ 2024
ಜಾರಿ ಅವಧಿ	1997–98ರಿಂದ 2001–02	2006–07ರಿಂದ 2010–11	2011–12ರಿಂದ 2015–16	2018–19ರಿಂದ 2022–23 (2023–24ರ ವರೆಗೆ ಮುಂದುವರೆದಿದೆ)	2024–25 (ಮೊದಲ ವರದಿ)

ನಾಲ್ಕನೇ ಮತ್ತು ಐದನೇ ಎಸ್ ಎಫ್ ಸಿ ರಚನೆಯಲ್ಲಿ ವಿಳಂಬವಾದ ಕಾರಣ, ಮೂರನೇ ಎಸ್ ಎಫ್ ಸಿ ಅವಧಿಯನ್ನು 2017–18 ರವರೆಗೆ ಮತ್ತು ನಾಲ್ಕನೇ ಅವಧಿಯನ್ನು 2023–24 ರವರೆಗೆ ವಿಸ್ತರಿಸಲಾಯಿತು. ಸ್ಥಳೀಯ ಸಂಸ್ಥೆಗಳ ವಿಕೇಂದ್ರೀಕರಣಕ್ಕಾಗಿ ರಾಜ್ಯ ಸರ್ಕಾರದ ಐದನೇ ಹಣಕಾಸು ಆಯೋಗದ ಪ್ರಮುಖ ಶಿಫಾರಸುಗಳು:

- ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ (ಎನ್ ಎಲ್ ಎನ್ ಒ ಆರ್ ಆರ್) ಶೇಕಡಾ 49 ರಷ್ಟು ಹಣಕಾಸಿನ ವರ್ಗಾವಣೆಯನ್ನು ಶಿಫಾರಸು ಮಾಡಲಾಗಿದೆ, ಇದರಲ್ಲಿ ಪಿ ಆರ್ ಐಗಳ ಪಾಲು ಶೇಕಡಾ 35 ಆಗಿರಬೇಕು, ಯು ಎಲ್ ಬಿಗಳ ಪಾಲು ಶೇಕಡಾ 13 ಆಗಿರಬೇಕು ಮತ್ತು ಬಿಬಿಎಂಪಿಗೆ ಹೆಚ್ಚುವರಿ ಶೇಕಡಾ 1 ಆಗಿರಬೇಕು.
- ಸ್ಥಳೀಯ ಸಂಸ್ಥೆಗಳಿಗೆ ನಿಬಂಧ ಮತ್ತು ಅನಿರ್ಬಂಧ ಅನುದಾನಗಳ ಅನುಪಾತ ಕ್ರಮವಾಗಿ 50:50 ಆಗಿರಬೇಕು.
- ಕರಾವಳಿ ಮತ್ತು ಮಲೆನಾಡು ಜಿಲ್ಲೆಯ ಎಲ್ಲಾ ಪಿ ಆರ್ ಐಗಳು ಮತ್ತು ಯು ಎಲ್ ಬಿಗಳಿಗೆ ಪ್ರತಿ ವರ್ಷ ಎಸ್ ಎಫ್ ಸಿ ಅನುದಾನದ ಅಡಿಯಲ್ಲಿ ಶೇಕಡಾ ಒಂದರಷ್ಟು ಹೆಚ್ಚುವರಿ ಅನುದಾನವನ್ನು ನೀಡಬೇಕು
- ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳಿಗೆ ಅನಿರ್ಬಂಧ ಅನುದಾನವು ಕ್ರಮವಾಗಿ ಕನಿಷ್ಠ ₹500 ಲಕ್ಷ, ₹300 ಲಕ್ಷ ಮತ್ತು ₹20 ಲಕ್ಷಗಳಾಗಿರಬೇಕು ಮತ್ತು ಗರಿಷ್ಠ ₹1000 ಲಕ್ಷ, ₹400 ಲಕ್ಷ ಮತ್ತು ₹60 ಲಕ್ಷಗಳಾಗಿರಬೇಕು.
- ಜಿಲ್ಲಾ ಪಂಚಾಯತ್‌ಗಳ ನಡುವಿನ ಹಂಚಿಕೆಯು ನಾಲ್ಕನೇ ಎಸ್ ಎಫ್ ಸಿನಲ್ಲಿ ಶಿಫಾರಸು ಮಾಡಿದ 38.61:53.64:7.76ರ ಅನುಪಾತದಲ್ಲಿರಬೇಕು.

ರಾಜ್ಯ ಸರ್ಕಾರವು ಐದನೇ ಎಸ್ ಎಫ್ ಸಿ ಮಾಡಿದ ಮೇಲಿನ ಶಿಫಾರಸುಗಳನ್ನು ವಿಶ್ಲೇಷಿಸಿ, ಅದರ ಅನುಷ್ಠಾನಕ್ಕೆ ಈ ಕೆಳಗಿನ ಬದಲಾವಣೆಗಳೊಂದಿಗೆ ಆದೇಶಿಸಿತು (ಮಾರ್ಚ್ 2024):

- ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾಗಬೇಕಾದ ಒಟ್ಟು ನಿಧಿಗಳು ಎನ್ ಎಲ್ ಎನ್ ಒ ಆರ್ ಆರ್ ನ ಶೇಕಡಾ 48 ಆಗಿರಬೇಕು, ಅದರಲ್ಲಿ ಶೇಕಡಾ 35ರಷ್ಟು ಪಿ ಆರ್ ಐ ಎಸ್ಗೆ ಮತ್ತು ಶೇಕಡಾ 13ರಷ್ಟು ಬಿ ಬಿ ಎಮ್ ಪಿ ಸೇರಿದಂತೆ ಯು ಎಲ್ ಬಿ ಗಳಿಗೆ ಹಂಚಿಕೆಯಾಗಬೇಕು.
- ಜಿಲ್ಲಾ ಪಂಚಾಯತ್‌ಗಳು, ತಾಲೂಕು ಪಂಚಾಯತ್‌ಗಳು ಮತ್ತು ಗ್ರಾಮ ಪಂಚಾಯತ್‌ಗಳಿಗೆ ಅನಿರ್ಬಂಧ ಅನುದಾನದ ಕನಿಷ್ಠ ಹಂಚಿಕೆ ₹400 ಲಕ್ಷ, ₹200 ಲಕ್ಷ ಮತ್ತು ₹12 ಲಕ್ಷಗಳಾಗಿ ಮುಂದುವರಿಯುತ್ತದೆ, ಗರಿಷ್ಠ ಹಂಚಿಕೆ ₹800 ಲಕ್ಷ, ₹300 ಲಕ್ಷ ಮತ್ತು ₹35 ಲಕ್ಷ ಆಗಿರುತ್ತದೆ.
- ಐದನೇ ಎಸ್ ಎಫ್ ಸಿ ಶಿಫಾರಸು ಮಾಡಿದಂತೆ ನಿಧಿಗಳ ವಿಕೇಂದ್ರೀಕರಣವನ್ನು ರಾಜ್ಯ ವಲಯದಿಂದ ಸ್ಥಳೀಯ ಸಂಸ್ಥೆಗಳ ವಲಯಕ್ಕೆ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಬದಲಾಯಿಸುವ ಮೂಲಕ ಹೊಂದಿಸಲಾಗುತ್ತದೆ.
- ಸ್ಥಳೀಯ ಸಂಸ್ಥೆಗಳಿಗೆ ಅನಿರ್ಬಂಧ ಮತ್ತು ನಿರ್ಬಂಧ ಅನುದಾನಗಳ ಅನುಪಾತವು ಪ್ರಸ್ತುತ ಹಂಚಿಕೆಯಲ್ಲಿ ಅಳವಡಿಸಿಕೊಂಡಂತೆಯೇ ಮುಂದುವರಿಯುತ್ತದೆ.

- ಸ್ಥಳೀಯ ಸಂಸ್ಥೆಗಳಿಂದ ಜಾರಿಗೆ ತರಲಾಗುತ್ತಿರುವ ಸಿಎಸ್‌ಎಸ್ ಮತ್ತು ಇತರ ರಾಜ್ಯ ಯೋಜನೆಗಳಿಗೆ ರಾಜ್ಯದ ಪಾಲನ್ನು ಹೊಂದಿಸುವ ಮತ್ತು ಪ್ಯಾರಾಸ್ಟೇಟಲ್‌ಗಳಿಗೆ ಆಯವ್ಯಯ ಹಂಚಿಕೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆಯಾಗಿ ಮುಂದುವರಿಸಲಾಗುತ್ತದೆ.

1.2.4.2 ಬಂಡವಾಳ ವೆಚ್ಚ

ಮೂಲಭೂತವಾಗಿ ರಸ್ತೆಗಳು, ಕಟ್ಟಡಗಳು ಇತ್ಯಾದಿಗಳಂತಹ ಸ್ಥಿರ ಮೂಲಸೌಕರ್ಯ ಸ್ವತ್ತುಗಳ ಸೃಷ್ಟಿಗೆ ಆಗುವ ವೆಚ್ಚವನ್ನು ಬಂಡವಾಳ ವೆಚ್ಚ ಎಂದು ವರ್ಗೀಕರಿಸಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಬಂಡವಾಳ ವೆಚ್ಚವನ್ನು ಆಯವ್ಯಯ ಬೆಂಬಲ ಮತ್ತು ಹೆಚ್ಚುವರಿ ಆಯವ್ಯಯ ಸಂಪನ್ಮೂಲಗಳು/ಆಯವ್ಯಯೇತರ ಸಾಲಗಳಿಂದ ಪೂರೈಸಲಾಗುತ್ತಿದೆ. ಇದು ರಾಜ್ಯ ಸರ್ಕಾರವು ಕಂಪನಿಗಳು/ ನಿಗಮಗಳಲ್ಲಿ ಮಾಡಿದ ಹೂಡಿಕೆಗಳನ್ನು ಸಹ ಒಳಗೊಂಡಿದೆ. ಕಳೆದ ಐದು ವರ್ಷಗಳಲ್ಲಿ, ಅಂದರೆ 2020–25ರಲ್ಲಿ ರಾಜ್ಯದಲ್ಲಿ ಬಂಡವಾಳ ವೆಚ್ಚದ ಪ್ರವೃತ್ತಿಗಳನ್ನು **ನಕ್ಷೆ 1.23**ರಲ್ಲಿ ನೀಡಲಾಗಿದೆ.

ನಕ್ಷೆ 1.23: ರಾಜ್ಯದಲ್ಲಿ ಬಂಡವಾಳ ವೆಚ್ಚ



ಆಕರ: ಆಯಾ ವರ್ಷಗಳ ಹಣಕಾಸು ಖಾತೆಗಳು ಮತ್ತು ವಾರ್ಷಿಕ ಹಣಕಾಸು ಹೇಳಿಕೆಗಳು

2015–25ರ ಅವಧಿಯಲ್ಲಿ ಬಂಡವಾಳ ವೆಚ್ಚವು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ, 2023–24ರಲ್ಲಿ ಇಳಿಕೆ ಕಂಡುಬಂದಿದೆ. ಸ್ಥಿರವಾದ ಹೆಚ್ಚಳವು ಮೂಲಸೌಕರ್ಯದಲ್ಲಿ ನಿರಂತರ ಹೂಡಿಕೆಯನ್ನು ಸೂಚಿಸುತ್ತದೆ. 2022–23ರ ಅವಧಿಯಲ್ಲಿ ರಾಜ್ಯವು ಆದಾಯದ ಹೆಚ್ಚುವರಿಯನ್ನು ಹೊಂದಿತ್ತು ಮತ್ತು ಹೆಚ್ಚುವರಿಯನ್ನು ಬಂಡವಾಳ ವೆಚ್ಚದ ಮೂಲಕ ಅಭಿವೃದ್ಧಿಗೆ ಬಳಸಿಕೊಂಡಿತು. ಆದ್ದರಿಂದ ಬಂಡವಾಳ ವೆಚ್ಚದ ಕಡೆಗೆ ಹೆಚ್ಚಳ ಕಂಡುಬಂದಿದೆ. ಸಾಮಾನ್ಯವಾಗಿ, ಬಂಡವಾಳ ವೆಚ್ಚವನ್ನು ಮತ್ತು ಸಾಲಗಳ ಮೂಲಕ ಪಡೆದ ಹಣ ದಿಂದ ಭರಿಸಲಾಗುತ್ತದೆ. ಆದಾಗ್ಯೂ, 2023–24ರ ಅವಧಿಯಲ್ಲಿ, ಹೆಚ್ಚಿನ ಸಾಲಗಳಿದ್ದರೂ ಸಹ, ರಾಜ್ಯವು ಕಂಡ ರಾಜಸ್ವ ಕೊರತೆಯನ್ನು ನಿಭಾಯಿಸಲು ಸಾಲಗಳನ್ನು ಬಳಸಿಕೊಂಡಿದ್ದರಿಂದ ಬಂಡವಾಳ ವೆಚ್ಚ ಕಡಿಮೆಯಾಯಿತು. ಜಿ ಎಸ್ ಡಿ ಪಿ ಗೆ ಶೇಕಡಾವಾರು ಬಂಡವಾಳ ವೆಚ್ಚವು 2020–21ರಲ್ಲಿ ಕಡಿದಾದ ಗರಿಷ್ಠ ಮತ್ತು 2022–23ರಲ್ಲಿ ಸ್ವಲ್ಪ ಬೆಳವಣಿಗೆಯೊಂದಿಗೆ ಅಂತರ–ವರ್ಷ ವ್ಯತ್ಯಾಸವನ್ನು ತೋರಿಸಿದೆ. ಸಾಂಕ್ರಾಮಿಕ ಅವಧಿಯಲ್ಲಿ ಆರೋಗ್ಯ ಮೂಲಸೌಕರ್ಯಕ್ಕೆ ಹೆಚ್ಚಿನ ಖರ್ಚು ಮತ್ತು ಜಿ ಎಸ್ ಡಿ ಪಿ ಯಲ್ಲಿ ಕಡಿಮೆ ಬೆಳವಣಿಗೆಯ ದರದಿಂದಾಗಿ 2020–21ರಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ಕಳೆದ ಎರಡು ವರ್ಷಗಳಲ್ಲಿ ಜಿ ಎಸ್ ಡಿ ಪಿ ಯ ಶೇಕಡಾವಾರು ಪ್ರಮಾಣದಲ್ಲಿ ಬಂಡವಾಳ ವೆಚ್ಚದಲ್ಲಿನ ಕುಸಿತವು ಹೆಚ್ಚುತ್ತಿರುವ ಬದ್ಧ ವೆಚ್ಚ ಮತ್ತು ಸಹಾಯಧನಗಳಿಂದ ಉಂಟಾಗುವ ಒತ್ತಡವನ್ನು ಸೂಚಿಸುತ್ತದೆ.

ಬಂಡವಾಳ ವೆಚ್ಚವು 2024–25ರಲ್ಲಿ ಕೇಂದ್ರ ಸರ್ಕಾರದಿಂದ ಬಂಡವಾಳ ವೆಚ್ಚಕ್ಕಾಗಿ ಬಡ್ಡಿರಹಿತ ಸಾಲವಾಗಿ ಪಡೆದ ₹5,296 ಕೋಟಿಗಳನ್ನು ಒಳಗೊಂಡಿದೆ. 2020–25ರ ಅವಧಿಯಲ್ಲಿ, ರಾಜ್ಯವು ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದಿಂದ ₹13,331 ಕೋಟಿಗಳನ್ನು ಪಡೆದಿದೆ. ಕೇಂದ್ರ ನೆರವಿನ ಹೊರತಾಗಿಯೂ, ಜಿ ಎಸ್ ಡಿ ಪಿಗೆ ಬಂಡವಾಳ ವೆಚ್ಚದ ಅನುಪಾತವು ಸುಮಾರು ಎರಡು ಪ್ರತಿಶತದಷ್ಟು ಮುಂದುವರೆದಿದೆ.

ಎ. ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಂತೆ ವಲಯವಾರು ಬಂಡವಾಳ ವೆಚ್ಚ

ಬಂಡವಾಳ ವೆಚ್ಚದ ವಲಯವಾರು ಸಂಯೋಜನೆಯನ್ನು **ಕೋಷ್ಟಕ 1.22** (ಎ)ರಲ್ಲಿ ನೀಡಲಾಗಿದೆ. ವಿವರವಾದ ವಲಯವಾರು ವೆಚ್ಚವನ್ನು **ಅನುಬಂಧ 1.2**ರಲ್ಲಿ ನೀಡಲಾಗಿದೆ.

ಕೋಷ್ಟಕ 1.22(ಎ): ವಲಯವಾರು ಬಂಡವಾಳ ವೆಚ್ಚ

(₹ ಕೋಟಿಗಳಲ್ಲಿ)

ಪ್ರಮಿತಿಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಸಾಮಾನ್ಯ ಸೇವೆಗಳು	991	1,060	977	827	779	1,206	940	1,652	2,972	2,781
ಸಾಮಾಜಿಕ ಸೇವೆಗಳು	5,314	6,897	8,677	9,794	9,192	11,547	13,228	12,477	12,026	17,466
ಆರ್ಥಿಕ ಸೇವೆಗಳು	14,408	20,193	21,013	24,038	25,559	32,653	33,706	43,220	37,122	37,658
ಸಾಲಗಳು ಮತ್ತು ಮುಂಗಡಗಳು	657	1,934	5,093	4,487	4,069	2,669	4,209	3,250	4,473	6,631

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ನಕ್ಷೆ 1.24: ಬಂಡವಾಳ ವೆಚ್ಚದಲ್ಲಿ ವಿವಿಧ ವಲಯಗಳ ಸಾಪೇಕ್ಷ ಪಾಲು



ಆಕರ: ಆಯಾವರ್ಷಗಳ ಹಣಕಾಸು ಲೆಕ್ಕಗಳು

2015–25ರ ಸಂಪೂರ್ಣ ಅವಧಿಯಲ್ಲಿ ಆರ್ಥಿಕ ವಲಯವು ಬಂಡವಾಳ ವೆಚ್ಚದಲ್ಲಿ ಪ್ರಮುಖ ಅಂಶವಾಗಿತ್ತು. ಇದು ರಾಜ್ಯದ ಬಂಡವಾಳ ವೆಚ್ಚವು ಹೆಚ್ಚಾಗಿ ಬೆಳವಣಿಗೆ ಆಧಾರಿತವಾಗಿತ್ತು ಎಂದು ಸೂಚಿಸುತ್ತದೆ. 2024–25ರಲ್ಲಿ, ಆರ್ಥಿಕ ವಲಯದ ಅಡಿಯಲ್ಲಿ ಬಂಡವಾಳ ವೆಚ್ಚವು ಪ್ರಾಥಮಿಕವಾಗಿ ನೀರಾವರಿ (₹19,000 ಕೋಟಿ), ಸಾರಿಗೆ (₹8,236 ಕೋಟಿ) ಮತ್ತು ವಿಶೇಷ ಪ್ರದೇಶ ಕಾರ್ಯಕ್ರಮ (₹3,600 ಕೋಟಿ) ಗಳು ಮೇಲೆ ಇತ್ತು. ನೀರಾವರಿಗೆ ಗಮನಾರ್ಹ ಹಣ ದೊರೆತಿದ್ದರೂ, ಅನೇಕ ಕಾಮಗಾರಿಗಳು ಅಪೂರ್ಣವಾಗಿಯೇ ಉಳಿದಿವೆ (1903 ಕಾಮಗಾರಿಗಳು) ಹೀಗಾಗಿ ವೆಚ್ಚದ ಗುಣಮಟ್ಟದ ಮೇಲೆ ಪರಿಣಾಮ ಬೀರಿತು (ವಿವರಗಳಿಗೆ ಪ್ಯಾರಾಗ್ರಾಫ್ 1.6.2(ಬಿ) ನೋಡಿ). ಸಾಮಾಜಿಕ ಸೇವೆಗಳಲ್ಲಿನ ಕ್ರಮೇಣ ಹೆಚ್ಚಳವು ಶಿಕ್ಷಣ, ಆರೋಗ್ಯ, ವಸತಿ ಮತ್ತು ಇತರ ಸಾಮಾಜಿಕ ಕಲ್ಯಾಣ ಮೂಲಸೌಕರ್ಯಗಳ ಕಡೆಗೆ ರಾಜ್ಯದ ಗಮನವು ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ.

ಬಿ. ಕಂಪನಿಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳಲ್ಲಿನ ಹೂಡಿಕೆಗಳ ಗುಣಮಟ್ಟ

31 ಮಾರ್ಚ್ 2025ರಲ್ಲಿದ್ದಂತೆ , 159 ಕಂಪನಿಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರದ ಹೂಡಿಕೆ ₹74,325 ಕೋಟಿಗಳಷ್ಟಿದ್ದು, ಇದರಲ್ಲಿ 100 ಸರ್ಕಾರಿ ಕಂಪನಿಗಳು (₹62,968 ಕೋಟಿ), ಸಹಕಾರ ಸಂಘಗಳು (₹416 ಕೋಟಿ), ಒಂಬತ್ತು ಶಾಸನಬದ್ಧ ನಿಗಮಗಳು (₹4,490 ಕೋಟಿ), 44 ಇತರ ಜಂಟಿ ಸ್ಟಾಕ್ ಕಂಪನಿಗಳು ಮತ್ತು ಪಾಲುದಾರಿಕೆಗಳು (₹6,430 ಕೋಟಿ) ಮತ್ತು ಆರು ಗ್ರಾಮೀಣ ಬ್ಯಾಂಕುಗಳು (₹21 ಕೋಟಿ) ಸೇರಿವೆ.

ಕಂಪನಿಗಳು, ನಿಗಮಗಳು ಮತ್ತು ಸಹಕಾರಿ ಬ್ಯಾಂಕುಗಳು ಮತ್ತು ಸಂಘಗಳಲ್ಲಿ ವರ್ಷದ ಕೊನೆಯಲ್ಲಿ ಹೂಡಿಕೆಯ ಪ್ರವೃತ್ತಿ ಮತ್ತು ಈ ಹೂಡಿಕೆಯ ಮೇಲಿನ ಪ್ರತಿಫಲವನ್ನು **ನಕ್ಷೆ 1.25**ರಲ್ಲಿ ಚಿತ್ರಿಸಲಾಗಿದೆ. ಸರ್ಕಾರಿ

ಸಾಲದ ಮೇಲಿನ ಸರಾಸರಿ ಬಡ್ಡಿದರಕ್ಕೆ ಹೋಲಿಸಿದರೆ ಹೂಡಿಕೆಯ ಮೇಲಿನ ಪ್ರತಿಫಲದ ದರವನ್ನು **ನಕ್ಷೆ 1.26**ರಲ್ಲಿ ಚಿತ್ರಿಸಲಾಗಿದೆ.



ಆಕರ: ಆಯಾವರ್ಷಗಳ ಹಣಕಾಸು ಲೆಕ್ಕಗಳು



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

2015–25ರ ಅವಧಿಯಲ್ಲಿ ಹೂಡಿಕೆಗಳು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿವೆ. ಆದಾಗ್ಯೂ, ಲಾಭಾಂಶದ ರೂಪದಲ್ಲಿ ಹೂಡಿಕೆಯ ಮೇಲಿನ ಲಾಭವು ಪ್ರಸಕ್ತ ವರ್ಷವನ್ನು ಹೊರತುಪಡಿಸಿ ಶೇಕಡಾ ಒಂದಕ್ಕಿಂತ ಕಡಿಮೆಯಾಗಿದ್ದು, ಶೇಕಡಾ 0.11ರಿಂದ ಶೇಕಡಾ 0.58ರ ವರೆಗೆ ಪ್ರಸಕ್ತ ವರ್ಷದಲ್ಲಿ ಇದು ಶೇಕಡಾ 1.31ಕ್ಕೆ ಏರಿತು. ಪ್ರಸಕ್ತ ವರ್ಷದಲ್ಲಿ ಹೆಚ್ಚಳಕ್ಕೆ ಕಾರಣವನ್ನು ಮುಂದಿನ ಕಂಡಿಕೆಯಲ್ಲಿ ಚರ್ಚಿಸಲಾಗಿದೆ. 2015–25ರ ಅವಧಿಯಲ್ಲಿ ರಾಜ್ಯ ಸರ್ಕಾರವು ತನ್ನ ಸಾಲಗಳ ಮೇಲೆ ಪಾವತಿಸಿದ ಸರಾಸರಿ ಬಡ್ಡಿದರ ಶೇಕಡಾ 6.82ರಿಂದ ಶೇಕಡಾ 8.01ರ ವರೆಗೆ ಇತ್ತು. ಹೂಡಿಕೆಗಳ ಮೇಲಿನ ಈ ಲಾಭವು ಸರ್ಕಾರಿ ಸಾಲಗಳ ಸರಾಸರಿ ದರಕ್ಕಿಂತ ತೀರಾ ಕಡಿಮೆಯಾಗಿದೆ.

ರಾಜ್ಯದ ಲಾಭಾಂಶ ನೀತಿ

ರಾಜ್ಯವು ಲಾಭಾಂಶ ನೀತಿಯನ್ನು ಹೊಂದಿಲ್ಲದಿದ್ದರೂ, ಅದು ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳು (ಎಸ್ ಪಿ ಎಸ್ ಇ ಗಳು) ತೆರಿಗೆಯ ನಂತರ ಘೋಷಿಸಲಾದ ಲಾಭದ ಶೇಕಡಾ 30ಕ್ಕಿಂತ ಕಡಿಮೆಯಿಲ್ಲದ ಲಾಭಾಂಶವನ್ನು ಪಾವತಿಸಬೇಕೆಂದು ನಿಗದಿಪಡಿಸಿ ಸುತ್ತೋಲೆಯನ್ನು ಹೊರಡಿಸಿದೆ (ಅಕ್ಟೋಬರ್ 2022). ಇದರ ಜೊತೆಗೆ, ಮಾರ್ಚ್ 31, 2024ರ ಹೊತ್ತಿಗೆ ಉಳಿತಾಯದ ಶೇಕಡಾ 30ರಷ್ಟು ಹಣವನ್ನು ಬ್ಯಾಂಕ್ ಖಾತೆಗಳಲ್ಲಿ 2023–24ರ ವಿಶೇಷ ಲಾಭಾಂಶ ಎಂದು ಕರೆಯಲ್ಪಡುವ ಮಧ್ಯಂತರ ಲಾಭಾಂಶವಾಗಿ ಜಮಾ ಮಾಡಲು ಸುತ್ತೋಲೆ (ಅಕ್ಟೋಬರ್ 2024) ಹೊರಡಿಸಿದೆ. ಈ ಆದೇಶದ ಕಾರಣದಿಂದಾಗಿ, 2024–25ರಲ್ಲಿ ಪಡೆದ ಲಾಭಾಂಶವು ಹಿಂದಿನ ವರ್ಷಕ್ಕಿಂತ ಶೇಕಡಾ 236ರಷ್ಟು ಹೆಚ್ಚಾಗಿದೆ.

ಲಾಭಾಂಶವನ್ನು ವಸೂಲಿ ಮಾಡದ ಕಾರಣ ತ್ಯಜಿಸಿದ ಆದಾಯ

143 ಕಾರ್ಯನಿರ್ವಹಿಸುತ್ತಿರುವ ಎಸ್ ಪಿ ಎಸ್ ಇಗಳಲ್ಲಿ, 36 ಎಸ್ ಪಿ ಎಸ್ ಗಳು 2022–23 ಅಥವಾ 2023–24ರಲ್ಲಿ ಲಾಭ ಗಳಿಸಿವೆ ಮತ್ತು 36 ಎಸ್ ಪಿ ಎಸ್ ಇಗಳಲ್ಲಿ 14 ಎಸ್ ಪಿ ಎಸ್ ಇಗಳು 2024–25ರಲ್ಲಿ ಸರ್ಕಾರಕ್ಕೆ ಲಾಭಾಂಶವನ್ನು ಕಳುಹಿಸಿವೆ. ಇದಲ್ಲದೆ, ಏಳು ಎಸ್ ಪಿ ಎಸ್ ಇಗಳು ಲಾಭ ಗಳಿಸಿದ್ದರೂ, ಅವು ಸಂಚಿತ ನಷ್ಟಗಳನ್ನು ಹೊಂದಿದ್ದವು ಮತ್ತು ಆ ಮೂಲಕ ಲಾಭಾಂಶವನ್ನು ಕಳುಹಿಸಲಿಲ್ಲ. 143 ಕಾರ್ಯನಿರತ ಸಂಸ್ಥೆಗಳಲ್ಲಿ 16 ನಿಷ್ಕ್ರಿಯಗೊಂಡಿವೆ ಮತ್ತು ಅವುಗಳಲ್ಲಿ ಹೂಡಿಕೆ ಮಾಡಿದ ₹67.63 ಕೋಟಿಗಳು ಮರುಪಾವತಿಯಾಗದೆ ಉಳಿದಿವೆ.

ಸಿ. ಸಾಲಗಳು ಮತ್ತು ಮುಂಗಡಗಳು ರಾಜ್ಯ ಸರ್ಕಾರ

ಸಹಕಾರಿ ಸಂಘಗಳು, ನಿಗಮಗಳು ಮತ್ತು ಕಂಪನಿಗಳಲ್ಲಿನ ಹೂಡಿಕೆಗಳ ಜೊತೆಗೆ, ರಾಜ್ಯ ಸರ್ಕಾರವು ಅನೇಕ *ಸಂಘ*ಗಳು/ಸಂಸ್ಥೆಗಳಿಗೆ ಸಾಲಗಳು ಮತ್ತು ಮುಂಗಡಗಳನ್ನು ಸಹ ಒದಗಿಸುತ್ತಿದೆ. ಮಾರ್ಚ್ 31, 2025ರಂತೆ ಬಾಕಿ ಇರುವ ಸಾಲಗಳು ಮತ್ತು ಮುಂಗಡಗಳ ಸ್ಥಿತಿಯನ್ನು ಮತ್ತು ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರವು ತನ್ನ ಸಾಲಗಳ ಮೇಲಿನ ಬಡ್ಡಿ ಪಾವತಿಗಳಿಗೆ ಹೋಲಿಸಿದರೆ ಬಡ್ಡಿ ಸ್ವೀಕೃತಿಗಳನ್ನು **ಕೋಷ್ಟಕ 1.23** ಪ್ರಸ್ತುತಪಡಿಸುತ್ತದೆ.

ಕೋಷ್ಟಕ 1.23: 2015–25ರ ಅವಧಿಯಲ್ಲಿ ವಿತರಿಸಲಾದ ಮತ್ತು ಮರುಪಡೆಯಲಾದ ಸಾಲಗಳ ಪ್ರಮಾಣ

(₹ ಕೋಟಿಗಳಲ್ಲಿ)

ವಿವರಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಬಾಕಿ ಇರುವ ಸಾಲಗಳ ಆರಂಭಿಕ ಬಾಕಿ	13,216	13,813	15,578	20,525	24,981	28,847	31,246	35,328	38,100	42,268
ವರ್ಷದಲ್ಲಿ ಮುಂಗಡವಾಗಿ ನೀಡಿದ ಮೊತ್ತ	657	1,934	5,093	4,487	4,069	2,669	4,209	3,250	4,473	6,631
ವರ್ಷದಲ್ಲಿ ಮರುಪಡೆಯಲಾದ ಮೊತ್ತ	60	100	137	31	203	270	127	478	306	322
ಬಾಕಿ ಇರುವ ಸಾಲಗಳ ಮುಕ್ತಾಯ ಬಾಕಿ	13,813	15,647	20,534	24,981	28,847	31,246	35,328	38,100	42,267	48,577
ನಿವ್ವಳ ಸೇರ್ಪಡೆ	597	1,834	4,956	4,456	3,866	2,399	4,082	2,772	4,167	6,309
ಪಡೆದ ಬಡ್ಡಿ	264	145	99	108	357	278	309	7	479	1,143
ಸರ್ಕಾರವು ನೀಡಿದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ	1.91	0.93	0.48	0.43	1.24	0.89	0.87	0.02	1.13	2.35
ಸರ್ಕಾರಿ ಸಾಲಗಳ ಮೇಲಿನ ಸರಾಸರಿ ಬಡ್ಡಿ ದರ (ಶೇಕಡಾ)	8.01	7.70	7.71	7.45	7.51	7.29	6.93	7.08	6.82	6.93
ಸ್ವೀಕರಿಸಿದ ಬಡ್ಡಿ ದರ ಮತ್ತು ಪಾವತಿಸಿದ ಬಡ್ಡಿ (ಶೇಕಡಾ) ನಡುವಿನ ವ್ಯತ್ಯಾಸ	(–)6.1	(–)6.77	(–)7.23	(–)7.02	(–)6.27	(–)6.4	(–)6.06	(–)7.06	(–)5.69	(–)4.58

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

2015–2025ರ ಸಂಪೂರ್ಣ ಅವಧಿಯಲ್ಲಿ, ರಾಜ್ಯವು ವಿತರಿಸಿದ ಸಾಲಗಳ ಅಸಲು ವಸೂಲಾತಿಯು ಶೇಕಡಾ 10ಕ್ಕಿಂತ ಕಡಿಮೆ ಇದ್ದು, ಇದು ಸಾಲ ಬಾಕಿಗಳಲ್ಲಿ ನಿರಂತರ ಹೆಚ್ಚಳಕ್ಕೆ ಕಾರಣವಾಯಿತು ಎಂದು ದತ್ತಾಂಶದಿಂದ ತಿಳಿದುಬರುತ್ತದೆ. ಏತನ್ಮಧ್ಯೆ, ರಾಜ್ಯವು ಸಾಲ ದರಗಳಲ್ಲಿನ ಹೆಚ್ಚಳದಿಂದಾಗಿ ವರ್ಷಗಳಲ್ಲಿ ಪಡೆದ ಬಡ್ಡಿ ಹೆಚ್ಚಾಗಿದೆ. 2022–23 ವರ್ಷವನ್ನು ಹೊರತುಪಡಿಸಿ, 2015–25ರ ಅವಧಿಯಲ್ಲಿ ಸ್ವೀಕರಿಸಿದ ಮತ್ತು ಪಾವತಿಸಿದ ಬಡ್ಡಿದರದ ನಡುವಿನ ವ್ಯತ್ಯಾಸವು ಇಳಿಕೆಯ ಪ್ರವೃತ್ತಿಯಲ್ಲಿದೆ.

2024–25ರಲ್ಲಿ, ಸಹಕಾರ ಸಂಸ್ಥೆಗಳು, ನಿಗಮಗಳು, ಕಂಪನಿಗಳು ಇತ್ಯಾದಿಗಳಿಗೆ ಸಾಲವಾಗಿ ವಿತರಿಸಲಾದ ₹6,631 ಕೋಟಿಗಳಲ್ಲಿ, ₹4,117 ಕೋಟಿ (ಶೇಕಡಾ 62) ವಿದ್ಯುತ್ ಖರೀದಿಸಿದ ಬಾಕಿ ಮರುಪಾವತಿಗಾಗಿ ಇಂಧನ ವಲಯಕ್ಕೆ ಮತ್ತು ₹1,462 ಕೋಟಿ (ಶೇಕಡಾ 22) ನೀರು ಸರಬರಾಜು ಮತ್ತು ನೈರ್ಮಲ್ಯ ಮತ್ತು ನಗರಾಭಿವೃದ್ಧಿಗೆ ಸಂಬಂಧಿಸಿದೆ.

1.3 ಸಾದಿಲ್ವಾರು ನಿಧಿ

ಸರ್ಕಾರದ ಸಾದಿಲ್ವಾರು ನಿಧಿಯು ಅನಿರೀಕ್ಷಿತ ವೆಚ್ಚಗಳನ್ನು ಪೂರೈಸಲು ಮತ್ತು ಸಾಂಕ್ರಾಮಿಕ, ರೋಗಗಳು, ನೈಸರ್ಗಿಕ ವಿಕೋಪಗಳಂತಹ ತುರ್ತು ಸಂದರ್ಭಗಳಲ್ಲಿ, ರಾಜ್ಯ ಶಾಸಕಾಂಗದಿಂದ ಅಧಿಕಾರ

ಪಡೆಯುವವರೆಗೆ ಆಯವ್ಯಯ ಅವಕಾಶ ಇಲ್ಲದಿರುವಾಗ ಮುಂಗಡ ಹಣವನ್ನು ಒದಗಿಸಲು ಉದ್ದೇಶಿಸಲಾಗಿದೆ. ಶಾಸಕಾಂಗವು ಹೆಚ್ಚುವರಿ ವೆಚ್ಚವನ್ನು ಅನುಮೋದಿಸಿದ ನಂತರ ನಿಧಿಯನ್ನು ಮರು ತುಂಬಲಾಗುತ್ತದೆ. ನಿಧಿಯ ಮೂಲ ಮೊತ್ತ ₹500 ಕೋಟಿ ಮತ್ತು 2024–25ರಲ್ಲಿ, ನಿಧಿಯಿಂದ ಯಾವುದೇ ಮೊತ್ತವನ್ನು ಪಡೆಯಲಾಗಿಲ್ಲ. ಆದಾಗ್ಯೂ, ರಾಜ್ಯ ಸರ್ಕಾರವು 118 ಕಾರ್ಯಕಾರಿ ಆದೇಶಗಳ ಮೂಲಕ ₹10,035 ಕೋಟಿ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿತ್ತು, ನಂತರ ಅದನ್ನು ಪೂರಕ ಅಂದಾಜಿನ ಮೂಲಕ ಕ್ರಮಬದ್ಧಗೊಳಿಸಲಾಯಿತು (ವಿವರಗಳು ಪ್ಯಾರಾಗ್ರಾಫ್ 2.5.1.1ರಲ್ಲಿ).

1.4 ಸಾರ್ವಜನಿಕ ಲೆಕ್ಕ

ಸಣ್ಣ ಉಳಿತಾಯ, ಭವಿಷ್ಯ ನಿಧಿಗಳು, ಮೀಸಲು ನಿಧಿಗಳು, ಠೇವಣಿಗಳು, ಮುಂಗಡಗಳು,ಅಮಾನತ್ತು, ಇರಸಾಲುಗಳು ಮುಂತಾದ ಕೆಲವು ವಹಿವಾಟುಗಳು ಸಂಚಿತ ನಿಧಿಯ ಭಾಗವಾಗಿರುವುದಿಲ್ಲ. ಇವುಗಳಿಗೆ ಸಂಬಂಧಿಸಿದ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಸಂವಿಧಾನದ 266(2)ನೇ ವಿಧಿಯ ಅಡಿಯಲ್ಲಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇರಿಸಲಾಗುತ್ತದೆ ಮತ್ತು ರಾಜ್ಯ ಶಾಸಕಾಂಗದ ಅನುಮೋದನೆಗೆ ಒಳಪಡುವುದಿಲ್ಲ. ವರ್ಷದಲ್ಲಿ ವಿತರಣೆಯ ನಂತರದ ಬಾಕಿಯು ವಿವಿಧ ಉದ್ದೇಶಗಳಿಗಾಗಿ ಬಳಸಲು ಸರ್ಕಾರದಲ್ಲಿ ಲಭ್ಯವಿರುವ ನಿಧಿಯಾಗಿದೆ.

1.4.1 ನಿವ್ವಳ ಸಾರ್ವಜನಿಕ ಲೆಕ್ಕ ಶಿಲ್ಕುಗಳು

ರಾಜ್ಯದ ಸಾರ್ವಜನಿಕ ಲೆಕ್ಕದಲ್ಲಿನ ಘಟಕವಾರು ನಿವ್ವಳ ಶಿಲ್ಕುಗಳನ್ನು **ಕೋಷ್ಟಕ 1.24**ರಲ್ಲಿ ನೀಡಲಾಗಿದೆ.

ಕೋಷ್ಟಕ 1.24: ಸಾರ್ವಜನಿಕ ಲೆಕ್ಕದಲ್ಲಿನ ಘಟಕವಾರು ನಿವ್ವಳ ಶಿಲ್ಕುಗಳು

(₹ ಕೋಟಿಗಳಲ್ಲಿ)

ವಿಭಾಗ	ಉಪ ವಿಭಾಗ	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಸಣ್ಣ ಉಳಿತಾಯ, ಭವಿಷ್ಯ ನಿಧಿ, ಇತ್ಯಾದಿ.	ಸಣ್ಣ ಉಳಿತಾಯ, ಭವಿಷ್ಯ ನಿಧಿ, ಇತ್ಯಾದಿ.	2,086	2,657	2,811	3,292	4,156	3,632	3,522	3,403	3,554	3,497
ಮೀಸಲು ನಿಧಿಗಳು	(ಎ) ಮೀಸಲು ನಿಧಿಗಳು ಬಡ್ಡಿ ಸಹಿತ	–	1,236	(–)1,194	393	839	(–)99	(–)46	(–)141	14	939
	(ಬಿ) ಮೀಸಲು ನಿಧಿಗಳು ಬಡ್ಡಿ ರಹಿತ	2,081	4,777	4,212	2,804	3,889	6,374	9,219	7,422	7,314	2,885
ಠೇವಣಿಗಳು ಮತ್ತು ಮುಂಗಡಗಳು	(ಎ) ಠೇವಣಿಗಳು ಬಡ್ಡಿ ಸಹಿತ	14	48	(–)3	62	99	16	(–)18	51	62	101
	(ಬಿ) ಠೇವಣಿಗಳು ಬಡ್ಡಿ ರಹಿತ	270	2,994	1,837	3,006	3,074	(–)702	2,826	26,141	7,412	(–)644
	(ಸಿ) ಮುಂಗಡಗಳು	–	–	–	–	–	–	–	–	–	–
ಅಮಾನತ್ತುಮತ್ತು ಇತರೆ	(ಎ) ಅಮಾನತ್ತು	(–)4	87	17	(–)15	178	(–)242	(–)60	(–)72	873	392
	(ಬಿ) ಇತರೆ ಲೆಕ್ಕಗಳು	995	404	(–)1,526	(–)6,072	(–)1542	(–)2,679	(–)93	1,268	1,733	(–)3,135
	(ಸಿ) ವಿದೇಶಿ ಸರಕಾರದ ಲೆಕ್ಕಗಳು	–	–	–	–	–	–	–	–	–	–
	(ಡಿ) ಇತರೆ	–	–	–	–	–	–	–	–	–	–
ಇರಸಾಲುಗಳು	(ಎ) ಮನಿ ಆರ್ಡರುಗಳು ಮತ್ತು ಇತರ ಇರಸಾಲುಗಳು	(–)18	(–)20	(–)51	(–)81	(–)263	(–)53	–	–	–	–
	(ಬಿ) ಅಂತರ ಸರ್ಕಾರಿ ಹೊಂದಾಣಿಕೆ ಲೆಕ್ಕಗಳು	1	(–)18	(–)25	42	(–)84	17	(–)133	159	56	(–)96
ಒಟ್ಟು		**5,425**	**12,165**	**6,078**	**3,431**	**10,346**	**6,264**	**15,217**	**38,231**	**21,018**	**3,939**

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ಟಿಪ್ಪಣಿ: + ಅಂಕಿಗಳು ಖರ್ಚು (ಕಳೆ) ಶಿಲ್ಕುಗಳನ್ನು ಮತ್ತು – ಅಂಕಿಗಳು ಜಮೆ (ಕೂಡು) ಶಿಲ್ಕುಗಳನ್ನು ಸೂಚಿಸುತ್ತದೆ.

2015–25ರ ಅವಧಿಯಲ್ಲಿ, ಸಾರ್ವಜನಿಕ ಲೆಕ್ಕದಲ್ಲಿನ ನಿವ್ವಳ ಶಿಲ್ಕುಗಳು ವರ್ಷಾನುವರ್ಷಗಳ ನಡುವಿನ ವ್ಯತ್ಯಾಸಗಳನ್ನು ತೋರಿಸುತ್ತವೆ. ಇದು 2022–23ರಲ್ಲಿ ಗರಿಷ್ಠ ಮಟ್ಟವನ್ನು ತಲುಪಿದ್ದರೂ, 2023–24 ಮತ್ತು 2024–25 ವರ್ಷಗಳಲ್ಲಿ ತೀವ್ರವಾಗಿ ಕಡಿಮೆಯಾಯಿತು. ಪ್ರಸಕ್ತ ವರ್ಷದಲ್ಲಿ ಇದು ಶೇಕಡಾ 81ರಷ್ಟು

ಕಡಿಮೆಯಾಗಿ ಹೆಚ್ಚುವರಿ ಬಳಕೆಯನ್ನು ಸೂಚಿಸುತ್ತದೆ. ಇದು ಎಲ್ಲಾ ವಲಯಗಳಲ್ಲಿನ ಇಳಿಕೆಯಿಂದಾಗಿ ಸಂಭವಿಸಿದೆ.

1.4.2 ಮೀಸಲು ನಿಧಿಗಳು

ರಾಜ್ಯ ಸರ್ಕಾರದ ಸಾರ್ವಜನಿಕ ಲೆಕ್ಕದ ಅಡಿಯಲ್ಲಿ ನಿರ್ದಿಷ್ಟ ಮತ್ತು ವ್ಯಾಖ್ಯಾನಿಸಲಾದ ಉದ್ದೇಶಗಳಿಗಾಗಿ ಮೀಸಲು ನಿಧಿಗಳನ್ನು ರಚಿಸಲಾಗಿದೆ. ಈ ನಿಧಿಗಳನ್ನು ಸಂಚಿತ ನಿಧಿಯಿಂದ ಅಥವಾ ಹೊರಗಿನ ಸಂಸ್ಥೆಗಳಿಂದ ಬರುವ ವಂತಿಗೆಗಳು ಅಥವಾ ಅನುದಾನಗಳಿಂದ ಪೂರೈಸಲಾಗುತ್ತದೆ. ಇದು ಬಡ್ಡಿಯನ್ನು ಹೊಂದಿರುವ ಮತ್ತು ಬಡ್ಡಿಯನ್ನು ಹೊಂದಿರದ ಮೀಸಲು ನಿಧಿಗಳನ್ನು ಒಳಗೊಂಡಿದೆ.

ರಾಜ್ಯದಲ್ಲಿ ₹31,903.61 ಕೋಟಿ ನಿವ್ವಳ ಜಮೆ (ಕ್ರೆಡಿಟ್) ಶಿಲ್ಕು ಹೊಂದಿರುವ 58 ಮೀಸಲು ನಿಧಿಗಳಿದ್ದು, ಇದರಲ್ಲಿ ಚಾಲ್ತಿಯಲ್ಲಿರುವ ಮೀಸಲು ನಿಧಿಗಳು ₹31,206.01 ಕೋಟಿ ನಿವ್ವಳ ಜಮೆ (ಕ್ರೆಡಿಟ್) ಶಿಲ್ಕು ಹೋಂದಿದ್ದು ಮತ್ತು ನಿಷ್ಕ್ರಿಯ ಮೀಸಲು ನಿಧಿಗಳು ₹697.60 ಕೋಟಿ ನಿವ್ವಳ ಜಮೆ (ಕ್ರೆಡಿಟ್) ಶಿಲ್ಕು ಹೊಂದಿವೆ.

ಪ್ರಮುಖ ಮೀಸಲು ನಿಧಿಗಳಲ್ಲಿರುವ ನಿಧಿಯ ಶಿಲ್ಕು ಗಳನ್ನು **ಕೋಷ್ಟಕ 1.25**ರಲ್ಲಿ ನೀಡಲಾಗಿದೆ.

ಕೋಷ್ಟಕ 1.25: ಪ್ರಮುಖ ಮೀಸಲು ನಿಧಿಗಳ ವಿವರ

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಮೀಸಲು ನಿಧಿಯ ಹೆಸರು	ಆರಂಭಿಕ ಶಿಲ್ಕು	ವರ್ಷದ ಸ್ವೀಕೃತಿಗಳು	ಬಡ್ಡಿ ಸ್ವೀಕೃತಿಗಳು	ವರ್ಷದ ವಿತರಣೆಗಳು	31 ಮಾರ್ಚ್ 2025 ರಂದು ಶಿಲ್ಕು
ಎ	**ಬಡ್ಡಿಯನ್ನು ಹೊಂದಿರುವ ಮೀಸಲು ನಿಧಿಗಳು**					
1	ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್ ಡಿ ಆರ್ ಎಫ್)	–	4,576.06	–	3,984.35	591.71
2	ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್ ಡಿ ಎಮ್ ಎಫ್)	237.10	–	20.15	107.00	150.25
3	ರಾಜ್ಯ ಪರಿಹಾರ ಅರಣ್ಯೀಕರಣನಿಧಿ (ಸ್ಕ್ಯಾಫ್)	764.84	643.04	24.88	233.54	1,199.22
4	ಅರಣ್ಯ ಅಭಿವೃದ್ಧಿ ನಿಧಿ	3,037.76	7.36	–	300.00	2,745.12
ಬಿ	**ಬಡ್ಡಿಯನ್ನು ಹೊಂದಿರದ ಮೀಸಲು ನಿಧಿಗಳು**	–	–	–	–	–
1	ಋಣ ಪರಿಹಾರ ನಿಧಿ	13,600	2,000.00	–	–	15,600.00
2	ಖಾತರಿ ವಿಮೋಚನಾ ನಿಧಿ	502.13	191.30	–	–	693.43
3	ಮೂಲಸೌಕರ್ಯ ಉಪಕ್ರಮ ನಿಧಿ	14,329.70	1,208.42	–	1,146.14	14,391.99
4	ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಲಿಮಿಟೆಡ್ ಫಂಡ್	9,027.74	593.61	–	1150.00	8471.35
5	ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ	4,065.92	318.00	–	1,000.00	3,383.93
ಒಟ್ಟು		**45,564.35**	**9,537.79**	**45.03**	**7,921.03**	**47,227.01**

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ಪ್ರಸಕ್ತ ವರ್ಷ 2024–25ರಲ್ಲಿ, ಮೀಸಲು ನಿಧಿಗಳ ಅಡಿಯಲ್ಲಿರುವ ಶಿಲ್ಕುಗಳು ಹಿಂದಿನ ವರ್ಷಕ್ಕೆ ಹೋಲಿಸಿದರೆ ನಾಮಮಾತ್ರವಾಗಿ ಅಂದರೆ ಶೇಕಡಾ ನಾಲ್ಕು ರಷ್ಟು ಹೆಚ್ಚಾಗಿದೆ. ಮೀಸಲು ನಿಧಿಯಲ್ಲಿರುವ (31 ಮಾರ್ಚ್ 2025 ರಂತೆ) ₹ 71,793 ಕೋಟಿ ಮುಕ್ತಾಯದ ಶಿಲ್ಕಿನಲ್ಲಿ, ಶೇಕಡಾ 2.70ರಷ್ಟು ಬಡ್ಡಿಯನ್ನು ಹೊಂದಿರುವ ಮೀಸಲು ನಿಧಿಯಲ್ಲಿ ಮತ್ತು ಶೇಕಡಾ 97.30ರಷ್ಟು ಬಡ್ಡಿಯನ್ನು ಹೊಂದಿರದ ಮೀಸಲು ನಿಧಿಯಲ್ಲಿತ್ತು.

ಕೆಲವು ಪ್ರಮುಖ ಮೀಸಲು ನಿಧಿಗಳ ವಹಿವಾಟುಗಳ ವಿಶ್ಲೇಷಣೆಯು ಎಸ್ ಡಿ ಆರ್ ಎಮ್ ಎಫ್ ಅಡಿಯಲ್ಲಿನ ವಹಿವಾಟುಗಳು 2024–25ನೇ ಸಾಲಿನ ಸರ್ಕಾರದ ಹೊಣೆಗಾರಿಕೆ ಸ್ಥಾನದ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಬಹಿರಂಗಪಡಿಸಿದೆ. ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್ ಡಿ ಆರ್ ಎಫ್) 15ನೇ ಹಣಕಾಸು ಆಯೋಗದ ಶಿಫಾರಸಿನ ನಂತರ ರಾಜ್ಯ ವಿಪತ್ತು ಪರಿಹಾರ ನಿರ್ವಹಣಾ ನಿಧಿ (ಎಸ್ ಡಿ ಆರ್ ಎಮ್ ಎಫ್) ಎಂದು ಬದಲಾಯಿಸಲಾಯಿತು, ಇದು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್ ಡಿ ಆರ್ ಎಫ್) ಮತ್ತು ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್ ಡಿ ಎಮ್ ಎಫ್) ಅನ್ನು ಒಳಗೊಂಡಿದೆ. ಇವುಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವೆಚ್ಚಗಳ ವಿವರಗಳನ್ನು ಕೆಳಗೆ ಚರ್ಚಿಸಲಾಗಿದೆ.

(ಎ) ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್ ಡಿ ಆರ್ ಎಫ್)

ವಿಪತ್ತು ನಿರ್ವಹಣಾ ಕಾಯ್ದೆ, 2005ರ ಅಡಿಯಲ್ಲಿ ರಚಿಸಲಾದ ಎಸ್ ಡಿ ಆರ್ ಎಫ್, 2010–11ರಿಂದ ಬಡ್ಡಿಯನ್ನು ಹೊಂದಿರುವ ಮೀಸಲು ನಿಧಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಬರ, ಪ್ರವಾಹ, ಚಂಡಮಾರುತ, ಭೂಕಂಪ, ಬೆಂಕಿ ಮುಂತಾದ ನೈಸರ್ಗಿಕ ವಿಕೋಪಗಳು ಈ ಯೋಜನೆಯಡಿಯಲ್ಲಿ ಪರಿಹಾರಕ್ಕೆ ಅರ್ಹತೆ ಪಡೆಯುತ್ತವೆ.

14 ನೇ ಹಣಕಾಸು ಆಯೋಗದ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ 75:25 ಹಂಚಿಕೆ ಮಾದರಿಯು 15ನೇ ಹಣಕಾಸು ಆಯೋಗದ ಅವಧಿಯಲ್ಲೂ ಮುಂದುವರಿದಿದೆ. 2024–25ರ ಅವಧಿಯಲ್ಲಿ, 15ನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ಒಟ್ಟು ₹976 ಕೋಟಿಯನ್ನು ನಿಧಿ ಖಾತೆಗೆ ವರ್ಗಾಯಿಸಬೇಕಾಗಿತ್ತು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೊಡುಗೆ ಕ್ರಮವಾಗಿ ₹732 ಕೋಟಿ (ಶೇಕಡಾ 75) ಮತ್ತು ₹244 ಕೋಟಿ (ಶೇಕಡಾ 25) ಆಗಿತ್ತು. ರಾಜ್ಯವು ಅಗತ್ಯವಿದ್ದ ₹976 ಕೋಟಿ ಸಂಪೂರ್ಣ ಮೊತ್ತವನ್ನು ನಿಧಿಗೆ ವರ್ಗಾಯಿಸಿದೆ.

2024–25ನೇ ಸಾಲಿನಲ್ಲಿ, ರಾಜ್ಯವು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್ ಡಿ ಆರ್ ಎಫ್) ಭಾರತ ಸರ್ಕಾರದಿಂದ ಸಹಾಯಾನುದಾನವಾಗಿ ಸ್ವೀಕರಿಸಿದ ₹3,600.06 ಕೋಟಿ ಮೊತ್ತವನ್ನು ನಿಧಿಗೆ ವರ್ಗಾಯಿಸಿತು.

2245–ನೈಸರ್ಗಿಕ ವಿಪತ್ತು ಪರಿಹಾರ' ಎಂಬ ಪ್ರಧಾನ ಶೀರ್ಷಿಕೆಯಡಿಯಲ್ಲಿ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ₹3,984.35 ಕೋಟಿ ಕೊಡುಗೆಯನ್ನು ಬಿಡುಗಡೆ ಮಾಡಲಾಯಿತು. ನಿಧಿಯು ₹591.71 ಕೋಟಿಗಳ ಮುಕ್ತಾಯದ ಶಿಲ್ಕನ್ನು ಹೊಂದಿದ್ದು, ಅದನ್ನು ಹೂಡಿಕೆ ಮಾಡಲಾಗಿಲ್ಲ. ಆದ್ದರಿಂದ, ಮುಂದಿನ ವರ್ಷದಲ್ಲಿ ನಿಧಿಯಲ್ಲಿ ಬಾಕಿ ಉಳಿಸಿಕೊಳ್ಳುವ ಅವಧಿಗೆ ರಾಜ್ಯವು ಬಡ್ಡಿಯನ್ನು ಒದಗಿಸಬೇಕಾಗುತ್ತದೆ.

(ಬಿ) ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್ ಡಿ ಎಮ್ ಎಫ್)

ಈ ನಿಧಿಯನ್ನು ನವೆಂಬರ್ 2013ರಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ 2005ರ ಸೆಕ್ಷನ್ 48(ಸಿ) ಅಡಿಯಲ್ಲಿ ಸಾರ್ವಜನಿಕ ಲೆಕ್ಕದಲ್ಲಿ ರಚಿಸಲಾಗಿದೆ, ಇದು ಪ್ರಧಾನ ಶೀರ್ಷಿಕೆ 8121 ಸಾಮಾನ್ಯ ಮತ್ತು ಇತರ ಮೀಸಲು ನಿಧಿಗಳಲ್ಲಿ ಬಡ್ಡಿಯನ್ನು ಹೊಂದಿರುವ ಮೀಸಲು ನಿಧಿಯ ಅಡಿಯಲ್ಲಿದೆ. ಇದು ರಾಜ್ಯ ಮಟ್ಟದ ಮಹತ್ವದ ಯೋಜನೆಗಳಿಗೆ, ರಾಜ್ಯದೊಳಗಿನ ಆಸ್ತಿಗಳ ಸಂರಕ್ಷಣೆ, ಪರಿಸರ ವ್ಯವಸ್ಥೆ, ವಿಪತ್ತುಗಳ ಉಪಶಮನ, ಪ್ರಾದೇಶಿಕ ಅನುಸಂಧಾನಗಳ ಉತ್ತೇಜನ ಮುಂತಾದವುಗಳಿಗೆ ಹಣವನ್ನು ಒದಗಿಸುತ್ತದೆ.

ಎಸ್ ಡಿ ಎಮ್ ಎಫ್ ಬಡ್ಡಿ–ಹೊಂದಿರುವ ಮೀಸಲು ನಿಧಿಯ ಅಡಿಯಲ್ಲಿರುವುದರಿಂದ, ರಾಜ್ಯ ಸರ್ಕಾರವು ಗುರುತಿಸಲಾದ ಬಡ್ಡಿ–ಹೊಂದಿರುವ ಸಾಧನಗಳಲ್ಲಿ ಹೂಡಿಕೆ ಮಾಡದ ಮೊತ್ತಕ್ಕೆ ಆರ್ ಬಿ ಐಯ ಓವರ್‌ಡ್ರಾಫ್ಟ್ ನಿಯಂತ್ರಣ ಮಾರ್ಗಸೂಚಿಗಳ ಅಡಿಯಲ್ಲಿ ಓವರ್‌ಡ್ರಾಫ್ಟ್‌ಗಳಿಗೆ ಅನ್ವಯವಾಗುವ ದರದಲ್ಲಿ ಎಸ್ ಡಿ ಎಮ್ ಎಫ್ಗೆ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ನಿಧಿಗೆ ಕೊಡುಗೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ದಿಂದ 75:25 ಅನುಪಾತದಲ್ಲಿದೆ.

2024–25 ನೇ ವರ್ಷದಲ್ಲಿ, 15ನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ದಿಂದ ಬರುವ ಕೊಡುಗೆಯಾಗಿ ಒಟ್ಟು ₹244 ಕೋಟಿ ಮೊತ್ತವನ್ನು ನಿಧಿ ಖಾತೆಗೆ ವರ್ಗಾಯಿಸಬೇಕಾಗಿತ್ತು. ಆದಾಗ್ಯೂ, ಪ್ರಸಕ್ತ ವರ್ಷದಲ್ಲಿ ರಾಜ್ಯವು ಭಾರತ ಸರ್ಕಾರದಿಂದ

ಎಸ್ ಡಿ ಎಮ್ ಎಫ್ ಗೆ ಅನುದಾನವನ್ನು ಪಡೆದಿಲ್ಲ. ಪರಿಣಾಮವಾಗಿ, ರಾಜ್ಯವು ತನ್ನ ಪಾಲನ್ನು ವರ್ಗಾಯಿಸಲಿಲ್ಲ. 2023–24 ಮತ್ತು 2024–25 ವರ್ಷಗಳಿಗೆ ರಾಜ್ಯವು ಎಸ್ ಡಿ ಎಮ್ ಎಫ್ನಲ್ಲಿ ಆರಂಭಿಕ ಶಿಲ್ಕಾಗಿ ₹237.10 ಕೋಟಿಗಳನ್ನು ಹೊಂದಿತ್ತು. ಪ್ರಸಕ್ತ ವರ್ಷದಲ್ಲಿ 2023–24 ವರ್ಷಕ್ಕೆ ರಾಜ್ಯವು ₹20.15 ಕೋಟಿ ಬಡ್ಡಿಯನ್ನು ನೀಡಿದ್ದರೂ, 2024–25ನೇ ಸಾಲಿಗೆ ಬಡ್ಡಿಯನ್ನು ರಾಜ್ಯವು ಇನ್ನೂ ಒದಗಿಸಿಲ್ಲ. ₹107 ಕೋಟಿ ವೆಚ್ಚವನ್ನು ನಿಧಿಯಿಂದ ಮಾಡಲಾಗಿದ್ದು, ₹150.26 ಕೋಟಿ ಬಾಕಿ ಉಳಿದಿದೆ, ರಾಜ್ಯವು ಅದನ್ನು ಹೂಡಿಕೆ ಮಾಡಿಲ್ಲ ಮತ್ತು ಮುಂದಿನ ವರ್ಷದಲ್ಲಿ ನಿಧಿಯಲ್ಲಿ ಶಿಲ್ಕು ಉಳಿಸಿಕೊಳ್ಳುವ ಅವಧಿಗೆ ಬಡ್ಡಿಯನ್ನು ಒದಗಿಸಬೇಕಾಗುತ್ತದೆ.

ಮಾರ್ಚ್ 31, 2025ರಂದು ಎಸ್ ಡಿ ಆರ್ ಎಫ್ ಮತ್ತು ಎಸ್ ಡಿ ಎಮ್ ಎಫ್ನಲ್ಲಿನ ಶಿಲ್ಕು ಕ್ರಮವಾಗಿ ₹591.71 ಕೋಟಿ ಮತ್ತು ₹150.26 ಕೋಟಿಗಳಷ್ಟಿತ್ತು.

1.4.3 ನಗದು ಶಿಲ್ಕು

ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿ ಐ) ಜೊತೆಗಿನ ಒಪ್ಪಂದದ ಪ್ರಕಾರ, ರಾಜ್ಯ ಸರ್ಕಾರವು ಬ್ಯಾಂಕಿನೊಂದಿಗೆ ಕನಿಷ್ಠ ₹2.63 ಕೋಟಿ ದೈನಂದಿನ ನಗದು ಶಿಲ್ಕನ್ನು ಕಾಯ್ದುಕೊಳ್ಳಬೇಕು. ಯಾವುದೇ ದಿನದಂದು ಬಾಕಿ ಮೊತ್ತವು ಒಪ್ಪಿದ ಕನಿಷ್ಠಕ್ಕಿಂತ ಕಡಿಮೆಯಾದರೆ, ಕಾಲಕಾಲಕ್ಕೆ ಸಾಮಾನ್ಯ ಅರ್ಥೋಪಾಯ ಮುಂಗಡ (ಡಬ್ಲೂ ಎಮ್ ಎ) / ವಿಶೇಷ ಅರ್ಥೋಪಾಯ ಮುಂಗಡ (ಎಸ್ ಡಬ್ಲೂ ಎಮ್ ಎ) / ಓವರ್‌ಡ್ರಾಫ್ಟ್‌ಗಳನ್ನು (ಒಡಿ) ತೆಗೆದುಕೊಳ್ಳುವ ಮೂಲಕ ಕೊರತೆಯನ್ನು ಸರಿದೂಗಿಸಲಾಗುತ್ತದೆ. ರಾಜ್ಯ ಸರ್ಕಾರಕ್ಕೆ ಸಾಮಾನ್ಯ ಡಬ್ಲೂ ಎಮ್ ಎಗಾಗಿ ಮಿತಿಗಳನ್ನು ಆರ್ ಬಿ ಐ ಕಾಲಕಾಲಕ್ಕೆ ಪರಿಷ್ಕರಿಸುತ್ತದೆ.

ಆರ್ ಬಿ ಐ ಸಾಮಾನ್ಯ ಮತ್ತು ವಿಶೇಷ ಅರ್ಥೋಪಾಯ ಮುಂಗಡ ನೀಡುತ್ತದೆ. ಮಾರ್ಚ್ 2022ರಿಂದ ರಾಜ್ಯಕ್ಕೆ ಸಾಮಾನ್ಯ ಅರ್ಥೋಪಾಯ ಮುಂಗಡ ಗಳ ಮಿತಿಯನ್ನು ಜುಲೈ 1, 2024ರಿಂದ ಜಾರಿಗೆ ಬರುವಂತೆ ₹3,137 ಕೋಟಿಗಳಿಂದ ₹4,010 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಮಾರ್ಚ್ 1999ರಿಂದ, ರಾಜ್ಯ ಸರ್ಕಾರದ ವಿಶೇಷ ಅರ್ಥೋಪಾಯ ಮುಂಗಡದ ಮಿತಿಗಳು ಕೇಂದ್ರ ಸರ್ಕಾರದ ಸೆಕ್ಯುರಿಟೀಸ್‌ಗಳಲ್ಲಿ *ಸರ್ಕಾರದ* ಹಿಡುವಳಿಗಳೊಂದಿಗೆ ನಿರ್ದಿಷ್ಟ ಸಂಬಂಧ ಹೊಂದಿವೆ. ಈ ಮುಂಗಡಗಳು ಆರ್ ಬಿ ಐ ಕಾಲಕಾಲಕ್ಕೆ ನಿಗದಿಪಡಿಸಬಹುದಾದ ದರಗಳಲ್ಲಿ ಬಡ್ಡಿಯನ್ನು ಹೊಂದಿರುತ್ತವೆ.

2024–25ರ ಅವಧಿಯಲ್ಲಿ, ರಾಜ್ಯ ಸರ್ಕಾರವು ಆರ್ ಬಿ ಐ ನಿಂದ ಯಾವುದೇ ಅರ್ಥೋಪಾಯ ಮುಂಗಡ ಮುಂಗಡಗಳನ್ನು ಪಡೆದಿರಲಿಲ್ಲ.

ರಾಜ್ಯ ಸರ್ಕಾರವು ದೊಡ್ಡ ನಗದು ಬಾಕಿಗಳನ್ನು ಹೊಂದಿದ್ದರೂ, ಅದನ್ನು ಉತ್ಪಾದಕ ಉದ್ದೇಶಗಳಿಗೆ ಬಳಸದೆ ನಗದು ಶಿಲ್ಕುಗಳ ಮತ್ತಷ್ಟು ಸಂಚಯನಕ್ಕೆ ಕಾರಣವಾಗುವಂತೆ ಮಾರುಕಟ್ಟೆ ಸಾಲಗಳನ್ನು ಆಶ್ರಯಿಸುವುದು ಅಪೇಕ್ಷಣೀಯವಲ್ಲ. 2024–25ರ ಅವಧಿಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕುಗಳು ಮತ್ತು ಹೂಡಿಕೆಗಳನ್ನು **ಕೋಷ್ಟಕ 1.26** ಚಿತ್ರಿಸುತ್ತದೆ.

ಕೋಷ್ಟಕ 1.26: ನಗದು ಶಿಲ್ಕುಗಳು ಮತ್ತು ಅವುಗಳ ಹೂಡಿಕೆ

(₹ ಕೋಟಿಗಳಲ್ಲಿ)

	1 ಏಪ್ರಿಲ್ 2024 ರಂದು ಇದ್ದ ಆರಂಭಿಕ ಶಿಲ್ಕು	31 ಮಾರ್ಚ್ 2025 ರಂದು ಇದ್ದ ಮುಕ್ತಾಯ ಶಿಲ್ಕು
ಎ. ಸಾಮಾನ್ಯ ನಗದು ಶಿಲ್ಕು		
ರಿಜರ್ವ್ ಬ್ಯಾಂಕ್ ನಲ್ಲಿನ ಠೇವಣಿಗಳು	4,699.34	1,445.62
ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿನ ಹೂಡಿಕೆ	67,143.36	63,264.17
ರವಾನೆಯಲ್ಲಿರುವ ಇರಸಾಲುಗಳು – ಸ್ಥಳೀಯ	0.01	0.01
ಒಟ್ಟು (ಎ)	**71,842.71**	**64,709.80**
ಬಿ. ಇತರೆ ನಗದು ಶಿಲ್ಕು ಮತ್ತು ಹೂಡಿಕೆಗಳು		
ಅರಣ್ಯ ಮತ್ತು ಲೋಕೋಪಯೋಗಿ ಇಲಾಖಾ ಅಧಿಕಾರಿಗಳ ಬಳಿಯ ನಗದು	2.09	2.09
ಸಾದಿಲ್ವಾರು ವೆಚ್ಚಕ್ಕೆ ಇಲಾಖಾ ಅಧಿಕಾರಿಗಳ ಬಳಿಯ ಕಾಯಂ ಮುಂಗಡ	4.11	4.16
ಮೀಸಲಿಟ್ಟ ನಿಧಿಗಳ ಹೂಡಿಕೆ	35,415.56	39,902.99

	1 ಏಪ್ರಿಲ್ 2024 ರಂದು ಇದ್ದ ಆರಂಭಿಕ ಶಿಲ್ಕು	31 ಮಾರ್ಚ್ 2025 ರಂದು ಇದ್ದ ಮುಕ್ತಾಯ ಶಿಲ್ಕು
ಒಟ್ಟು (ಬಿ)	35,421.76	39,909.24
ಒಟ್ಟು (ಎ + ಬಿ)	1,07,264.47	1,04,619.04
ಬಡ್ಡಿ ಸಂಗ್ರಹ	792.78	1,877.12

ಆಕರ: ಹಣಕಾಸು ಲೆಕ್ಕಗಳು

ಖಜಾನೆಗಳು/ಇಲಾಖೆಗಳಲ್ಲಿ ನಗದು, ಆರ್‌ಬಿಐನಲ್ಲಿ ಠೇವಣಿ ಮತ್ತು ನಗದು ಮತ್ತು ನಗದು ಸಮಾನ ರೂಪದಲ್ಲಿ ಸಾಗಣೆ. ಖಜಾನೆ ಬಿಲ್‌ಗಳ ಜೊತೆಗೆ, ನಗದು ಶಿಲ್ಕನ್ನು ಮೀಸಲಿಟ್ಟ ನಿಧಿಗಳಲ್ಲಿ ಅಂದರೆ ಸಂಚಿತ ಋಣ ಪರಿಹಾರ ನಿಧಿ, ಖಾತರಿ ವಿಮೋಚಣಾ ನಿಧಿ, ಇತ್ಯಾದಿಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಮೀಸಲಿಟ್ಟ ನಿಧಿಗಳಲ್ಲಿನ ₹39,909.24 ಕೋಟಿ ಹೂಡಿಕೆಯಲ್ಲಿ, ₹15,600 ಕೋಟಿಗಳನ್ನು ಸಂಚಿತ ಋಣ ಪರಿಹಾರ ನಿಧಿ ಮತ್ತು ₹606 ಕೋಟಿಗಳನ್ನು ಖಾತರಿ ವಿಮೋಚಣಾ ನಿಧಿಯಲ್ಲಿ ಹೂಡಿಕೆ ಮಾಡಲಾಗಿದೆ.

ಸಾಮಾನ್ಯ ನಗದು ಶಿಲ್ಕು ಇಳಿಕೆಗೆ ಕಾರಣ ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿರುವ ಠೇವಣಿಗಳಲ್ಲಿನ ಮತ್ತು ಹಿಂದಿನ ವರ್ಷಕ್ಕಿಂತ ಸಾಮಾನ್ಯ ನಗದು ಶಿಲ್ಕು ಹೂಡಿಕೆ ಖಾತೆಯಲ್ಲಿನ ಹೂಡಿಕೆಗಳಲ್ಲಿನ ಇಳಿಕೆಯಿಂದಾಗಿದೆ.

ಕಳೆದ ದಶಕದಲ್ಲಿ ನಗದು ಶಿಲ್ಕು ಹೂಡಿಕೆ ಲೆಕ್ಕದ ವಿವರಗಳನ್ನು **ಕೋಷ್ಟಕ 1.27**ರಲ್ಲಿ ನೀಡಲಾಗಿದೆ.

ಕೋಷ್ಟಕ 1.27: ನಗದು ಶಿಲ್ಕು ಹೂಡಿಕೆ ಖಾತೆ (ಪ್ರಧಾನ ಶೀರ್ಷಿಕೆ–8673)

(₹ ಕೋಟಿಗಳಲ್ಲಿ)

ವರ್ಷ	ಆರಂಭಿಕ ಶಿಲ್ಕು	ಮುಕ್ತಾಯ ಶಿಲ್ಕು	ಹೆಚ್ಚಳ (+) / ಇಳಿಕೆ (–)	ಬಡ್ಡಿ ಗಳಿಕೆ
2015–16	17,962.31	16,917.13	(–)1,045.18	1,028.15
2016–17	16,917.13	23,977.48	7,060.35	1,054.16
2017–18	23,977.48	12,655.49	(–)11,321.99	1,078.30
2018–19	12,655.49	5,139.28	(–)7,516.21	936.47
2019–20	5,139.28	13,634.21	8,494.93	535.10
2020–21	13,634.21	21,744.33	8,110.12	627.42
2021–22	21,744.33	31,973.89	10,229.56	899.44
2022–23	31,973.89	47,919.99	15,946.10	1,139.09
2023–24	47,919.99	67,143.36	19,223.37	792.78
2024–25	67,143.36	63,264.17	(–)3,879.19	1,877.12

2020–25ರ ಅವಧಿಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಹೂಡಿಕೆಯ ಪ್ರವೃತ್ತಿ ವಿಶ್ಲೇಷಣೆಯು 2020–21 ರಿಂದ 2023–24ರವರೆಗೆ ಹೂಡಿಕೆ ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ಬಹಿರಂಗಪಡಿಸಿದೆ, ಆದಾಗ್ಯೂ, ಪ್ರಸಕ್ತ ವರ್ಷದಲ್ಲಿ ಸುಮಾರು ಆರು ಪ್ರತಿಶತದಷ್ಟು ಇಳಿಕೆ ಕಂಡುಬಂದಿದೆ. ರಾಜ್ಯದ ಹಣಕಾಸಿನ ಕೊರತೆಯನ್ನು ನೀಗಿಸಲು ಮೀಸಲು ನಿಧಿಯಿಂದ ₹3,824 ಕೋಟಿಗಳನ್ನು ಬಳಸಲಾಗಿದೆ ಎಂದು ಕಾಣಬಹುದು. ಸಾಮಾನ್ಯ ನಗದು ಶಿಲ್ಕು ಮೀಸಲು ನಿಧಿಯಲ್ಲಿನ ಶಿಲ್ಕುಗಳನ್ನು ಒಳಗೊಂಡಿರುವುದರಿಂದ, ಮೀಸಲು ನಿಧಿಯನ್ನು ಇತರ ಉದ್ದೇಶಗಳಿಗಾಗಿ ಆ ಮಟ್ಟಿಗೆ ಬಳಸಲಾಗಿದೆ ಎಂದು ಊಹಿಸಬಹುದು.

1.5 ಹಣಕಾಸಿನ ಸುಸ್ಥಿರತೆ

ಹಣಕಾಸಿನ ಸುಸ್ಥಿರತೆ ಎಂದರೆ ಸರ್ಕಾರವು ತನ್ನ ಆದಾಯ ಮತ್ತು ವೆಚ್ಚವನ್ನು ನಿರ್ವಹಿಸುವ ಸಾಮರ್ಥ್ಯವಾಗಿದ್ದು, ಅದು ಸಾರ್ವಜನಿಕ ಸೇವೆಗಳು, ಮೂಲಸೌಕರ್ಯ ಮತ್ತು ಸಾಲ ಮರುಪಾವತಿಗಳಂತಹ ಪ್ರಸ್ತುತ ಮತ್ತು ಭವಿಷ್ಯದ ಬಾಧ್ಯತೆಗಳನ್ನು ಅತಿಯಾದ ಸಾಲ ಅಥವಾ ಸಮರ್ಥನೀಯವಲ್ಲದ ಸಾಲವನ್ನು ಸಂಗ್ರಹಿಸದೆ ಪೂರೈಸಬಹುದೆಂದು ಖಚಿತಪಡಿಸುತ್ತದೆ. ಇದು ದೀರ್ಘಾವಧಿಯಲ್ಲಿ ಆದಾಯ ಉತ್ಪಾದನೆ ಮತ್ತು ವೆಚ್ಚದ ನಡುವೆ ಸ್ಥಿರ ಸಮತೋಲನವನ್ನು ಕಾಯ್ದುಕೊಳ್ಳುವುದನ್ನು ಸೂಚಿಸುತ್ತದೆ. 2015–25ನೇ ಹಣಕಾಸು ವರ್ಷದಲ್ಲಿ ರಾಜ್ಯದ ಸ್ವೀಕೃತಿಯನ್ನು ಮತ್ತು

ವೆಚ್ಚವನ್ನು ಜಿ ಎಸ್ ಡಿ ಪಿಯ ಶೇಕಡಾವಾರು ರೂಪದಲ್ಲಿ ಕ್ರಮವಾಗಿ **ನಕ್ಷೆ 1.27** ಮತ್ತು **ನಕ್ಷೆ 1.28** ತೋರಿಸುತ್ತವೆ.



ಆಕರ : ಆಯಾ ವರ್ಷದ ಹಣಕಾಸು ಲೆಕ್ಕಗಳು ಮತ್ತು ಆರ್ಥಿಕ ಸಮೀಕ್ಷೆ



ಆಕರ : ಆಯಾ ವರ್ಷದ ಹಣಕಾಸು ಲೆಕ್ಕಗಳು ಮತ್ತು ಆರ್ಥಿಕ ಸಮೀಕ್ಷೆ

ಜಿ ಎಸ್ ಡಿ ಪಿಗೆ ಒಟ್ಟು ಆದಾಯವು, ಜಿ ಎಸ್ ಡಿ ಪಿಗೆ ಒಟ್ಟು ವೆಚ್ಚದ ಅನುಪಾತಕ್ಕಿಂತ ವೇಗವಾಗಿ ಕುಸಿಯುತ್ತಿದೆ, ಇದು ಹಣಕಾಸಿನ ಒತ್ತಡವನ್ನು ಸೃಷ್ಟಿಸಲು ಕಾರಣವಾಗಿದೆ. ಆದಾಗ್ಯೂ, ರಾಜ್ಯವು ತನ್ನ ಆದಾಯ ವೆಚ್ಚವನ್ನು ಸಂಕುಚಿತಗೊಳಿಸಿದೆ ಮತ್ತು ವಿವೇಕಯುತ ಹಣಕಾಸು ನಿರ್ವಹಣೆಯನ್ನು ಪ್ರತಿಬಿಂಬಿಸುವ ಮೂಲಕ ತನ್ನ ಬಂಡವಾಳ ವೆಚ್ಚವನ್ನು ಕಾಯ್ದುಕೊಂಡಿದೆ. ಕಡಿಮೆ ಆದಾಯ ಸಂಚಯನದಿಂದಾಗಿ, ರಾಜ್ಯದ ಸಾಲದ ಸಂಗ್ರಹ ಹೆಚ್ಚಾಗಿದೆ, ಇದನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

ಮೇಲಿನ **ನಕ್ಷೆ 1.27** ಮತ್ತು **ನಕ್ಷೆ 1.28**ರಿಂದ, ರಾಜ್ಯದ ಒಟ್ಟು ಆದಾಯಗಳು ಮತ್ತು ಒಟ್ಟು ವೆಚ್ಚಗಳು ಹೊಂದಿಕೆಯಾಗದ ಕಾರಣ, ರಾಜ್ಯವು ಕೊರತೆಗಳನ್ನು ಕಂಡಿದೆ ಎಂಬುದು ಸ್ಪಷ್ಟವಾಗಿದೆ.

ರಾಜಸ್ವ ಕೊರತೆಯು ಸತತವಾಗಿ ಶೇಕಡಾ 125ರಷ್ಟು ಹೆಚ್ಚಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಹಿಂದಿನ ವರ್ಷಕ್ಕಿಂತ ಶೇಕಡಾ 15ರಷ್ಟು ರಾಜಸ್ವ ವೆಚ್ಚದ ಹೆಚ್ಚಳ.

1.5.1. ಸಾರ್ವಜನಿಕ ಹೊಣೆಗಾರಿಕೆ ನಿರ್ವಹಣೆ

ಋಣ ನಿರ್ವಹಣೆ ಎಂದರೆ ಸರ್ಕಾರದ ಋಣವನ್ನು ನಿರ್ವಹಿಸಲು, ಅಗತ್ಯವಿರುವ ಹಣವನ್ನು ಸಂಗ್ರಹಿಸಲು, ಅದರ ಆದಾಯ ಮತ್ತು ವೆಚ್ಚದ ಉದ್ದೇಶಗಳನ್ನು ಸಾಧಿಸಲು ಮತ್ತು ಸಂಭಾವ್ಯ ಹಾನಿಗಳನ್ನು

ಮಿತಗೊಳಿಸುವ, ಆಯವ್ಯಯ ಅಥವ ಯಾವುದೇ ಇತರ ಪ್ರಕಟಣೆಗಳ ಮೂಲಕ ಹೊಂದಿಸಬಹುದಾದ ಇತರ ಯಾವುದೇ ಸಾರ್ವಭೌಮ ಸಾಲ ನಿರ್ವಹಣೆ ಗುರಿಗಳನ್ನು ಪೂರೈಸಲು ಒಂದು ಕಾರ್ಯತಂತ್ರವನ್ನು ರೂಪಿಸುವ ಮತ್ತು ಕಾರ್ಯಗತಗೊಳಿಸುವ ಪ್ರಕ್ರಿಯೆಯಾಗಿದೆ.

2015–16ರಿಂದ 2024–25ರ ವರೆಗಿನ ವರ್ಷಗಳ ಜಿ ಎಸ್ ಡಿ ಪಿಗೆ ಅದರ ಶೇಕಡಾವಾರು ಜೊತೆಗೆ ರಾಜ್ಯದ ಬಾಕಿ ಇರುವ ಹೊಣೆಗಾರಿಕೆಯನ್ನು **ನಕ್ಷೆ 1.29**ರಲ್ಲಿ ಚಿತ್ರಿಸಲಾಗಿದೆ.

ನಕ್ಷೆ 1.29: ಬಾಕಿ ಇರುವ ಸಾರ್ವಜನಿಕ ಹೊಣೆಗಾರಿಕೆ ಮತ್ತು ಜಿ ಎಸ್ ಡಿ ಪಿಗೆ ಅದರ ಶೇಕಡಾವಾರು



ಆಕರ: ಹಣಕಾಸು ಲೆಕ್ಕಗಳು ಮತ್ತು ಸರ್ಕಾರದ ಆರ್ಥಿಕ ಸಮೀಕ್ಷೆ 2024–25

** ಭಾರತ ಸರ್ಕಾರದಿಂದ ಜಿ ಎಸ್ ಟಿ ಪರಿಹಾರದ ಬದಲಾಗಿ ಪಡೆದ 2020–21ರಲ್ಲಿ ₹12,407 ಕೋಟಿ ಮತ್ತು 2021–22 ರಲ್ಲಿ ₹18,109 ಕೋಟಿ) ಬ್ಯಾಕ್–ಟು–ಬ್ಯಾಕ್ ಸಾಲವನ್ನು 2021–22,2022–23 ಮತ್ತು 2023–24ನೇ ಸಾಲಿನ ಸಾಲ / ಜಿ ಎಸ್ ಡಿ ಪಿ ಅನುಪಾತ ಎಂದು ಪರಿಗಣಿಸಲಾಗಿಲ್ಲ ಮತ್ತು 2024–25ರಲ್ಲಿ, ಭಾರತ ಸರ್ಕಾರ ₹22,829 ಕೋಟಿ ಮರುಪಾವತಿಸಿದ ನಂತರ, ಉಳಿದ ₹7,687 ಕೋಟಿ ಬಾಕಿಯನ್ನು ಚಾಲ್ತಿ ಸಾಲ/ಜಿ ಎಸ್ ಡಿ ಪಿ ಅನುಪಾತಕ್ಕೆ ಸಾಲ ಎಂದು ಪರಿಗಣಿಸಲಾಗಿಲ್ಲ.*

ಕಳೆದ ದಶಕದಲ್ಲಿ ರಾಜ್ಯದ ಬಾಕಿ ಹೊಣೆಗಾರಿಕೆಗಳು ಸುಮಾರು ಮೂರು ಪಟ್ಟು ಹೆಚ್ಚಾಗಿದೆ. ಆದಾಗ್ಯೂ, ಜಿ ಎಸ್ ಡಿ ಪಿ ಬಾಕಿ ಇರುವ ಸಾರ್ವಜನಿಕ ಹೊಣೆಗಾರಿಕೆಗಳ ಅನುಪಾತವು ರಾಜ್ಯಕ್ಕೆ ಕೆ ಎಫ್ ಆರ್ ಎ ಮಾನದಂಡದ 25 ಪ್ರತಿಶತದೊಳಗೆ ಇತ್ತು. 2015–20ರ ಕೋವಿಡ್ ಪೂರ್ವ ಅವಧಿಯಲ್ಲಿ, ಜಿ ಎಸ್ ಡಿ ಪಿಗೆ ಶೇಕಡಾವಾರು ಆಗಿ ಬಾಕಿ ಇರುವ ಸಾರ್ವಜನಿಕ ಹೊಣೆಗಾರಿಕೆಗಳು ಸುಮಾರು 17ರಿಂದ 20 ಪ್ರತಿಶತದಷ್ಟು ಸ್ಥಿರವಾಗಿತ್ತು. 2020–21ರಲ್ಲಿ ಈ ಅನುಪಾತವು ಶೇಕಡಾ 24.59ಕ್ಕೆ ಗರಿಷ್ಠ ತಲುಪಿದ್ದು, ಕೋವಿಡ್ 19 ಸಂಬಂಧಿತ ಖರ್ಚು ಮತ್ತು ಆದಾಯ ಕುಸಿತದಿಂದಾಗಿ ರಾಜ್ಯ ಹಣಕಾಸಿನ ಮೇಲಿನ ಒತ್ತಡವನ್ನು ಸೂಚಿಸುತ್ತದೆ. ಸಾಂಕ್ರಾಮಿಕ ರೋಗದ ನಂತರ, ಅನುಪಾತವು ಸ್ವಲ್ಪ ಮಟ್ಟಿಗೆ ಸುಧಾರಿಸಿ, ಶೇಕಡಾ 23ರ ಆಸುಪಾಸಿನಲ್ಲಿತ್ತು.

1.5.1.1 ಹೊಣೆಗಾರಿಕೆ ಘಟಕಗಳು

ರಾಜ್ಯ ಸರ್ಕಾರದ ಒಟ್ಟು ಹೊಣೆಗಾರಿಕೆಗಳು ಸಾಮಾನ್ಯವಾಗಿ ರಾಜ್ಯದ ಆಂತರಿಕ ಋಣ (ಮಾರುಕಟ್ಟೆ ಸಾಲಗಳು, ಆರ್‌ಬಿಐ ನಿಂದ ಅರ್ಥೋಪಾಯ ಮುಂಗಡಗಳು, ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಗೆ ನೀಡಲಾದ ವಿಶೇಷ ಭದ್ರತೆಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲಗಳು, ಇತ್ಯಾದಿ), ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು ಮತ್ತು ಸಾರ್ವಜನಿಕ ಲೆಕ್ಕ ಹೊಣೆಗಾರಿಕೆಗಳನ್ನು ಒಳಗೊಂಡಿರುತ್ತವೆ. 2015–25ರ ದಶಕದ ಅವಧಿಗೆ ರಾಜ್ಯದ ಘಟಕವಾರು ಹೊಣೆಗಾರಿಕೆ ಪ್ರವೃತ್ತಿಗಳನ್ನು **ಕೋಷ್ಟಕ 1.28**ರಲ್ಲಿ ಪ್ರಸ್ತುತಪಡಿಸಲಾಗಿದೆ.

ಕೋಷ್ಟಕ 1.28 : ಘಟಕವಾರು ಹೊಣೆಗಾರಿಕೆ ಪ್ರವೃತ್ತಿಗಳು

(₹ ಕೋಟಿಗಳಲ್ಲಿ)

ವಿತ್ತೀಯ ಹೊಣೆಗಾರಿಕೆಯ ಘಟಕ	2015–16	2016–17	2017–18	2018–19	2019–20	2020–21	2021–22	2022–23	2023–24	2024–25
ಬಾಕಿ ಇರುವ ಒಟ್ಟು ಹೊಣೆಗಾರಿಕೆ#	**1,83,322**	**2,21,319**	**2,46,231**	**2,85,238**	**3,37,520**	**4,15,926**	**4,90,256**	**5,53,363**	**6,33,531**	**6,92,115**
ಸಾರ್ವಜನಿಕ ಋಣ	**1,22,547**	**1,46,283**	**1,63,136**	**1,93,966**	**2,34,245**	**3,07,757**	**3,74,427**	**4,03,033**	**4,70,861**	**5,26,479**
ಆಂತರಿಕ ಋಣ	1,09,545	1,32,489	1,48,581	1,79,309	2,20,337	2,81,140	3,29,042	3,53,894	4,17,455	4,89,398
ಕೇಂದ್ರದಿಂದ ಸಾಲಗಳು	13,002	13,794	14,555	14,657	13,908	26,617	45,385	49,139	53,406	37,081
ಸಾರ್ವಜನಿಕ ಲೆಕ್ಕ ಋಣಗಳು	**53,076**	**64,788**	**69,922**	**76,410**	**85,172**	**89,748**	**99,147**	**1,33,024**	**1,49,192**	**1,51,481**
ಸಣ್ಣ ಉಳಿತಾಯ, ಭವಿಷ್ಯ ನಿಧಿ, ಇತ್ಯಾದಿ	22,262	24,920	27,731	31,023	35,179	38,811	42,333	45,736	49,290	52,787
ಮೀಸಲು ನಿಧಿ ಬಡ್ಡಿ ಸಹಿತ	(–)0.08	1,235	42	435	1,273	1,175	1,129	988	1,002	1,941
ಮೀಸಲು ನಿಧಿ ಬಡ್ಡಿ ರಹಿತ	10,371	15,148	16,832	16,566	17,160	18,888	22,003	26,425	31,552	29,949
ಠೇವಣಿ ಬಡ್ಡಿ ಸಹಿತ	295	343	340	402	501	518	500	551	612	713
ಠೇವಣಿ ಬಡ್ಡಿ ರಹಿತ	20,147	23,141	24,978	27,983	31,058	30,356	33,182	59,324	66,736	66,091
ಆಯವ್ಯಯೇತರ ಸಾಲಗಳು	7,699	10,248	13,173	14,862	18,103	18,421	16,682	17,306	13,478	14,155
ಬಾಕಿ ಇರುವ ಒಟ್ಟು ಹೊಣೆಗಾರಿಕೆಯ ಬೆಳವಣಿಗೆಯ ದರ (ಶತಾಂಶ)	11.59	20.73	11.26	15.84	18.33	23.23	17.87	12.87	14.49	9.25
ರಾಜ್ಯದ ಒಟ್ಟು ಆಂತರಿಕ ಉತ್ಪನ್ನ	**10,45,168**	**12,07,608**	**13,33,240**	**14,79,391**	**16,15,827**	**16,40,811**	**19,92,029**	**23,19,696**	**25,57,241**	**28,83,903**
ಬಾಕಿ ಇರುವ ಒಟ್ಟು ಹೊಣೆಗಾರಿಕೆ/ಜಿ ಎಸ್ ಡಿ ಪಿ (ಶತಾಂಶ)*	17.54	18.33	18.47	19.28	20.89	24.59*	23.08*	22.54*	23.58*	23.73*
ಸಾಲ ಮತ್ತು ಇತರ ಹೊಣೆಗಾರಿಕೆ										
ಒಟ್ಟು ಸ್ವೀಕೃತಿಗಳು	21,072	31,156	25,122	41,914	50,459	84,528	80,641	44,549	90,280	1,03,342
ಒಟ್ಟು ಮರುಪಾವತಿ	4,110	7,420	82,69	11,083	10,180	11,016	13,972	15,942	22,453	24,895
ನಿವ್ವಳ ಲಭ್ಯವಿರುವ ನಿಧಿ	16,962	23,736	1,68,533	30,831	40,279	73,512	66,669	28,607	67,827	78,447
ಮರುಪಾವತಿ / ಸ್ವೀಕೃತಿ ಶತಾಂಶ	19.50	23.82	32.92	26.44	20.17	13.03	17.33	35.79	24.87	24.09

ಆಕರ: ಹಣಕಾಸು ಲೆಕ್ಕಗಳು ಮತ್ತು ಸರ್ಕಾರದ ಆರ್ಥಿಕ ಸಮೀಕ್ಷೆ 2024–25

#ಆಯವ್ಯಯೇತರ ಸಾಲಗಳನ್ನು ಒಳಗೊಂಡಿದೆ

**ಭಾರತ ಸರ್ಕಾರದಿಂದ ಜಿ ಎಸ್ ಟಿ ಪರಿಹಾರದ ಬದಲಾಗಿ ಪಡೆದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿ) ಬ್ಯಾಕ್–ಟು–ಬ್ಯಾಕ್ ಸಾಲವನ್ನು 2021–22,2022–23 ಮತ್ತು 2023–24ನೇ ಸಾಲಿನ ಸಾಲ / ಜಿ ಎಸ್ ಡಿ ಪಿ ಅನುಪಾತ ಎಂದು ಪರಿಗಣಿಸಲಾಗಿಲ್ಲ ಮತ್ತು 2024–25ರಲ್ಲಿ, ಭಾರತ ಸರ್ಕಾರ ₹22,829 ಕೋಟಿ ಮರುಪಾವತಿಸಿದ ನಂತರ, ಉಳಿದ ₹7,687 ಕೋಟಿ ಬಾಕಿಯನ್ನು ಚಾಲ್ತಿ ಸಾಲ/ಜಿ ಎಸ್ ಡಿ ಪಿ ಅನುಪಾತಕ್ಕೆ ಸಾಲ ಎಂದು ಪರಿಗಣಿಸಲಾಗಿಲ್ಲ.*

ಸಂಪೂರ್ಣ ಪರಿಭಾಷೆಯಲ್ಲಿ ಹೇಳುವುದಾದರೆ, 2015–25ರ ಅವಧಿಯಲ್ಲಿ ರಾಜ್ಯದ ಒಟ್ಟು ಸಾಲದ ಹೊಣೆಗಾರಿಕೆಗಳು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿವೆ. ಆದಾಗ್ಯೂ, ಬಾಕಿ ಇರುವ ಹೊಣೆಗಾರಿಕೆಗಳ ಬೆಳವಣಿಗೆಯ ದರವು ಅಂತರ–ವರ್ಷದ ವ್ಯತ್ಯಾಸವನ್ನು ತೋರಿಸಿತು, ಇದು 2020–21ರಲ್ಲಿ ಕೋವಿಡ್–19 ಕಾರಣದಿಂದಾಗಿ ರಾಜ್ಯವು ಹೆಚ್ಚಿನ ಸಾಲ ಪಡೆದ ಕಾರಣ ಗರಿಷ್ಠ ಮಟ್ಟವನ್ನು ತಲುಪಿತು. ಹಿಂದಿನ ವರ್ಷಕ್ಕೆ ಹೋಲಿಸಿದರೆ 2024–25ರಲ್ಲಿ ಒಟ್ಟು ಹೊಣೆಗಾರಿಕೆಗಳ ಬೆಳವಣಿಗೆಯಲ್ಲಿನ ಕುಸಿತವು ಪ್ರಾಥಮಿಕವಾಗಿ ಆಂತರಿಕ ಸಾಲ ಮತ್ತು ಸಾರ್ವಜನಿಕ ಖಾತೆಗಳ ಹೊಣೆಗಾರಿಕೆಗಳ ಬೆಳವಣಿಗೆಯಲ್ಲಿ ಕಂಡುಬರುವ ಕುಸಿತದ ಕಾರಣದಿಂದಾಗಿದೆ. ಜೊತೆಗೆ ಜಿ ಎಸ್ ಟಿ ಪರಿಹಾರದ ಬದಲಿಗೆ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲಗಳ (₹22,828.45 ಕೋಟಿ) ಮರುಪಾವತಿಯಿಂದ ಭಾರತ ಸರ್ಕಾರದಿಂದ ಬಾಕಿ ಇರುವ ಸಾಲಗಳಲ್ಲಿ ಉಂಟಾದ ಇಳಿಕೆ ಕೂಡ ಇದಕ್ಕೆ ಬೆಂಬಲವಾಗಿದೆ.

2024–25ರ ಅವಧಿಯಲ್ಲಿ, ರಾಜ್ಯವು ಪಡೆದ ಸಾರ್ವಜನಿಕ ಸಾಲವು ಹಿಂದಿನ ವರ್ಷಕ್ಕಿಂತ ಸುಮಾರು 12 ಪ್ರತಿಶತದಷ್ಟು ಹೆಚ್ಚಾಗಿದೆ, ಏಕೆಂದರೆ, ರಾಜ್ಯದ ಆಂತರಿಕ ಸಾಲವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಸುಮಾರು 17 ಪ್ರತಿಶತದಷ್ಟು ಹೆಚ್ಚಾಗಿದೆ.

ಜಿ ಎಸ್ ಡಿ ಪಿಯ ಶೇಕಡಾವಾರು ಪ್ರಮಾಣಕ್ಕೆ ಹೋಲಿಸಿದರೆ ಬಾಕಿ ಇರುವ ಹೊಣೆಗಾರಿಕೆಗಳು ಕೆ ಎಫ್ ಆರ್ ಎ ಗುರಿಯಲ್ಲಿ ಶೇಕಡಾ 25ರಷ್ಟಿತ್ತು. ಆದಾಗ್ಯೂ, 2022–23ನೇ ಸಾಲಿನಲ್ಲಿ ಆದಾಯ ಹೆಚ್ಚುವರಿಯನ್ನು ಸಾಧಿಸಿದ ನಂತರ ಸತತ ಎರಡನೇ ವರ್ಷವೂ ರಾಜ್ಯವು ರಾಜಸ್ವ ಕೊರತೆಯನ್ನು ಕಂಡಿದ್ದರಿಂದ ರಾಜ್ಯದ ಹೊರಗಿರುವ ಹೊಣೆಗಾರಿಕೆಗಳಲ್ಲಿ ಹೆಚ್ಚಳ ಕಂಡುಬಂದಿದೆ.

2024–25ನೇ ಸಾಲಿನ ಅಂತ್ಯದಲ್ಲಿ ಬಾಕಿ ಇರುವ ಒಟ್ಟು ಹೊಣೆಗಾರಿಕೆಗಳ ವಿಭಜನೆಯನ್ನು **ನಕ್ಷೆ 1.30**ರಲ್ಲಿ ತೋರಿಸಲಾಗಿದೆ.

ನಕ್ಷೆ 1.30: 2024–25ನೇ ಸಾಲಿನ ಅಂತ್ಯದಲ್ಲಿ ಬಾಕಿ ಇರುವ ಒಟ್ಟು ಹೊಣೆಗಾರಿಕೆಗಳ ವಿಭಜನೆ



ಆಕರ: ಹಣಕಾಸು ಲೆಕ್ಕಗಳು

2024–25ನೇ ಸಾಲಿನಲ್ಲಿ ರಾಜ್ಯದ ಬಾಕಿ ಇರುವ ಹೊಣೆಗಾರಿಕೆಗಳು ಮುಖ್ಯವಾಗಿ ಆಂತರಿಕ ಸಾಲ (ಶೇಕಡಾ 73) ನಂತರ ಸಾರ್ವಜನಿಕ ಲೆಕ್ಕ ಹೊಣೆಗಾರಿಕೆಗಳು (ಶೇಕಡಾ 22) ಮತ್ತು ಭಾರತ ಸರ್ಕಾರದಿಂದ ಪಡೆದ ಸಾಲಗಳಿಂದ (ಶೇಕಡಾ ಐದು) ಉಂಟಾಗಿವೆ. ಆಂತರಿಕ ಹೊಣೆಗಾರಿಕೆಗಳ ಅಡಿಯಲ್ಲಿ ಹೆಚ್ಚಳವು ಮುಖ್ಯವಾಗಿ ಮಾರುಕಟ್ಟೆ ಸಾಲಗಳಲ್ಲಿ ಮತ್ತು ಸಾರ್ವಜನಿಕ ಲೆಕ್ಕ ಹೊಣೆಗಾರಿಕೆಗಳ ಅಡಿಯಲ್ಲಿ ಠೇವಣಿಗಳಲ್ಲಿ ಮತ್ತು ನಂತರ ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳಲ್ಲಿ ಕಂಡುಬಂದಿದೆ. ₹22,829 ಕೋಟಿ ಮೊತ್ತದ ಬ್ಯಾಕ್–ಟು–ಬ್ಯಾಕ್ ಸಾಲಗಳ ಮರುಪಾವತಿಯಿಂದಾಗಿ ಭಾರತ ಸರ್ಕಾರದಿಂದ ಪಡೆದ ಸಾಲಗಳ ಹೊಣೆಗಾರಿಕೆಯು ವರ್ಷದಲ್ಲಿ ಕಡಿಮೆಯಾಗಿದೆ.

ದಶಕದ ಅವಧಿಯಲ್ಲಿ ಅಂದರೆ 2015–25ರಲ್ಲಿ ಮರುಪಾವತಿಸಿದ ಆಂತರಿಕ ಸಾಲದ ಪ್ರಮಾಣವನ್ನು **ನಕ್ಷೆ 1.31** ಬಿಂಬಿಸುತ್ತದೆ.

ನಕ್ಷೆ 1.31: ಮರುಪಾವತಿ ಸಂವಾದಿಯಾಗಿ ಆಂತರಿಕ ಸಾಲ

(₹ ಕೋಟಿಗಳಲ್ಲಿ)



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ರಾಜ್ಯವು ಪಡೆದ ಆಂತರಿಕ ಸಾಲವು 2017–18ರ ವರೆಗೆ ಮಧ್ಯಮ ಮಟ್ಟದಲ್ಲಿತ್ತು, ನಂತರ 2018–19ರಿಂದ ತೀವ್ರ ಏರಿಕೆ ಕಂಡುಬಂದಿತು. ಕೋವಿಡ್–19–ಪ್ರೇರಿತ ಆದಾಯ ಕೊರತೆ, ಹೆಚ್ಚಿನ ವೆಚ್ಚದ ಅವಶ್ಯಕತೆಗಳು ಮತ್ತು ಸಾಲ ಮಿತಿಗಳ ಸಡಿಲಿಕೆಯಿಂದಾಗಿ 2020–21ರಲ್ಲಿ ಅತ್ಯಾಧಿಕ ಜಿಗಿತ ಕಂಡುಬಂದಿದೆ. ಕೋವಿಡ್ ನಂತರ, ರಾಜ್ಯದ ಆಂತರಿಕ ಸಾಲವು 2022–23ರ ವರೆಗೆ ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು, ಆದಾಗ್ಯೂ, 2023–24ರ ವರ್ಷದಲ್ಲಿ ರಾಜ್ಯದ ವಿತ್ತೀಯ ಕೊರತೆಯನ್ನು ನೀಗಿಸಲು ಇದು ಸುಮಾರು 115 ಪ್ರತಿಶತದಷ್ಟು ಅಗಾಧವಾಗಿ ಹೆಚ್ಚಾಗಿದೆ. 2024–25 ರಲ್ಲಿ ರಾಜ್ಯದ ರಾಜಸ್ವ ಕೊರತೆ ಮತ್ತಷ್ಟು ಹೆಚ್ಚಾಯಿತು ಮತ್ತು ಆದ್ದರಿಂದ, ರಾಜ್ಯವು ಹೆಚ್ಚಿನ ಸಾಲಗಳನ್ನು ಆಶ್ರಯಿಸಬೇಕಾಯಿತು. ಸಂಪೂರ್ಣ ಪರಿಭಾಷೆಯಲ್ಲಿ, ಈ ಅವಧಿಯಲ್ಲಿ ಮರುಪಾವತಿಗಳು ಸಹ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿವೆ. 2019–21ರ ಕೋವಿಡ್ ಅವಧಿಯನ್ನು ಹೊರತುಪಡಿಸಿ, 2016–17ರಿಂದ 2024–25ರ ವರೆಗಿನ ಬಹುತೇಕ ಎಲ್ಲಾ ವರ್ಷಗಳಲ್ಲಿ ರಾಜ್ಯವು ಪ್ರತಿ ವರ್ಷದ ಶೇಕಡಾ 20ಕ್ಕಿಂತ ಹೆಚ್ಚು ಸಾಲಗಳನ್ನು ಮರುಪಾವತಿಸಿದೆ.

1.5.1.2 ಎರವಲು ಪಡೆದ ನಿಧಿಗಳ ಬಳಕೆ

ಬಂಡವಾಳ ಸೃಷ್ಟಿ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಹಣಕಾಸು ಒದಗಿಸಲು ನಿಧಿಗಳನ್ನು ಬಳಸುವುದು ಸೂಕ್ತ. ಪ್ರಸ್ತುತ ಬಳಕೆ ಮತ್ತು ಬಾಕಿ ಇರುವ ಸಾಲಗಳ ಮೇಲಿನ ಬಡ್ಡಿ ಮರುಪಾವತಿಗೆ ಎರವಲು ಪಡೆದ ನಿಧಿಗಳನ್ನು ಬಳಸುವುದು ಆರೋಗ್ಯಕರ ಪ್ರವೃತ್ತಿಯಲ್ಲ. **ಕೋಷ್ಟಕ 1.29** ಮತ್ತು **ನಕ್ಷೆ 1.32** ಕ್ರಮವಾಗಿ 2015–25ರ ಅವಧಿಯಲ್ಲಿ ಎರವಲು ಪಡೆದ ನಿಧಿಗಳ ಬಳಕೆ ಮತ್ತು ಪ್ರವೃತ್ತಿಗಳನ್ನು ಚಿತ್ರಿಸುತ್ತದೆ.

ಕೋಷ್ಟಕ 1.29: ಎರವಲು ಪಡೆದ ನಿಧಿಗಳ ಬಳಕೆ

(₹ ಕೋಟಿಗಳಲ್ಲಿ)

ಕ್ರ.ಸಂ.	ವರ್ಷ	2015–16	2016–17	2017–18	2018–19	2019–20	2020–21	2021–22	2022–23	2023–24	2024–25
1	ಒಟ್ಟು ಸಾಲಗಳು	21,072	31,156	25,122	41,914	50,459	84,528	80,641	44,549	90,280	1,03,342
2	ಹಿಂದಿನ ಸಾಲಗಳ ಮರುಪಾವತಿ(ಅಸಲು)	4,110	7,420	8,269	11,083	10,180	11,016	13,972	15,942	22,453	24,895
3	ನಿವ್ವಳ ಬಂಡವಾಳ ವೆಚ್ಚ	20,361	28,123	30,663	34,665	35,485	45,361	47,868	57,347	52,084	57,885
4	ನಿವ್ವಳ ಸಾಲ ಮತ್ತು ಮುಂಗಡಗಳು	597	1,834	4,956	4,456	3,866	2,399	4,082	2,772	4,167	6,310
5	ಉಳಿದ ವೆಚ್ಚಕ್ಕೆ ಲಭ್ಯವಿರುವ ಋಣ ನಿಧಿಗಳು	(–)3,996	(–)6,221	(–) 18,766	(–)8,290	928	25,752	14,719	(–) 31,512	11,576	14,252

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ಮೇಲಿನ ಕೋಷ್ಟಕದಿಂದ, 2019–25ರ ಅವಧಿಯಲ್ಲಿ (2022–23 ಹೊರತುಪಡಿಸಿ), ನಿವ್ವಳ ಎರವಲು ಪಡೆದ ನಿಧಿಗಳು ಬಂಡವಾಳ ವೆಚ್ಚವನ್ನು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಪೂರೈಸಲು ಸಾಕಾಗುತ್ತದೆ ಎಂದು ಗಮನಿಸಲಾಗಿದೆ. ಕೋವಿಡ್ ಪೂರ್ವದ ಅವಧಿಯಲ್ಲಿ ಮತ್ತು 2022–23ರಲ್ಲಿ ರಾಜ್ಯವು ರಾಜಸ್ವ ಹೆಚ್ಚುವರಿಯನ್ನು ಕಂಡಿತು, ಇದರ ಪರಿಣಾಮವಾಗಿ ರಾಜ್ಯವು ಕಡಿಮೆ ಸಾಲವನ್ನು ಪಡೆಯಿತು ಮತ್ತು ರಾಜಸ್ವ ಹೆಚ್ಚುವರಿಯನ್ನು ಬಂಡವಾಳ ವೆಚ್ಚಕ್ಕೆ ಬಳಸಲಾಯಿತು. ಆದಾಗ್ಯೂ, 2023–24 ಮತ್ತು 2024–25ರಲ್ಲಿ, ರಾಜ್ಯವು ಮತ್ತೊಮ್ಮೆ ರಾಜಸ್ವ ಕೊರತೆಯನ್ನು ಕಂಡಿತು ಮತ್ತು ಬಂಡವಾಳ ವೆಚ್ಚದ ಜೊತೆಗೆ ಸಾಲಗಳನ್ನು ರಾಜಸ್ವ ವೆಚ್ಚಕ್ಕು ಕೂಡಾ ಬಳಸಲಾಯಿತು.

ನಕ್ಷೆ 1.32: ಎರವಲು ಪಡೆದ ನಿಧಿಗಳ ಬಳಕೆಯ ಪ್ರವೃತ್ತಿಗಳು



ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ನಕ್ಷೆ 1.32ರಿಂದ, 2015–25ರ ಅವಧಿಯಲ್ಲಿ, ಸಾಲಗಳಲ್ಲಿ ಹೆಚ್ಚಿನ ಪಾಲನ್ನು ಬಂಡವಾಳ ವೆಚ್ಚಕ್ಕಾಗಿ ಖರ್ಚು ಮಾಡಲಾಗಿದೆ ಎಂಬುದು ಸ್ಪಷ್ಟವಾಗಿದೆ. ಆದಾಗ್ಯೂ, ಕೋವಿಡ್ ಪೂರ್ವದ ಅವಧಿಯಲ್ಲಿ ಮತ್ತು 2022–23ರಲ್ಲಿ, ರಾಜಸ್ವ ಹೆಚ್ಚುವರಿಯನ್ನು ಬಂಡವಾಳ ವೆಚ್ಚಕ್ಕಾಗಿ ಬಳಸಲಾಗಿದೆ.

1.5.1.3 ಸಾಲದ ವಿವರ: ಅವಧಿ ಪೂರ್ಣ ಋಣ ಮತ್ತು ಮರುಪಾವತಿ

ಅವಧಿ ಪೂರ್ಣ ಋಣ ಮತ್ತು ಮರುಪಾವತಿ ವಿವರವು ಸಾಲ ಮರುಪಾವತಿ ಅಥವಾ ಋಣ ಸೇವೆಗಾಗಿ ಸರ್ಕಾರದ ಕಡೆಯಿಂದ ಬದ್ಧತೆಯನ್ನು ಸೂಚಿಸುತ್ತದೆ. ರಾಜ್ಯದ ಅವಧಿ ಪೂರ್ಣ ಋಣ ವಿವರವನ್ನು **ನಕ್ಷೆ 1.33**ರಲ್ಲಿ ಚಿತ್ರಿಸಲಾಗಿದೆ.

ನಕ್ಷೆ 1.33 ಸಾರ್ವಜನಿಕ ಋಣದ ಅವಧಿ ಪೂರ್ಣದ ಚಿತ್ರ



ಆಕರ: ಹಣಕಾಸು ಲೆಕ್ಕಗಳು

31 ಮಾರ್ಚ್ 2025ರಂತೆ ಸಾರ್ವಜನಿಕ ಋಣದ ಅವಧಿ ಪೂರ್ಣ ವಿವರವು ₹5,26,478.67 ಕೋಟಿ ಬಾಕಿ ಇರುವ ಸಾರ್ವಜನಿಕ ಋಣ ದಲ್ಲಿ ಶೇಕಡಾ 46.09ರಷ್ಟು 0–7 ವರ್ಷಗಳ (₹2,42,616.40 ಕೋಟಿ) ಅವಧಿ ಪೂರ್ಣ ವರ್ಗಕ್ಕೆ ಸೇರಿದೆ ಎಂದು ಸೂಚಿಸುತ್ತದೆ. ಇದು ಅಲ್ಪಾವಧಿಯಿಂದ ಮಧ್ಯಮ ಅವಧಿಗೆ ಸೇರಿರುವುದರಿಂದ, ಇದು ಸಂಭಾವ್ಯ ರೋಲ್ ಓವರ್ ಅಪಾಯಗಳು ಮತ್ತು ದ್ರವ್ಯತೆ ಒತ್ತಡವನ್ನು ಸೂಚಿಸುತ್ತದೆ. ಬಾಕಿ ಮೊತ್ತಗಳಲ್ಲಿ, 7–10 ವರ್ಷಗಳ ಅವಧಿ ಪೂರ್ಣ ವರ್ಗದಲ್ಲಿ ಶೇಕಡಾ 19.48 (₹1,02,576.19 ಕೋಟಿ) ಮತ್ತು ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಯ ಪೂರ್ಣ ವರ್ಗದಲ್ಲಿ ಶೇಕಡಾ 34.43 (₹1,81,280.09 ಕೋಟಿ) ಇರುತ್ತದೆ. ಆದ್ದರಿಂದ, ಅವಧಿ ಪೂರ್ಣ ವಿವರದ ಸುಮಾರು ಶೇಕಡಾ 54ರಷ್ಟು ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಸೇರಿದ್ದು, ಇದು ಇತರ ಚಟುವಟಿಕೆಗಳಿಗೆ ಆದಾಯದ ಉತ್ತಮ ನಿರ್ವಹಣೆಯನ್ನು ಒದಗಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ರಾಜ್ಯದಿಂದ ಸಾಲಗಳ ಹೆಚ್ಚಳದಿಂದಾಗಿ, ಬಡ್ಡಿ ಪಾವತಿ ಹೆಚ್ಚಾಗಿದೆ. ಮುಂದಿನ ಎರಡು ವರ್ಷಗಳಲ್ಲಿ, ಅಂದರೆ, 2025–26 ಮತ್ತು 2026–27ರಲ್ಲಿ, ಬಡ್ಡಿ ಮರುಪಾವತಿ ಅಸಲನ್ನು ಮೀರುತ್ತದೆ.

1.5.1.4 ವಿತ್ತೀಯ ಕೊರತೆಯನ್ನು ಭರಿಸುವ ರೀತಿ

2015–25ರ ಅವಧಿಯಲ್ಲಿ ವಿತ್ತೀಯ ಕೊರತೆಯ ಪೂರೈಸುವ ರೀತಿಯನ್ನು **ಕೋಷ್ಟಕ 1.30** ಚಿತ್ರಿಸುತ್ತದೆ. ರಾಜ್ಯವು ರಾಜಸ್ವ ಮತ್ತು ಸಾಲೇತರ ಸ್ವೀಕೃತಿಗಳಿಗಿಂತ ಹೆಚ್ಚಿನ ಹಣವನ್ನು ಪೂರೈಸಲು ಆಶ್ರಯಿಸಿದ ವಿವಿಧ ಸಾಲಗಳ ಪ್ರಮಾಣವನ್ನು ವಿತ್ತೀಯ ಕೊರತೆಯ ವಿಂಗಡಣೆಯು ಬಹಿರಂಗಪಡಿಸುತ್ತದೆ.

ಕೋಷ್ಟಕ 1.30: ವಿತ್ತೀಯ ಕೊರತೆಯ ಅಂಶಗಳು ಮತ್ತು ಅದನ್ನು ಪೂರೈಸಿದ ಮಾದರಿ

(₹ ಕೋಟಿಗಳಲ್ಲಿ)

		2015–16	2016–17	2017–18	2018–19	2019–20	2020–21	2021–22	2022–23	2023–24	2024–25
ವಿತ್ತೀಯ ಕೊರತೆ		19,169	28,664	31,101	38,442	38,166	67,098	66,037	46,623	65,522	85,030
1	ರಾಜಸ್ವ ಹೆಚ್ಚಳ /ಕೊರತೆ	1,789	1,293	4,518	679	1,185	19,338	13,666	13,496	(–)9,273	(–)20,835
2	ನಿವ್ವಳ ಬಂಡವಾಳ ವೆಚ್ಚ	20,361	28,123	30,663	34,665	35,485	45,361	47,868	57,347	52,084	57,885
3	ನಿವ್ವಳ ಸಾಲ ಮತ್ತು ಮುಂಗಡಗಳು	597	1,834	4,956	4,456	3,866	2,399	4,082	2,772	4,167	6,310
4	ಸಾದಿಲ್ವಾರು ನಿಧಿಗೆ ವಿನಿಯೋಗ	–	–	–	–	–	–	420	–	–	–
ವಿತ್ತೀಯ ಕೊರತೆಯನ್ನು ಪೂರೈಸಿದ ಮಾದರಿ											
1	ಮಾರುಕಟ್ಟೆ ಸಾಲಗಳು	14,914	24,026	17,348	32,183	42,499	61,900	49,000	26,000	63,003	71,525
2	ಕೇಂದ್ರ ಸರ್ಕಾರ ದಿಂದ ಸಾಲಗಳು	321	791	761	103	–749	12,709	18,767	3,755	4,267	6,503
3	ಎನ್ ಎಸ್ ಎಸ್ ಎಫ್‌ಗೆ ನೀಡಿದ ವಿಶೇಷ ಭದ್ರತೆ	1,563	(–)1,573	(–)1,573	(–)1,595	(–)1,628	(–)1,628	(–)1,628	(–)1,627	(–)1,628	(–)1,628
4	ಹಣಕಾಸು ಸಂಸ್ಥೆಗಳಿಂದ ಸಾಲ	164	491	316	141	156	531	529	480	2,186	2,046
5	ಸಣ್ಣ ಉಳಿತಾಯ, ಭ.ನಿ. ಇತ್ಯಾದಿ	2,086	2,657	2,812	3,292	4,156	3,632	3,522	3,403	3,554	3,497
6	ಮೀಸಲು ನಿಧಿಗಳು	2,081	6,013	3,019	3,197	4,728	6,275	9,173	7,282	7,328	3,824
7	ಠೇವಣಿಗಳು ಮತ್ತು ಮುಂಗಡಗಳು	284	3,041	1,833	3,068	3,174	(–)685	2,808	26,192	7,474	(–)544
8	ಅಮಾನತ್ತು ಮತ್ತು ಇತರೆ	990	491	(–)1,509	(–)6,087	(–)1,364	(–)2,921	(–)153	1,196	2,606	(–)2,743
9	ಇರಸಾಲುಗಳು	(–)17	(–)38	(–)76	(–)40	(–)347	(–)35	(–)133	159	56	(–)96
10	**ಒಟ್ಟಾರೆ ಕೊರತೆ**	**22,386**	**35,899**	**22,931**	**34,262**	**50,625**	**79,778**	**81,885**	**66,840**	**88,846**	**82,384**
11	ಸಾದಿಲ್ವಾರು ನಿಧಿಗೆ ವಿನಿಯೋಗ	–	–	–	–	–	–	420	–	–	–
12	ನಗದು ಶಿಲ್ಕಿನಲ್ಲಿ ಹೆಚ್ಚಳ(+)/ಇಳಿಕೆ(–)	(–)3,217	(–)7,235	8,170	4,180	(–)12,459	(–)12,680	(–)16,269	(–)20,217	23,324	2,645
13	**ಒಟ್ಟು ವಿತ್ತೀಯ ಕೊರತೆ**	19,169	28,664	31,101	38,442	38,166	67,098	66,037	46,623	65,522	85,030

ಆಕರ: ಆಯಾ ವರ್ಷದ ಹಣಕಾಸು ಲೆಕ್ಕಗಳು

ಕೋವಿಡ್ ಪೂರ್ವ ಅವಧಿಯಲ್ಲಿ (2015–2019) ರಾಜ್ಯದ ವಿತ್ತೀಯ ಕೊರತೆಯು ಕ್ರಮೇಣ ಹೆಚ್ಚಾಯಿತು ಮತ್ತು 2019–25ರಲ್ಲಿ ಇದು ಏರಿಳಿತದ ಪ್ರವೃತ್ತಿಯನ್ನು ತೋರಿಸಿತು. 2021–22 ಮತ್ತು 2022–23ರಲ್ಲಿ ನಿರಂತರ ಕುಸಿತದ ನಂತರ, ಇದು 2022–23ರಲ್ಲಿ ₹46,623 ಕೋಟಿಯಿಂದ 2023–24ರಲ್ಲಿ ₹65,522 ಕೋಟಿಗೆ ಏರಿತು ಮತ್ತು 2024–25ರಲ್ಲಿ ₹85,030 ಕೋಟಿಯ ದಶಕದ ಗರಿಷ್ಠ ಮಟ್ಟವನ್ನು ತಲುಪಿತು. ಮಾರುಕಟ್ಟೆ ಸಾಲಗಳು (ಶೇಕಡಾ 84) ನಂತರ ಭಾರತ ಸರ್ಕಾರದಿಂದ ಸಾಲಗಳು (ಶೇಕಡಾ ಎಂಟು) ರಾಜ್ಯದ ವಿತ್ತೀಯ ಕೊರತೆಯನ್ನು ನೀಗಿಸುವ ಪ್ರಾಥಮಿಕ ಮೂಲವಾಗಿ ಉಳಿದಿವೆ, ಕೋವಿಡ್ ಪೂರ್ವ ಅವಧಿಯಲ್ಲಿ (2015–20) ರಾಜ್ಯವು ರಾಜಸ್ವ ಹೆಚ್ಚುವರಿಯನ್ನು ಗಳಿಸಿದ್ದರೂ, 2022–23 ಹೊರತುಪಡಿಸಿ 2020–25ರ ಅವಧಿಯಲ್ಲಿ ಕೋವಿಡ್–19ರ ಅವಧಿಯಲ್ಲಿ (2020–22) ಕಡಿಮೆ ಆದಾಯದ ಸಂಗ್ರಹಣೆ ಮತ್ತು ರಾಜ್ಯವು ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರಿಂದ (2023–25) ರಾಜಸ್ವ ವೆಚ್ಚದ ಅಧಿಕ್ಯದಿಂದಾಗಿ ರಾಜ್ಯವು ರಾಜಸ್ವ ಕೊರತೆಯನ್ನು ಕಂಡಿತು. ಪರಿಣಾಮವಾಗಿ, ಇದು ವಿತ್ತೀಯ ಕೊರತೆಯ ವಿಸ್ತರಣೆಗೆ ಕಾರಣವಾಯಿತು.

1.5.2 ಲೆಕ್ಕಪರಿಶೋಧನೋತ್ತರದ ಕೊರತೆ ಸೂಚಕಗಳು

2024–25ನೇ ವರ್ಷದ ರಾಜ್ಯದ ಹಣಕಾಸು ಲೆಕ್ಕಗಳ ಪ್ರಕಾರ ರಾಜ್ಯದ ರಾಜಸ್ವ ಕೊರತೆ ₹20,834 ಕೋಟಿ (ಜಿ ಎಸ್ ಡಿ ಪಿ ಯ ಶೇಕಡಾ 0.72), ವಿತ್ತೀಯ ಕೊರತೆ ₹85,030 ಕೋಟಿ (ಜಿ ಎಸ್ ಡಿ ಪಿಯ ಶೇಕಡಾ 2.95) ಮತ್ತು ಪ್ರಾಥಮಿಕ ಕೊರತೆ ₹47,477 ಕೋಟಿ (ಜಿ ಎಸ್ ಡಿ ಪಿಯ ಶೇಕಡಾ 1.65)

ಆಗಿತ್ತು. ಆದಾಗ್ಯೂ, 2024–25ರ ಅವಧಿಯಲ್ಲಿ, ರಾಜ್ಯ ಸರ್ಕಾರವು ₹2,020.87 ಕೋಟಿ ರಾಜಸ್ವ ಸ್ವರೂಪದ ವೆಚ್ಚವನ್ನು ಬಂಡವಾಳ ವೆಚ್ಚ ಮತ್ತು ₹72.46 ಕೋಟಿ ಬಂಡವಾಳ ಸ್ವರೂಪದ ವೆಚ್ಚವನ್ನು, ರಾಜಸ್ವ ವೆಚ್ಚ ಎಂದು ತಪ್ಪಾಗಿ ವರ್ಗೀಕರಿಸಿದೆ ಮತ್ತು ₹57.48 ಕೋಟಿ ಎಸ್ ಡಿ ಆರ್ ಎಫ್/ಎಸ್ ಡಿ ಎಮ್ ಎಫ್ ಗೆ ಸಂಬಂಧಿಸಿದಂತೆ ಬಡ್ಡಿ ಪಾವತಿಸದಿರುವುದು ಮತ್ತು ₹3.03 ಕೋಟಿ ರಾಜಸ್ವ ಸ್ವೀಕೃತಿಗಳನ್ನು ಅಧಿಕವಾಗಿ ಹೇಳಿದೆ (ಅಧ್ಯಾಯ 2ರ ಕಂಡಿಕೆ 2.5.6ರಲ್ಲಿ ಚರ್ಚಿಸಲಾಗಿದೆ) ಎಂದು ಲೆಕ್ಕಪರಿಶೋಧನೆಯು ಕಂಡುಹಿಡಿದಿದೆ. ಇದರ ಪರಿಣಾಮವಾಗಿ ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯನ್ನು ಆ ಮಟ್ಟಿಗೆ ಕಡಿಮೆ ಅಂದಾಜು ಮಾಡಲಾಗಿದೆ ಮತ್ತು ಲೆಕ್ಕಪರಿಶೋಧನೆಯ ನಂತರ ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆ ₹22,843 ಕೋಟಿ (ಜಿ ಎಸ್ ಡಿ ಪಿಯ ಶೇಕಡಾ 0.79) ಮತ್ತು ₹85,087 ಕೋಟಿ (ಜಿ ಎಸ್ ಡಿ ಪಿಯ ಶೇಕಡಾ 2.95) ಆಗಿರುತ್ತದೆ ಎಂದು ತಿಳಿದುಬಂದಿದೆ. 2015–25ರ ಅವಧಿಗೆ ರಾಜ್ಯ ಎಫ್ ಆರ್ ಬಿ ಎಮ್‌ನ ನಂತರದ ಲೆಕ್ಕಪರಿಶೋಧನಾ ಕೊರತೆ ಸೂಚಕಗಳು ಮತ್ತು ಉಪಬಂಧಗಳ ಅನುಸರಣೆಯನ್ನು **ಕೋಷ್ಟಕ 1.31**ರಲ್ಲಿ ನೀಡಲಾಗಿದೆ.

ಕೋಷ್ಟಕ 1.31: ಲೆಕ್ಕಪರಿಶೋಧನೋತ್ತರದ ರಾಜ್ಯ ಎಫ್ ಆರ್ ಬಿ ಎಮ್ ಕಾಯ್ದೆಯ ಉಪಬಂಧಗಳ ಅನುಸರಣೆ

ವಿತ್ತೀಯ ಪ್ರಮಿತಿಗಳು		ರಾಜ್ಯ ಎಫ್ ಆರ್ ಬಿ ಎಮ್ ಕಾಯ್ದೆಯ ಗುರಿಗಳಿಗೆ ಪ್ರತಿಯಾಗಿ ಸಾಧನೆ									
		2015–16	2016–17	2017–18	2018–19	2019–20	2020–21	2021–22	2022–23	2023–24	2024–25
ರಾಜಸ್ವ ಕೊರತೆ (–) / ಹೆಚ್ಚಳ (+) (₹ಕೋಟಿಗಳಲ್ಲಿ)	ಗುರಿ	ರಾಜಸ್ವ ಹೆಚ್ಚಳದ ನಿರ್ವಹಣೆ	ರಾಜಸ್ವ ಹೆಚ್ಚಳದ ನಿರ್ವಹಣೆ	ರಾಜಸ್ವ ಹೆಚ್ಚಳದ ನಿರ್ವಹಣೆ	ರಾಜಸ್ವ ಹೆಚ್ಚಳದ ನಿರ್ವಹಣೆ	ರಾಜಸ್ವ ಹೆಚ್ಚಳದ ನಿರ್ವಹಣೆ	ಕೊವಿಡ್ 19 ರಿಂದಾಗಿ ರಾಜಸ್ವ ಹೆಚ್ಚಳ ಸಾಧಿಸಲಾಗದಿರಬಹುದು	ಚೇತರಿಕೆಯ ನಿಧಾನ ಗತಿಯಿಂದ ರಾಜಸ್ವ ಕೊರತೆ ಯಾಗಬಹುದು	ಚೇತರಿಕೆಯ ನಿಧಾನ ಗತಿಯಿಂದ ರಾಜಸ್ವ ಕೊರತೆ ಯಾಗಬಹುದು	ರಾಜಸ್ವ ಹೆಚ್ಚಳದ ನಿರ್ವಹಣೆ	ರಾಜಸ್ವ ಹೆಚ್ಚಳದ ನಿರ್ವಹಣೆ
	ಸಾಧನೆ	1,826	1,258	7,845	(–)383	(–)371	(–)21,286	(–)13,988	1,3281	(–)9,803	(–)22,843
ವಿತ್ತೀಯ ಕೊರತೆ (–) / ಹೆಚ್ಚಳ (+) ಜಿ ಎಸ್ ಡಿ ಪಿ ಶತಾಂಶವಾಗಿ	ಗುರಿ	3	3	3	3	3	5*	4	3.5	3	3
	ಸಾಧನೆ	1.83	2.37	2.33	2.68	2.46	4.19	3.32	2.02	2.54	2.95
ಬಾಕಿ ಇರುವ ಒಟ್ಟು ಹೊಣೆಗಾರಿಕೆಗೆ ಋಣ (ಶತಾಂಶ)	ಗುರಿ	25	25	25	25	25	25	25	25	25	25
	ಸಾಧನೆ	17.54	18.33	18.47	19.28	20.89	24.59*	23.08*	22.54*	23.58*	23.73*

ಆಕರ: ಹಣಕಾಸು ಲೆಕ್ಕಗಳು , 2024–25 ಆಯವ್ಯಯ ಪಕ್ಷಿನೋಟ ಮತ್ತು ವಾರ್ಷಿಕ ವಿತ್ತ ನಿರೂಪಣೆ 2024–25.

** ಭಾರತ ಸರ್ಕಾರದಿಂದ ಜಿ ಎಸ್ ಟಿ ಪರಿಹಾರದ ಬದಲಾಗಿ ಪಡೆದ (2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿ) ಬ್ಯಾಕ್–ಟು–ಬ್ಯಾಕ್ ಸಾಲವನ್ನು 2021–22, 2022–23 ಮತ್ತು 2023–24ನೇ ಸಾಲಿನ ಸಾಲ / ಜಿ ಎಸ್ ಡಿ ಪಿ ಅನುಪಾತ ಎಂದು ಪರಿಗಣಿಸಲಾಗಿಲ್ಲ ಮತ್ತು 2024–25ರಲ್ಲಿ, ಭಾರತ ಸರ್ಕಾರ ₹22,829 ಕೋಟಿ ಮರುಪಾವತಿಸಿದ ನಂತರ, ಉಳಿದ ₹7,687 ಕೋಟಿ ಬಾಕಿಯನ್ನು ಚಾಲ್ತಿ ಸಾಲ/ಜಿ ಎಸ್ ಡಿ ಪಿ ಅನುಪಾತಕ್ಕೆ ಸಾಲ ಎಂದು ಪರಿಗಣಿಸಲಾಗಿಲ್ಲ.*

1.5.3 ಹಣಕಾಸಿನ ಸಮತೋಲನ: ಕೊರತೆ ಮತ್ತು ಒಟ್ಟು ಸಾಲದ ಗುರಿಗಳ ಸಾಧನೆ

ಕಾಲಕಾಲಕ್ಕೆ ತಿದ್ದುಡಿ ಮಾಡಲಾದ ಕೆ ಎಫ್ ಆರ್ ಎ, 2002 ಅನ್ನು ಹಣಕಾಸು ನಿರ್ವಹಣೆಯಲ್ಲಿ ಅಂತರ–ಪೀಳಿಗೆಯ ಸಮಾನತೆ ಮತ್ತು ದೀರ್ಘಕಾಲೀನ ಸ್ಥೂಲ–ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಜಾರಿಗೆ ತರಲಾಯಿತು.

ಫೆಬ್ರವರಿ 2014ರಲ್ಲಿ ಕೆ ಎಫ್ ಆರ್ ಎ, 2002 ಗೆ ತಿದ್ದುಪಡಿ ಮಾಡುವ ಮೂಲಕ, ವಿಭಾಗ–2(ಜಿ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಒಟ್ಟು ಹೊಗಾರಿಕೆಗಳ ವ್ಯಾಪ್ತಿಯನ್ನು ಪಿ ಎಸ್ ಯುಗಳು ಮತ್ತು ವಿಶೇಷ ಉದ್ದೇಶದ ವಾಹನಗಳು (ಎಸ್ ಪಿ ಗಳು) ಮತ್ತು ಇತರ ಸಮಾನ ಸಾಧನಗಳಿಂದ ಪಡೆದ ಸಾಲಗಳನ್ನು ಸೇರಿಸಲು ವರ್ಧಿಸಲಾಯಿತು, ಅಲ್ಲಿ ಮೂಲ ಮತ್ತು/ಅಥವಾ ಬಡ್ಡಿಯನ್ನು ರಾಜ್ಯ ಆಯವ್ಯಯನಿಂದ ಪೂರೈಸಬೇಕು. ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೆ ಎಫ್ ಆರ್ ಎ ಅನ್ನು ತಿದ್ದುಪಡಿ ಮಾಡುತ್ತಿದೆ ಮತ್ತು ಸತತ ಹಣಕಾಸು ಆಯೋಗಗಳು (ಎಫ್ ಸಿ) ಸೂಚಿಸಿದ ನಿಯತಾಂಕಗಳನ್ನು ಮತ್ತು ಹಣಕಾಸಿನ ಪರಿಸ್ಥಿತಿಯನ್ನು ಆಧರಿಸಿದೆ.

2023–24ನೇ ವರ್ಷದಲ್ಲಿ, ರಾಜ್ಯ ಸರ್ಕಾರವು ವಿತ್ತೀಯ ಕೊರತೆಯನ್ನು ಅಂದಾಜು ಜಿ ಎಸ್ ಡಿ ಪಿಯ ಶೇಕಡಾ 3.5ರಿಂದ ಶೇಕಡಾ 3.0ಕ್ಕೆ ಇಳಿಸಲು ಕೆ ಎಫ್ ಆರ್ ಎ ಅನ್ನು ತಿದ್ದುಪಡಿ ಮಾಡಿತು ಮತ್ತು ಪ್ರಸ್ತುತ ವರ್ಷಕ್ಕೆ ಅದನ್ನು ನಿಗದಿಪಡಿಸಿತು.

ನಕ್ಷೆ 1.34: ಲೆಕ್ಕಪರಿಶೋಧನೆಯ ನಂತರದ ಕೊರತೆಗಳ ಪ್ರವೃತ್ತಿ ವಿಶ್ಲೇಷಣೆ



ಆಕರ: ಹಣಕಾಸು ಲೆಕ್ಕಗಳು , 2024–25 ಆಯವ್ಯಯ ಪಕ್ಷಿನೋಟ ಮತ್ತು ವಾರ್ಷಿಕ ವಿತ್ತ ನಿರೂಪಣೆ 2024–25

ಕೋವಿಡ್ ಪೂರ್ವ ಅವಧಿಯಲ್ಲಿ ರಾಜ್ಯವು ರಾಜಸ್ವ ಹೆಚ್ಚುವರಿಯನ್ನು ಗಳಿಸಿದ್ದರೂ, 2022–23 ವರ್ಷವನ್ನು ಹೊರತುಪಡಿಸಿ, ಕೋವಿಡ್ ನಂತರದ ಅವಧಿಯಲ್ಲಿ 2020–25ರಲ್ಲಿ ರಾಜಸ್ವ ಕೊರತೆ ಕಂಡುಬಂದಿದೆ. ಎಲ್ಲಾ ವರ್ಷಗಳಲ್ಲಿ ವಿತ್ತೀಯ ಕೊರತೆಯು ಕೆಎಫ್ಆರ್ಎ ನಿಗದಿಪಡಿಸಿದ ಗುರಿಯೊಳಗೆ ಇತ್ತು. 2024–25ರಲ್ಲಿ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ನಿಧಿ IIರಲ್ಲಿ 2014ರಿಂದ 2020ರ ವರೆಗಿನ ವರ್ಷಗಳ ₹5,000 ಕೋಟಿಗಳ ಖರ್ಚು ಮಾಡದ ಬಾಕಿಯನ್ನು ವಾಪಸ್ ಬರೆಯುವ ಮೂಲಕ ಮತ್ತು ಎಸ್ಎನ್ಎ ಖಾತೆಯಲ್ಲಿನ ಖರ್ಚು ಮಾಡದ ಬಾಕಿಗಳನ್ನು (₹1,333 ಕೋಟಿ) ಮರುಪಾವತಿ ಮಾಡುವ ಮೂಲಕ ರಾಜ್ಯವು ವಿತ್ತೀಯ ಕೊರತೆಯ ಗುರಿಯನ್ನು ಸಾಧಿಸಿತು. ನಿರ್ಗಮನ ಸಭೆಯಲ್ಲಿ (ಜನವರಿ 2026), ರಾಜ್ಯ ಸರ್ಕಾರವು ವಾಸ್ತವವನ್ನು ಒಪ್ಪಿಕೊಂಡಿತು.

2015–2020ರ ಕೋವಿಡ್ ಪೂರ್ವ ಅವಧಿಯಲ್ಲಿ, ಜಿ ಎಸ್ ಡಿ ಪಿಗೆ ವಿತ್ತೀಯ ಕೊರತೆಯ ಅನುಪಾತವು ಸಮಾರು ಶೇಕಡಾ 1.8ರಿಂದ 2.7ರಷ್ಟು ಹೆಚ್ಚಾಗಿ ಉಳಿದಿದ್ದು, ವೆಚ್ಚದ ಒತ್ತಡಗಳಿಂದ ನಡೆಸಲ್ಪಡುವ ನಿರಂತರ ವಿತ್ತೀಯ ಕೊರತೆಯನ್ನು ಸೂಚಿಸುತ್ತದೆ. ಜಿ ಎಸ್ ಡಿ ಪಿಗೆ ಪ್ರಾಥಮಿಕ ಕೊರತೆ ಕೂಡ ನಕಾರಾತ್ಮಕವಾಗಿದ್ದು, ಸಾಲಗಳು ಬಡ್ಡಿ ಪಾವತಿಗಳಿಗೆ ಅಲ್ಲ ಎಂದು ಸೂಚಿಸುತ್ತದೆ. ಸಣ್ಣ ಹೆಚ್ಚುವರಿ/ಕೊರತೆಗಳೊಂದಿಗೆ, ಜಿ ಎಸ್ ಡಿ ಪಿಗೆ ರಾಜಸ್ವ ಕೊರತೆಯು ಶೂನ್ಯದ ಸಮೀಪದಲ್ಲಿತ್ತು, ಇದು ರಾಜಸ್ವ ಸ್ವೀಕೃತಿಗಳು ರಾಜಸ್ವ ವೆಚ್ಚಕ್ಕೆ ಅನುಗುಣವಾಗಿರುವುದನ್ನು ಸೂಚಿಸುತ್ತವೆ. ಕೋವಿಡ್ ಅವಧಿಯಲ್ಲಿ ಅಂದರೆ, 2020–21ರಲ್ಲಿ ಆರೋಗ್ಯ, ಪರಿಹಾರ ಮತ್ತು ಕಲ್ಯಾಣಕ್ಕಾಗಿ ಹೆಚ್ಚಿನ ಖರ್ಚು ಸೇರಿದಂತೆ ರಾಜಸ್ವ ಕುಸಿತದಿಂದಾಗಿ ಎಲ್ಲಾ ಸೂಚಕಗಳು ಕುಸಿದವು.

ಕೋವಿಡ್ ನಂತರದ ಅವಧಿಯಲ್ಲಿ, ಜಿ ಎಸ್ ಡಿ ಪಿಗೆ ವಿತ್ತೀಯ ಕೊರತೆ ಅನುಪಾತವು ಸುಧಾರಿಸಿತು ಆದರೆ ರಾಜ್ಯವು ಹೊಸ ಸಾಮಾಜಿಕ ವಲಯದ ಯೋಜನೆಗಳನ್ನು ಜಾರಿಗೊಳಿಸಿದ್ದರಿಂದ 2023–25ರಲ್ಲಿ ಮತ್ತೊಮ್ಮೆ ಹೆಚ್ಚಾಗಿದೆ. ಜಿ ಎಸ್ ಡಿ ಪಿಗೆ ಪ್ರಾಥಮಿಕ ಕೊರತೆ ಅನುಪಾತದೊಂದಿಗೆ ಅದೇ ಸನ್ನಿವೇಶವು ಮುಂದುವರೆಯಿತು. ಜಿ ಎಸ್ ಡಿ ಪಿಗೆ ರಾಜಸ್ವ ಕೊರತೆ ಅನುಪಾತಕ್ಕೆ ಸಂಬಂಧಿಸಿದಂತೆ, ಅನುಪಾತವು 2022–23 (ರಾಜಸ್ವ ಹೆಚ್ಚುವರಿ)ರ ವರೆಗೆ ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು ಮತ್ತು ನಂತರದ ವರ್ಷಗಳಲ್ಲಿ 2023–24 ಮತ್ತು 2024–25ರಲ್ಲಿ ಹೆಚ್ಚಾಯಿತು.

ನಕ್ಷೆ 1.35 : ಜಿ.ಎಸ್.ಡಿ.ಪಿ. ಯ ಶತಾಂಶವಾಗಿ ರಾಜಸ್ವ ಕೊರತೆ



ನಕ್ಷೆ 1.36 : ಜಿ.ಎಸ್.ಡಿ.ಪಿ. ಯ ಶತಾಂಶವಾಗಿ ವಿತ್ತೀಯ ಕೊರತೆ



ನಕ್ಷೆ 1.37 : ಜಿ.ಎಸ್.ಡಿ.ಪಿ. ಯ ಶತಾಂಶವಾಗಿ ಪ್ರಾಥಮಿಕ ಕೊರತೆ



ಆಕರ: ಹಣಕಾಸು ಲೆಕ್ಕಗಳು ಮತ್ತು ಆಯವ್ಯಯ ದಾಖಲೆಗಳು

2024–25ನೇ ವರ್ಷದಲ್ಲಿ, ಸರ್ಕಾರವು 15ನೇ ಹಣಕಾಸು ಆಯೋಗದಿಂದ ನಿರ್ಣಯಿಸಲ್ಪಟ್ಟ ರಾಜಸ್ವ ಹೆಚ್ಚಳಕ್ಕೆ ಪ್ರತಿಯಾಗಿ ರಾಜಸ್ವ ಕೊರತೆಯನ್ನು ಕಂಡಿತು. ಆದಾಗ್ಯೂ, ರಾಜಸ್ವ ಕೊರತೆಯು ಯೋಜಿತ ಆಯವ್ಯಯ ಅಂದಾಜಿನೊಳಗೆ ಇತ್ತು. ಇದಲ್ಲದೆ, ವಿತ್ತೀಯ ಕೊರತೆಯು – ಜಿ ಎಸ್ ಡಿ ಪಿ ಯೋಜಿತ ಆಯವ್ಯಯ ಮತ್ತು 15 ಹಣಕಾಸು ಆಯೋಗ ಎರಡರಲ್ಲೂ ನಿಗದಿಪಡಿಸಿದ ಮಟ್ಟದಲ್ಲಿತ್ತು ಮತ್ತು ಬಾಕಿ ಇರುವ ಒಟ್ಟು ಹೊಣೆಗಾರಿಕೆ – ಜಿ ಎಸ್ ಡಿ ಪಿ ಅನುಪಾತವು 15 ಹಣಕಾಸು ಆಯೋಗದಿಂದ ನಿಗದಿಪಡಿಸಿದ ಮಟ್ಟದಲ್ಲಿಯೇ ಇತ್ತು ಆದರೆ ಆಯವ್ಯಯನ ಪ್ರಕ್ಷೇಪಣದಲ್ಲಿ ಅದನ್ನು ಹೊಂದಲು ಸಾಧ್ಯವಾಗಲಿಲ್ಲ.

1.5.4 ಎಲ್ಲಾ ರಾಜ್ಯಗಳ ಒಟ್ಟು ಮೊತ್ತದೊಂದಿಗೆ ರಾಜ್ಯದ ಪ್ರಮುಖ ವಿತ್ತೀಯ ಸೂಚಕಗಳ ಹೋಲಿಕೆ

ರಾಜ್ಯದ ಪ್ರಮುಖ ಹಣಕಾಸಿನ ಸೂಚಕಗಳ ಹೋಲಿಕೆಯನ್ನು ಅಂದರೆ 2015–16ರಿಂದ 2024–25ರ ವರೆಗಿನ ಎಲ್ಲಾ ರಾಜ್ಯಗಳ ಒಟ್ಟು ಮೊತ್ತದೊಂದಿಗೆ ಜಿ ಎಸ್ ಡಿ ಪಿ ಗೆ ಹೋಲಿಸಿದರೆ. ರಾಜಸ್ವ ಕೊರತೆ, ವಿತ್ತೀಯ ಕೊರತೆ ಮತ್ತು ಬಾಕಿ ಇರುವ ಋಣದ ಶತಾಂಶವನ್ನು **ನಕ್ಷೆ 1.38, ನಕ್ಷೆ 1.39** ಮತ್ತು **ನಕ್ಷೆ 1.40**ರಲ್ಲಿ ನೀಡಲಾಗಿದೆ.

ನಕ್ಷೆ 1.38 : ಎಲ್ಲಾ ರಾಜ್ಯಗಳ ಮತ್ತು ಕರ್ನಾಟಕದ ಜಿ ಎಸ್ ಡಿ ಪಿಯ ಶತಾಂಶವಾಗಿ ರಾಜಸ್ವ ಕೊರತೆಯ ಪ್ರವೃತ್ತಿ ವಿಶ್ಲೇಷಣೆ



ಆಕರ : ಆಯಾ ರಾಜ್ಯಗಳ ಹಣಕಾಸು ಲೆಕ್ಕಗಳು

ನಕ್ಷೆ 1.39 : ಎಲ್ಲಾ ರಾಜ್ಯಗಳ ಮತ್ತು ಕರ್ನಾಟಕದ ಜಿ ಎಸ್ ಡಿ ಪಿಯ ಶತಾಂಶವಾಗಿ ವಿತ್ತೀಯ ಕೊರತೆಯ ಪ್ರವೃತ್ತಿ ವಿಶ್ಲೇಷಣೆ



ಆಕರ : ಆಯಾ ರಾಜ್ಯಗಳ ಹಣಕಾಸು ಲೆಕ್ಕಗಳು

ನಕ್ಷೆ 1.40 : ಎಲ್ಲಾ ರಾಜ್ಯಗಳ ಮತ್ತು ಕರ್ನಾಟಕದ ಜಿ ಎಸ್ ಡಿ ಪಿಯ ಶತಾಂಶವಾಗಿ ಬಾಕಿ ಇರುವ ಋಣ ಪ್ರವೃತ್ತಿ ವಿಶ್ಲೇಷಣೆ



ಆಕರ : ಆಯಾ ರಾಜ್ಯಗಳ ಹಣಕಾಸು ಲೆಕ್ಕಗಳು

ಕೋವಿಡ್ ಪೂರ್ವದ ಅವಧಿಯವರೆಗೆ (2015–2020) ರಾಜಸ್ವ ಹೆಚ್ಚಳವನ್ನು ಕಾಯ್ದುಕೊಂಡಿದ್ದ ರಾಜ್ಯವು, ಕೋವಿಡ್ ಅವಧಿಯಲ್ಲಿ (2020–21) ಮೊದಲ ಬಾರಿಗೆ ರಾಜಸ್ವ ಕೊರತೆಯನ್ನು ಕಂಡಿತು ಮತ್ತು ಕೋವಿಡ್ ನಂತರದ ಅವಧಿಯಲ್ಲಿ (2020–25) ಇದು 2022–23ರಲ್ಲಿ ರಾಜಸ್ವ ಹೆಚ್ಚಳವನ್ನು ತಲುಪಿದ್ದನ್ನು ಹೊರತುಪಡಿಸಿ ರಾಜಸ್ವ ಕೊರತೆಯಾಗಿಯೇ ಮುಂದುವರೆಯಿತು. ಇದು ಮೂಲತಃ ಕೋವಿಡ್ ನಂತರದ ವರ್ಷದಲ್ಲಿ ನಿಧಾನಗತಿಯ ಆರ್ಥಿಕ ಬೆಳವಣಿಗೆ ಮತ್ತು ಐದು ಖಾತರಿ ಯೋಜನೆಗಳ ಅನುಷ್ಠಾನದಿಂದಾಗಿ ಉಂಟಾಯಿತು. 2021–22ರಲ್ಲಿ ಹೊರತುಪಡಿಸಿ ರಾಜ್ಯವು ಒಟ್ಟಾರೆ ಇತರ ರಾಜ್ಯಗಳಿಗಿಂತಲೂ ಉತ್ತಮ ಆರ್ಥಿಕ ಸ್ಥಿತಿಯಲ್ಲಿದೆ ಎಂದು ಸೂಚಕವು ತೋರಿಸುತ್ತದೆ. ಅದೇ ರೀತಿ, ಜಿ ಎಸ್ ಡಿ ಪಿಯ ಶೇಕಡಾವಾರು ಪ್ರಮಾಣದಲ್ಲಿ ವಿತ್ತೀಯ ಕೊರತೆಗೆ ಸಂಬಂಧಿಸಿದಂತೆ, 2021–22ರಲ್ಲಿ ಹೊರತುಪಡಿಸಿ ಎಲ್ಲಾ ರಾಜ್ಯಗಳಿಗಿಂತಲೂ ರಾಜ್ಯವು ಉತ್ತಮ ಸ್ಥಾನದಲ್ಲಿದೆ. ಜಿ ಎಸ್ ಡಿ ಪಿಗೆ ಶೇಕಡಾವಾರು ಪ್ರಮಾಣದಲ್ಲಿ ಬಾಕಿ ಇರುವ ಹೊಣೆಗಾರಿಕೆಗಳು ಎಲ್ಲಾ ರಾಜ್ಯಗಳ ಒಟ್ಟು ಮೊತ್ತಕ್ಕಿಂತ (ಯುಟಿಗಳನ್ನು ಹೊರತುಪಡಿಸಿ) ಕಡಿಮೆ ಇದ್ದು, ಇದು ಇತರ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಬಲವಾದ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತದೆ.

1.5.5 ಸಾಲ ಸುಸ್ಥಿರತಾ ವಿಶ್ಲೇಷಣೆ

ಸಾಲ ಸುಸ್ಥಿರತೆಯು ಪ್ರಸ್ತುತ ಮತ್ತು ಭವಿಷ್ಯದಲ್ಲಿ ರಾಜ್ಯವು ತನ್ನ ಸಾಲ ಬಾಧ್ಯತೆಯನ್ನು ಪೂರೈಸುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಸಾಲ ಸುಸ್ಥಿರತಾ ಸೂಚಕಗಳಲ್ಲಿನ ವ್ಯತ್ಯಾಸಗಳ ವಿಶ್ಲೇಷಣೆಯನ್ನು **ಕೋಷ್ಟಕ 1.32**ರಲ್ಲಿ ನೀಡಲಾಗಿದೆ.

ಕೋಷ್ಟಕ 1.32: ಸಾಲ ಸುಸ್ಥಿರತಾ ಸೂಚಕಗಳಲ್ಲಿನ ಪ್ರವೃತ್ತಿಗಳು

(₹ ಕೋಟಿಗಳಲ್ಲಿ)

ಕ್ರ.ಸಂ.	ಸಾಲ ಸುಸ್ಥಿರತಾ ಸೂಚಕಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
1	ಒಟ್ಟಾರೆ ಹೊಣೆಗಾರಿಕೆಗಳು ಅಥವಾ ಒಟ್ಟಾರೆ ಸಾಲ	1,83,322	2,21,319	2,46,231	2,85,238	3,37,520	4,15,926	4,90,256	5,53,363	6,33,531	6,92,115
2	ಒಟ್ಟಾರೆ ಸಾಲದ ಬೆಳವಣಿಗೆಯ ದರ (ಶೇಕಡಾ)	11.59	20.73	11.26	15.84	18.33	23.23	17.87	12.87	14.49	9.25
3	ಜಿ ಎಸ್ ಡಿ ಪಿ (ನಾಮಮಾತ್ರ ಪರಿಭಾಷೆಯಲ್ಲಿ)	10,45,168	12,07,608	13,33,240	14,79,391	16,15,827	16,40,811	19,92,029	23,19,696	25,57,241	28,83,903
4	ನಾಮಮಾತ್ರ ಜಿ ಎಸ್ ಡಿ ಪಿ ಬೆಳವಣಿಗೆ (ಶೇಕಡಾ)	14.36	15.54	10.40	10.96	9.22	1.55	21.41	16.45	10.24	12.77
5	ಒಟ್ಟಾರೆ ಸಾಲ/ಜಿ ಎಸ್ ಡಿ ಪಿ (ಶೇಕಡಾ)	17.54	18.33	18.47	19.28	20.89	24.59*	23.08*	22.54*	23.58*	23.73*
6	ಒಟ್ಟಾರೆ ಸಾಲಗಳಿಗೆ ಮರುಪಾವತಿ (ಶೇಕಡಾ)	74.92	60.06	72.78	65.61	60.69	53.31	58.20	62.77	57.76	64.59
7	ಶೇಕಡಾವಾರು ಪ್ರಮಾಣದಲ್ಲಿ ಲಭ್ಯವಿರುವ ನಿವ್ವಳ ಸಾಲಗಳು	25.08	39.94	27.22	34.39	39.31	46.69	41.80	37.23	42.24	35.41
8	ಒಟ್ಟಾರೆ ಸಾಲದ ಮೇಲಿನ ಬಡ್ಡಿ ಪಾವತಿಗಳು	11,390	12,928	14,942	16,582	19,903	23,433	26,276	29,643	31,872	37,552
9	ಒಟ್ಟಾರೆ ಸಾಲದ ಮೇಲಿನ ಪರಿಣಾಮಕಾರಿ ಬಡ್ಡಿ ದರ[10] (ಶೇಕಡಾ)	8.01	7.70	7.71	7.45	7.51	7.29	6.93	7.08	6.82	6.93
10	ಆದಾಯ ಸ್ವೀಕೃತಿಗಳಿಗೆ ಬಡ್ಡಿ ಪಾವತಿ (ಶೇಕಡಾ)	9.59	9.70	10.16	10.05	11.34	14.95	13.42	12.94	13.66	14.53
11	ಆದಾಯ ಕೊರತೆ/ಹೆಚ್ಚುವರಿ	1,789	1,293	4,518	679	1,185	(–)19,338	(–)13,666	13,496	(–)9,272	(–)20,834
12	ಪ್ರಾಥಮಿಕ ಆದಾಯ ಸಮತೋಲನ (ಪಿ ಆರ್ ಬಿ)	13,179	14,221	19,460	17,261	21,088	4,095	12,610	43,139	22,600	16,718
13	ಪ್ರಾಥಮಿಕ ಆದಾಯ	(–)7,779	(–)15,736	(–)16,159	(–)21,860	(–)18,263	(–)43,665	(–)39,760	(–)16,980	(–)33,650	(–)47,477
14	ಪಬಿ/ಜಿ ಎಸ್ ಡಿ ಪಿ (ಶೇಕಡಾ)	0.74	1.30	1.21	1.48	1.13	2.66	2.00	0.73	1.32	1.65
15	ಬಡ್ಡಿದರಗಳ[11] ಮತ್ತು ಒಟ್ಟಾರೆ ಸಾಲದ ಮೇಲಿನ ಪರಿಣಾಮಕಾರಿ ದರದ ನಡುವಿನ ವ್ಯತ್ಯಾಸ	(–)7.89	(–)7.57	(–)7.59	(–)7.39	(–)7.43	(–)7.17	(–)6.44	(–)6.49	(–)6.43	(–)5.61

ಕ್ರ.ಸಂ.	ಸಾಲ ಸುಸ್ಥಿರತಾ ಸೂಚಕಗಳು	2015–16	2016–17	2017–18	2018–19	2019–20	2020–21	2021–22	2022–23	2023–24	2024–25
16	ದ್ರವ ನಿರ್ವಹಣೆ (ಆರ್ ಬಿ ಐ ನಲ್ಲಿ ಲಭ್ಯವಿರುವ ಹಣಕಾಸು ವಸತಿ ಸಾಧನಗಳ ಬಳಕೆ) (ಸಂದರ್ಭಗಳಲ್ಲಿ)								1,798 / 5		
17	ಸಾಲ ಸ್ಥಿರೀಕರಣ (ಕ್ವಾಂಟಮ್ ಸ್ಪ್ರೆಡ್[12] + ಪ್ರಾಥಮಿಕ ಬಾಕಿ)	1,933	(–)1,381	(–)10,659	(–)13,409	(–)13,311	(–)63,981	18,726	23,669	(–)16,524	(–)13,395
18	**ಡೋಮರನ ಅಂತರ**										
ಎ	ಜಿ ಎಸ್ ಡಿ ಪಿ (ಸ್ಥಿರ ಪರಿಭಾಷೆಯಲ್ಲಿ)	8,31,322	9,41,774	10,19,724	10,85,101	11,51,393	11,24,311	12,48,654	13,80,065	14,62,577	15,70,294
ಬಿ	ವಾಸ್ತವ ಬೆಳವಣಿಗೆ (ಸ್ಥಿರ ಪರಿಭಾಷೆಯಲ್ಲಿ)	11.08	13.29	8.28	6.41	6.11	(–)2.35	11.06	10.52	5.98	7.36
ಸಿ	ಸಿ ಪಿ ಐ (ಶೇಕಡಾ) ಆಧಾರಿತ ಹಣದುಬ್ಬರ	6.73	4.43	3.01	3.32	5.57	5.26	6.11	5.48	5.79	4.39
ಡಿ	ಪರಿಣಾಮಕಾರಿ ಬಡ್ಡಿದರ	8.01	7.70	7.71	7.45	7.51	7.29	6.93	7.08	6.82	6.93
ಇ	ವಾಸ್ತವ ಪರಿಣಾಮಕಾರಿ ಬಡ್ಡಿದರ (ಪರಿಣಾಮಕಾರಿ ದರಬಡ್ಡಿ–ಹಣದುಬ್ಬರ)	1.28	3.27	4.70	4.13	1.94	2.03	0.82	1.60	1.03	2.54
ಎಫ್	ಬೆಳವಣಿಗೆಯ ಬಡ್ಡಿ ವ್ಯತ್ಯಾಸ (ವಾಸ್ತವ ಬೆಳವಣಿಗೆ–ವಾಸ್ತವ ಪರಿಣಾಮಕಾರಿ ಬಡ್ಡಿದರ)	9.80	10.02	3.57	2.28	4.17	(–)4.38	10.24	8.93	4.95	4.83
	ಪ್ರಾಥಮಿಕ ಶಿಲ್ಕು	(–)7,826	(–)15,814	(–)16,128	(–)21,828	(–)18,263	(–)43,665	(–)39,760	(–)16,980	(–)33,650	(–)47,477

ಆಕರ: ಹಣಕಾಸು ಲೆಕ್ಕಗಳು

1. ಒಟ್ಟಾರೆ ಹೊಣೆಗಾರಿಕೆಗಳು ಅಥವಾ ಒಟ್ಟಾರೆ ಸಾಲವು ಸಾರ್ವಜನಿಕ ಸಾಲ (ಮಾರ್ಗ ಮತ್ತು ಸರಾಸರಿ ಮುಂಗಡಗಳನ್ನು ಒಳಗೊಂಡಂತೆ) ಮತ್ತು ಸಾರ್ವಜನಿಕ ಖಾತೆ ಹೊಣೆಗಾರಿಕೆ (ಬಡ್ಡಿ ಮತ್ತು ಬಡ್ಡಿರಹಿತ ಮೀಸಲು ನಿಧಿಗಳು ಮತ್ತು ಠೇವಣಿಗಳು ಸೇರಿದಂತೆ) ಸೇರಿದಂತೆ ಇತರ ಹೊಣೆಗಾರಿಕೆಗಳನ್ನು ಒಳಗೊಂಡಿದೆ.

2. ಪಿ ಆರ್ ಬಿ: ಆದಾಯ ರಶೀದಿಗಳು – ಆದಾಯ ವೆಚ್ಚ (ಬಡ್ಡಿ ಪಾವತಿಗಳ ನಿವ್ವಳ), ಇಲ್ಲಿ (–) ಪಿ ಬಿ ಪ್ರಾಥಮಿಕ ಕೊರತೆಯನ್ನು ಸೂಚಿಸುತ್ತದೆ ಮತ್ತು ಪ್ರತಿಯಾಗಿ.

3. ಪಿ ಬಿ: ಒಟ್ಟು ರಶೀದಿಗಳು (ಸಾಲಗಳ ನಿವ್ವಳ) – ಒಟ್ಟು ವೆಚ್ಚ (ಬಡ್ಡಿ ಪಾವತಿಗಳ ನಿವ್ವಳ), ಇಲ್ಲಿ (–) ಪಿ ಬಿ ಪ್ರಾಥಮಿಕ ಕೊರತೆಯನ್ನು ಸೂಚಿಸುತ್ತದೆ ಮತ್ತು ಪ್ರತಿಯಾಗಿ.

4. ಪರಿಣಾಮಕಾರಿ ಬಡ್ಡಿ ದರ: ಬಡ್ಡಿ ಪಾವತಿಗಳು/ಹಿಂದಿನ ಮತ್ತು ಪ್ರಸ್ತುತ ಹಣಕಾಸು ವರ್ಷದ ಸರಾಸರಿ ಬಾಕಿ ಹೊಣೆಗಾರಿಕೆಗಳು. ಬಡ್ಡಿರಹಿತ ಮೀಸಲು ನಿಧಿಗಳು ಮತ್ತು ಠೇವಣಿಗಳನ್ನು ಹೊರತುಪಡಿಸಿ ಇದನ್ನು ಲೆಕ್ಕಹಾಕಬಹುದು.

5. 2020–21ರಲ್ಲಿ ಭಾರತ ಸರ್ಕಾರದಿಂದ ಪಡೆದ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳ ಜಿ ಎಸ್ ಟಿ ಪರಿಹಾರದ ಬದಲಾಗಿ ಪಡೆದ ಸಾಲ, ಬಡ್ಡಿರಹಿತ ನಿಧಿಗಳು ಮತ್ತು ಬಂಡವಾಳ ವೆಚ್ಚ/ಹೂಡಿಕೆಗಾಗಿ ವಿಶೇಷ ಸಹಾಯಕ್ಕಾಗಿ ಯೋಜನೆಯಡಿಯಲ್ಲಿ ಪಡೆದ 50 ವರ್ಷಗಳ ಬಡ್ಡಿರಹಿತ ಸಾಲಗಳನ್ನು ಸಾಲಗಳ ಮೇಲಿನ ಪರಿಣಾಮಕಾರಿ ಬಡ್ಡಿ ದರವನ್ನು ಲೆಕ್ಕಾಚಾರ ಮಾಡುವ ಹೊಣೆಗಾರಿಕೆ ಎಂದು ಪರಿಗಣಿಸಲಾಗಿಲ್ಲ.

6. ಬಡ್ಡಿ/ದರ ಹರಡುವಿಕೆ: ಜಿ ಎಸ್ ಡಿ ಪಿ ನಾಮಮಾತ್ರ ಬೆಳವಣಿಗೆ – ಪರಿಣಾಮಕಾರಿ ಬಡ್ಡಿ ದರ.

*7. ಕ್ವಾಂಟಮ್ ಸ್ಪ್ರೆಡ್: (ಬಡ್ಡಿ ಸ್ಪ್ರೆಡ್*ಸಾಲ)/100*

8. ನಿವ್ವಳ ಸಾಲ (ಎನ್ ಎಲ್): ಬಾಕಿ ಇರುವ ಸಾಲಗಳು ಮತ್ತು ಮುಂಗಡಗಳನ್ನು ವಿತರಿಸಲಾಗಿದೆ (ಸಾಲಗಳು ಮತ್ತು ಮುಂಗಡಗಳನ್ನು ವಿತರಿಸಲಾಗಿದೆ – ವಸೂಲಾತಿಯ ನಿವ್ವಳ)

9. ಬಡ್ಡಿ ರಶೀದಿಗಳ ಪರಿಣಾಮಕಾರಿ ದರ: ಬಡ್ಡಿ ರಶೀದಿಗಳು/ಹಿಂದಿನ ಮತ್ತು ಪ್ರಸ್ತುತ ಹಣಕಾಸು ವರ್ಷದಲ್ಲಿ ವಿತರಿಸಲಾದ ಸರಾಸರಿ ಬಾಕಿ ಇರುವ ಸಾಲ ಸಾಲಗಳು ಮತ್ತು ಮುಂಗಡಗಳು

10. ಆರ್ ಓ ಐ: ಹೂಡಿಕೆಯ ಮೇಲಿನ ಆದಾಯ (ನಿವ್ವಳ ಸಾಲದ ಖಾತೆಯಲ್ಲಿ ಬಡ್ಡಿ ರಶೀದಿಗಳಿಗೆ ಲೆಕ್ಕಹಾಕಲಾದ ಪರಿಣಾಮಕಾರಿ ಬಡ್ಡಿ ದರ)

11. ದ್ರವ ನಿರ್ವಹಣೆ: ಎಸ್ ಡಿ ಎಫ್, ಡಬ್ಲೂ ಎಮ್ ಎ ಮತ್ತು ಓಡಿ ವಿರುದ್ಧ ಪಡೆದ ಮೊತ್ತ ಮತ್ತು ಮುಕ್ತಾಯ ಪ್ರೊಫೈಲ್ ಸಾರ್ವಜನಿಕ ಸಾಲವಾಗಿದೆ

12 ಜಿ ಎಸ್ ಟಿ ಪರಿಹಾರದ ಬದಲಿಗೆ ಕೇಂದ್ರ ಸರ್ಕಾರ ದಿಂದ ಪಡೆದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳ ಬ್ಯಾಕ್–ಟು–ಬ್ಯಾಕ್ ಸಾಲವನ್ನು ಜಿ ಎಸ್ ಡಿ ಪಿ ಅನುಪಾತಕ್ಕಾಗಿ ಸಾಲ ಎಂದು ಪರಿಗಣಿಸಲಾಗಿಲ್ಲ 2021–22, 2022–23, 2023–24 ಮತ್ತು 2024–25ರ ಅವಧಿಯಲ್ಲಿ, ಭಾರತ ಸರ್ಕಾರ ₹22,829 ಕೋಟಿ ಮರುಪಾವತಿಸಿದ ನಂತರ, ₹7,687 ಕೋಟಿ ಬಾಕಿಯನ್ನು ಕಾರ್ಯನಿರತ ಸಾಲ/ಜಿಎಸ್‌ಡಿಪಿ ಅನುಪಾತಕ್ಕೆ ಸಾಲವೆಂದು ಪರಿಗಣಿಸಲಾಗಿಲ್ಲ.*

13. # ಮರುಪಾವತಿಗಳು ಆದಾಯ ರಶೀದಿಗಳಿಂದ ಸೇವೆ ಸಲ್ಲಿಸಲಾಗುತ್ತಿರುವುದರಿಂದ ಆದಾಯ ಹೆಚ್ಚುವರಿಯೊಂದಿಗೆ ವರ್ಷಗಳ ಬಡ್ಡಿ ಪಾವತಿಗಳನ್ನು ಹೊರಗಿಡುತ್ತವೆ.

14. ಡೊಮರ್ ಮಾದರಿಯು ಸಾರ್ವಜನಿಕ ಸಾಲಗಳ ವಿಶ್ಲೇಷಣೆಗೆ ಮಾದರಿಗಳಲ್ಲಿ ಒಂದಾಗಿದೆ, ಇದು ಆರ್ಥಿಕತೆಯ ಬೆಳವಣಿಗೆಯ ದರವು ಸಾಲದ ಮೇಲಿನ ಬಡ್ಡಿ ದರವನ್ನು ಮೀರಿದರೆ ಸಾಲ–ಜಿಡಿಪಿ ಅನುಪಾತವು ಸ್ಥಿರವಾಗಿರುತ್ತದೆ ಎಂದು ಹೇಳುತ್ತದೆ.

2015–25ರ ಅವಧಿಯಲ್ಲಿ ಒಟ್ಟಾರೆ ಸಾಲವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ, ಆದಾಗ್ಯೂ, ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಬೆಳವಣಿಗೆಯ ದರವು 2020–21ರಲ್ಲಿ ಅತಿ ಹೆಚ್ಚು ಇದ್ದು, ಉಳಿದ ವರ್ಷಗಳಲ್ಲಿ ಅಂತರ–ವರ್ಷ ವ್ಯತ್ಯಾಸಗಳನ್ನು ತೋರಿಸಿದೆ. ಮೇಲಿನ ಕೋಷ್ಟಕದ ವಿಶ್ಲೇಷಣೆ ಮತ್ತು 15ನೇ ಹಣಕಾಸು ಶಿಫಾರಸು ಮಾಡಿದ ಹಣಕಾಸಿನ ಏಕೀಕೃತ ಮಾರ್ಗಸೂಚಿಯನ್ನು ಆಧರಿಸಿ, ಈ ಕೆಳಗಿನವುಗಳನ್ನು ಗಮನಿಸಲಾಗಿದೆ:

- ಸಾಲ/ಹೊಣೆಗಾರಿಕೆ/ಜಿ ಎಸ್ ಡಿ ಪಿ ಅನುಪಾತವು (ಶೇಕಡಾವಾರು ಪ್ರಮಾಣದಲ್ಲಿ) ಕುಸಿಯುತ್ತಿರುವುದು ಸ್ಥಿರತೆಗೆ ಕಾರಣವಾಗುತ್ತದೆ ಎಂದು ಪರಿಗಣಿಸಬಹುದು. 2015–20ರ ಅವಧಿಯಲ್ಲಿ, ಅನುಪಾತವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿತ್ತು. ಅದರ ನಂತರ, ಸಾಲ/ಹೊಣೆಗಾರಿಕೆ–ಜಿ ಎಸ್ ಡಿ ಪಿ ಅನುಪಾತವು 2022–23ರವರೆಗೆ ಕಡಿಮೆಯಾಗುವ ಪ್ರವೃತ್ತಿಯನ್ನು ಕಂಡಿತು. ಆದಾಗ್ಯೂ, 2023–24 ಮತ್ತು 2024–25ರ ವರ್ಷಗಳಲ್ಲಿ ಅನುಪಾತವು ಹೆಚ್ಚಾಗಿದೆ. ಕೆ ಆರ್ ಎಫ್ ಎ ನಿಗದಿಪಡಿಸಿದ ಮಟ್ಟದ ಅಡಿಯಲ್ಲಿ, ರಾಜ್ಯವು ಹೇಳಲಾದ ಮಿತಿಯನ್ನು ಉಲ್ಲಂಘಿಸದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇದು ಸೂಚಿಸುತ್ತದೆ.
- ಹೇಳಲಾದ ಅವಧಿಯಲ್ಲಿ ಒಟ್ಟಾರೆ ಹೊಣೆಗಾರಿಕೆಗಳ ಮೇಲಿನ ಬಡ್ಡಿ ಪಾವತಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ.
- ಆದಾಯ ಸ್ವೀಕೃತಿಗಳ ಮೇಲೆ ಬಡ್ಡಿ ಪಾವತಿಗಳ ಅನುಪಾತವು ಸಾಲದ ಸುಸ್ಥಿರತೆಯ ಉತ್ತಮ ಅಳತೆಯಾಗಿದೆ. ಕೋವಿಡ್ ಪೂರ್ವ ಅವಧಿಯಲ್ಲಿ ಈ ಅನುಪಾತವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದರೂ, 2020–23ರಲ್ಲಿ ಇದು ಕಡಿಮೆಯಾಗುವ ಪ್ರವೃತ್ತಿಯನ್ನು ಕಂಡಿತು. ಆದಾಗ್ಯೂ, 2023–24 ಮತ್ತು 2024–25ರಲ್ಲಿ, ಇದು ಮತ್ತೆ ಕ್ರಮವಾಗಿ ಶೇಕಡಾ 13.66 ಮತ್ತು ಶೇಕಡಾ 14.53ಕ್ಕೆ ಏರಿತು. ಈ ಹೆಚ್ಚಳವು ರಾಜ್ಯದ ಬಡ್ಡಿ ಹೊರೆ ಹೆಚ್ಚುತ್ತಿದೆ ಎಂದು ಸೂಚಿಸುತ್ತದೆ.
- ತಾತ್ತ್ವಿಕವಾಗಿ, ಒಟ್ಟು ಸಾಲಗಳಿಗೆ ಮರುಪಾವತಿಯ ಅನುಪಾತ ಹೆಚ್ಚಾದಷ್ಟೂ, ಉತ್ಪಾದಕತೆಗಿಂತ ಸಾಲ ಸೇವೆಗೆ ಬಳಸಲಾಗುವ ಸಾಲಗಳ ಪ್ರಮಾಣ ಹೆಚ್ಚಾಗುತ್ತದೆ. 2015–25ರ ಅವಧಿಯಲ್ಲಿ ಅನುಪಾತದಲ್ಲಿ ಅಂತರ–ವರ್ಷದ ವ್ಯತ್ಯಾಸಗಳು ಕಂಡುಬಂದವು. 2024–25ರ ಅವಧಿಯಲ್ಲಿ, ಇದು ಸುಮಾರು ಶೇಕಡಾ 65 ರಷ್ಟಿತ್ತು, ಅಂದರೆ ಸಾಲಗಳನ್ನು ಮರುಪಾವತಿಗೆ ಬಳಸಲಾಯಿತು, ಉತ್ಪಾದಕತೆಗೆ ಕಡಿಮೆ ಸ್ಥಳಾವಕಾಶವಿತ್ತು.
- ಡೊಮರ್ ಗ್ಯಾಪ್, ಕೋವಿಡ್ ಕಾರಣದಿಂದಾಗಿ 2020–21 ಹೊರತುಪಡಿಸಿ ಎಲ್ಲಾ ವರ್ಷಗಳಲ್ಲಿ ಧನಾತ್ಮಕತ್ವವಾ. ಗಿತ್ತು ಮತ್ತು ಕಡಿಮೆಯಾಗುತ್ತಿರುವ ಪ್ರವೃತ್ತಿಯ ಹೊರತಾಗಿಯೂ ಅನುಕೂಲಕರವಾಗಿ ಉಳಿಯಿತು. ಇದು ಸಾಲದ ಸುಸ್ಥಿರತೆಗೆ ಅಗತ್ಯವಾದ ಷರತ್ತುಗಳನ್ನು ಪೂರೈಸುವ ಮೂಲಕ, ಸಾಲದ ವೆಚ್ಚವನ್ನು ಮರುಪಡೆಯಲು ಬೊಕ್ಕಸಕ್ಕೆ ಸಹಾಯ ಮಾಡಿತು. 2020–25ರಲ್ಲಿ ಏರಿಳಿತದ ಪ್ರವೃತ್ತಿಯ ಹೊರತಾಗಿಯೂ, ಸಾಲ/ ಜಿ ಎಸ್ ಡಿ ಪಿ ಅನುಪಾತದಿಂದ ಅಳೆಯಲ್ಪಟ್ಟ ರಾಜ್ಯದ ಸಾಲದ ಹೊರೆಯು ಶೇಕಡಾ 23ರಿಂದ ಶೇಕಡಾ 25ರ ವ್ಯಾಪ್ತಿಯಲ್ಲಿಯೇ ಇತ್ತು. ಆದಾಗ್ಯೂ, 2023–24 ಮತ್ತು 2024–25ರಲ್ಲಿ ಸಾಲದ ಹೊರೆಯಲ್ಲಿನ ಏರಿಕೆಯೊಂದಿಗೆ ಪ್ರಾಥಮಿಕ ಸಮತೋಲನದಲ್ಲಿನ ಸ್ಥಿರ ಕ್ಷೀಣತೆಯನ್ನು ಗಮನಿಸಿದರೆ, ರಾಜ್ಯದ ಸಾಲದ ಹೊರೆ ಸುಸ್ಥಿರ ಮಟ್ಟವನ್ನು ತಲುಪಿದೆ ಎಂದು ಅಭಿಪ್ರಾಯ ಪಡಲು ತೀರಾ ಮುಂಚಿತವಾಗಿದೆ.

1.5.6 ಖಾತರಿಗಳ ಸ್ಥಿತಿ – ಆಕಸ್ಮಿಕ ಹೊಣೆಗಾರಿಕೆಗಳು

ಖಾತರಿಗಳು ಎಂದರೆ, ಸಾಲಗಾರನು ಖಾತರಿಯನ್ನು ವಿಸ್ತರಿಸಿದ ಸಂದರ್ಭದಲ್ಲಿ ರಾಜ್ಯದ ಸಂಚಿತ ನಿಧಿಯ ಮೇಲಿನ ಆಕಸ್ಮಿಕ ಹೊಣೆಗಾರಿಕೆಗಳು. ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಕಾಯ್ದೆ, 1999, ಯಾವುದೇ ವರ್ಷದ ಏಪ್ರಿಲ್ ಮೊದಲ ದಿನದಂದು ಸರ್ಕಾರವು ವಿಸ್ತರಿಸಿದ ಬಾಕಿ ಖಾತರಿಗಳ ಮೇಲಿನ ಮಿತಿಯನ್ನು ಹಿಂದಿನ ಎರಡನೇ ವರ್ಷದ ರಾಜ್ಯದ ರಾಜಸ್ವ ಸ್ವೀಕೃತಿಗಳ 80 ಪ್ರತಿಶತವನ್ನು ಮೀರದಿರಲು ನಿಗದಿಪಡಿಸುತ್ತದೆ. ಕಳೆದ ಹತ್ತು ವರ್ಷಗಳ ವಿವರಗಳನ್ನು **ಕೋಷ್ಟಕ 1.33**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 1.33: ರಾಜ್ಯ ಸರ್ಕಾರವು ನೀಡಿದ ಖಾತರಿಗಳು

(₹ ಕೋಟಿಗಳಲ್ಲಿ)

ಖಾತರಿಗಳು	2015–16	2016–17	2017–18	2018–19	2019–20	2020–21	22021–22	2022–23	2023–24	2024–25
ಖಾತರಿಗಳ ಬಾಕಿ ಮೊತ್ತಕ್ಕೆ (ಅಂದರೆ ಹಿಂದಿನ ಎರಡನೇ ವರ್ಷದ ರಾಜಸ್ವ ಸ್ವೀಕೃತಿಗಳ ಶೇಕಡಾ 80ರ ಒಳಗಿನ ಮಿತಿ	71,634	83,314	95,054	1,06,571	1,17,600	1,31,983	1,40,354	1,25,373	1,56,610	1,83,264
ವರ್ಷದಲ್ಲಿ ಗರಿಷ್ಠ ಮೊತ್ತದ ಖಾತರಿಗಳು	18,358	21,115	24,025	30,719	35,694	45,104	49,467	70,095	78,147	81,654
ವರ್ಷದ ಕೊನೆಯಲ್ಲಿ ಬಾಕಿ ಇರುವ ಖಾತರಿಗಳು	13,324	15,392	18,416	24,091	26,830	32,733	33,193	38,356	44,247	45,889

ಆಕರ: ಹಣಕಾಸು ಲೆಕ್ಕಗಳು ಮತ್ತು ವಾರ್ಷಿಕ ಹಣಕಾಸು ನಿರೂಪಣೆಗಳು

ಮಾರ್ಚ್ 31, 2025ರಂತೆ ₹45,889 ಕೋಟಿ ಬಾಕಿ ಉಳಿದಿರುವ ಖಾತರಿಗಳು ವಿದ್ಯುತ್ (₹34,749 ಕೋಟಿ); ಸಹಕಾರಿಗಳು (₹1,643 ಕೋಟಿ); ರಾಜ್ಯ ಹಣಕಾಸು ಕಂಪನಿಗಳು/ನಿಗಮಗಳು (₹120 ಕೋಟಿ); ನೀರಾವರಿ (₹6,525 ಕೋಟಿ); ರಸ್ತೆಗಳು ಮತ್ತು ಸಾರಿಗೆ (₹1,164 ಕೋಟಿ); ನಗರಾಭಿವೃದ್ಧಿ, ವಸತಿ (₹1,274 ಕೋಟಿ) ಮತ್ತು ಇತರೆ (₹414 ಕೋಟಿ)ಗೆ ಸಂಬಂಧಿಸಿವೆ.

ಪ್ರತಿ ವರ್ಷದ ಅಂತ್ಯದಲ್ಲಿ ಬಾಕಿ ಉಳಿದಿರುವ ಖಾತರಿಗಳು ಕಳೆದ ದಶಕದಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದರೂ, ಅದು ಕೆ ಎಫ್ ಆರ್ ಎ ನಲ್ಲಿ ಸೂಚಿಸಲಾದ ಮಿತಿಯೊಳಗಿತ್ತು.

1.6 ಹಣಕಾಸಿನ ಸ್ಥಿರತೆಗೆ ಮಾರ್ಗಗಳು

ಆದಾಯವನ್ನು ಹೆಚ್ಚಿಸುವ ಮತ್ತು ವೆಚ್ಚಗಳನ್ನು ತರ್ಕಬದ್ಧಗೊಳಿಸುವ ಮೂಲಕ ಕೊರತೆಗಳನ್ನು ಸುಧಾರಿಸಬಹುದು. ಇದರಲ್ಲಿ ತೆರಿಗೆ ಅನುಸರಣೆಯನ್ನು ಬಲಪಡಿಸುವುದು, ತೆರಿಗೆ ಮೂಲವನ್ನು ವಿಸ್ತರಿಸುವುದು, ಬಳಕೆದಾರರ ಶುಲ್ಕಗಳನ್ನು ಪರಿಷ್ಕರಿಸುವುದು ಮತ್ತು ನಿಷ್ಕ್ರಿಯ ಸರ್ಕಾರಿ ಸ್ವತ್ತುಗಳಿಂದ ಹಣಗಳಿಸುವುದು ಸೇರಿವೆ. ವೆಚ್ಚದ ಬದಿಯಲ್ಲಿ, ಸಹಾಯಧನಗಳ ಉತ್ತಮ ಗುರಿ, ಸಂಬಳ ಮತ್ತು ಪಿಂಚಣಿ ಬೆಳವಣಿಗೆಯನ್ನು ನಿಯಂತ್ರಿಸುವುದು ಮತ್ತು ವೆಚ್ಚದ ಸರಿಯಾದ ವರ್ಗೀಕರಣವನ್ನು ಖಚಿತಪಡಿಸಿಕೊಳ್ಳುವುದು ಪ್ರಮುಖ ಅಂಶಗಳಾಗಿವೆ. ಉತ್ಪಾದಕ ಬಂಡವಾಳ ಹೂಡಿಕೆಗೆ ಆದ್ಯತೆ ನೀಡುವುದು ಮತ್ತು ಪಾರದರ್ಶಕ ಮತ್ತು ಪರಿಣಾಮಕಾರಿ ಸಾಲ ಪಡೆಯುವ ಮೂಲಕ ಸಾಲ ನಿರ್ವಹಣೆಯನ್ನು ಸುಧಾರಿಸುವುದರಿಂದ ಹಣಕಾಸಿನ ಒತ್ತಡವನ್ನು ಮತ್ತಷ್ಟು ಕಡಿಮೆ ಮಾಡಬಹುದು. ಈ ಕ್ರಮಗಳು ಒಟ್ಟಾಗಿ ಹಣಕಾಸಿನ ವ್ಯಾಪ್ತಿಯನ್ನು ಹಿಗ್ಗಿಸುತ್ತದೆ ಮತ್ತು ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳನ್ನು ಸುಸ್ಥಿರ ರೀತಿಯಲ್ಲಿ ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಇವುಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

1.6.1. ರಾಜ್ಯದ ಆದಾಯವನ್ನು ಸುಧಾರಿಸುವುದು

ಬಳಸಿಕೊಳ್ಳದೆ ಉಳಿದಿರುವ ಆದಾಯ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ, ಹಣಕಾಸಿನ ಸ್ಥಿತಿಯನ್ನು ಗಮನಾರ್ಹವಾಗಿ ಹೆಚ್ಚಿಸಬಹುದು ಮತ್ತು ಸಾಲದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದು. ರಾಜ್ಯ ಜಿ ಎಸ್ ಟಿ, ಮುದ್ರಾಂಕ ಸುಂಕ ಮತ್ತು ಅಬಕಾರಿ ಮುಂತಾದ ಪ್ರಮುಖ ತೆರಿಗೆ ಹರಿವುಗಳ ಸಮರ್ಪಕ ಮೌಲ್ಯಮಾಪನ, ಅವ– ಮೂಲ್ಯನ ಮತ್ತು ಸೀಮಿತ ಜಾರಿ ಕಾರ್ಯವಿಧಾನ ಮುಂತಾದವುಗಳು ಆದಾಯ ಕುಂಠಿತಗೊಳ್ಳಲು ಕಾರಣವಾಗುತ್ತದೆ. ಕಡಿಮೆ ಬಳಕೆದಾರ ಶುಲ್ಕಗಳು, ಶುಲ್ಕ ವಸೂಲಾತಿಯಲ್ಲಿನ ನ್ಯೂನತೆ, ಸಾರ್ವಜನಿಕ ಆಸ್ತಿಗಳು ಮತ್ತು ಹೂಡಿಕೆಗಳ ಮೇಲಿನ ಕಡಿಮೆ ಪ್ರತಿಫಲ,– ವಸೂಲಿ ಮಾಡದ ತೆರಿಗೆಯೇತರ ಆದಾಯಗಳು ವಿತ್ತಲಭ್ಯತೆಗೆ ಅಡ್ಡಿಪಡಿಸುತ್ತವೆ. ಬಾಕಿಗಳ ಸಕಾಲಿಕ ವಸೂಲಿಯೂ (ತೆರಿಗೆ ಮತ್ತು ತೆರಿಗೆಯೇತರ) ಹಣಕಾಸಿನ ಲಭ್ಯತೆಯನ್ನು ಹೆಚ್ಚಿಸುವ ಮತ್ತೊಂದು ಹೆಜ್ಜೆಯಾಗಿದೆ.

ಎ. ಆದಾಯದ ಬಾಕಿಗಳು

ಮಾರ್ಚ್ 31, 2025ರಂತೆ, ಪ್ರಮುಖ ಆದಾಯದ ಶೀರ್ಷಿಕೆಗಳಾದ ಸರಕು ಮತ್ತು ಸೇವಾ ತೆರಿಗೆ ಮತ್ತು ರಾಜ್ಯ ಅಬಕಾರಿಗಳಿಗೆ ಸಂಬಂಧಿಸಿದಂತೆ ಆದಾಯದ ಬಾಕಿ ₹53,907.98 ಕೋಟಿಗಳಾಗಿದ್ದು, ಅದರಲ್ಲಿ ₹601.78 ಕೋಟಿಗಳು ಐದು ವರ್ಷಗಳಿಗೂ ಹೆಚ್ಚು ಕಾಲದಿಂದ ಬಾಕಿ ಉಳಿದಿವೆ ಎಂಬುದನ್ನು **ಕೋಷ್ಟಕ 1.34**ರಲ್ಲಿ ತೋರಿಸಿದೆ.

ಕೋಷ್ಟಕ 1.34: ಬಾಕಿ ಇರುವ ಆದಾಯ

(₹ ಕೋಟಿಗಳಲ್ಲಿ)

ಕ್ರಮ. ಸಂಖ್ಯೆ	ಆದಾಯ ಶೀರ್ಷಿಕೆ	31 ಮಾರ್ಚ್ 2025ರಂತೆ ಬಾಕಿ ಇರುವ ಮೊತ್ತ	31 ಮಾರ್ಚ್ 2025ರಂತೆ ಐದು ವರ್ಷಗಳಿಗೂ ಹೆಚ್ಚು ಕಾಲದಿಂದ ಬಾಕಿ ಇರುವ ಮೊತ್ತ
1	ಸರಕು ಮತ್ತು ಸೇವಾ ತೆರಿಗೆ	52,971.23	NA*
2	ರಾಜ್ಯ ಅಬಕಾರಿ	601.78	601.78
3	ಮುದ್ರಾಂಕ ಮತ್ತು ನೋಂದಣಿ	334.97	NA*
	ಒಟ್ಟು	**53,907.98**	**601.78**

ಆಕರ: ಇಲಾಖಾ ಮಾಹಿತಿ.

**ಐದು ವರ್ಷಕ್ಕಿಂತಲೂ ಹಿಂದಿನಿಂದ ಬಾಕಿ ಇರುವ ಮೊತ್ತ ಲಭ್ಯವಿರುವುದಿಲ್ಲ.*

ಆದಾಯ ಬಾಕಿಗೆ ಇಲಾಖೆಗಳು ಈ ಕೆಳಗಿನ ಕಾರಣಗಳನ್ನು ಹೇಳಿವೆ.

- ನ್ಯಾಯಾಲಯದ ತಡೆಯಾಜ್ಞೆಗಳಿಂದ ₹25,581.73 ಕೋಟಿ ಮತ್ತು ಎನ್ ಸಿ ಎಲ್ ಎ ಟಿ ಮುಂದೆ ಇರುವ ₹3,305.57 ಕೋಟಿ ಮತ್ತು ಉಳಿದ ಬಾಕಿಯು ಕಂದಾಯ ಇಲಾಖೆ ಮತ್ತು ನ್ಯಾಯಾಲಯದ ವಸೂಲಾತಿಗೆ ಒಳಪಡಿಪಟ್ಟಿದೆ.
- ರಾಜ್ಯ ಅಬಕಾರಿ: ₹103.46 ಕೋಟಿಗೆ ಸಂಬಂಧಿಸಿದಂತೆ, ಹೈಕೋರ್ಟ್ ಮತ್ತು ಇತರ ನ್ಯಾಯಾಂಗ ಅಧಿಕಾರಿಗಳು ವಸೂಲಾತಿಗಳನ್ನು ತಡೆಹಿಡಿದಿದ್ದಾರೆ. ಬಾಕಿ ಬೇಡಿಕೆಯು ಕಂದಾಯ ವಸೂಲಾತಿ ಪ್ರಮಾಣಪತ್ರಗಳ ಸಲ್ಲಿಕೆ ಮತ್ತು ವಸೂಲಾತಿಯ ಇತರ ಹಂತಗಳಲ್ಲಿದೆ.

ಹೀಗಾಗಿ, ಮಾರ್ಚ್ 31, 2025ರಂತೆ ರಾಜ್ಯವು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಹೊರತುಪಡಿಸಿದ ನಂತರ ಆದಾಯದ ಬಾಕಿ ಎಂದು ₹24,917.22 ಕೋಟಿಗಳನ್ನು ಹೊಂದಿತ್ತು. ಪರಿಣಾಮಕಾರಿ ವಸೂಲಾತಿ ಕಾರ್ಯವಿಧಾನವು ರಾಜ್ಯದ ಆದಾಯ ವಸೂಲಾತಿಯನ್ನು ಹೆಚ್ಚಿಸುತ್ತದೆ.

ಬಿ. ಇಲಾಖೆಯಿಂದ ಪತ್ತೆಯಾದ ತೆರಿಗೆ ವಂಚನೆಯ ವಿವರಗಳು.

ಪತ್ತೆಯಾದ ತೆರಿಗೆ ವಂಚನೆ ಪ್ರಕರಣಗಳು ಮತ್ತು ಅಂತಿಮಗೊಳಿಸಿದ ಹೆಚ್ಚುವರಿ ತೆರಿಗೆ ಬೇಡಿಕೆ ಪ್ರಕರಣಗಳು ರಾಜ್ಯ ಸರ್ಕಾರದ ಆದಾಯ ಸಂಗ್ರಹ ಪ್ರಯತ್ನಗಳ ಪ್ರಮುಖ ಸೂಚಕಗಳಾಗಿವೆ.

2024–25ನೇ ಸಾಲಿನಲ್ಲಿ ಅಬಕಾರಿ ಮತ್ತು ತೆರಿಗೆ ಇಲಾಖೆಯಿಂದ ಪತ್ತೆಯಾದ ತೆರಿಗೆ ವಂಚನೆ ಪ್ರಕರಣಗಳು, ಅಂತಿಮಗೊಳಿಸಿದ ಪ್ರಕರಣಗಳು ಮತ್ತು ಹೆಚ್ಚುವರಿ ತೆರಿಗೆಗೆ ಬೇಡಿಕೆಯ ವಿವರಗಳನ್ನು ಸಂಬಂಧಪಟ್ಟ ಇಲಾಖೆಗಳು ವರದಿ ಮಾಡಿದಂತೆ **ಕೋಷ್ಟಕ 1.35**ರಲ್ಲಿ ಚಿತ್ರಿಸಲಾಗಿದೆ.

ಕೋಷ್ಟಕ 1.35 : ಪತ್ತೆಯಾದ ತೆರಿಗೆ ವಂಚನೆ ಪ್ರಕರಣಗಳು

ಕ್ರಮ ಸಂಖ್ಯೆ	ಆದಾಯದ ಶೀರ್ಷಿಕೆ	31 ಮಾರ್ಚ್ 2024ರಂದು ಬಾಕಿ ಇರುವ ಪ್ರಕರಣಗಳು	2024–25ರಲ್ಲಿ ಪತ್ತೆ ಮಾಡಿದ ಪ್ರಕರಣಗಳು	ಒಟ್ಟು	ತೆರಿಗೆ ನಿರ್ಧಾರಣೆ / ತನಿಖೆ ಮುಕ್ತಾಯಗೊಂಡು ದಂಡದೊಂದಿಗೆ ಹೆಚ್ಚುವರಿ ಬೇದಿಕೆ, ಇತ್ಯಾದಿ ಪ್ರಕರಣಗಳ ಸಂಖ್ಯೆ		31 ಮಾರ್ಚ್ 2025ರಲ್ಲಿದ್ದಂತೆ ಅಂತಿಮಗೊಳಿಸಬೇಕಾದ ಪ್ರಕರಣಗಳ ಸಂಖ್ಯೆ
					ಪ್ರಕರಣಗಳ ಸಂಖ್ಯೆ	ಬೇಡಿಕೆಯ ಮೊತ್ತ (₹ ಕೋಟಿಗಳಲ್ಲಿ)	
1	ಸರಕು ಮತ್ತು ಸೇವೆಗಳ ತೆರಿಗೆ	10,193	16,094	26,287	7,780	472.46	18,507

ಕ್ರಮ ಸಂಖ್ಯೆ	ಆದಾಯದ ಶೀರ್ಷಿಕೆ	31 ಮಾರ್ಚ್ 2024ರಂದು ಬಾಕಿ ಇರುವ ಪ್ರಕರಣಗಳು	2024–25ರಲ್ಲಿ ಪತ್ತೆ ಮಾಡಿದ ಪ್ರಕರಣಗಳು	ಒಟ್ಟು	ತೆರಿಗೆ ನಿರ್ಧಾರಣೆ / ತನಿಖೆ ಮುಕ್ತಾಯಗೊಂಡು ದಂಡದೊಂದಿಗೆ ಹೆಚ್ಚುವರಿ ಬೇಡಿಕೆ, ಇತ್ಯಾದಿ ಪ್ರಕರಣಗಳ ಸಂಖ್ಯೆ		31 ಮಾರ್ಚ್ 2025ರಲ್ಲಿದ್ದಂತೆ ಅಂತಿಮಗೊಳಿಸಬೇಕಾದ ಪ್ರಕರಣಗಳ ಸಂಖ್ಯೆ
					ಪ್ರಕರಣಗಳ ಸಂಖ್ಯೆ	ಬೇಡಿಕೆಯ ಮೊತ್ತ (₹ ಕೋಟಿಗಳಲ್ಲಿ)	
2	ರಾಜ್ಯ ಅಬಕಾರಿ	2	–	2	–	–	2
ಒಟ್ಟು		**10,195**	**16,094**	**26,289**	**7,780**	**472.46**	**18,509**

ಆಕರ: ಇಲಾಖಾ ಮಾಹಿತಿ

1.6.2 ವೆಚ್ಚ ಭಾಗದ ಸಮಸ್ಯೆಗಳು

ಎ. ಬದ್ಧ ವೆಚ್ಚ ಮತ್ತು ಸಹಾಯಧನಗಳಿಂದ ಹಣಕಾಸಿನ ಒತ್ತಡ

2015–25ರ ಹಣಕಾಸು ವರ್ಷದ ಬದ್ಧ ವೆಚ್ಚ ಮತ್ತು ಸಹಾಯಧನಗಳನ್ನು ಕ್ರಮವಾಗಿ ರಾಜಸ್ವ ಸ್ವೀಕೃತಿಗಳ ಮತ್ತು ರಾಜಸ್ವ ವೆಚ್ಚದ ಶೇಕಡಾವಾರು ಪ್ರಮಾಣವನ್ನು **ನಕ್ಷೆ 1.41** ಮತ್ತು **ನಕ್ಷೆ 1.42** ಪ್ರಕಟಗೊಳಿಸಿದೆ.

ನಕ್ಷೆ : 1.41 ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ಬದ್ಧವೆಚ್ಚ ಮತ್ತು ಸಹಾಯಧನಗಳು



ನಕ್ಷೆ : 1.42 ರಾಜಸ್ವ ವೆಚ್ಚಗಳ ಶತಾಂಶವಾಗಿ ಬದ್ಧವೆಚ್ಚ ಮತ್ತು ಸಹಾಯಧನಗಳು



2024–25ರಲ್ಲಿ, ಸಂಬಳ (₹48,276 ಕೋಟಿ), ಪಿಂಚಣಿ (₹30,651 ಕೋಟಿ) ಮತ್ತು ಬಡ್ಡಿ ಪಾವತಿಗಳು (₹37,552 ಕೋಟಿ) ಸೇರಿದಂತೆ ರಾಜ್ಯದ ₹1,16,479 ಕೋಟಿಗಳ ಬದ್ಧ ವೆಚ್ಚವು ರಾಜಸ್ವ ಸ್ವೀಕೃತಿಗಳಲ್ಲಿ ಸರಿಸುಮಾರು ಶೇಕಡಾ 45ರಷ್ಟಿತ್ತು. ಇದರ ಜೊತೆಗೆ, ಸಹಾಯಧನಗಳು (ಸ್ಪಷ್ಟ ಮತ್ತು ಸೂಚ್ಯ) ₹81,880 ಕೋಟಿಗಳಾಗಿದ್ದು, ಒಟ್ಟು ಅನಮ್ಯ ವೆಚ್ಚವನ್ನು ₹1,98,359 ಕೋಟಿಗಳಿಗೆ ತಂದಿತು, ಇದು ರಾಜ್ಯದ ರಾಜಸ್ವ ಸ್ವೀಕೃತಿಗಳ ಸುಮಾರು ಶೇಕಡಾ 77ರಷ್ಟಿತ್ತು. ಅಂತಹ ವೆಚ್ಚದ ಹೆಚ್ಚಿನ ಮತ್ತು ಬದಲಾಗದ ಸ್ವಭಾವವು ಹಣಕಾಸಿನ ಸ್ಥಿತಿಯನ್ನು ಗಮನಾರ್ಹವಾಗಿ ಸಂಕುಚಿತಗೊಳಿಸುತ್ತದೆ, ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ಆದ್ಯತೆಗಳಿಗೆ ಸಂಪನ್ಮೂಲಗಳನ್ನು ಹಂಚುವ ರಾಜ್ಯದ ಸಾಮರ್ಥ್ಯವನ್ನು ಸೀಮಿತಗೊಳಿಸುತ್ತದೆ. ಈ ರಚನಾತ್ಮಕ ಅಸಮತೋಲನವು ನಿರಂತರ ರಾಜಸ್ವ ಮತ್ತು ಪ್ರಾಥಮಿಕ ಕೊರತೆಗಳ ಅಪಾಯವನ್ನು ಹೆಚ್ಚಿಸಿ, ದೀರ್ಘಕಾಲೀನ ಹಣಕಾಸಿನ ಸುಸ್ಥಿರತೆಯನ್ನು ನಿರ್ಬಂಧಿಸುತ್ತದೆ ಮತ್ತು ಭವಿಷ್ಯದ ಸಾಮಾಜಿಕ–ಆರ್ಥಿಕ ಸವಾಲುಗಳಿಗೆ ಪ್ರತಿಕ್ರಿಯಿಸುವ ಸರ್ಕಾರದ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಸಬ್ಸಿಡಿಗಳ ಸುಧಾರಿತ ಗುರಿ ಮತ್ತು ಪುನರ್ವ್ಯವಸ್ಥೆಯ ಮೂಲಕ ವೆಚ್ಚ ಸುಧಾರಣೆಯ ತುರ್ತು ಅವಶ್ಯಕತೆಯಿದೆ.

ಬಿ. ಅಪೂರ್ಣ ಯೋಜನೆಗಳಲ್ಲಿ ನಿರ್ಬಂಧಿತವಾಗಿರುವ ಬಂಡವಾಳ

ಅಪೂರ್ಣ ಯೋಜನೆಗಳಲ್ಲಿ ನಿರ್ಬಂಧಿಸಲಾದ ಬಂಡವಾಳ ಮೌಲ್ಯಮಾಪನವು ಬಂಡವಾಳ ವೆಚ್ಚದ ಗುಣಮಟ್ಟವನ್ನು ಸೂಚಿಸುತ್ತದೆ. ಅಪೂರ್ಣ ಯೋಜನೆಗಳು/ ಕಾಮಗಾರಿಗಳಲ್ಲಿ ಹಣವನ್ನು ನಿರ್ಬಂಧಿಸುವುದು ವೆಚ್ಚದ ಗುಣಮಟ್ಟದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಮತ್ತು ದೀರ್ಘಕಾಲದವರೆಗೆ ಯೋಜನೆಗಳ ಉದ್ದೇಶಿತ ಪ್ರಯೋಜನಗಳಿಂದ ರಾಜ್ಯವನ್ನು ವಂಚಿತಗೊಳಿಸುತ್ತದೆ. ಇದಲ್ಲದೆ, ಆಯಾ ವರ್ಷಗಳಲ್ಲಿ ಈ ಯೋಜನೆಗಳ ಅನುಷ್ಠಾನಕ್ಕಾಗಿ ಎರವಲು ಪಡೆದ ನಿಧಿಗಳು ಸಾಲ ಮತ್ತು ಬಡ್ಡಿ, ಋಣ ಸೇವೆಯ ವಿಷಯದಲ್ಲಿ ಹೆಚ್ಚುವರಿ ಹೊರೆಗೆ ಕಾರಣವಾಗುತ್ತವೆ. ಅಪೂರ್ಣ ಯೋಜನೆಗಳ ವಿವರಗಳನ್ನು **ಕೋಷ್ಟಕ 1.36**ರಲ್ಲಿ ತೋರಿಸಲಾಗಿದೆ (2024–25ರ ಹಣಕಾಸು ಲೆಕ್ಕಗಳ ಅನುಬಂಧ–IXಗಾಗಿ ರಾಜ್ಯ ಸರ್ಕಾರವು ಒದಗಿಸಿದ ಮಾಹಿತಿಯ ಆಧಾರದ ಮೇಲೆ).

ಕೋಷ್ಟಕ 1.36: ಅಪೂರ್ಣ ಯೋಜನೆಗಳಲ್ಲಿ ಬಂಧಿತವಾಗಿರುವ ಬಂಡವಾಳ

(₹ ಕೋಟಿಗಳಲ್ಲಿ)

ಅಪೂರ್ಣ ಯೋಜನೆಗಳ ವರ್ಷವಾರು ವಿವರ				ಇಲಾಖಾವಾರು ಅಪೂರ್ಣ ಯೋಜನೆಗಳು		
31 ಮಾರ್ಚ್ 2025ರಲ್ಲಿದ್ದಂತೆ				31 ಮಾರ್ಚ್ 2025ರಲ್ಲಿದ್ದಂತೆ		
ವರ್ಷ	ಅಪೂರ್ಣ ಯೋಜನೆಗಳ ಸಂಖ್ಯೆ	ಅಂದಾಜು ವೆಚ್ಚ ಪ್ರಮಾಣ	ಮಾಡಿರುವ ವೆಚ್ಚ	ಇಲಾಖೆ	ಅಪೂರ್ಣ ಯೋಜನೆಗಳ ಸಂಖ್ಯೆ	ಅಂದಾಜು ವೆಚ್ಚ ಪ್ರಮಾಣ
2014–15ರ ವರೆಗೆ	25	111	75	ರಸ್ತೆ ಮತ್ತು ಸೇತುವೆಗಳು	1,854	6,717
2015–16	77	350	264	ನೀರಾವರಿ	1,903	4,271
2016–17	102	463	350	ಕಟ್ಟಡಗಳು	545	490
2017–18	122	553	417	ಇತರೆ	26	23
2018–19	135	610	460			
2019–20	275	1,244	939			
2020–21	390	637	278			
2021–22	467	776	369			
2022–23	558	903	440			
2023–24	789	1,947	485			
2024–25	1,388	3,906	990			
ಒಟ್ಟು	**4,328**	**11,500**	**5,066**	**ಒಟ್ಟು**	**4,328**	**11,500**

ಈ 4,328 ಚಾಲ್ತಿಯಲ್ಲಿರುವ ಯೋಜನೆಗಳ ಅಂದಾಜು ₹11,500 ಕೋಟಿ ವೆಚ್ಚದಲ್ಲಿ, ₹5,066 ಕೋಟಿಯನ್ನು 2024–25ರವರೆಗೆ ಖರ್ಚು ಮಾಡಲಾಗಿದೆ. ಆದ್ದರಿಂದ, ಈ 4,328 ಯೋಜನೆಗಳು ಪೂರ್ಣಗೊಳ್ಳದ ಕಾರಣ, ₹5,066 ಕೋಟಿ ಬಂಡವಾಳ ವೆಚ್ಚವು ಫಲರಹಿವಾಗಿತ್ತು. ಇದರ ಜೊತೆಗೆ,

ಯೋಜನೆಯ ಪೂರ್ಣಗೊಳಿಸುವಿಕೆಯಲ್ಲಿನ ವಿಳಂಬವು ಮಿತಿಮೀರಿದ ಸಮಯಕ್ಕೆ ಕಾರಣವಾಗುವುದಲ್ಲದೆ, ಮಿತಿಮೀರಿದ ವೆಚ್ಚದ ಪರಿಣಾಮವನ್ನು ಸಹ ಉಂಟುಮಾಡಿದೆ.

ಹಣಕಾಸು ಲೆಕ್ಕಪತ್ರಗಳ ಅನುಬಂಧ–IXರ ವಿಶ್ಲೇಷಣೆಯು 4,328 ಅಪೂರ್ಣ ಕಾಮಗಾರಿಗಳಲ್ಲಿ 276 ಕಾಮಗಾರಿಗಳು ₹2,298 ಕೋಟಿಗಳ ಬಿಲ್‌ಗಳ ಪಾವತಿ ಬಾಕಿ ಇರುವುದರಿಂದ ಪೂರ್ಣವಾಗಿಲ್ಲ ಎಂದು ತೋರಿಸಿದೆ.

2024–25ರಲ್ಲಿ, ಲೋಕೋಪಯೋಗಿ ಇಲಾಖೆಯ ಐದು ವಿಭಾಗಗಳ ಲೆಕ್ಕಪರಿಶೋಧನೆಯು, ಗುತ್ತಿಗೆದಾರರು ಕೆಲಸವನ್ನು ತೊರೆದ ಕಾರಣ, ಕೆಲಸವನ್ನು ನಿರ್ವಹಿಸಲು ಗುತ್ತಿಗೆದಾರರ ಅಸಮರ್ಥತೆ, ಭೂಮಿ ಅಲಭ್ಯತೆ, ನಿವೇಶನ ಹಸ್ತಾಂತರದಲ್ಲಿ ವಿಳಂಬ ಮುಂತಾದ ವಿವಿಧ ಕಾರಣಗಳಿಂದ ₹582.66 ಕೋಟಿಗೆ ಟೆಂಡರ್ ಮಾಡಲಾದ ಕಾಮಗಾರಿಗಳು ಅಪೂರ್ಣವಾಗಿ ಉಳಿದಿವೆ ಎಂದು ಬಹಿರಂಗಪಡಿಸಿದೆ. ಆದಾಗ್ಯೂ, ಗುತ್ತಿಗೆದಾರರಿಂದ ಉಂಟಾದ ವಿಳಂಬಕ್ಕೆ ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

ಸಿ. ಹಣಕಾಸಿನ ಸ್ಥಿತಿಯಿಂದ ಬಿಡುಗಡೆ ಮಾಡದ ಹೊಣೆಗಾರಿಕೆಗಳು

ಸಕಾಲದಲ್ಲಿ ಪರಿಹರಿಸದಿದ್ದರೆ, ವಿಮೋಚನೆಗೊಳ್ಳದ/ಮುಂದೂಡಲ್ಪಟ್ಟ ಹೊಣೆಗಾರಿಕೆಗಳು ಭವಿಷ್ಯದ ಅಭಿವೃದ್ಧಿ ಮತ್ತು ಮೂಲಸೌಕರ್ಯ ವೆಚ್ಚಗಳಿಗೆ ಲಭ್ಯವಿರುವ ಹಣಕಾಸಿನ ಸ್ಥಿತಿಯನ್ನು ಕಡಿಮೆ ಮಾಡುತ್ತದೆ. ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯ ಕೊರತೆಯನ್ನು ಸೃಷ್ಟಿಸುವುದರ ಜೊತೆಗೆ, ಇದು ಸುಸ್ಥಿರ ರೀತಿಯಲ್ಲಿ ಸಂಪನ್ಮೂಲಗಳನ್ನು ಸಂಗ್ರಹಿಸುವ ರಾಜ್ಯದ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ, ಇದರಿಂದಾಗಿ ಒಟ್ಟಾರೆ ಹಣಕಾಸಿನ ಆರೋಗ್ಯ ಮತ್ತು ದೀರ್ಘಕಾಲೀನ ಸುಸ್ಥಿರತೆಯ ಮೇಲೆ ಪರಿಣಾಮ ಬೀರುತ್ತದೆ.

ರಾಜ್ಯ ಸರ್ಕಾರವು ಹಲವಾರು ವರ್ಷಗಳಿಂದ ವಿಮೋಚನೆಗೊಳ್ಳದ ಹೊಣೆಗಾರಿಕೆಗಳ ಶೇಖರಣೆಗೆ ಅವಕಾಶ ಕೊಟ್ಟಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ, ಇದು ಹಣಕಾಸಿನ ಸುಸ್ಥಿರತೆಯ ಮೇಲೆ ಗಮನಾರ್ಹ ಪರಿಣಾಮವನ್ನು ಬೀರುತ್ತದೆ. ಇವು ಕೆಳಗಿನವುಗಳನ್ನು ಒಳಗೊಂಡಿದೆ.

- ಒಟ್ಟು ₹57.48 ಕೋಟಿಗಳಷ್ಟು ವಿಮೋಚನೆಗೊಳ್ಳದ ಬಡ್ಡಿ ಹೊಣೆಗಾರಿಕೆಗಳು.
- ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಗೆ (ಎನ್ ಪಿ ಎಸ್) ಕಡಿಮೆ/ವರ್ಗಾವಣೆಯಾಗದ ₹6.60 ಕೋಟಿಗಳಷ್ಟು ರಾಜ್ಯ ಸರ್ಕಾರದ ವಂತಿಗೆ.

ಈ ವಿಮೋಚನೆಗೊಳ್ಳದ ಹೊಣೆಗಾರಿಕೆಗಳ ಸಂಚಿತ ಮೌಲ್ಯ ₹64.08 ಕೋಟಿಗಳಷ್ಟಿತ್ತು, ಇದು ವರ್ಷದ ಹಣಕಾಸಿನ ನಿಯತಾಂಕಗಳ ಮೇಲೆ ಪರಿಣಾಮ ಬೀರುತ್ತದೆ ಮತ್ತು ಆದ್ದರಿಂದ ರಾಜ್ಯ ಸರ್ಕಾರವು ಎಲ್ಲಾ ವಿಮೋಚನೆಗೊಳ್ಳದ ಹೊಣೆಗಾರಿಕೆಗಳನ್ನು ಪಾರದರ್ಶಕವಾಗಿ ಬಹಿರಂಗಪಡಿಸಬೇಕು ಮತ್ತು ಪರಿಹರಿಸಬೇಕು ಹಾಗೂ ಭವಿಷ್ಯದ ಹಣಕಾಸಿನ ಒತ್ತಡವನ್ನು ತಪ್ಪಿಸಲು ಈ ಬಾಧ್ಯತೆಗಳನ್ನು ಸಕಾಲಿಕವಾಗಿ ನಿರ್ವಹಿಸಲು ನಿಬಂಧನೆಗಳನ್ನು ಮಾಡಬೇಕು ಎಂದು ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತದೆ.

1.7 ಮುಕ್ತಾಯ

ರಾಜ್ಯ ಸರ್ಕಾರವು 2024–25ರ ಅವಧಿಯಲ್ಲಿ ತನ್ನ ರಾಜಸ್ವ ಸ್ವೀಕೃತಿಯಲ್ಲಿ ಶೇಕಡಾ 10.63ರಷ್ಟು ಹೆಚ್ಚಳವನ್ನು ದಾಖಲಿಸಿದೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ರಾಜಸ್ವ ವೆಚ್ಚದಲ್ಲಿ ಶೇಕಡಾ 14.99ರಷ್ಟು ಹೆಚ್ಚಳವಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಹಾಯಧನಗಳಲ್ಲಿ ಶೇಕಡಾ 54.61ರಷ್ಟು ಹೆಚ್ಚಳದಿಂದಾಗಿ ರಾಜಸ್ವ ವೆಚ್ಚದಲ್ಲಿ ಏರಿಕೆಯಾಗಿದೆ. ರಾಜ್ಯ ಸರ್ಕಾರದ ಐದು ಖಾತರಿ ಯೋಜನೆಗಳು ಸ್ಪಷ್ಟ ಮತ್ತು ಸೂಚ್ಯ ಸಹಾಯಧನದ ಭಾಗವಾಗಿದ್ದು, ಇದು ಮುಖ್ಯವಾಗಿ ರಾಜಸ್ವ ವೆಚ್ಚದ ಹೆಚ್ಚಳಕ್ಕೆ ಕಾರಣವಾಗಿದೆ.

ರಾಜಸ್ವ ಸ್ವೀಕೃತಿ ಮತ್ತು ವೆಚ್ಚದ ನಡುವಿನ ಈ ಸಾಮರಸ್ಯದಿಂದಾಗಿ ರಾಜ್ಯವು ₹20,834 ಕೋಟಿಗಳ ರಾಜಸ್ವ ಕೊರತೆಯನ್ನು ಕಂಡಿತು.

2024–25ರಲ್ಲಿ, ಸಾಮಾನ್ಯ ಸೇವೆಗಳ ಅಡಿಯಲ್ಲಿ ರಾಜಸ್ವ ವೆಚ್ಚವು ಹಿಂದಿನ ವರ್ಷಕ್ಕಿಂತ ಶೇಕಡಾ 15.92ರಷ್ಟು ಹೆಚ್ಚಾಗಿದೆ, ಆರ್ಥಿಕ ಸೇವೆಗಳ ಮೇಲಿನ ವೆಚ್ಚದಲ್ಲಿನ ಬೆಳವಣಿಗೆ ಶೇಕಡಾ 9.71ರಷ್ಟು ಮತ್ತು

ಸಾಮಾಜಿಕ ಸೇವೆಗಳ ಅಡಿಯಲ್ಲಿ ಶೇಕಡಾ 18.55ರಷ್ಟು ಹೆಚ್ಚಾಗಿದೆ. ರಾಜ್ಯವು ಪಡೆದ ಸಾಲಗಳ ಮೇಲಿನ ಬಡ್ಡಿ ಪಾವತಿಗಳಲ್ಲಿನ ಹೆಚ್ಚಳದಿಂದಾಗಿ ಸಾಮಾನ್ಯ ಸೇವೆಗಳಲ್ಲಿನ ಹೆಚ್ಚಳವು ಹಣಕಾಸಿನ ಅವಕಾಶದದ ಲಭ್ಯತೆಯನ್ನು ಕುಗ್ಗಿಸಿತು ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಪನ್ಮೂಲಗಳನ್ನು ಹಂಚುವ ರಾಜ್ಯದ ಸಾಮರ್ಥ್ಯವನ್ನು ಸೀಮಿತಗೊಳಿಸಿತು.

ಒಟ್ಟು ವೆಚ್ಚದ ಶೇಕಡಾ 81ರಷ್ಟಿದ್ದ ರಾಜಸ್ವ ವೆಚ್ಚವು ಎಸ್‌ಎನ್‌ಎ ಖಾತೆಗಳಿಂದ ಪಡೆದ ಬಳಕೆಯಾಗದ ಮೊತ್ತಗಳ ಮರುಪಾವತಿ ಮತ್ತು ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯತ್ ನಿಧಿ II ಶಿಲ್ಕುಗಳ ಅಡಿಯಲ್ಲಿ ಖರ್ಚು ಮಾಡದ ಶಿಲ್ಕುಗಳ ಹೊಂದಾಣಿಕೆಯಿಂದಾಗಿ ರಾಜಸ್ವ ವೆಚ್ಚವನ್ನು ಶೇಕಡಾ 2.27ರಷ್ಟು (₹6,333.29 ಕೋಟಿ) ಕಡಿಮೆ ಕಡಿಮೆ ತೋರಿಸಲಾಗಿದೆ.

ಬದ್ಧ ವೆಚ್ಚ ಮತ್ತು ಸಹಾಯಧನಗಳು (ಸ್ಪಷ್ಟ ಮತ್ತು ಸೂಚ್ಯ) ಎರಡೂ ಸೇರಿ ರಾಜಸ್ವ ವೆಚ್ಚದ ಸುಮಾರು ಶೇಕಡಾ 71ರಷ್ಟಿದೆ.

ಪ್ರಸಕ್ತ ವರ್ಷದಲ್ಲಿ ಒಟ್ಟು ವೆಚ್ಚದಲ್ಲಿ ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಶೇಕಡಾ 18.79ರಷ್ಟಿತ್ತು. ಕಂಪನಿಗಳು/ನಿಗಮಗಳಲ್ಲಿ ಮಾರ್ಚ್ 31, 2025ರಲ್ಲಿದ್ದಂತೆ ₹74,325 ಕೋಟಿಗಳ ಹೂಡಿಕೆಯಿಂದ ಬಂದ ಆದಾಯವು ನಗಣ್ಯ (₹977 ಕೋಟಿ).

ವರ್ಷದ ಕೊನೆಯಲ್ಲಿ ರಾಜ್ಯದ ನಗದು ಶಿಲ್ಕು (ಆರ್‌ಬಿಐನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ಠೇವಣಿಗಳ ಹೂಡಿಕೆ ಸೇರಿದಂತೆ) ಹಿಂದಿನ ವರ್ಷಕ್ಕಿಂತ ಶೇಕಡಾ 2.47ರಷ್ಟು ಕಡಿಮೆಯಾಗಿದೆ.

ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ ಆಂತರಿಕ ಸಾಲವು ಪ್ರಮುಖ ಪಾಲನ್ನು (ಶೇಕಡಾ 71) ಹೊಂದಿತ್ತು. 2024–25ರಲ್ಲಿ, ರಾಜ್ಯ ಸರ್ಕಾರವು ತನ್ನ ಮಾರುಕಟ್ಟೆ ಸಾಲಗಳನ್ನು ಹಿಂದಿನ ವರ್ಷದ ₹81,000 ಕೋಟಿಗಳಿಂದ ₹92,025 ಕೋಟಿಗಳಿಗೆ ಹೆಚ್ಚಿಸಿದೆ. ಬಡ್ಡಿ ಪಾವತಿ ಮತ್ತು ರಾಜಸ್ವ ಸ್ವೀಕೃತಿಗಳ ಅನುಪಾತ ದಿಂದ ಅಳೆಯುವ ಬಡ್ಡಿ ಪಾವತಿಗಳ ಹೊರೆ 2024–25ರಲ್ಲಿ ಶೇಕಡಾ 14.72ರಷ್ಟಿದ್ದು ಹಿಂದಿನ ವರ್ಷಕ್ಕಿಂತ (ಶೇಕಡಾ 13.66) ಹೆಚ್ಚಾಗಿದೆ. 2020–21 ರಿಂದ 2022–23 ರ ಅವಧಿಯಲ್ಲಿ ಸಾಲ ಸ್ವೀಕೃತಿಗಳ ಶೇಕಡಾವಾರು ಪ್ರಮಾಣದಲ್ಲಿ ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲವು ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು ಮತ್ತು 2023–24 ಮತ್ತು 2024–25ರ ಅವಧಿಯಲ್ಲಿ, ರಾಜ್ಯವು ರಾಜಸ್ವ ಕೊರತೆಯನ್ನು ನಿಭಾಯಿಸಲು ಹೆಚ್ಚಿನ ಸಾಲಗಳನ್ನು ಪಡೆದ ಕಾರಣ ಎರವಲು ಪಡೆದ ನಿಧಿಯ ನಿವ್ವಳ ಲಭ್ಯತೆ ಹೆಚ್ಚಾಗಿದೆ.

1.8 ಶಿಫಾರಸುಗಳು

- *ರಾಜ್ಯವು ಆದಾಯ ಹೆಚ್ಚುವರಿ ಸ್ಥಿತಿಯತ್ತ ಸಾಗಲು ತೆರಿಗೆ ಮತ್ತು ತೆರಿಗೆಯೇತರ ಹೆಚ್ಚುವರಿ ಸಂಪನ್ಮೂಲಗಳನ್ನು ಸಜ್ಜುಗೊಳಿಸುವುದನ್ನು ಪರಿಗಣಿಸಬೇಕು.*
- *ರಾಜ್ಯ ಸರ್ಕಾರವು, ಬಂಡವಾಳ ವೆಚ್ಚವನ್ನು ಹೆಚ್ಚಿಸಲು ಮತ್ತು ಸಮಯ ಮತ್ತು ವೆಚ್ಚದ ಅಧಿಕತೆಯನ್ನು ತಡೆಗಟ್ಟಲು, ಅಪೂರ್ಣ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ಪೂರ್ಣಗೊಳ್ಳುವ ಹಂತದಲ್ಲಿ ಇರುವ ಕೆಲಸಗಳಿಗೆ ಆದ್ಯತೆ ನೀಡಬೇಕು.*

ಅಧ್ಯಾಯ 2

ಆಯವ್ಯಯ
ನಿರ್ವಹಣೆ

2

ಆಯವ್ಯಯ ನಿರ್ವಹಣೆ

ಈ ಅಧ್ಯಾಯವು, ಅಧಿಕ ವೆಚ್ಚ, ನಿರಂತರ ಉಳಿತಾಯ ಮತ್ತು ಕೊನೆಯ ಕ್ಷಣದ ನಿಧಿ ಅಧ್ಯರ್ಪಣೆಗಳಂತಹ ಅಂಶಗಳೊಂದಿಗೆ ಆಯವ್ಯಯ ಅಂದಾಜುಗಳು ಮತ್ತು ವಾಸ್ತವಿಕ ವೆಚ್ಚಗಳ ನಡುವಿನ ಅಂತರವನ್ನು ಬಹಿರಂಗಪಡಿಸುತ್ತದೆ ಮತ್ತು ಕರ್ನಾಟಕದ ಆಯವ್ಯಯ ಪ್ರಕ್ರಿಯೆಯನ್ನು ಪರಿಶೀಲಿಸುತ್ತದೆ. ಇದು ವಾಸ್ತವಿಕ ಆಯವ್ಯಯ, ಸಕಾಲಿಕ ನಿಧಿ ಬಳಕೆ ಮತ್ತು ಮಹಿಳಾ ಉದ್ದೇಶಿತ ಮತ್ತು ಹಸಿರು ಆಯವ್ಯಯದಂತಹ ಆಧುನಿಕ ಪದ್ದತಿಗಳ ಅಗತ್ಯವನ್ನು ಒತ್ತಿಹೇಳುತ್ತಾ, ಹಣಕಾಸು ಯೋಜನೆ, ನಿಯಂತ್ರಣ ಮತ್ತು ಅನುಸರಣೆಯಲ್ಲಿನ ದೌರ್ಬಲ್ಯಗಳನ್ನು ಎತ್ತಿ ತೋರಿಸುತ್ತದೆ.

2.1 ಆಯವ್ಯಯ ಪ್ರಕ್ರಿಯೆ

ಭಾರತದ ಸಂವಿಧಾನದ 202ನೇ ವಿಧಿಯ ಅನುಸಾರ, ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, ಆ ವರ್ಷದ ರಾಜ್ಯದ ವಾರ್ಷಿಕ ಹಣಕಾಸು ತ:ಖ್ತೆ (ಆಯವ್ಯಯ) ಎಂದು ಕರೆಯಲಾಗುವ ಆ ವರ್ಷದ ರಾಜ್ಯದ ಅಂದಾಜು ಸ್ವೀಕೃತಿ ಮತ್ತು ವೆಚ್ಚಗಳ ಪಟ್ಟಿಯನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕಾಗುತ್ತದೆ. ವೆಚ್ಚದ ಅಂದಾಜುಗಳು 'ಪ್ರಭೃತ' ಮತ್ತು 'ಪುರಸ್ಕೃತ' ವೆಚ್ಚದ ಘಟಕ[1] ಗಳನ್ನು ಪ್ರತ್ಯೇಕವಾಗಿ ತೋರಿಸುತ್ತವೆ ಮತ್ತು ರಾಜಸ್ವ ಲೆಕ್ಕಗಳ ಮೇಲಿನ ವೆಚ್ಚವನ್ನು ಇತರ ವೆಚ್ಚಗಳಿಂದ ಪ್ರತ್ಯೇಕಿಸುತ್ತವೆ. ರಾಜ್ಯ ಸರ್ಕಾರವು ಯಾವುದೇ ವೆಚ್ಚವನ್ನು ಮಾಡುವ ಮೊದಲು ಶಾಸಕಾಂಗ ಅನುಮತಿ ಪಡೆಯುವುದು ಅವಶ್ಯಕವಾಗಿದೆ.

ಕರ್ನಾಟಕ ಆಯವ್ಯಯ ಕೈಪಿಡಿಯ ಪ್ರಕಾರ, ವಿವಿಧ ಇಲಾಖೆಗಳಿಂದ ಅಂದಾಜುಗಳನ್ನು ಪಡೆಯುವ ಮೂಲಕ ಹಣಕಾಸು ಇಲಾಖೆಯು ವಾರ್ಷಿಕ ಆಯವ್ಯಯವನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಹೊಂದಿದೆ. ಆದಾಯ ಮತ್ತು ವೆಚ್ಚದ ಇಲಾಖಾ ಅಂದಾಜುಗಳನ್ನು ಇಲಾಖೆಗಳ ಮುಖ್ಯಸ್ಥರ ಸಲಹೆಯ ಮೇರೆಗೆ ನಿಯಂತ್ರಣ ಅಧಿಕಾರಿಗಳು ಸಿದ್ಧಪಡಿಸುತ್ತಾರೆ ಮತ್ತು ನಿಗದಿತ ದಿನಾಂಕಗಳಲ್ಲಿ ಆರ್ಥಿಕ ಇಲಾಖೆಗೆ ಸಲ್ಲಿಸುತ್ತಾರೆ. ಆರ್ಥಿಕ ಇಲಾಖೆಯು ಅಂದಾಜುಗಳನ್ನು ಕ್ರೋಢೀಕರಿಸುತ್ತದೆ ಮತ್ತು 'ಅನುದಾನಗಳ ಕೋರಿಕೆ' ಎಂಬ ವಿವರವಾದ ಅಂದಾಜುಗಳನ್ನು ಸಿದ್ಧಪಡಿಸುತ್ತದೆ. ರಾಜ್ಯ ಆಯವ್ಯಯ ಪತ್ರವು ಈ ಕೆಳಗಿನ ಮುಖ್ಯ ದಾಖಲೆಗಳನ್ನು ಒಳಗೊಂಡಿದೆ.

- ✓ ವಾರ್ಷಿಕ ಹಣಕಾಸು ತಃಖ್ತೆ
- ✓ ಅನುದಾನ ಗಳ ಕೋರಿಕೆ
- ✓ ಎಫ್ ಆರ್ ಬಿ ಎಮ್ ತಃಖ್ತೆಗಳು
- ✓ ಮಧ್ಯಮಾವಧಿಯ ವಿತ್ತೀಯ ಯೋಜನೆ
- ✓ ವಿತ್ತೀಯ ಅಪಾಯ ಹೇಳಿಕೆ
- ✓ ಇತರೆ

ಇತರ ದಾಖಲೆಗಳಲ್ಲಿ ವಿಷಯ-ನಿರ್ದಿಷ್ಟ ಆಯವ್ಯಯ ದಾಖಲೆಗಳು ಅಂದರೆ, ಮಹಿಳಾ ಉದ್ದೇಶಿತ ಆಯವ್ಯಯ, ಮಕ್ಕಳ ಆಯವ್ಯಯ ಮತ್ತು ವಿಶೇಷ ಘಟಕ ಉಪ ಯೋಜನೆ(ಎಸ್ ಸಿ ಎಸ್ ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ(ಟಿ ಎಸ್ ಪಿ) ಹಂಚಿಕೆ, ವಲಯವಾರು ದಾಖಲೆಗಳು ಅಂದರೆ,

---

[1] ***ಪ್ರಭೃತ ವೆಚ್ಚಗಳು:*** ಕೆಲವು ವರ್ಗಗಳ ವೆಚ್ಚಗಳು (ಉದಾ. ಸಾಂವಿಧಾನಿಕ ಅಧಿಕಾರಿಗಳ ಸಂಬಳ, ಸಾಲ ಮರುಪಾವತಿ, ಇತ್ಯಾದಿ), ರಾಜ್ಯದ ಸಂಚಿತ ನಿಧಿಯ ಮೇಲೆ ಪ್ರಭೃತವನ್ನು ರೂಪಿಸುತ್ತವೆ ಮತ್ತು ಶಾಸಕಾಂಗದ ಅನುಮೋದನೆಗೆ ಒಳಪಡುವುದಿಲ್ಲ. **ಪುರಸ್ಕೃತ ವೆಚ್ಚ:** ಎಲ್ಲಾ ಇತರ ವೆಚ್ಚಗಳನ್ನು ಶಾಸಕಾಂಗವು ಅನುಮೋದಿಸುತ್ತದೆ.

ಜಿಲ್ಲಾ ವಲಯಗಳು, ನಗರ ಸ್ಥಳೀಯ ಸಂಸ್ಥೆಗಳು ಇತ್ಯಾದಿ, ಮತ್ತು ಇತರ ಆಯವ್ಯಯ ಜ್ಞಾಪಕ ಪತ್ರ ಮಂತಾದವುಗಳು ಸೇರಿವೆ. ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷದ ಕರ್ನಾಟಕದ 'ರಾಜ್ಯ ಹಣಕಾಸಿನ ಲೆಕ್ಕ ಪರಿಶೋಧನಾ ವರದಿ'ಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ವಿವರವಾದ ವಿಮರ್ಶೆಯನ್ನು ಸೇರಿಸಲಾಗಿದೆ.

2.2 ಆಯವ್ಯಯ ಪ್ರಕ್ಷೇಪಣೆ ಮತ್ತು ನಿರೀಕ್ಷೆ ಹಾಗು ವಾಸ್ತವಿಕದ ನಡುವಿನ ಅಂತರ

ತೆರಿಗೆ ಆಡಳಿತ/ಇತರ ಸ್ವೀಕೃತಿಗಳು ಮತ್ತು ಸಾರ್ವಜನಿಕ ವೆಚ್ಚಗಳ ಪರಿಣಾಮಕಾರಿ ನಿರ್ವಹಣೆಯು ಸಂಪನ್ಮೂಲಗಳ ಅತ್ಯುತ್ತಮ ಬಳಕೆ, ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಾಮರ್ಥ್ಯವನ್ನು ಬಲಪಡಿಸುವುದು ಮತ್ತು ಹಣಕಾಸಿನ ಗುರಿಗಳನ್ನು ಸಾಧಿಸುವ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ. ನಿರಂತರ ಉಳಿತಾಯ/ಹೆಚ್ಚುವರಿಗಳು ಆಯವ್ಯಯ ಪ್ರಕ್ರಿಯೆಗಳಲ್ಲಿ ಸುಧಾರಣೆಯ ಅಗತ್ಯವನ್ನು ಸೂಚಿಸುತ್ತವೆ.

ರಾಜ್ಯ ಶಾಸಕಾಂಗದಿಂದ ಪಡೆದ ಒಟ್ಟು ವಿನಿಯೋಗ, ವಾಸ್ತವಿಕ ವೆಚ್ಚ ಮತ್ತು ಉಳಿತಾಯದ ವಿವರಗಳನ್ನು **ಕೋಷ್ಟಕ 2.1**ರಲ್ಲಿ ಸಂಕ್ಷೇಪಿಸಲಾಗಿದೆ.

ಕೋಷ್ಟಕ 2.1: 2024–25ನೇ ಹಣಕಾಸು ವರ್ಷದಲ್ಲಿ ಆಯವ್ಯಯ ಅವಕಾಶಕ್ಕೆ ಪ್ರತಿ ವಾಸ್ತವಿಕ ವೆಚ್ಚ

(₹ ಕೋಟಿಗಳಲ್ಲಿ)

	ವೆಚ್ಚದ ಸ್ವರೂಪ	ಮೂಲ ಅನುದಾನ / ವಿನಿಯೋಗ	ಪೂರಕ ಅನುದಾನ / ವಿನಿಯೋಗ	ಒಟ್ಟು ಆಯವ್ಯಯ	ವಾಸ್ತವಿಕ ವೆಚ್ಚ	ಉಳಿತಾಯ	ಅಧೈರ್ಪಣೆ	
							ಮೊತ್ತ	ಶೇಕಡಾವಾರು
ಪರಿಷ್ಕೃತ	I. ರಾಜಸ್ವ	2,55,430.46	14,040.76	2,69,471.22	2,52,165.77	17,305.45	11,391.53	65.83
	II. ಬಂಡವಾಳ	47,548.45	8,969.61	56,518.06	55,830.85	687.21	845.09	122.97
	III. ಸಾಲಗಳು ಮತ್ತು ಮುಂಗಡಗಳು	2,974.19	4,606.48	7,580.67	7,631.35	(–)50.68	3.35	(–)6.61
ಒಟ್ಟು		**3,05,953.10**	**27,616.85**	**3,33,569.95**	**3,15,627.97**	**17,941.98**	**12,239.97**	**68.22**
ಪ್ರಭೃತ	V. ರಾಜಸ್ವ	42,986.17	88.62	43,074.79	39,829.29	3,245.50	3,227.10	99.43
	VII. ಬಂಡವಾಳ	5,969.53	9.54	5,979.07	4,770.30	1,208.77	1,000.26	82.75
	VIII. ಸಾರ್ವಜನಿಕ ಋಣ ಮರುಪಾವತಿ	24,974.29	0.00	24,974.29	24,895.02	79.27	79.22	99.94
ಒಟ್ಟು		**73,929.99**	**98.16**	**74,028.15**	**69,494.61**	**4,533.54**	**4,306.58**	**94.99**
ಸಾದಿಲ್ವಾರು ನಿಧಿಗೆ ವಿನಿಯೋಗ (ಇದ್ದಲ್ಲಿ)		0.00	0.00	0.00	0.00	0.00	0.00	0.00
ಒಟ್ಟು ಮೊತ್ತ		**3,79,883.09**	**27,715.01**	**4,07,598.10**	**3,85,122.58**	**22,475.52**	**16,546.55**	**73.62**

ಆಕರ: ಧನವಿನಿಯೋಗ ಲೆಕ್ಕಗಳು

ಟಿಪ್ಪಣಿ: ಮೇಲೆ ತೋರಿಸಿರುವ ವೆಚ್ಚಗಳು ಒಟ್ಟು ಅಂಕಿಅಂಶಗಳಾಗಿದ್ದು, ರಾಜಸ್ವ ಶೀರ್ಷಿಕೆಗಳು (₹13,008.09 ಕೋಟಿ) ಮತ್ತು ಬಂಡವಾಳ ಶೀರ್ಷಿಕೆಗಳು (₹3,695.31 ಕೋಟಿ) ಅಡಿಯಲ್ಲಿ ವೆಚ್ಚ ಕಡಿತವೆಂದು ಲೆಕ್ಕಗಳಲ್ಲಿ ಹೊಂದಿಸಲಾದ ವಸೂಲಾತಿಗಳನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ.

ವೆಚ್ಚವಾಗದ ಅವಾಕಾಶಗಳು/ ಉಳಿತಾಯವು ಸುಮಾರು ಐದು ಪ್ರತಿಶತದಷ್ಟಿದ್ದು, ಇದು ಆಯವ್ಯಯವು ವಾಸ್ತವಿಕತೆಯನ್ನು ಸಮೀಪಿಸುತ್ತಿದೆ ಎಂದು ಸೂಚಿಸುತ್ತದೆ. 2020–21ರಿಂದ 2024–25ರ ಅವಧಿಗೆ ಮೂಲ ಆಯವ್ಯಯ, ಪರಿಷ್ಕೃತ ಅಂದಾಜು ಮತ್ತು ವಾಸ್ತವಿಕ ವೆಚ್ಚದಲ್ಲಿನ ಪ್ರವೃತ್ತಿಗಳನ್ನು **ಕೋಷ್ಟಕ 2.2**ರಲ್ಲಿ ನೀಡಲಾಗಿದೆ.

ಕೋಷ್ಟಕ 2.2: 2020–21ರಿಂದ 2024–25ರ ವರೆಗಿನ ಹಣಕಾಸು ವರ್ಷಗಳಲ್ಲಿ ಮೂಲ ಆಯವ್ಯಯ, ಪರಿಷ್ಕೃತ ಅಂದಾಜು ಮತ್ತು ವಾಸ್ತವಿಕ ವೆಚ್ಚ

(₹ ಕೋಟಿಗಳಲ್ಲಿ)

	2020–21	2021–22	2022–23	2023–24	2024–25
ಮೂಲ ಆಯವ್ಯಯ	2,44,733.57	2,52,391.98	2,71,542.22	3,41,320.51	3,79,883.09
ಪೂರಕ ಆಯವ್ಯಯ	20,487.16	40,793.33	34,030.45	7,620.95	27,715.01

	2020–21	2021–22	2022–23	2023–24	2024–25
ಒಟ್ಟು ಆಯವ್ಯಯ(ಒ ಆ)	2,65,220.73	2,93,185.31	3,05,572.67	3,48,941.46	4,07,598.10
ಪರಿಷ್ಕೃತ ಅಂದಾಜು(ಪ.ಅಂ)	2,36,764.97	2,59,350.00	2,95,475.34	3,19,589.93	3,65,865.16
ವಾಸ್ತವಿಕ ವೆಚ್ಚ(ವಾ ವೆ)	2,42,694.49	2,82,335.70	2,97,325.39	3,29,678.84	3,85,122.58
ಉಳಿತಾಯಗಳು	22,526.24	10,849.61	8,247.28	19,262.62	22,475.52
ಮೂಲ ಆಯವ್ಯಯಕ್ಕೆ ಪೂರಕ ಆಯವ್ಯಯದ ಶೇಕಡಾವಾರು	8.37	16.16	12.53	2.23	7.30
ಒಟ್ಟು ಆಯವ್ಯಯಕ್ಕೆ ಒಟ್ಟು ಉಳಿತಾಯ/ ಅಧಿಕದ ಶೇಕಡಾವಾರು	8.49	3.70	2.70	5.52	5.51
ಒ ಆ–ಪ ಅಂ	28,455.76	33,835.31	10,097.33	29,351.53	41,732.94
ಪ ಅಂ–ವಾ ವೆ	(–)5,929.52	(–)22,985.70	(–)1,850.05	(–)10,088.91	(–)19,257.42
(ಒ ಆ–ಪ ಅಂ) ಒ ಆ ದ ಶೇಕಡಾವಾರಾಗಿ	10.73	11.54	3.30	8.41	10.24
ಪ ಅಂ–ವಾ ವೆ – ಒ ಆ ದ ಶೇಕಡಾವಾರಾಗಿ	(–)2.24	(–)7.84	(–)0.61	(–)2.89	(–)4.72

ಆಕರ: ವಾರ್ಷಿಕ ಹಣಕಾಸು ವಿವರಣಾ ಪಟ್ಟಿ ಮತ್ತು ಧನವಿನಿಯೋಗ ಲೆಕ್ಕಗಳು

2024–25ನೇ ಸಾಲಿನಲ್ಲಿ ₹27,715.01 ಕೋಟಿಗಳ ಪೂರಕ ಅವಕಾಶವು ಹಿಂದಿನ ವರ್ಷದಲ್ಲಿದ್ದ ಮೂಲ ಅವಕಾಶದ ಶೇ.2.23ರ ಎದುರಾಗಿ ಶೇ.7.30ರಷ್ಟಿದೆ ಎಂದು **ಕೋಷ್ಟಕ 2.2** ತೋರಿಸುತ್ತದೆ.

ನಕ್ಷೆ 2.1: ಮೂಲ ಆಯವ್ಯಯ, ಪರಿಷ್ಕೃತ ಅಂದಾಜು ಮತ್ತು ವಾಸ್ತವಿಕತೆಗಳ ಪ್ರವೃತ್ತಿ

(₹ ಕೋಟಿಗಳಲ್ಲಿ)



ಆಕರ: ವಾರ್ಷಿಕ ಹಣಕಾಸು ವಿವರಣಾ ಪಟ್ಟಿ ಮತ್ತು ಧನವಿನಿಯೋಗ ಲೆಕ್ಕಗಳು

ನಕ್ಷೆ 2.1ರಿಂದ, ಪರಿಷ್ಕೃತ ಅಂದಾಜುಗಳು ಮತ್ತು ವಾಸ್ತವಿಕ ವೆಚ್ಚಗಳಿಗೆ ಹೋಲಿಸಿದರೆ, ಮೂಲ ಮತ್ತು ಪೂರಕ ಧನ ವಿನಿಯೋಗಗಳ ಮೂಲಕ ಶಾಸಕಾಂಗದಿಂದ ಪಡೆದ ಒಟ್ಟು ಆಯವ್ಯಯದ ನಡುವೆ ಹೆಚ್ಚುತ್ತಿರುವ ವ್ಯತ್ಯಾಸವಿದೆ ಎಂದು ಕಂಡುಬರುತ್ತದೆ.

2.2.1 ಆಯವ್ಯಯದ ಅವಕಾಶಗಳು ಮತ್ತು ವೆಚ್ಚಗಳ ಘಟಕ/ಸೇವೆಗಳವಾರು ವಿಶ್ಲೇಷಣೆ

2024–25ನೇ ಹಣಕಾಸು ವರ್ಷದ ಆಯವ್ಯಯ ಮತ್ತು ವೆಚ್ಚದ ಘಟಕವಾರು ವಿಶ್ಲೇಷಣೆಯನ್ನು **ಕೋಷ್ಟಕ 2.3**ರಲ್ಲಿ ಸಂಕ್ಷೇಪಿಸಲಾಗಿದೆ. ಧನ ವಿನಿಯೋಗ ಲೆಕ್ಕಗಳಲ್ಲಿನ ವ್ಯತ್ಯಾಸಗಳ ಸಂದರ್ಭದಲ್ಲಿ ಸ್ವೀಕರಿಸಿದ ವಿವರಣೆಗಳ ಸಾರಾಂಶವನ್ನು **ನಕ್ಷೆ 2.2**ರಲ್ಲಿ ಚಿತ್ರಿಸಲಾಗಿದೆ.

ಕೋಷ್ಟಕ 2.3: 2024–25ನೇ ಸಾಲಿನ ಘಟಕವಾರು ಆಯವ್ಯಯ ಮತ್ತು ವೆಚ್ಚ

(₹ ಕೋಟಿಗಳಲ್ಲಿ)

ಘಟಕ	ಒಟ್ಟು ಆಯವ್ಯಯ	ಒಟ್ಟು ವೆಚ್ಚ	ರಾಜ್ಯದ ಒಟ್ಟು ಆಯವ್ಯಯದ ಶೇಕಡಾವಾರು	ರಾಜ್ಯದ ಒಟ್ಟು ವೆಚ್ಚದ ಶೇಕಡಾವಾರು	ಒಟ್ಟು ಆಯವ್ಯಯಕ್ಕೆ ಒಟ್ಟು ವೆಚ್ಚದ ಶೇಕಡಾವಾರು
(1)	(2)	(3)	(4)	(5)	(6=3/2*100)
ಬದ್ಧ ವೆಚ್ಚಗಳು	**1,29,594.80	1,16,479.00	31.79	30.24	89.88
ರಾಜ್ಯ ಯೋಜನೆಗಳು	1,52,250.23	1,58,735.70	37.35	38.94	104.26
ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರದ ಪಾಲು	9,379.91	8,509.80	2.30	2.09	90.72
ಕೇಂದ್ರ ಪುರಸ್ಕೃತ ಯೋಜನೆಗಳಿಗೆ ರಾಜ್ಯದ ಪಾಲು	13,130.52	12,670.23	3.22	3.11	96.49
ಬಾಹ್ಯ ನೆರವಿನ ಯೋಜನೆಗಳು	2,768.14	3,281.32	0.68	0.81	118.54

***₹22,319 ಕೋಟಿ ಪಂಚಾಯತ್ ರಾಜ್ ಸಂಸ್ಥೆಗಳ ಸಂಬಳ ವೆಚ್ಚವನ್ನು ಪಂಚಾಯತ್ ರಾಜ್ ಸಂಸ್ಥೆಗಳ ಆಯವ್ಯಯವೆಂದು ಪರಿಗಣಿಸಲಾಗುತ್ತದೆ, ಏಕೆಂದರೆ ಪಂಚಾಯತ್ ರಾಜ್ ಸಂಸ್ಥೆಗಳ ಸಂಬಳದ ವಿವರಗಳು ಆಯವ್ಯಯ ದಾಖಲೆಗಳಲ್ಲಿ ಸ್ಪಷ್ಟವಾಗಿ ಲಭ್ಯವಿಲ್ಲ.*

ಬದ್ಧ ವೆಚ್ಚಗಳು, ರಾಜ್ಯ ಯೋಜನೆಗಳು ಮತ್ತು ಬಾಹ್ಯ ನೆರವಿನ ಯೋಜನೆಗಳಿಗೆ ಸಂಬಂಧಿಸಿದಂತೆ ಆಯವ್ಯಯ ಅವಕಾಶಗಳಿಗೆ ಹೋಲಿಸಿದರೆ ವೆಚ್ಚವು ಅಧಿಕವಾಗಿದ್ದರೂ, ಅವುಗಳನ್ನು ಪುನರ್ವಿನಿಯೋಗ ಮೂಲಕ ಒದಗಿಸಲಾಗಿದೆ.

ಕೇಂದ್ರ ಪುರಸ್ಕೃತ ಪ್ರಾಯೋಜಿತ ಯೋಜನೆಗಳಿಗೆ ಸಂಬಂಧಿಸಿದಂತೆ, ಕೇಂದ್ರದ ಪಾಲು ಮತ್ತು ರಾಜ್ಯದ ಪಾಲು ಎರಡರಲ್ಲೂ ಉಳಿತಾಯವಿತ್ತು.

2.2.2 ಆಯವ್ಯಯದಲ್ಲಿನ ವ್ಯತ್ಯಾಸದಲ್ಲಿ ವಿವರಣೆ ಕಾಣೆಯಾಗಿರುವ / ಅಪೂರ್ಣವಿವರಣೆ

ಅನುಮೋದಿತ ಆಯವ್ಯಯಕ್ಕೆ ಎದುರಾಗಿ ವೆಚ್ಚವನ್ನು ತೋರಿಸುವುದರ ಜೊತೆಗೆ, ಧನ ವಿನಿಯೋಗ ಲೆಕ್ಕಗಳು ಪೂರಕ ಅವಕಾಶಗಳು ಸೇರಿದಂತೆ ಆಯವ್ಯಯದಲ್ಲಿ ಮಾಡಲಾದ ಅವಕಾಶದಿಂದ ವೆಚ್ಚವು ಗಮನಾರ್ಹವಾಗಿ ವ್ಯತ್ಯಾಸಗೊಳ್ಳುವ ಪ್ರಕರಣಗಳಿಗೆ ವಿವರಣೆಯನ್ನು ಸಹ ಒದಗಿಸುತ್ತವೆ.

ಧನ ವಿನಿಯೋಗ ಲೆಕ್ಕಗಳಲ್ಲಿ ವ್ಯತ್ಯಾಸದ ಸಂದರ್ಭದಲ್ಲಿ ಸ್ವೀಕರಿಸಿದ ವಿವರಣೆಗಳ ಸಾರಾಂಶವನ್ನು **ನಕ್ಷೆ 2.2**ರಲ್ಲಿ ಚಿತ್ರಿಸಲಾಗಿದೆ.

ನಕ್ಷೆ 2.2: ಧನ ವಿನಿಯೋಗ ಲೆಕ್ಕಗಳಲ್ಲಿನ ವ್ಯತ್ಯಯಗಳ ವಿವರಣೆಯ ಸಾರಾಂಶ



ಆಕರ: ಮಹಾಲೇಖಾಪಾಲರ ಕಛೇರಿ (ಲೆ ಮತ್ತು ಹ) ರಿಂದ ಒದಗಿಸಲಾದ ಮಾಹಿತಿ

2024–25ರ ಧನ ವಿನಿಯೋಗ ಲೆಕ್ಕಗಳ ಲೆಕ್ಕಪರಿಶೋಧನೆಯಲ್ಲಿ, ಆಯವ್ಯಯ ಹಂಚಿಕೆಗೆ ಹೋಲಿಸಿದರೆ ವೆಚ್ಚದಲ್ಲಿನ ವ್ಯತ್ಯಾಸಗಳಾದ ಉಳಿತಾಯದ ಸುಮಾರು ಶೇಕಡಾ 58ರಷ್ಟಕ್ಕೆ ನಿಯಂತ್ರಣ ಅಧಿಕಾರಿಗಳು ವಿವರಣೆ/ನಿರ್ದಿಷ್ಟ ಕಾರಣಗಳನ್ನು ಒದಗಿಸಿಲ್ಲ ಎಂದು ಗಮನಿಸಲಾಗಿದೆ. 28 ಅನುದಾನಗಳು/ವಿನಿಯೋಗಗಳಲ್ಲಿ, 22 ಅನುದಾನಗಳು/ವಿನಿಯೋಗಗಳಲ್ಲಿನ ₹6,066.68 ಕೋಟಿ ಮೊತ್ತದ ವ್ಯತ್ಯಾಸಕ್ಕೆ ನಿರ್ದಿಷ್ಟ ಕಾರಣಗಳನ್ನು (**ಅನುಬಂಧ 2.1**) ಸರ್ಕಾರಿ ಇಲಾಖೆಗಳ ನಿಯಂತ್ರಣ ಅಧಿಕಾರಿಗಳು ಒದಗಿಸಿಲ್ಲ.

2.3 ಆಯವ್ಯಯ ಗುರಿಗಾರಿಕೆ

ವೆಚ್ಚ ಸಂಯೋಜನಾ ಫಲಿತ

ವೆಚ್ಚ ಸಂಯೋಜನಾ ಫಲಿತವು ಕಾರ್ಯನಿರ್ವಹಣಾ ಸಂದರ್ಭದಲ್ಲಿ ಮೂಲ ಆಯವ್ಯಯ ವರ್ಗಗಳ ನಡುವಿನ ಮರು–ಹಂಚಿಕೆಗಳು ವೆಚ್ಚ ಸಂಯೋಜನೆಯಲ್ಲಿ ವ್ಯತ್ಯಾಸಕ್ಕೆ ಯಾವ ಪ್ರಮಾಣದಲ್ಲಿ ಕೊಡುಗೆ ನೀಡಿವೆ ಎಂಬುದನ್ನು ಅಳೆಯುತ್ತದೆ.

ಅನುದಾನಗಳ, ಹೆಚ್ಚುವರಿಗಳ ಮತ್ತು ಉಳಿತಾಯಗಳ ವರ್ಷವಾರು ವಿಶ್ಲೇಷಣೆಯು ರಾಜ್ಯದಿಂದ ಆಯವ್ಯಯವನ್ನು ಕಾರ್ಯಗತಗೊಳಿಸುವಿಕೆ ಮತ್ತು ಹಣಕಾಸು ನಿರ್ವಹಣೆಯ ದಕ್ಷತೆಯ ಬಗ್ಗೆ ಅಮೂಲ್ಯವಾದ ಒಳನೋಟಗಳನ್ನು ಒದಗಿಸುತ್ತದೆ. ಇದನ್ನು **ನಕ್ಷೆ 2.3**ರಲ್ಲಿ ಚಿತ್ರಿಸಲಾಗಿದೆ.

ನಕ್ಷೆ 2.3 : ವರ್ಷವಾರು ಅನುದಾನಗಳು, ಹೆಚ್ಚುವರಿಗಳು ಮತ್ತು ಉಳಿತಾಯಗಳು



ಆಕರ: ಧನವಿನಿಯೋಗ ಲೆಕ್ಕಗಳು

ನಕ್ಷೆಯಿಂದ ಅನುದಾನದಲ್ಲಿನ ಒಟ್ಟಾರೆ ಹೆಚ್ಚುವರಿಯು ಕಡಿಮೆಯಾಗಿದೆ ಎಂದು ಕಾಣಬಹುದು.

2024–25ನೇ ಹಣಕಾಸು ವರ್ಷದ ವೆಚ್ಚ ಸಂಯೋಜನೆಯ ಫಲಿತಾಂಶವನ್ನು **ಕೋಷ್ಟಕ 2.4**ರಲ್ಲಿ ನೀಡಲಾಗಿದೆ. ಈ ಕೋಷ್ಟಕವು ಆಯವ್ಯಯ ಅಂದಾಜಿನಿಂದ ವಾಸ್ತವಿಕ ವೆಚ್ಚದ ಶೇಕಡಾವಾರು ವಿಚಲನದ ಆಧಾರದ ಮೇಲೆ ಪ್ರತಿ ವಿಭಾಗದ ಅಡಿಯಲ್ಲಿ ಅನುದಾನಗಳನ್ನು ಗುಂಪುಗಳಾಗಿ ಉಲ್ಲೇಖಿಸುತ್ತದೆ. ಕೋಷ್ಟಕದ ವಿವರವಾದ ವಿವರಣೆಯನ್ನು **ಅನುಬಂಧ 2.2**ರಲ್ಲಿ ನೀಡಲಾಗಿದೆ.

ಕೋಷ್ಟಕ 2.4: 2024–25ನೇ ಹಣಕಾಸು ವರ್ಷದ ವೆಚ್ಚ ಸಂಯೋಜನೆಯ ಒಟ್ಟಾರೆ ವಿಚಲನ

ವಿಭಾಗ	ಒಟ್ಟಾರೆ ವಿಚಲನ(ಶೇಕಡಾವಾರು)	ವಿಚಲನದ ವ್ಯಾಪ್ತಿ(ಶೇಕಡಾವಾರು)	ಅನುದಾನದ ಸಂಖ್ಯೆ
ರಾಜಸ್ವ(ಪುರಸ್ಕೃತ)	(–)6.42	0 ರಿಂದ ± 25	26
		± 25 ರಿಂದ ± 50	1
ಬಂಡವಾಳ(ಪುರಸ್ಕೃತ)	(–)7.53	0 ರಿಂದ ± 25	15
		± 25 ರಿಂದ ± 50	5
		± 50 ರಿಂದ ± 100	1
		≥ ± 100	6
ರಾಜಸ್ವ(ಪ್ರಭೃತ)	(–)0.99	0 ರಿಂದ ± 25	6
		± 25 ರಿಂದ ± 50	1
		± 50 ರಿಂದ ≤ ±100	3
ಬಂಡವಾಳ (ಪ್ರಭೃತ)	(–)4.16	0 ರಿಂದ ± 25	4
		± 25 ರಿಂದ ± 50	1
		≥ ± 100	3

ಆಕರ: ಮಹಾಲೇಖಾಪಾಲರ ಕಛೇರಿ (ಲೆ ಮತ್ತು ಹ) ರಿಂದ ಒದಗಿಸಲಾದ ಮಾಹಿತಿ

ವಿಚಲನದ ವಿಶ್ಲೇಷಣೆಯು ಬಂಡವಾಳ ಪುರಸ್ಕೃತ ವಿಭಾಗದ ಅಡಿಯಲ್ಲಿ ಆರು ಅನುದಾನಗಳಲ್ಲಿ, ವಿಚಲನವು ಶೇಕಡಾ 100ಕ್ಕಿಂತ ಹೆಚ್ಚಿದ್ದು, ಬಂಡವಾಳ ವಿಭಾಗದ ಅಡಿಯಲ್ಲಿ ಆಯವ್ಯಯ ಮುನ್ಸೂಚನೆಯನ್ನು ಬಲಪಡಿಸುವ ಅಗತ್ಯವನ್ನು ಸೂಚಿಸುತ್ತದೆ ಎಂದು ಬಹಿರಂಗಪಡಿಸಿದೆ.

2.4 ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಭಾರತದ ಸಂವಿಧಾನದ ಅನುಚ್ಛೇದ 204ರ ಅಡಿಯಲ್ಲಿ ಅಂಗೀಕರಿಸಲಾದ ಧನವಿನಿಯೋಗ ಕಾಯ್ದೆಗೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ವಿವಿಧ ಉದ್ದೇಶಗಳಿಗಾಗಿ ಅನುಮೋದಿತವಾದ ಅನುದಾನಗಳು ಮತ್ತು ವಿಧಿಸಲಾದ ವಿನಿಯೋಗಗಳ ಮೊತ್ತದೊಂದಿಗೆ ಹೋಲಿಸಿದಂತೆ. ಪ್ರತಿ ಹಣಕಾಸು ವರ್ಷಕ್ಕೆ ಸರ್ಕಾರದ ವೆಚ್ಚದ ಲೆಕ್ಕಗಳಾಗಿವೆ, ಈ ಲೆಕ್ಕಗಳು ಮೂಲ ಆಯವ್ಯಯ ಅವಕಾಶ, ಪೂರಕ ಅನುದಾನಗಳು, ಅಧ್ಯರ್ಪಣೆಗಳು ಮತ್ತು ಪುನರ್ವಿನಿಯೋಗಗಳಿಗೆ ಎದುರಾಗಿ ಒಟ್ಟಾರೆ ವೆಚ್ಚದ ಆಧಾರದಲ್ಲಿದೆ.

ಸಿಎಜಿಯವರಿಂದ ಧನವಿನಿಯೋಗಗಳ ಲೆಕ್ಕಪರಿಶೋಧನೆಯು ವಿವಿಧ ಅನುದಾನಗಳ ಅಡಿಯಲ್ಲಿ ವಾಸ್ತವವಾಗಿ ಮಾಡಿದ ವೆಚ್ಚವು ಧನವಿನಿಯೋಗ ಕಾಯ್ದೆಯ ಅಡಿಯಲ್ಲಿ ನೀಡಲಾದ ಅಧಿಕಾರಕ್ಕೆ ಅನುಗುಣವಾಗಿದೆಯೇ ಮತ್ತು ಸಂವಿಧಾನದ ಅನುವುಗಳ (ಅನುಚ್ಛೇದ 202) ಅಡಿಯಲ್ಲಿ ಪ್ರಭೃತ ಗೊಳಿಸಬೇಕಾದ ವೆಚ್ಚವನ್ನು ಹಾಗೆ ಪ್ರಭೃತ ಗೊಳಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಮಾಡಿದ ವೆಚ್ಚವು ಕಾನೂನುಗಳು, ಸಂಬಂಧಿತ ನಿಯಮಗಳು ಮತ್ತು ಸೂಚನೆಗಳಿಗೆ ಅನುಗುಣವಾಗಿದೆಯೇ ಎಂದು ಸಹ ಇದು ಖಚಿತಪಡಿಸಿಕೊಳ್ಳುತ್ತದೆ.

2.5 ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆ

2.5.1 ಕಾನೂನಿನ ಪ್ರಾಧಿಕಾರವಿಲ್ಲದೆ ಮಾಡಿದ ವೆಚ್ಚ

ಸಂವಿಧಾನದ 204ನೇ ವಿಧಿಯ ನಿಬಂಧನೆಗಳಿಗೆ ಅನುಸಾರವಾಗಿ ಅಂಗೀಕರಿಸಲಾದ ಕಾನೂನಿನಿಂದ ಮಾಡಲಾದ ಹಂಚಿಕೆಯ ಅಡಿಯಲ್ಲಿ ಹೊರತುಪಡಿಸಿ, ರಾಜ್ಯದ ಸಂಚಿತ ನಿಧಿಯಿಂದ ಯಾವುದೇ ಹಣವನ್ನು ಹಿಂಪಡೆಯಬಾರದು. ಕರ್ನಾಟಕ ಹಣಕಾಸು ಸಂಹಿತೆಯ ಕಂಡಿಕೆ 14, 14(ಎ) ಮತ್ತು 14(ಬಿ)ಗಳು ಒಟ್ಟಾಗಿ ಯಾವುದೇ ಸರ್ಕಾರಿ ನೌಕರನು ಎರಡು ಷರತ್ತುಗಳನ್ನು ಪೂರೈಸದ ಹೊರತು ಸಾರ್ವಜನಿಕ ನಿಧಿಯಿಂದ ಯಾವುದೇ ವೆಚ್ಚವನ್ನು ಭರಿಸುವಂತಿಲ್ಲ ಎಂದು ವಿಧಿಸುತ್ತದೆ, ಅಂದರೆ, (ಎ) ಅಂತಹ ವೆಚ್ಚವನ್ನು ಮಂಜೂರು ಮಾಡಲು ಸಕ್ಷಮ ಅಧಿಕಾರಿಗಳ ಸಾಮಾನ್ಯ ಅಥವಾ ವಿಶೇಷ ಆದೇಶದಿಂದ ವೆಚ್ಚವನ್ನು ಮಂಜೂರು ಮಾಡಿರಬೇಕು ಮತ್ತು (ಬಿ) ಪ್ರಸ್ತುತ ಹಣಕಾಸು ವರ್ಷದ ವಿನಿಯೋಗ ಕಾಯ್ದೆಗಳಲ್ಲಿ ಅಥವಾ ಅಂತಹ ಪುನರ್ವಿನಿಯೋಗವನ್ನು ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರದಿಂದ ಮಂಜೂರು ಮಾಡಲಾದ ನಿಧಿಯ ಪುನರ್ವಿನಿಯೋಗದ ಮೂಲಕ ವೆಚ್ಚಕ್ಕೆ ಸಾಕಷ್ಟು ಹಣವನ್ನು ಒದಗಿಸಿರಬೇಕು. ಆದಾಗ್ಯೂ, 2024–25ನೇ ಸಾಲಿನಲ್ಲಿ ಆರು ಅನುದಾನಗಳ ವಿವಿಧ ಅಂಶಗಳ ಅಡಿಯಲ್ಲಿ 15 ಪ್ರಕರಣಗಳಲ್ಲಿ ₹261.75 ಕೋಟಿ (**ಅನುಬಂಧ 2.3**) ಖರ್ಚು ಮಾಡಲಾಗಿದೆ ಎಂದು ಗಮನಿಸಲಾಗಿದೆ, ಆದರೆ ಮೂಲ ಆಯವ್ಯಯ ಅಂದಾಜುಗಳು/ಪೂರಕ ಬೇಡಿಕೆಗಳಲ್ಲಿ ಯಾವುದೇ ಅವಕಾಶಗಳನ್ನು ಹೊಂದಿರಲಿಲ್ಲ ಮತ್ತು ಈ ನಿಟ್ಟಿನಲ್ಲಿ ಯಾವುದೇ ಪುನರ್ವಿನಿಯೋಗ ಆದೇಶಗಳನ್ನು ನೀಡಿರಲಿಲ್ಲ.

ವಾಸ್ತವಗಳನ್ನು ಅಂಗೀಕರಿಸುತ್ತ ರಾಜ್ಯ ಸರ್ಕಾರವು (ಜನವರಿ 2026) ವೆಚ್ಚದ ಒಂದು ಭಾಗವು ಕೇಂದ್ರ ಸರ್ಕಾರದಿಂದ ವರ್ಷದಲ್ಲಿ ಹೊಸದಾಗಿ ಪರಿಚಯಿಸಲಾದ ಕೇಂದ್ರ ಪುರಸ್ಕೃತ ಯೋಜನೆಗೆ ಸೇರಿದೆ ಮತ್ತು ಉಳಿದ ಹಣವನ್ನು ಮುಂದಿನ ಕ್ರಮಕ್ಕಾಗಿ ಗಮನಿಸಲಾಗಿದೆ ಎಂದು ಉತ್ತರಿಸಿತು. ಆದಾಗ್ಯೂ, ಹೊಸದಾಗಿ ಪರಿಚಯಿಸಲಾದ ಎಲ್ಲಾ ಯೋಜನೆಗಳಿಗೆ ಸಾಂವಿಧಾನಿಕ ಅನುವುಗಳನ್ನು ಪಾಲಿಸಲು ರಾಜ್ಯವು ಸಾಂಕೇತಿಕ ಅವಕಾಶಗಳನ್ನು ಒದಗಿಸಬಹುದು.

2.5.1.1 ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆ ಮಾಡಲಾದ ಹೆಚ್ಚುವರಿ ಮೊತ್ತ

ಭಾರತ ಸಂವಿಧಾನದ 266(3)ನೇ ವಿಧಿಯು ಸಂವಿಧಾನದ 204 ಮತ್ತು 205ನೇ ವಿಧಿಯ ಅಡಿಯಲ್ಲಿ ಸಂಬಂಧಿತ ವಿನಿಯೋಗ ಕಾಯ್ದೆಗಳನ್ನು ಶಾಸಕಾಂಗವು ಅಂಗೀಕರಿಸದ ಹೊರತು ರಾಜ್ಯದ ಸಂಚಿತ

ನಿಧಿಯಿಂದ ಹಣವನ್ನು ಹಿಂಪಡೆಯುವುದನ್ನು ನಿಷೇಧಿಸುತ್ತದೆ.

2024–25ನೇ ವರ್ಷದ ಲೆಕ್ಕಪರಿಶೋಧನೆಯ ಸಮಯದಲ್ಲಿ, ಬಂಡವಾಳ/ಆದಾಯ ವಿಭಾಗದ ಅಡಿಯಲ್ಲಿ 21 ಅನುದಾನಗಳನ್ನು ಒಳಗೊಂಡ ₹10,035.13 ಕೋಟಿಯನ್ನು (ಇದು ಕೇವಲ ಉದಾಹರಣಾತ್ಮಕವಾಗಿದೆ), **(ಅನುಬಂಧ 2.4)** 118 ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆ ಮಾಡಲಾಗಿದೆ ಎಂದು ಗಮನಿಸಲಾಗಿದೆ.

2020–21ರಿಂದ 2024–25ರ ಅವಧಿಗೆ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆ ಮಾಡಲಾದ ಹೆಚ್ಚುವರಿ ಮೊತ್ತದ ವಿವರಗಳನ್ನು **ಕೋಷ್ಟಕ 2.5**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 2.5: 2020–21ರಿಂದ 2024–25ರ ಅವಧಿಯಲ್ಲಿ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆ ಮಾಡಲಾದ ಹೆಚ್ಚುವರಿ ಮೊತ್ತಗಳು

(₹ ಕೋಟಿಗಳಲ್ಲಿ)

ವರ್ಷ	ಬೇಡಿಕೆಗಳ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಮೊತ್ತ
2020–21	10	36	5,281.70
2021–22	21	68	8,489.40
2022–23	21	147	10,948.60
2023–24	24	116	4,850.73
2024–25	21	118	10,035.13

ಆಕರ: ಧನವಿನಿಯೋಗ ಲೆಕ್ಕಗಳು

ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತವನ್ನು ತೋರಿಸಿದ ಪ್ರಕರಣಗಳ ಸಂಖ್ಯೆಯು 2022–23ರ ವರೆಗೆ ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿತು. ನಂತರ, ಇದು 2023–24ರ ಅವಧಿಯಲ್ಲಿ ಕಡಿಮೆಯಾಯಿತು, ಆದರೆ 2024–25ರ ಅವಧಿಯಲ್ಲಿ ಬಹುತೇಕ ಹಾಗೇ ಮುಂದುವರೆಯಿತು. 2023–24ರ ಅವಧಿಯಲ್ಲಿ ಗಣನೀಯವಾಗಿ ಕುಸಿದಿದ್ದ ಬಿಡುಗಡೆಯಾದ ಮೊತ್ತವು 2024–25ರ ಅವಧಿಯಲ್ಲಿ ಮತ್ತೊಮ್ಮೆ ಹೆಚ್ಚಾಯಿತು.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು (ಪಿಎಸಿ) ತನ್ನ ಐದನೇ ವರದಿಯಲ್ಲಿ (ಹದಿನಾಲ್ಕನೇ ಸಭೆ) ಕಾರ್ಯನಿರ್ವಾಹಕ ಸೂಚನೆಗಳ ಮೂಲಕ ಹೆಚ್ಚುವರಿ ಮಂಜೂರಾತಿಯನ್ನು ತುರ್ತು ಪ್ರಕರಣಗಳಿಗೆ ಸೀಮಿತಗೊಳಿಸಬೇಕು ಎಂದು ಶಿಫಾರಸು ಮಾಡಿತ್ತು (ಜುಲೈ 2015). ಆದಾಗ್ಯೂ, ಈ ಹೆಚ್ಚುವರಿಗಳಿಂದ ಭರಿಸಿದ ವೆಚ್ಚವು ಬಂಡವಾಳ ವೆಚ್ಚ ನೀರಾವರಿ ಕಾರ್ಯಗಳು, ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್ ಡಿ ಆರ್ ಎಫ್)ಯ ಮೊತ್ತದ ಬಿಡುಗಡೆ ಇತ್ಯಾದಿಗಳನ್ನು ಒಳಗೊಂಡಿದ್ದು, ಅವು ತುರ್ತು/ಅನಿರೀಕ್ಷಿತ ವೆಚ್ಚಗಳಾಗಿ ಅರ್ಹತೆ ಪಡೆಯಲಿಲ್ಲ ಮತ್ತು ಪೂರಕ ಬೇಡಿಕೆಗಾಗಿ ಕಾಯಬಹುದಿತ್ತು ಎಂದು ಗಮನಿಸಲಾಯಿತು.

ರಾಜ್ಯ ಸರ್ಕಾರವು (ಜನವರಿ 2026) ಸಿಎಸ್ಎಸ್‌ಗಾಗಿ ಎಸ್ಎನ್ಎ/ಎಸ್ಎನ್ಎ–ಸ್ಪಾರ್ಟ್ ಅನ್ನು ಪರಿಚಯಿಸಿದ ನಂತರ ಕೇಂದ್ರಪಾಲನ್ನು ಸ್ವೀಕರಿಸಿದ 21 ದಿನಗಳಲ್ಲಿ ಎಸ್ಎನ್ಎ ಖಾತೆಗೆ ವರ್ಗಾಯಿಸಬೇಕಾಗುತ್ತದೆ ಎಂದು ಉತ್ತರಿಸಿತು. ಪರಿಣಾಮವಾಗಿ, ರಾಜ್ಯವು ಹೆಚ್ಚುವರಿ ಆದೇಶಗಳ ಮೂಲಕ ಹಣವನ್ನು ಬಿಡುಗಡೆ ಮಾಡಬೇಕಾಯಿತು. 'ಹೊಸ ಸೇವೆಗಳಿಗೆ' ನಿಗದಿಪಡಿಸಿದ ಮಿತಿಯೊಳಗೆ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಲು ಪಿಎಸಿಯು ಅಧಿಕಾರ ನೀಡಿದೆ ಮತ್ತು ಬಿಡುಗಡೆಯನ್ನು ತದನಂತರ ಶಾಸಕಾಂಗವು ಅನುಮೋದಿಸಿದೆ ಎಂದು ಅದು ಒತ್ತಿ ಹೇಳಿತು.

ಆದಾಗ್ಯೂ, ರಾಜ್ಯವು ಆಯವ್ಯಯ ಶಿಸ್ತಿನ ಮೇಲೆ ಕೇಂದ್ರೀಕರಿಸಬೇಕು ಮತ್ತು ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಹಣವನ್ನು ತಪ್ಪಿಸಬೇಕು.

2.5.2 ಹೆಚ್ಚುವರಿ ವೆಚ್ಚ ಮತ್ತು ಅದರ ಸಕ್ರಮಗೊಳಿಸುವಿಕೆ

ಭಾರತ ಸಂವಿಧಾನದ 205ನೇ ವಿಧಿಯ ಪ್ರಕಾರ, ರಾಜ್ಯ ಸರ್ಕಾರದ ಅನುದಾನ/ಧನವಿನಿಯೋಗಗಳ ಮೇಲಿನ ಹೆಚ್ಚುವರಿಯನ್ನು ರಾಜ್ಯ ಶಾಸಕಾಂಗವು ಕ್ರಮಬದ್ಧಗೊಳಿಸುವುದು ಕಡ್ಡಾಯವಾಗಿದೆ.

ವಿಧಿಯಡಿಯಲ್ಲಿ ವೆಚ್ಚವನ್ನು ಸಕ್ರಮಗೊಳಿಸಲು ಯಾವುದೇ ಸಮಯದ ಮಿತಿಯನ್ನು ನಿಗದಿಪಡಿಸಲಾಗಿಲ್ಲವಾದರೂ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಧನವಿನಿಯೋಗ ಲೆಕ್ಕಗಳ ಚರ್ಚೆಯನ್ನು ಪೂರ್ಣಗೊಳಿಸಿದ ನಂತರ ಹೆಚ್ಚುವರಿ ವೆಚ್ಚವನ್ನು ಸಕ್ರಗೊಳಿಸಲಾಗುತ್ತದೆ.

ಎ. ಪ್ರಸ್ತುತ ವರ್ಷದಲ್ಲಿ ಹೆಚ್ಚುವರಿ ವೆಚ್ಚ

2024–25ರಲ್ಲಿ ಮೂರು ಅನುದಾನಗಳ ಅಡಿಯಲ್ಲಿ ರಾಜ್ಯ ಶಾಸಕಾಂಗವು ಅನುಮೋದಿಸಿದ ಅವಕಾಶಕ್ಕಿಂತ ₹4,388.75 ಕೋಟಿ ಹೆಚ್ಚುವರಿ ವಿತರಣೆಯಾಗಿದೆ, ಇದನ್ನು **ಕೋಷ್ಟಕ 2.6**ರಲ್ಲಿ ಸೂಚಿಸಲಾಗಿದೆ.

ಕೋಷ್ಟಕ 2.6: 2024–25ರಲ್ಲಿ ಕ್ರಮಬದ್ಧಗೊಳಿಸಬೇಕಾದ ಹೆಚ್ಚುವರಿ ಖರ್ಚು

(₹ ಕೋಟಿಗಳಲ್ಲಿ)

ಅನುದಾನ ಸಂಖ್ಯೆ	ಅನುದಾನ /ಧನವನಿಯೋಗದ ವಿವರ	ಸಕ್ರಮಗೊಳಿಸಬೇಕಾದ ಅಧಿಕ ವೆಚ್ಚ
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜಸ್ವ – (ಪುರಸೃತ)	104.61
	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಬಂಡವಾಳ – (ಪುರಸೃತ)	61.85
19	ನಗರಾಭಿವೃದ್ಧಿ ಮತ್ತು ವಸತಿ ಬಂಡವಾಳ – (ಪುರಸೃತ)	23.60
24	ಇಂಧನ ರಾಜಸ್ವ – (ಪುರಸೃತ)	4,198.69
ಒಟ್ಟು		**4,388.75**

ಆಕರ: ಧನವಿನಿಯೋಗ ಲೆಕ್ಕಗಳು

ಅನುದಾನದ ಅಡಿಯಲ್ಲಿ ಒಂದು ವರ್ಗದಲ್ಲಿ ಹೆಚ್ಚುವರಿ ಮೊತ್ತವನ್ನು ಕೆಳಗಿನ ಲೆಕ್ಕಶೀರ್ಷಿಕೆಗಳಲ್ಲಿ ಉಂಟಾದ ಹೆಚ್ಚುವರಿ ವೆಚ್ಚಕ್ಕೆ ಕಾರಣವೆಂದು **ಕೋಷ್ಟಕ 2.7**ರಲ್ಲಿ ವಿವರಿಸಲಾಗಿದೆ.

ಕೋಷ್ಟಕ 2.7: 2024–25ರ ಅವಧಿಯಲ್ಲಿ ಹೆಚ್ಚುವರಿ ವೆಚ್ಚದ ವಿವರಗಳು

ಅನುದಾನ ಸಂಖ್ಯೆ	ಅನುದಾನ /ಧನವನಿಯೋಗದ ವಿವರ	ಸಕ್ರಮಗೊಳಿಸಬೇಕಾದ ಅಧಿಕ ವೆಚ್ಚ	ಹೆಚ್ಚುವರಿಗೆ ಕಾರಣ
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜಸ್ವ – (ಪುರಸೃತ)	8,595.06	2235–02–197–1–02–300 ಗೃಹಲಕ್ಷ್ಮಿ
	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಬಂಡವಾಳ – (ಪುರಸೃತ)	65.93	4235–02–102–1–04–386 ಕೇಂದ್ರ ಪ್ರಾಯೋಜಿತ ಯೋಜನೆ–ರಾಜ್ಯದ ಪಾಲು–ಅಂಗನವಾಡಿ ಕಟ್ಟಡಗಳ ಉನ್ನತೀಕರಣ
19	ನಗರಾಭಿವೃದ್ಧಿ ಮತ್ತು ವಸತಿ ಬಂಡವಾಳ – (ಪುರಸೃತ)	190.00	5475–00–115–0–04–032 ಬೆಂಗಳೂರು ಉಪ ನಗರ ರೈಲು ವ್ಯವಸ್ಥೆ
		37.59	6215–01–190–2–86–395 ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ (ಬಿಡಬ್ಲ್ಯೂಎಸ್ಎಸ್ಪಿ) ಹಂತ III (ಕಾವೇರಿ ನೀರು ಸರಬರಾಜು ಯೋಜನೆ–ಹಂತ–5)–ಬಾಹ್ಯ ನೆರವಿನ ಯೋಜನೆ (ಐಡಿಪಿ–266/ಎ/ಬಿ) – ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಾಲಗಳು
24	ಇಂಧನ ರಾಜಸ್ವ – (ಪುರಸೃತ)	4,757.93	2801–80–101–1–04 ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಗೆ ಸಹಾಯಧನ

ಆಕರ: ಧನವಿನಿಯೋಗ ಲೆಕ್ಕಗಳು ಮತ್ತು ಅನುದಾನ ವಹಿ

ಆದಾಗ್ಯೂ, ಮೇಲಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಶೀರ್ಷಿಕೆಗಳ ಅಡಿಯಲ್ಲಿ ಹೆಚ್ಚುವರಿಗೆ ಕಾರಣಗಳನ್ನು ಇಲಾಖೆಗಳು ತಿಳಿಸಿಲ್ಲ.

ಬಿ. ಹಿಂದಿನ ಹಣಕಾಸು ವರ್ಷಗಳ ಹೆಚ್ಚುವರಿ ವೆಚ್ಚದ ಕ್ರಮಬದ್ಧಗೊಳಿಸುವಿಕೆ

ರಾಜ್ಯ ಶಾಸಕಾಂಗದಿಂದ ಸಕ್ರಮಗೊಳಿಸುವಿಕೆಗೆ ಬಾಕಿ ಇರುವ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಹೆಚ್ಚುವರಿ ವಿತರಣೆಗಳನ್ನು **ಕೋಷ್ಟಕ 2.8**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 2.8: ಸಕ್ರಮಗೊಳಿಸುವಿಕೆಯ ಅಗತ್ಯವಿರುವ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಹೆಚ್ಚುವರಿ ವೆಚ್ಚ

(₹ ಕೋಟಿಗಳಲ್ಲಿ)

ವರ್ಷ	ಅನುದಾನ ಸಂಖ್ಯೆ /ಧನವನಿಯೋಗದ ವಿವರ	ಅನುದಾನ /ಧನವನಿಯೋಗದ ವಿವರ	ಧನವಿನಿಯೋಗ ಲೆಕ್ಕಗಳಲ್ಲಿ ತೋರಿಸಿರುವಂತೆ ಸಕ್ರಮಗೊಳಿಸಬೇಕಾದ ಹೆಚ್ಚುವರಿ ಮೊತ್ತ
2020–21	14	ರಾಜಸ್ವ (ರಾಜಸ್ವ – ಪುರಸ್ಕೃತ)	354.59
		ರಾಜಸ್ವ (ಬಂಡವಾಳ – ಪ್ರಭೃತ)	*48.01*
	24	ಇಂಧನ (ರಾಜಸ್ವ – ಪುರಸ್ಕೃತ)	13.30
2022–23	3	ಆರ್ಥಿಕ (ರಾಜಸ್ವ – ಪುರಸ್ಕೃತ)	176.96
	6	ಮೂಲಭೂತ ಸೌಕರ್ಯ ಅಭಿವೃದ್ಧಿ (ಬಂಡವಾಳ – ಪುರಸ್ಕೃತ)	54.40
	7	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಬಂಡವಾಳ – ಪುರಸ್ಕೃತ)	148.59
	10	ಸಮಾಜ ಕಲ್ಯಾಣ (ಬಂಡವಾಳ – ಪುರಸ್ಕೃತ)	207.13
	13	ಆಹಾರ ಮತ್ತು ನಾಗರೀಕ ಸರಬರಾಜು (ರಾಜಸ್ವ – ಪುರಸ್ಕೃತ)	104.28
	14	ಕಂದಾಯ (ರಾಜಸ್ವ – ಪುರಸ್ಕೃತ)	467.12
	20	ಲೋಕೋಪಯೋಗಿ ಕಾಮಗಾರಿಗಳು (ಬಂಡವಾಳ – ಪುರಸ್ಕೃತ)	716.55
	29	*ಋಣ ಮೇಲುಸ್ತುವಾರಿ (ರಾಜಸ್ವ – ಪ್ರಭೃತ)*	*32.80*
2023–24	1	ಕೃಷಿ ಮತ್ತು ತೋಟಗಾರಿಕೆ (ರಾಜಸ್ವ – ಪುರಸ್ಕೃತ)	147.91
	3	ಆರ್ಥಿಕ (ರಾಜಸ್ವ – ಪುರಸ್ಕೃತ)	575.89
	6	ಮೂಲಭೂತ ಸೌಕರ್ಯ ಅಭಿವೃದ್ಧಿ (ರಾಜಸ್ವ – ಪುರಸ್ಕೃತ)	12.73
		ಮೂಲಭೂತ ಸೌಕರ್ಯ ಅಭಿವೃದ್ಧಿ (ಬಂಡವಾಳ – ಪುರಸ್ಕೃತ)	32.59
	18	ವಾಣಿಜ್ಯ ಮತ್ತು ಕೈಗಾರಿಕೆ (ಬಂಡವಾಳ – ಪುರಸ್ಕೃತ)	87.66
	20	ಲೋಕೋಪಯೋಗಿ ಕಾಮಗಾರಿಗಳು (ರಾಜಸ್ವ – ಪುರಸ್ಕೃತ)	128.13
	21	ನೀರಾವರಿ(ಬಂಡವಾಳ – ಪುರಸ್ಕೃತ)	226.52
	24	ಇಂಧನ (ರಾಜಸ್ವ – ಪುರಸ್ಕೃತ)	1,627.93
	29	*ಋಣ ಮೇಲುಸ್ತುವಾರಿ (ಬಂಡವಾಳ – ಪ್ರಭೃತ)*	*12.11*
ಒಟ್ಟು			**5,175.21**

ಆಕರ: ಹಿಂದಿನ ವರ್ಷದ ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗಳು

ರಾಜ್ಯ ಸಂಚಿತ ನಿಧಿಯಿಂದ ಖರ್ಚಿನ ಮೇಲೆ ಶಾಸಕಾಂಗ ಮೇಲ್ವಿಚಾರಣೆಯನ್ನು ಬಲಪಡಿಸಲು, ಈ ಹೆಚ್ಚುವರಿ ವೆಚ್ಚಗಳನ್ನು ಆದಷ್ಟು ಬೇಗ ಸಕ್ರಮಗೊಳಿಸಬೇಕು ಮತ್ತು ಅಂತಹ ಹೆಚ್ಚುವರಿ ಪುನರಾವರ್ತನೆಯನ್ನು ತಡೆಗಟ್ಟಲು ರಾಜ್ಯ ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳಬಹುದು.

2020–21ರಿಂದ 2023–24ರ ವರೆಗಿನ ಹೆಚ್ಚುವರಿ ವೆಚ್ಚವನ್ನು ಇನ್ನೂ ಸಕ್ರಮಗೊಳಿಸಲಾಗಿಲ್ಲ. 2021–22ನೇ ಸಾಲಿಗೆ ಅನುದಾನ/ವಿನಿಯೋಗದ ಅಡಿಯಲ್ಲಿ ಯಾವುದೇ ಹೆಚ್ಚುವರಿ ವೆಚ್ಚ ಇರಲಿಲ್ಲ.

2.5.3. ಅನಗತ್ಯ ಪೂರಕ ಬೇಡಿಕೆಗಳು

ಸಂವಿಧಾನದ 205 ನೇ ವಿಧಿಯು ಮೂಲ ಅವಕಾಶಗಳಿಗಿಂತ ಹೆಚ್ಚಿನ ಅವಶ್ಯಕತೆಗಳನ್ನು ಪೂರೈಸಲು ಪೂರಕ ಅಥವಾ ಹೆಚ್ಚುವರಿ ಅನುದಾನ ಅಥವಾ ವಿನಿಯೋಗದ ಅಗತ್ಯವನ್ನು ಸೂಚಿಸುತ್ತದೆ.

ಆರು ಸಂದರ್ಭಗಳಲ್ಲಿ (**ಅನುಬಂಧ 2.5**) ₹16.50 ಕೋಟಿ (ಪ್ರತಿ ಪ್ರಕರಣದಲ್ಲಿ ₹ ಒಂದು ಕೋಟಿಗಿಂತ ಹೆಚ್ಚು) ಪೂರಕ ಅವಕಾಶಗಳನ್ನು ಮಾಡಲಾಗಿದ್ದರೂ, 2024–25ನೇ ವರ್ಷದಲ್ಲಿನ ವೆಚ್ಚವು ಮೂಲ ಅವಕಾಶಗಳಿಗೆ ತಲುಪಲಿಲ್ಲ ಎಂದು ಗಮನಿಸಲಾಗಿದೆ. ಆದ್ದರಿಂದ, ಪೂರಕ ನಿಬಂಧನೆ ಅನಗತ್ಯವೆಂದು ಸಾಬೀತಾಯಿತು. ಅದೇ ರೀತಿ, 17 ಪ್ರಕರಣಗಳಲ್ಲಿ ₹7,979.13 ಕೋಟಿ (ಪ್ರತಿ ಪ್ರಕರಣದಲ್ಲಿ ₹ ಮೂರು ಕೋಟಿಗಿಂತ ಹೆಚ್ಚು) ಪೂರಕ ಅವಕಾಶಗಳು ಹೆಚ್ಚಾದವು (**ಅನುಬಂಧ 2.6**) ಏಕೆಂದರೆ ಪೂರಕ ಅವಕಾಶಗಳನ್ನು ಭಾಗಶಃ ಬಳಸಲಾಗಿದೆ ಮತ್ತು ₹1,353.31 ಕೋಟಿ ಬಳಕೆಯಾಗದೆ ಉಳಿದಿದೆ.

2.5.3.1 ಅನುದಾನ 10 – ಸಮಾಜ ಕಲ್ಯಾಣ

ಉತ್ತರ ಕನ್ನಡ ಮತ್ತು ಹಾವೇರಿಗೆ ಬ್ಲಾಕ್ ಅನುದಾನಗಳ ಅಡಿಯಲ್ಲಿ ಒದಗಿಸಲಾದ ಎರಡು ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಒಟ್ಟು ₹3.75 ಕೋಟಿ ಪೂರಕ ಅವಕಾಶಗಳು ಅಂದರೆ, 2225–03–196–1–01–416 (₹1.50 ಕೋಟಿ) ಮತ್ತು 2225–03–196–1–01–463 (₹2.25 ಕೋಟಿ) ಅನಗತ್ಯವೆಂದು ಸಾಬೀತಾಯಿತು ಏಕೆಂದರೆ ಈಗಾಗಲೇ ಕ್ರಮವಾಗಿ ₹10.10 ಕೋಟಿ ಮತ್ತು ₹2.06 ಕೋಟಿ ಉಳಿತಾಯವಾಗಿತ್ತು.

ಇದಲ್ಲದೆ, ಐದು ಪ್ರಕರಣಗಳಲ್ಲಿ ₹224.39 ಕೋಟಿಗಳ ಪೂರಕ ನಿಬಂಧನೆಗಳು ಅಧಿಕವಾದವು ಎಂದು ಸಾಬೀತಾಯಿತು ಏಕೆಂದರೆ ಪೂರಕ ಅವಕಾಶಗಳನ್ನು ಭಾಗಶಃ ಬಳಸಲಾಗಿದೆ ಮತ್ತು ₹85.27 ಕೋಟಿ ಬಳಕೆಯಾಗದೆ ಉಳಿದಿದೆ (**ಕೋಷ್ಟಕ 2.9**).

ಕೋಷ್ಟಕ 2.9: 2024–25ರಲ್ಲಿ ಅನುದಾನ 10ರ ಅಡಿಯಲ್ಲಿ ಹೆಚ್ಚುವರಿ ಪೂರಕ ಅವಕಾಶ

(₹ ಕೋಟಿಗಳಲ್ಲಿ)

ಲೆಕ್ಕ ಶೀರ್ಷಿಕೆ	ಮೂಲ ಅವಕಾಶ	ಪೂರಕ ಅವಕಾಶ	ಒಟ್ಟು ಅವಕಾಶ	ವಾಸ್ತವಿಕ ವೆಚ್ಚ	ಒಟ್ಟು ಅವಕಾಶದಿಂದ ಉಳಿತಾಯ
2225–03–001–0–05–103 ಸಾಮಾನ್ಯ ಸಹಾಯಾನುದಾನ	191.00	142.83	333.83	279.74	54.09
2225–02–197–6–04–300 ಜಿಲ್ಲಾ ಪಂಚಾಯತಿಗಳಿಗೆ ಇಡಿಗಂಟು	30.00	23.33	53.33	41.67	11.67
4225–03–277–7–01–132 ಬಂಡವಾಳ ವೆಚ್ಚಗಳು	0.01	13.03	13.04	3.03	10.01
2225–02–197–6–03–300 ಜಿಲ್ಲಾ ಪಂಚಾಯತಿಗಳಿಗೆ ಇಡಿಗಂಟು	120.00	10.00	130.00	125.00	5.00
2225–04–102–0–10–059 ಇತರೆ ವೆಚ್ಚಗಳು	135.00	35.20	170.20	165.70	4.50
ಒಟ್ಟು	**476.01**	**224.39**	**700.40**	**615.13**	**85.27**

ಆಕರ: ಧನವಿನಿಯೋಗ ಲೆಕ್ಕಗಳು ಮತ್ತು ಅನುದಾನ ವಹಿ

2.5.3.2 ಅನುದಾನ 19 – ನಗರಾಭಿವೃದ್ಧಿ

ಅನುದಾನ 19ರ ಅಡಿಯಲ್ಲಿ ಅನಗತ್ಯ ಪೂರಕ ಅವಕಾಶದ ಯಾವುದೇ ನಿದರ್ಶನಗಳಿಲ್ಲ. ಹೆಚ್ಚುವರಿ ಪೂರಕ ಅವಕಾಶಗಳ ವಿವರಗಳನ್ನು ಕೆಳಗಿನ **ಕೋಷ್ಟಕ 2.10**ರಲ್ಲಿ ವಿವರಿಸಲಾಗಿದೆ:

ಕೋಷ್ಟಕ 2.10: 2024–25ರಲ್ಲಿ ಅನುದಾನ 19ರ ಅಡಿಯಲ್ಲಿ ಹೆಚ್ಚುವರಿ ಪೂರಕ ಅವಕಾಶ

(₹ ಕೋಟಿಗಳಲ್ಲಿ)

ಲೆಕ್ಕ ಶೀರ್ಷಿಕೆ	ಮೂಲ ಅವಕಾಶ	ಪೂರಕ ಅವಕಾಶ	ಒಟ್ಟು ಅವಕಾಶ	ವಾಸ್ತವಿಕ ವೆಚ್ಚ	ಒಟ್ಟು ಅವಕಾಶದಿಂದ ಉಳಿತಾಯ
6217–60–190–0–03–394 ಸಾಲಗಳು	675.00	500.00	1,175.00	1,052.50	122.50
4217–60–800–0–11–139 ಪ್ರಧಾನ ಕಾಮಗಾರಿಗಳು	0.00	79.38	79.38	0.00	79.38
4217–60–800–0–06–139 ಪ್ರಧಾನ ಕಾಮಗಾರಿಗಳು	0.00	50.00	50.00	6.57	43.43
4217–60–800–0–15–132	0.00	65.50	65.50	25.23	40.27

ಲೆಕ್ಕ ಶೀರ್ಷಿಕೆ	ಮೂಲ ಅವಕಾಶ	ಪೂರಕ ಅವಕಾಶ	ಒಟ್ಟು ಅವಕಾಶ	ವಾಸ್ತವಿಕ ವೆಚ್ಚ	ಒಟ್ಟು ಅವಕಾಶದಿಂದ ಉಳಿತಾಯ
ಬಂಡವಾಳ ವೆಚ್ಚಗಳು					
3604–00–191–1–51–032 ಬಂಡವಾಳ ಆಸ್ತಿಗಳ ಸೃಷ್ಟಿಗೆ ಅನುದಾನಗಳು	210.00	100.00	310.00	277.32	32.68
4217–60–800–0–07–139 ಪ್ರಧಾನ ಕಾಮಗಾರಿಗಳು	0.00	35.13	35.13	4.38	30.75
2217–80–800–0–39–051 ಸಾಮಾನ್ಯ ವೆಚ್ಚಗಳು	0.00	17.72	17.72	0.50	17.22
4217–60–800–0–12–132 ಬಂಡವಾಳ ವೆಚ್ಚಗಳು	0.00	50.00	50.00	38.00	12.00
2216–80–103–0–22–423 ಗಿರಿಜನ ಉಪಯೋಜನೆ	0.00	20.00	20.00	10.00	10.00
4217–60–800–0–13–132 ಬಂಡವಾಳ ವೆಚ್ಚಗಳು	0.00	33.33	33.33	25.33	8.00
2217–80–800–0–41–051 ಸಾಮಾನ್ಯ ವೆಚ್ಚಗಳು	0.00	9.04	9.04	1.26	7.78
4217–60–050–0–03–145 ಭೂ ಸ್ವಾಧೀನ	0.00	10.00	10.00	4.82	5.18
ಒಟ್ಟು	**885.00**	**970.10**	**1,855.10**	**1,445.91**	**409.19**

ಆಕರ: ಧನವಿನಿಯೋಗ ಲೆಕ್ಕಗಳು ಮತ್ತು ಅನುದಾನ ವಹಿ

2.5.4 ನಿಧಿಯ ವಿವೇಚನಾರಹಿತ ಪುನರ್ವಿನಿಯೋಗ

ಪುನರ್ವಿನಿಯೋಗ ಎಂದರೆ ಹೆಚ್ಚುವರಿ ಹಣದ ಅಗತ್ಯವಿರುವಲ್ಲಿ ಒಂದು ಘಟಕದ ಹಂಚಿಕೆಯಿಂದ ಮತ್ತೊಂದು ಘಟಕಕ್ಕೆ ಅನುದಾನದೊಳಗಿನ ಹಣವನ್ನು ವರ್ಗಾಯಿಸುವುದು. 2024–25ರಲ್ಲಿ, ₹33,106.23 ಕೋಟಿ ಮೊತ್ತದ 28 ಅನುದಾನಗಳ ಅಡಿಯಲ್ಲಿ ಪುನರ್ವಿನಿಯೋಗ ಆದೇಶಗಳನ್ನು ನೀಡಲಾಯಿತು. ಎಲ್ಲಾ ಪುನರ್ವಿನಿಯೋಗ ಆದೇಶಗಳನ್ನು ಮಾರ್ಚ್ 31, 2025 ರಂದು ನೀಡಲಾಯಿತು.

ಇದಲ್ಲದೆ, ಎರಡು ಅನುದಾನಗಳಲ್ಲಿ (**ಅನುಬಂಧ 2.7, ಆರು ಪ್ರಕರಣಗಳಲ್ಲಿ**), ವಿವಿಧ ಇಲಾಖೆಗಳಿಂದ ಜಾರಿಗೆ ತರಲಾದ ಪುನರ್ವಿನಿಯೋಗ ಆದೇಶಗಳ ಮೂಲಕ ₹ ಮೂರು ಕೋಟಿಗಿಂತ ಹೆಚ್ಚಿನ ಅವಕಾಶವನ್ನು ಕಡಿತಗೊಳಿಸಿದ್ದುದು ನ್ಯಾಯಸಮ್ಮತವಲ್ಲ ಎಂದು ಸಾಬೀತಾಯಿತು ಏಕೆಂದರೆ ಈ ಪ್ರಕರಣಗಳ ಅಡಿಯಲ್ಲಿ ಹೆಚ್ಚುವರಿ ವೆಚ್ಚವಾಗಿತ್ತು. 11 ಅನುದಾನಗಳಲ್ಲಿ, (**ಅನುಬಂಧ 2.7, 21 ಪ್ರಕರಣಗಳಲ್ಲಿ**) ಅವಕಾಶಗಳ ವರ್ಧನೆಯೂ (₹10 ಕೋಟಿ ಮೀರಿದೆ) ಸಹ ಅನಗತ್ಯವೆಂದು ಸಾಬೀತಾಯಿತು ಏಕೆಂದರೆ ವೆಚ್ಚವು ಮೂಲ/ಪೂರಕ ಆಯವ್ಯಯ ಅವಕಾಶ ಮಟ್ಟಕ್ಕೆ ಸಮನಾಗಿತ್ತು ಅಥವಾ ತಲುಪಲಿಲ್ಲ.

2.5.4.1 ಆಯ್ದ ಅನುದಾನಗಳ ವಿಶ್ಲೇಷಣೆ

ಅನುಬಂಧ 2.7ರಲ್ಲಿ ಅನುಚಿತ ಮತ್ತು ಪುನರ್ವಿನಿಯೋಗ ಹೆಚ್ಚಳದ ವಿವರವಾದ ವಿಶ್ಲೇಷಣೆಯನ್ನು ನೀಡಲಾಗಿದೆ, ಅಲ್ಲಿ ಅನುದಾನ 10 – ಸಮಾಜ ಕಲ್ಯಾಣ ಬೇಡಿಕೆಯ ಅಡಿಯಲ್ಲಿ ಎರಡೂ ಪ್ರಕಾರಗಳು ಸಂಭವಿಸಿಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ ಅನುದಾನ 19 – ನಗರಾಭಿವೃದ್ಧಿಯಲ್ಲಿ, ಲೆಕ್ಕ ಶೀರ್ಷಿಕೆ 2216–80–103–0–22–422 ಅಡಿಯಲ್ಲಿ ₹90.00 ಕೋಟಿಗಳ ಅವಕಾಶದ ಹೆಚ್ಚಳದ ಒಂದು ಪ್ರಕರಣವಿದೆ. ಇದು ₹80.00 ಕೋಟಿ ಉಳಿತಾಯಕ್ಕೆ ಕಾರಣವಾಗಿದೆ.

2.5.5 ವೆಚ್ಚ ಮಾಡದ ಅವಕಾಶ ಮತ್ತು ಅಧ್ಯರ್ಪಣೆಗಳು

ಆಯವ್ಯಯ ಪ್ರಸ್ತಾವನೆಗಳು ಎಲ್ಲಾ ನಿರೀಕ್ಷಿತ ವೆಚ್ಚಗಳನ್ನು ಸೂಕ್ತ ಖರ್ಚು ಮಟ್ಟಗಳಿಗೆ ಅತ್ಯುತ್ತಮವಾಗಿಸಲು ಶ್ರಮಿಸಬೇಕು, ಇದರಿಂದಾಗಿ ಖರ್ಚಿನ ಗುಣಮಟ್ಟವನ್ನು ಸಮತೋಲನಗೊಳಿಸಬಹುದು ಮತ್ತು ಆಯವ್ಯಯ ನಿಧಿಗಳ ಕಡಿಮೆ ಬಳಕೆಯನ್ನು ಕಡಿಮೆ ಮಾಡಬಹುದು. ವೆಚ್ಚ ಘಟಕಗಳಿಂದ ಸಕಾಲಿಕ ಅಧ್ಯರ್ಪಣೆಗಳು ಅನುಮೋದಿತ ಆಯವ್ಯಯದ ಒಳಗೆ ಅತ್ಯುತ್ತಮ ಮರುಹಂಚಿಕೆಗೆ ಪ್ರಮುಖ ಕಾರ್ಯವಿಧಾನವಾಗಿದೆ.

ಅನುದಾನಗಳು ಮತ್ತು ವಿನಿಯೋಗಗಳ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ತೋರಿಸಿದೆ.

- 2024–25ನೇ ವರ್ಷದಲ್ಲಿ 13 ಪ್ರಕರಣಗಳಲ್ಲಿ (11 ಅನುದಾನಗಳ ಅಡಿಯಲ್ಲಿ), ಉಳಿತಾಯ (ಅಧ್ಯರ್ಪಣೆಗಳನ್ನು ಹೊರತುಪಡಿಸಿ) ಪ್ರತಿ ಪ್ರಕರಣದಲ್ಲಿ ₹100 ಕೋಟಿ ಮೀರಿದೆ (**ಅನುಬಂಧ 2.8**).
- ಒಂದು ಅನುದಾನದಲ್ಲಿ **ಕೋಷ್ಟಕ 2.11**ರಲ್ಲಿ ನೀಡಲಾದ ಒಟ್ಟು ಅನುದಾನಕ್ಕೆ ಹೋಲಿಸಿದರೆ ₹1.02 ಕೋಟಿಯಷ್ಟು ವೆಚ್ಚವನ್ನು 2024–25ನೇ ವರ್ಷದಲ್ಲಿ ಮಾಡಲಾಗಿಲ್ಲ.

ಕೋಷ್ಟಕ 2.11: 2024–25ನೇ ಹಣಕಾಸು ವರ್ಷದಲ್ಲಿ ಬಳಕೆಯಾಗದೆ ಉಳಿದಿರುವ ಸಂಪೂರ್ಣ ಅನುದಾನ

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಅನುದಾನ ಸಂಖ್ಯೆ/ ವಿವರಣೆ	ಮೊತ್ತ
1	3 – ಆರ್ಥಿಕ (*ರಾಜಸ್ವ – ಪುರಸ್ಕೃತ*)	*1.02*
ಒಟ್ಟು		***1.02***

ಆಕರ: ಧನವಿನಿಯೋಗ ಲೆಕ್ಕಗಳು

- 2022–23 ರಿಂದ 2024–25ರ ಅವಧಿಯಲ್ಲಿ ಎಂಟು ಅನುದಾನಗಳ ಅಡಿಯಲ್ಲಿ 10 ಪ್ರಕರಣಗಳಲ್ಲಿ, ಪ್ರತಿ ಪ್ರಕರಣದಲ್ಲಿ ₹ ಒಂದು ಕೋಟಿಗಿಂತ ಹೆಚ್ಚಿನ ನಿರಂತರ ಉಳಿತಾಯ ಕಂಡುಬಂದಿದೆ (**ಅನುಬಂಧ 2.9**).

ಆಯ್ದ ಅನುದಾನಗಳ ವಿಶ್ಲೇಷಣೆ

ಅನುದಾನ 19ರಲ್ಲಿ, **ಕೋಷ್ಟಕ 2.12**ರಲ್ಲಿ ವಿವರಿಸಿದಂತೆ ನಿರಂತರ ಉಳಿತಾಯದ ಎರಡು ಪ್ರಕರಣಗಳಿವೆ.

ಕೋಷ್ಟಕ 2.12: ಅನುದಾನ 19 ನಗರಾಭಿವೃದ್ಧಿ ಯ ಅಡಿಯಲ್ಲಿ ನಿರಂತರ ಉಳಿತಾಯ

(₹ ಕೋಟಿಗಳಲ್ಲಿ)

ಲೆಕ್ಕ ಶೀರ್ಷಿಕೆ	2022–23			2023–24			2024–25		
	ಅವಕಾಶ	ವೆಚ್ಚ	ಉಳಿತಾಯ	ಅವಕಾಶ	ವೆಚ್ಚ	ಉಳಿತಾಯ	ಅವಕಾಶ	ವೆಚ್ಚ	ಉಳಿತಾಯ
2217–05–191–1	1,536.13	798.50	737.63	1,191.09	730.49	460.60	280.18	188.90	91.28
2217–80–797–04	70.00	0.01	69.99	21.52	18.72	2.80	26.51	20.69	5.82

ಆಕರ: ಮಹಾಲೇಖಾಪಾಲರ ಕಛೇರಿ (ಲೆ ಮತ್ತು ಹ) ರಿಂದ ಒದಗಿಸಲಾದ ಮಾಹಿತಿ

2024–25ನೇ ಸಾಲಿನಲ್ಲಿ ಒಟ್ಟು ಉಳಿತಾಯದೊಂದಿಗೆ ಬಳಕೆಯ ಶೇಕಡಾವಾರು ಆಧಾರದ ಮೇಲೆ ವರ್ಗೀಕರಿಸಲಾದ ಅನುದಾನಗಳ ವಿವರಗಳನ್ನು **ಅನುಬಂಧ 2.10** ಮತ್ತು **ನಕ್ಷೆ 2.4**ರಲ್ಲಿ ತೋರಿಸಲಾಗಿದೆ.

ನಕ್ಷೆ 2.4: ಒಟ್ಟು ಉಳಿತಾಯದೊಂದಿಗೆ ಉಳಿತಾಯದ ಶೇಕಡಾವಾರು ಆಧಾರದ ಮೇಲೆ ಗುಂಪು ಮಾಡಲಾದ ಅನುದಾನಗಳು/ವಿನಿಯೋಗಗಳ ಸಂಖ್ಯೆಯ ವಿತರಣೆ



ಆಕರ: ಧನವಿನಿಯೋಗ ಲೆಕ್ಕಗಳು

ಒಟ್ಟು 28 ಅನುದಾನಗಳಲ್ಲಿ, ಎರಡು ಅನುದಾನಗಳು (ಅನುದಾನ 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಅನುದಾನ 24 – ಇಂಧನ) ಹೆಚ್ಚುವರಿಯಾಗಿವೆ.

ಮೇಲಿನ **ನಕ್ಷೆ 2.4** ರಿಂದ, 28 ಅನುದಾನಗಳು/ವಿನಿಯೋಗಗಳಲ್ಲಿ 26 ಅನುದಾನಗಳು, ಅದರ ಹಂಚಿಕೆಯ ಶೇಕಡಾ 70 ಕ್ಕಿಂತ ಹೆಚ್ಚು ಬಳಸಿಕೊಂಡಿರುವುದನ್ನು ನಾವು ಗಮನಿಸಿದ್ದೇವೆ. ಈ 26 ಅನುದಾನಗಳಲ್ಲಿನ ಉಳಿತಾಯ ₹26,840.67 ಕೋಟಿ. ಈ 26 ಅನುದಾನಗಳಲ್ಲಿ 17 ಅನುದಾನಗಳು ಅದರ ಹಂಚಿಕೆಯ ಶೇಕಡಾ 90ಕ್ಕಿಂತ ಹೆಚ್ಚು ಬಳಸಿಕೊಂಡಿವೆ. 2024–25ರ ಅವಧಿಯಲ್ಲಿ, ಒಟ್ಟಾರೆ ₹26,904.16 ಕೋಟಿ ಉಳಿತಾಯವಾಗಿದ್ದು, ಇದನ್ನು ₹4,428.65 ಕೋಟಿಹೆಚ್ಚುವರಿಯಿಂದ ಸರಿದೂಗಿಸಲಾಗಿದೆ. ಉಳಿತಾಯವನ್ನು ಉಳಿಸಿಕೊಳ್ಳುವ ಮೂಲಕ ಯಾವುದೇ ಉದ್ದೇಶವನ್ನು ಪೂರೈಸಲಾಗುವುದಿಲ್ಲ, ಅದನ್ನು ಸಮಯಕ್ಕೆ ಸರಿಯಾಗಿ ಅಧ್ಯರ್ಪಿಸಬೇಕಾಗಿದೆ. 2024–25ರಲ್ಲಿ ಅಧ್ಯರ್ಪಣೆಗಳ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸುತ್ತದೆ:

1. ಇಪತ್ತೊಂದು ಅನುದಾನಗಳ ಅಡಿಯಲ್ಲಿ ₹10,546.42 ಕೋಟಿ ಮೊತ್ತದ ಉಳಿತಾಯವನ್ನು (**ಅನುಬಂಧ 2.11**) ಅಧ್ಯರ್ಪಿಸಲಿಲ್ಲ ಎಂದು ಗಮನಿಸಲಾಗಿದೆ.
2. ಮಾರ್ಚ್ 2025ರ ಕೊನೆಯ ದಿನದಂದು ಅಧ್ಯರ್ಪಿಸಲಾದ ಉಳಿತಾಯದ (ಪ್ರತಿ ಪ್ರಕರಣದಲ್ಲಿ ₹10 ಕೋಟಿಗಿಂತ ಹೆಚ್ಚಿನ) ವಿವರಗಳನ್ನು **ಅನುಬಂಧ 2.12**ರಲ್ಲಿ ನೀಡಲಾಗಿದೆ.

ನಕ್ಷೆ 2.5: 2024–25ರ ವರ್ಷಕ್ಕೆ ಉಳಿತಾಯ ಮತ್ತು ಅಧ್ಯರ್ಪಣೆಗಳು

(₹ ಕೋಟಿಗಳಲ್ಲಿ)



ಆಕರ: ಧನವಿನಿಯೋಗ ಲೆಕ್ಕಗಳು

ನಕ್ಷೆ 2.5ರ ವಿಶ್ಲೇಷಣೆಯು ಉಳಿತಾಯದ ಶೇಕಡಾ 73.22 ರಷ್ಟು ಮಾತ್ರ ಅಧ್ಯರ್ಪಿಸುವುದನ್ನು ಬಹಿರಂಗಪಡಿಸಿದೆ. ಅಧ್ಯರ್ಪಿತ ಮೊತ್ತವಾದ ₹16,547 ಕೋಟಿಯಲ್ಲಿ ₹10,448 ಕೋಟಿ (ಶೇಕಡಾ 63.14) ಮಾರ್ಚ್ 31, 2025ರಂದು ಅಧ್ಯರ್ಪಿತವಾಗಿದೆ.

ಆಯ್ದ ಅನುದಾನಗಳ ವಿಶ್ಲೇಷಣೆ

ಅನುದಾನ 19 – ನಗರಾಭಿವೃದ್ಧಿ ಅಡಿಯಲ್ಲಿ, ಮಾರ್ಚ್ 31, 2025 ರಂದು ಸಂಪೂರ್ಣ ಉಳಿತಾಯವನ್ನು ಅಧ್ಯರ್ಪಿಸಿದ ನಾಲ್ಕು ಪ್ರಕರಣಗಳಿವೆ.

ಕೋಷ್ಟಕ 2.13: ಅನುದಾನ 19 – ನಗರಾಭಿವೃದ್ಧಿ ಅಡಿಯಲ್ಲಿ ಸಂಪೂರ್ಣ ಉಳಿತಾಯವನ್ನು ಅಧ್ಯರ್ಪಿಸಲಾಗಿದೆ

(₹ ಕೋಟಿಗಳಲ್ಲಿ)

ಲೆಕ್ಕ ಶೀರ್ಷಿಕೆ	ಸಂಪೂರ್ಣ ಉಳಿತಾಯವನ್ನು ಅಧ್ಯರ್ಪಿಸಲಾಗಿದೆ
2210–06–800–0–17–059	81.31
3604–00–191–9–14–103	15.70
3604–00–191–9–17–103	13.21
3604–00–191–9–23–103	30.55
ಒಟ್ಟು	**140.77**

ಆಕರ: ಧನವಿನಿಯೋಗ ಲೆಕ್ಕಗಳು

2.5.6 ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚದ ನಡುವಿನ ತಪ್ಪು ವರ್ಗೀಕರಣ

1990ರ ಸರ್ಕಾರಿ ಲೆಕ್ಕಪತ್ರ ನಿಯಮಗಳ ನಿಯಮ 30ರ ಅನ್ವಯ, ಉಪಯುಕ್ತ, ಮೌಲ್ಯವುಳ್ಳ ಮತ್ತು ಶಾಶ್ವತ ಸ್ವತ್ತುಗಳ ಸೃಷ್ಟಿಗೆ ಕಾರಣವಾಗುವ ವೆಚ್ಚವನ್ನು ಮಾತ್ರ ಬಂಡವಾಳ ವೆಚ್ಚವೆಂದು ವರ್ಗೀಕರಿಸಬೇಕು.

2024–25ರ ಹಣಕಾಸು ವರ್ಷದಲ್ಲಿ, ರಾಜ್ಯ ಸರ್ಕಾರವು ₹60,601.15 ಕೋಟಿಗಳಷ್ಟು ಬಂಡವಾಳ ವೆಚ್ಚವನ್ನು ಭರಿಸಿತ್ತು. ಈ ಮೊತ್ತಕ್ಕೆ ಸಂಬಂಧಿಸಿದ ಮಂಜೂರಾತಿ ಆದೇಶಗಳು ಮತ್ತು ವೆಚ್ಚ ವೋಚರ್‌ಗಳನ್ನು ಲೆಕ್ಕಪರಿಶೋಧನೆ ಪರಿಶೀಲಿಸಿತು ಮತ್ತು ಈ ಮೊತ್ತದಲ್ಲಿ ₹1,782.75 ಕೋಟಿ (**ಅನುಬಂಧ 2.13**) ರಾಜಸ್ವ ಸ್ವರೂಪದ ವೆಚ್ಚವನ್ನು ಬಂಡವಾಳ ವೆಚ್ಚದ ಅಡಿಯಲ್ಲಿ ವರ್ಗೀಕರಿಸಲಾಗಿದೆ ಎಂದು ಗಮನಿಸಲಾಯಿತು, ಇದು ಮುಖ್ಯವಾಗಿ ನಿರ್ವಹಣೆ, ದುರಸ್ತಿ ಮತ್ತು ನವೀಕರಣ ಇತ್ಯಾದಿಗಳಿಗೆ ಸಂಬಂಧಿಸಿದೆ. ಸರ್ಕಾರಿ ಲೆಕ್ಕಪತ್ರ ನಿಯಮಗಳು (ಜಿಎಅರ್) 1990ರ ನಿಯಮ 31 (2) (ಬಿ) ಅನ್ವಯ, ಅಂತಹ ವೆಚ್ಚಗಳಿಗೆ ಸಂಬಂಧಿಸಿದ ಎಲ್ಲಾ ಶುಲ್ಕಗಳನ್ನು ರಾಜಸ್ವ ಲೆಕ್ಕಗಳೆಂದು ಪರಿಗಣಿಸಬೇಕು. 1990ರ ಜಿಎಅರ್ ನಿಯಮ 30(1) ರ ಕೆಳಗಿನ ಟಿಪ್ಪಣಿಗೆ ಅನುಗುಣವಾಗಿ, ಈ ಮೊತ್ತವನ್ನು ಬಂಡವಾಳ ವೆಚ್ಚದ ಬದಲಿಗೆ ರಾಜಸ್ವ ವೆಚ್ಚ ಎಂದು ವರ್ಗೀಕರಿಸಬೇಕು.

ಅದೇ ರೀತಿ, ₹72.46 ಕೋಟಿ ಮೊತ್ತದ ಬಂಡವಾಳ ವೆಚ್ಚವನ್ನು ಅಂದರೆ ಪೀಠೋಪಕರಣಗಳು ಮತ್ತು ಜೋಡಣೆಗಳ ಖರೀದಿ, ಕಂಪ್ಯೂಟರ್‌ಗಳ ಖರೀದಿ ಇತ್ಯಾದಿಗಳನ್ನು ರಾಜಸ್ವ ವೆಚ್ಚ ಎಂದು ವರ್ಗೀಕರಿಸಲಾಗಿದೆ.

ಐಜಿಎಎಸ್–2ರ ಅನ್ವಯ, ಅನುದಾನ ನೀಡುವ ಸಂಸ್ಥೆಯು ಅನುದಾನ ಪಡೆಯುವವರಿಗೆ ವಿತರಿಸುವ ಅನುದಾನವನ್ನು ಹಣವನ್ನು ಯಾವ ಉದ್ದೇಶಕ್ಕಾಗಿ ವಿತರಿಸಲಾಗಿದೆ ಎಂಬುದನ್ನು ಲೆಕ್ಕಿಸದೆ. ಅನುದಾನ ನೀಡುವವರ ಹಣಕಾಸು ಹೇಳಿಕೆಯಲ್ಲಿ ರಾಜಸ್ವ ವೆಚ್ಚ ಎಂದು ವರ್ಗೀಕರಿಸಲಾಗುತ್ತದೆ, ಆದಾಗ್ಯೂ, 2024–25ರ ಅವಧಿಯಲ್ಲಿ, ಸಹಾಯಾನುದಾನ ಸ್ವರೂಪದಲ್ಲಿದ್ದ ₹238.12 ಕೋಟಿಗಳನ್ನು ಬಂಡವಾಳ ವೆಚ್ಚವೆಂದು ಪರಿಗಣಿಸಲಾಗಿದೆ ಎಂದು ಗಮನಿಸಲಾಯಿತು. ಇದು ಐಜಿಎಎಸ –2ಕ್ಕೆ ವಿರುದ್ಧವಾಗಿತ್ತು.

ಕೋಷ್ಟಕ 2.14: ಐಜಿಎಎಸ –2 ಅನ್ವಯ ತಪ್ಪು ವರ್ಗೀಕರಣ

(₹ ಕೋಟಿಗಳಲ್ಲಿ)

ಅನುದಾನ ಸಂಖ್ಯೆ	ಲೆಕ್ಕಶೀರ್ಷಿಕೆ	ಸಂಸ್ಥೆಯ ಹೆಸರು	ವೆಚ್ಚ
1	4401–00–800–1–02–436	ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯ – ಆರ್ ಐ ಡಿ ಎಪ್	15.55
	4401–00–800–1–03–436	ರಾಯಚೂರು ಕೃಷಿ ವಿಶ್ವವಿದ್ಯಾಲಯ – ಆರ್ ಐ ಡಿ ಎಪ್	10.00
	4401–00–800–1–05–436	ಬೆಂಗಳೂರು ಕೃಷಿ ವಿಶ್ವವಿದ್ಯಾಲಯ– ಆರ್ ಐ ಡಿ ಎಪ್	13.22
	4401–00–800–1–06–436	ಧಾರವಾಡ ಕೃಷಿ ವಿಶ್ವವಿದ್ಯಾಲಯ – ಆರ್ ಐ ಡಿ ಎಪ್	5.35
7	4515–00–101–0–01–132	ಕರ್ನಾಟಕ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ	1.00
12	5452–01–101–0–08–103	ಶ್ರೀ ರೇಣುಕಾ ಯೆಲ್ಲಮ್ಮ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ	0.50
21	4705–00–800–0–01–132	ಕಾಡಾ	70.00
22	4210–03–105–1–11–386	ಜಯದೇವ ಹೃದಯವಿಜ್ಞಾನ ಸಂಸ್ಥೆ	50.00
26	4515–00–103–0–02	ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿ	39.50
	4515–00–103–0–03	ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ	33.00
ಒಟ್ಟು			**238.12**

ಆಕರ: ಧನವಿನಿಯೋಗ ಲೆಕ್ಕಗಳು

ಹೀಗಾಗಿ, ₹2,020.87 ಕೋಟಿಗಳ ತಪ್ಪು ವರ್ಗೀಕರಣ ಕಂಡುಬಂದಿದ್ದು, ಇದು ಆ ಮಟ್ಟಿಗೆ ರಾಜಸ್ವ ವೆಚ್ಚವನ್ನು ಕಡಿಮೆ ಹೇಳುವಲ್ಲಿ ಪರಿಣಮಿಸಿತು. 2024–25ನೇ ಹಣಕಾಸು ವರ್ಷದಲ್ಲಿ ಲೆಕ್ಕಪರಿಶೋಧನೆಯ ನಂತರ ಬಂಡವಾಳ ವೆಚ್ಚವು ₹58,580.28 ಕೋಟಿಗಳಷ್ಟಿತ್ತು.

ರಾಜ್ಯ ಸರ್ಕಾರವು (ಜನವರಿ 2026) ಉತ್ತರಿಸುತ್ತಾ, ಆಯವ್ಯಯ ಸುತ್ತೋಲೆಯಲ್ಲಿನ ಸೂಚನೆಗಳನ್ನು ಪಾಲಿಸಲು ಸಂಬಂಧಪಟ್ಟ ಇಲಾಖೆಗೆ ಸೂಚಿಸಲಾಗುವುದು ಮತ್ತು ಖಜಾನೆ ಆಯುಕ್ತರು ತಮ್ಮ ಎಲ್ಲಾ ಖಜಾನೆ ಅಧಿಕಾರಿಗಳಿಗೆ ಬಂಡವಾಳದ ಅಡಿಯಲ್ಲಿ ರಾಜಸ್ವ ವೆಚ್ಚವನ್ನು ಮತ್ತು ರಾಜಸ್ವದ ಅಡಿಯಲ್ಲಿ ಬಂಡವಾಳ ವೆಚ್ಚವನ್ನು ಅಂಗೀಕರಸದಂತೆ ನಿರ್ದೇಶಿಸಲು ಕೋರಲಾಗುವುದು.

2.5.7 ಆಯವ್ಯಯದನಲ್ಲಿನ ಪ್ರಮುಖ ಕಾರ್ಯನೀತಿ ಘೋಷಣೆಗಳು ಮತ್ತು ಅವುಗಳ ಅನುಷ್ಠಾನ

2024–25ರ ಆಯವ್ಯಯದಲ್ಲಿ ಸರ್ಕಾರವು ಕೈಗೊಂಡ ಹಲವಾರು ನೀತಿ ಉಪಕ್ರಮಗಳು ವಿವಿಧ ಕಾರಣಗಳಿಂದಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಕಾರ್ಯಗತಗೊಂಡಿಲ್ಲ, ಅಂದರೆ, ಯೋಜನೆಯ ಮಾರ್ಗಸೂಚಿಗಳು/ವಿಧಾನಗಳನ್ನು ಅನುಮೋದಿಸದಿರುವುದು, ಆಡಳಿತಾತ್ಮಕ ಅನುಮೋದನೆಯ ಕೊರತೆಯಿಂದಾಗಿ ಕೆಲಸಗಳನ್ನು ಪ್ರಾರಂಭಿಸದಿರುವುದು, ಆಯವ್ಯಯ ಬಿಡುಗಡೆ ಮಾಡದಿರುವುದು ಇತ್ಯಾದಿ. ತೆಗೆದುಕೊಂಡ ಕ್ರಮ ವರದಿಯೂ 2025–26ರ ಆಯವ್ಯಯ ದಾಖಲೆಗಳೊಂದಿಗೆ ಹೊರತರಲಾಗಿದೆ.

ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರವು ತೆಗೆದುಕೊಂಡ ಕ್ರಮಗಳ ಕುರಿತು ಆಡಿಟ್ ಅಧ್ಯಯನವನ್ನು ಕೈಗೊಂಡಿತು. ಒಟ್ಟಾರೆಯಾಗಿ, ರಾಜ್ಯ ಸರ್ಕಾರವು ಐದು ಇಲಾಖೆಗಳಲ್ಲಿ 46 ಹೊಸ ಕಾರ್ಯನೀತಿಗಳನ್ನು ಪ್ರಾರಂಭಿಸಿದೆ. ಪ್ರಮುಖ ಕಾರ್ಯನೀತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರಾರಂಭಿಸಿದ ಕ್ರಮವನ್ನು **ಅನುಬಂಧ 2.14**ರಲ್ಲಿ ಸಂಕ್ಷೇಪಿಸಲಾಗಿದೆ.

46 ಉಪಕ್ರಮಗಳಲ್ಲಿ, 33ಕ್ಕೆ ಸಂಬಂಧಿಸಿದಂತೆ ಕ್ರಮವನ್ನು ಪ್ರಾರಂಭಿಸಲಾಗಿದೆ. 13 ಉಪಕ್ರಮಗಳ ವಿವರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಇನ್ನೂ ಸ್ವೀಕರಿಸಲಾಗಿಲ್ಲ.

2.5.8 ತ್ರೈಮಾಸಿಕ ವೆಚ್ಚ ಮಿತಿಯನ್ನು ಪಾಲಿಸದಿರುವುದು

ಸಾಮಾನ್ಯ ಹಣಕಾಸು ನಿಯಮಗಳ ನಿಯಮ 62(3)ರ ಪ್ರಕಾರ, ವಿಶೇಷವಾಗಿ ಹಣಕಾಸು ವರ್ಷದ ಕೊನೆಯ ತಿಂಗಳುಗಳಲ್ಲಿ ಖರ್ಚಿನ ಆತುರವನ್ನು ಹಣಕಾಸಿನ ಔಚಿತ್ಯದ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅದನ್ನು ತಪ್ಪಿಸಬೇಕು.

ಕೋಷ್ಟಕ 2.15: 2024–25ನೇ ಹಣಕಾಸು ವರ್ಷದಲ್ಲಿ ಖರ್ಚಿನ ವಿಪರೀತ

	ಮೊತ್ತ (₹ ಕೋಟಿಗಳಲ್ಲಿ)	ವರ್ಷದಲ್ಲಿನ ಒಟ್ಟು ವೆಚ್ಚದ ಶೇಕಡಾವಾರು
ವರ್ಷದ ಕೊನೆಯ ತ್ರೈಮಾಸಿಕ (ಜನವರಿ – ಮಾರ್ಚ್ –2025)	1,37,254.43	35.64
ವರ್ಷದ ಕೊನೆಯ ತಿಂಗಳು (ಮಾರ್ಚ್ –2025)	72,958.85	18.94
ವರ್ಷದ ಕೊನೆಯ ದಿನ (31 ಮಾರ್ಚ್ 2025)	10,093.17	2.62

ಆಕರ: ಮಹಾಲೇಖಾಪಾಲರ ಕಛೇರಿ (ಲೆ ಮತ್ತು ಹ) ರಿಂದ ಒದಗಿಸಲಾದ ಮಾಹಿತಿ

2024–25ರ ಹಣಕಾಸು ವರ್ಷದಲ್ಲಿ ಒಟ್ಟು ಮಾಸಿಕ ಸ್ವೀಕೃತಿಗಳು (ರಾಜಸ್ವ ಸ್ವೀಕೃತಿಗಳು, ಬಂಡವಾಳ ಸ್ವೀಕೃತಿಗಳು ಮತ್ತು ನಗದು ಬಾಕಿ) ಮತ್ತು ವೆಚ್ಚದ ಪ್ರವೃತ್ತಿಯನ್ನು **ನಕ್ಷೆ 2.6** ಮತ್ತು **ನಕ್ಷೆ 2.7**ರಲ್ಲಿ ತೋರಿಸಲಾಗಿದೆ.

ನಕ್ಷೆ 2.6: ಸ್ವೀಕೃತಿಗಳ ಪ್ರವೃತ್ತಿ ವಿಶ್ಲೇಷಣೆ (ತಿಂಗಳವಾರು)

(₹ ಕೋಟಿಗಳಲ್ಲಿ)



ಆಕರ: ಮಹಾಲೇಖಾಪಾಲರ ಕಛೇರಿ (ಲೆ ಮತ್ತು ಹ) ರಿಂದ ಒದಗಿಸಲಾದ ಮಾಹಿತಿ

ನಕ್ಷೆ 2.7: ವೆಚ್ಚದ ಪ್ರವೃತ್ತಿ ವಿಶ್ಲೇಷಣೆ (ತಿಂಗಳವಾರು)

(₹ ಕೋಟಿಗಳಲ್ಲಿ)



ಆಕರ: ಮಹಾಲೇಖಾಪಾಲರ ಕಛೇರಿ (ಲೆ ಮತ್ತು ಹ) ರಿಂದ ಒದಗಿಸಲಾದ ಮಾಹಿತಿ

ನಕ್ಷೆಯಲ್ಲಿ ಚಿತ್ರಿಸಲಾದ ಮಾಸಿಕ ವೆಚ್ಚದ ಪ್ರವೃತ್ತಿಯು ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ, ವಿಶೇಷವಾಗಿ ಮಾರ್ಚ್‌ನಲ್ಲಿ ಸ್ಪಷ್ಟವಾದ ಓರೆತನವನ್ನು ಸೂಚಿಸುತ್ತದೆ.

2.5.8.1 ಆಯ್ದ ಅನುದಾನ–ವಾರು ವೆಚ್ಚ ವಿಶ್ಲೇಷಣೆ

ಎ. ಅನುದಾನ ಸಂಖ್ಯೆ.10 – ಸಮಾಜ ಕಲ್ಯಾಣ

ಹಣಕಾಸು ಇಲಾಖೆಯು ನಿಧಿಗಳ ಬಿಡುಗಡೆ, ಸೆಳೆಯುವಿಕೆ ಮತ್ತು ನಿಧಿಗಳ ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದಂತೆ ಹೊರಡಿಸಿದ ಸೂಚನೆಯ ಕಂಡಿಕೆ 6ರ ಅನ್ವಯ (9 ಸೆಪ್ಟೆಂಬರ್ 2004), ಆಡಳಿತ

ಇಲಾಖೆಗಳು ಮತ್ತು ಇಲಾಖೆಗಳ ಮುಖ್ಯಸ್ಥರು ಹಣಕಾಸು ವರ್ಷದ ವೆಚ್ಚವನ್ನು ಸರಿಯಾದ ಶ್ರದ್ಧೆಯಿಂದ ಮತ್ತು ಲಭ್ಯವಿರುವ ಅನುದಾನಗಳೊಳಗೆ ಯೋಜಿಸಬೇಕಾಗಿತ್ತು. ಮಾರ್ಚ್ ತಿಂಗಳಲ್ಲಿ ಬಿಲ್‌ಗಳು ಮತ್ತು ವೆಚ್ಚಗಳ ಆತುರವನ್ನು ತಪ್ಪಿಸಬೇಕಾಗಿತ್ತು. ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಆಗಬಹುದಾದ ವೆಚ್ಚಗಳಿಗೆ ಅಗತ್ಯ ಮಟ್ಟದಲ್ಲಿ ಅವಶ್ಯಕ ಅನುಮೋದನೆಗಳನ್ನು ಪಡೆದ ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿ ನೀಡಬೇಕಾಗಿತ್ತು.

ದಾಖಲೆಗಳನ್ನು ಪರಿಶೀಲಿಸಿದಾಗ, **ಅನುಬಂಧ 2.15**ರಲ್ಲಿ ವಿವರಿಸಿದಂತೆ, 2024–25ರ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಎಂಬ ಮೂರು ಇಲಾಖೆಗಳಲ್ಲಿ ಕರ್ನಾಟಕ ಸರ್ಕಾರವು 20 ನಿಗಮಗಳಿಗೆ ₹760.25 ಕೋಟಿ ಬಿಡುಗಡೆ ಮಾಡಿದೆ ಎಂದು ಗಮನಿಸಲಾಯಿತು. 10 ದಿನಗಳಲ್ಲಿ ನಿಗದಿತ ಅನುದಾನವನ್ನು ಪಡೆಯಲು ಮತ್ತು ಮೊತ್ತವನ್ನು ಅವರ ಪಿಡಿ ಖಾತೆಗಳಿಗೆ ಜಮಾ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಿಗಮಗಳಿಗೆ ಸೂಚನೆಯೊಂದಿಗೆ ಇಲಾಖೆಯು ಹಣವನ್ನು ಬಿಡುಗಡೆ ಮಾಡಿದೆ. ರಾಜ್ಯದ ಸಂಚಿತ ನಿಧಿಯಿಂದ ಪಡೆದ ಮೊತ್ತವು ವೆಚ್ಚವೆಂದು ಪರಿಗಣಿಸ್ಪಡುವುದರಿಂದ, ಈ ಲೆಕ್ ಶೀರ್ಷಿಕೆಗಳಲ್ಲಿನ ವೆಚ್ಚವು ಕಳೆದ ತ್ರೈಮಾಸಿಕದಲ್ಲಿ ಶೇಕಡಾ 75 ರಿಂದ 100ರ ನಡುವೆ ಇತ್ತು.

ಹೀಗಾಗಿ, ಹಣಕಾಸು ವರ್ಷದ ಕೊನೆಯಲ್ಲಿ ಹಣವನ್ನು ಬಿಡುಗಡೆ ಮಾಡುವುದು ಖರ್ಚಿನ ಆತುರವನ್ನು ಸ್ಪಷ್ಟವಾಗಿ ಊಹಿಸುತ್ತದೆ ಮತ್ತು ನಿಧಿಯ ನಷ್ಟವನ್ನು ತಪ್ಪಿಸಲು ಅವುಗಳನ್ನು ಪಿಡಿ ಖಾತೆಯಲ್ಲಿ ಜಮಾ ಮಾಡುತ್ತದೆ.

2.6 ರಾಜ್ಯದಲ್ಲಿ ಆಯ್ದ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನ

ಆಯವ್ಯಯ ಪ್ರಕ್ರಿಯೆ, ಅವುಗಳ ಲೆಕ್ಕಪತ್ರ ನಿರ್ವಹಣೆ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಕಾಲಿಕವಾಗಿ ಹಣ ಬಿಡುಗಡೆ ಮಾಡುವುದರೊಂದಿಗೆ ಸಂಬಂಧಿಸಿದ ಸವಾಲುಗಳು ಮತ್ತು ಏಕ ನೋಡಲ್ ಏಜನ್ಸಿ– ಸ್ಪರ್ಶ ವ್ಯವಸ್ಥೆಗೆ ವಲಸೆಯ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಆಯ್ದ ಕೇಂದ್ರ ಪ್ರಾಯೋಜಿತ ಯೋಜನೆಗಳ (ಸಿಎಸ್‌ಎಸ್) ಪರಿಶೀಲನೆಯನ್ನು ನಡೆಸಲಾಯಿತು.

2.6.1 ರಾಜ್ಯ ಸಂಬಂಧಿತ ಕೇಂದ್ರ ಪ್ರಾಯೋಜಿತ ಯೋಜನೆಗಳು

ಕೆಳಗಿನ ಐದು ರಾಜ್ಯ ಸಂಬಂಧಿತ ಸಿಎಸ್‌ಎಸ್ ಗಳನ್ನು ವಿವರವಾದ ಪರಿಶೀಲನೆಗಾಗಿ ಆಯ್ಕೆ ಮಾಡಲಾಗಿದೆ:

ಎ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ (ಭರವಸೆ ಯೋಜನೆ) (ಶೇಕಡಾ 75 ಸಿಎಸ್‌ಎಸ್)

ರಾಜ್ಯ ಸಂಬಂಧಿತ ಯೋಜನೆ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ' (ಭರವಸೆ ಯೋಜನೆ – ಕೋಡ್ KA45) ಭಾರತ ಸರ್ಕಾರದ ಯೋಜನೆ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' (ಎಮ್ ಜಿ ಎನ್ ಆರ್ ಇ ಜಿ ಪಿ – ಕೋಡ್ 9219)ನ ಭಾಗವಾಗಿದೆ, ಇದರಲ್ಲಿ ಕೇಂದ್ರ ಪಾಲು ಶೇಕಡಾ 75 ಮತ್ತು ರಾಜ್ಯ ಪಾಲು ಶೇಕಡಾ 25ರಷ್ಟಿದೆ. ಕೌಶಲ್ಯರಹಿತ ಕೈ ದುಡಿಮೆಯ ಕಾರ್ಮಿಕರ ವೇತನದ ಸಂಪೂರ್ಣ ವೆಚ್ಚವನ್ನು ಮತ್ತು ಕೌಶಲ್ಯಪೂರ್ಣ ಮತ್ತು ಅರೆ–ಕುಶಲ ಕಾರ್ಮಿಕರ ವೇತನ ಸೇರಿದಂತೆ ಸಾಮಗ್ರಿಗಳ ವೆಚ್ಚದ ಶೇಕಡಾ 75ರಷ್ಟು ಭಾರತ ಸರ್ಕಾರ ಭರಿಸುತ್ತದೆ.

ಬಿ. ಸಮಗ್ರ ಶಿಕ್ಷಾ (ಶೇಕಡಾ 60 ಸಿಎಸ್‌ಎಸ್)

ರಾಜ್ಯ ಸಂಬಂಧಿತ ಯೋಜನೆ 'ಸಮಗ್ರ ಶಿಕ್ಷಾ' (ಕೋಡ್ 3667) ಅನ್ನು ಶೇಕಡಾ 60ರಷ್ಟು ಕೇಂದ್ರ ಪಾಲು ಮತ್ತು ಶೇಕಡಾ 40 ರಷ್ಟು ರಾಜ್ಯ ಪಾಲು ಅನುಪಾತದಲ್ಲಿ ನೀಡಲಾಗುತ್ತದೆ. ಈ ಯೋಜನೆಯ ಪ್ರಮುಖ ಉದ್ದೇಶಗಳು ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಮತ್ತು ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳನ್ನು ಹೆಚ್ಚಿಸುವುದು; ಶಾಲಾ ಶಿಕ್ಷಣದಲ್ಲಿ ಸಾಮಾಜಿಕ ಮತ್ತು ಲಿಂಗ ಅಂತರವನ್ನು ನಿವಾರಿಸುವುದು; ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಮಾನತೆ ಮತ್ತು ಸೇರ್ಪಡೆಯನ್ನು ಖಚಿತಪಡಿಸುವುದು; ಶಾಲಾ ಶಿಕ್ಷಣ ನಿಬಂಧನೆಗಳಲ್ಲಿ ಕನಿಷ್ಠ ಮಾನದಂಡಗಳನ್ನು ಖಚಿತಪಡಿಸುವುದು; ಶಿಕ್ಷಣದ ವೃತ್ತಿಪರೀಕರಣವನ್ನು ಉತ್ತೇಜಿಸುವುದು; ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ಆರ್ ಟಿ ಇ) ಕಾಯ್ದೆ, 2009ರ ಅನುಷ್ಠಾನದಲ್ಲಿ ರಾಜ್ಯಗಳಿಗೆ ಬೆಂಬಲ

ನೀಡುವುದು; ಮತ್ತು ಶಿಕ್ಷಕರ ತರಬೇತಿಗಾಗಿ ನೋಡಲ್ ಏಜೆನ್ಸಿಗಳಾಗಿ ಎಸ್ ಸಿ ಇ ಆರ್ ಟಿ ಗಳು/ರಾಜ್ಯ ಶಿಕ್ಷಣ ಸಂಸ್ಥೆಗಳು ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ತೆ ಗಳನ್ನು ಬಲಪಡಿಸುವುದು ಮತ್ತು ಉನ್ನತೀಕರಿಸುವುದು.

ಸಿ. ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0

'ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0' (ಕೋಡ್ 3975) ಯೋಜನೆಯು ಈ ಕೆಳಗಿನಂತೆ ಹಣಕಾಸಿನ ಮಾದರಿಗಳೊಂದಿಗೆ ವಿವಿಧ ರಾಜ್ಯ ಸಂಬಂಧಿತ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ:

ರಾಜ್ಯ ಸಂಬಂಧಿತ ಯೋಜನೆ	ಕೇಂದ್ರದಿಂದ ರಾಜ್ಯಕ್ಕೆ ಪಾಲು ಶೇಕಡಾವಾರು
ಅಂಗನವಾಡಿ ಕೇಂದ್ರದ ಉನ್ನತೀಕರಣ / ನಿರ್ಮಾಣ	60:40
ಪೋಷಣ್ ಅಭಿಯಾನ	60:40
ಅಂಗನವಾಡಿ ಸೇವೆಗಳು (ಸಾಮಾನ್ಯ)	60:40
ಪೂರಕ ಪೌಷ್ಟಿಕಾಂಶ ಕಾರ್ಯಕ್ರಮ	50:50
ಹದಿಹರೆಯದ ಹುಡುಗಿಯರಿಗಾಗಿ ಯೋಜನೆ	50:50

ಆಕರ: ಪಿಎಫ್‌ಎಂಎಸ್ ವೆಬ್‌ಸೈಟ್

ಜೀವನ ಚಕ್ರ ವಿಧಾನವನ್ನು ಗಮನದಲ್ಲಿಟ್ಟುಕೊಂಡು ಹದಿಹರೆಯದ ಹುಡುಗಿಯರ ಮೇಲೆ ಕೇಂದ್ರೀಕರಿಸುವ ಮೂಲಕ ಅಂತರ–ಪೀಳಿಗೆಯ ಅಪೌಷ್ಟಿಕತೆಯ ಸಮಸ್ಯೆಯನ್ನು ಪರಿಹರಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಪರಿಷ್ಕೃತ ಯೋಜನೆಯು ದೇಶದ ಗುರುತಿಸಲಾದ ಪ್ರದೇಶಗಳಲ್ಲಿ 14 ರಿಂದ 18 ವರ್ಷ ವಯಸ್ಸಿನ ಹದಿಹರೆಯದ ಹುಡುಗಿಯರಿಗೆ ಅವರ ಆರೋಗ್ಯ ಮತ್ತು ಪೌಷ್ಠಿಕ ಸ್ಥಿತಿಯನ್ನು ಸುಧಾರಿಸಲು ಪೌಷ್ಠಿಕಾಂಶದ ಬೆಂಬಲವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಪೌಷ್ಟಿಕಾಂಶೇತರ ಘಟಕದ ಅಡಿಯಲ್ಲಿ ಈ ಯೋಜನೆಯು ಕಬ್ಬಿಣ ಮತ್ತು ಫೋಲಿಕ್ ಆಮ್ಲ ಪೂರೈಕೆ, ಆರೋಗ್ಯ ತಪಾಸಣೆ ಮತ್ತು ರೆಫರಲ್ ಸೇವೆ, ಪೌಷ್ಟಿಕಾಂಶ ಮತ್ತು ಆರೋಗ್ಯ ಶಿಕ್ಷಣ, ಕೌಶಲ್ಯ ಇತ್ಯಾದಿಗಳನ್ನು ಒದಗಿಸುತ್ತದೆ.

ಡಿ. ಆರ್ ಸಿ ಹೆಚ್ ಮತ್ತು ಆರೋಗ್ಯ ವ್ಯವಸ್ಥೆಯ ಬಲವರ್ಧನೆಗಾಗಿ ಫ್ಲಕ್ಸಿಬಲ್ ಪೂಲ್, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಮಿಷನ್ (ಶೇಕಡಾ 60 ಸಿಎಸ್‌ಎಸ್)

ರಾಜ್ಯ ಸಂಬಂಧಿತ ಯೋಜನೆ ಆರ್ ಸಿ ಹೆಚ್ ಮತ್ತು ಆರೋಗ್ಯ ವ್ಯವಸ್ಥೆಯ ಬಲವರ್ಧನೆಗಾಗಿ ಫ್ಲಕ್ಸಿಬಲ್ ಪೂಲ್, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಮಿಷನ್' (ಕೋಡ್ 4063) ಅನ್ನು ಶೇಕಡಾ 60ರಷ್ಟು ಕೇಂದ್ರ ಪಾಲು ಮತ್ತು ಶೇಕಡಾ 40ರಷ್ಟು ರಾಜ್ಯ ಪಾಲು ಅನುಪಾತದಲ್ಲಿ ಹಣ ಒದಗಿಸಲಾಗುತ್ತದೆ. ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯನ್ನು ಸಾಧಿಸಲು ಮತ್ತು ಎಲ್ಲಾ ನಾಗರಿಕರ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರ ಮೇಲೂ ಗಮನಹರಿಸುವ ಮೂಲಕ ಸಮಾನ, ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯ ರಕ್ಷಣೆಯನ್ನು ಒದಗಿಸುವ ಗುರಿಯನ್ನು ಈ ಯೋಜನೆ ಹೊಂದಿದೆ.

ಇ. ನಗರ ಪುನರುಜ್ಜೀವನ ಮಿಷನ್ – 500 ನಗರಗಳು (ಶೇಕಡಾ 50 ಸಿಎಸ್‌ಎಸ್)

ರಾಜ್ಯ ಸಂಬಂಧಿತ ಯೋಜನೆ 'ನಗರ ಪುನರುಜ್ಜೀವನ ಮಿಷನ್ – 500 ನಗರಗಳು' (ಕೋಡ್ 9556) 2015ರಲ್ಲಿ 50:50 ಅನುಪಾತದೊಂದಿಗೆ ಪ್ರಾರಂಭಿಸಲಾಗಿದೆ ಮತ್ತು ಈ ಯೋಜನೆಯಡಿಯಲ್ಲಿ ಒಂದು ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ರಾಜ್ಯದ 27 ನಗರಗಳನ್ನು ಆಯ್ಕೆ ಮಾಡಲಾಗಿದೆ. ಇದು 2021–22 ರಿಂದ 2025–26ರವರೆಗಿನ ಮಿಷನ್ ಅವಧಿಯೊಂದಿಗೆ ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ಅಮೃತ್ 2.0 ಆತ್ಮ ನಿರ್ಭರ ಭಾರತ್ ಕಡೆಗೆ ಒಂದು ಹೆಜ್ಜೆಯಾಗಿದ್ದು, ನಗರದ ನೀರಿನ ಸುರಕ್ಷಿತ ಮತ್ತು ಕ್ರಿಯಾತ್ಮಕ ನೀರಿನ ನಲ್ಲಿ ಸಂಪರ್ಕಗಳನ್ನು ಎಲ್ಲಾ ಮನೆಗಳಿಗೆ ಮಾಡುವ ಗುರಿಯನ್ನು ಹೊಂದಿದೆ.

2.6.2 ಏಕ ನೋಡಲ್ ಏಜೆನ್ಸಿ – ಕೇಂದ್ರ ಮತ್ತು ರಾಜ್ಯ ಪೇರು ವರ್ಗಾವಣೆ

ಭಾರತ ಸರ್ಕಾರದ ಹಣಕಾಸು ಸಚಿವಾಲಯವು (ಮಾರ್ಚ್ 2021) ಪ್ರತಿ ಕೇಂದ್ರ ಪ್ರಾಯೋಜಿತ ಯೋಜನೆ ಅಡಿಯಲ್ಲಿ ಪ್ರತಿ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಎಸ್‌ಎನ್‌ಎ ಮೂಲಕ ಹಣವನ್ನು ಬಿಡುಗಡೆ

ಮಾಡುವುದನ್ನು ಕಡ್ಡಾಯಗೊಳಿಸಿದೆ ಮತ್ತು ಅವುಗಳ ಬಳಕೆಯನ್ನು ಮೇಲ್ವಿಚಾರಣೆ ಮಾಡುತ್ತದೆ. ಪ್ರತಿ ಎಸ್‌ಎನ್‌ಎ ಅಧಿಕೃತ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕಿನಲ್ಲಿ ಮೀಸಲಾದ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ರಾಜ್ಯ ಸರ್ಕಾರವು ಸ್ವೀಕರಿಸಿದ ಕೇಂದ್ರ ಪಾಲನ್ನು ಸಂಬಂಧಿತ ಎಸ್‌ಎನ್‌ಎ ಖಾತೆಗೆ ಅನುಗುಣವಾದ ರಾಜ್ಯ ಪಾಲಿನೊಂದಿಗೆ ವರ್ಗಾಯಿಸಬೇಕಾಗುತ್ತದೆ.

ವಿ ಎಲ್ ಸಿ ದತ್ತಾಂಶ ಮತ್ತು ಎಸ್‌ಎನ್‌ಎ ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (ಪಿಎಫ್‌ಎಂಎಸ್) ವರದಿಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿದಾಗ, ಆಯ್ದ ಪ್ರತಿಯೊಂದು ಯೋಜನೆಯ ಅಡಿಯಲ್ಲಿ ಆಯಾ ಕೋಷ್ಟಕಗಳಲ್ಲಿ ತೋರಿಸಿರುವಂತೆ ಎಸ್‌ಎನ್‌ಎ ಖಾತೆಗಳಿಗೆ ಕೇಂದ್ರ ಮತ್ತು ರಾಜ್ಯ ಪಾಲು ವರ್ಗಾವಣೆಯ ದತ್ತಾಂಶದಲ್ಲಿ ವ್ಯತ್ಯಾಸವಿದೆ ಎಂದು ಕಂಡುಬಂದಿದೆ.

ಎ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ (ಭರವಸೆ ಯೋಜನೆ) (ಶೇಕಡಾ 75 ಸಿಎಸ್‌ಎಸ್)

2024–25ರ ಅವಧಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ (ಭರವಸೆ ಯೋಜನೆ) (ಶೇಕಡಾ 75 ಸಿಎಸ್‌ಎಸ್)ಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಪಾಲು ವರ್ಗಾವಣೆಯ ವಿವರಗಳನ್ನು **ಕೋಷ್ಟಕ 2.16**ರಲ್ಲಿ ನೀಡಲಾಗಿದೆ.

ಕೋಷ್ಟಕ 2.16: ಕೇಂದ್ರ ಮತ್ತು ರಾಜ್ಯ ಷೇರು ವರ್ಗಾವಣೆಯಲ್ಲಿನ ವ್ಯತ್ಯಾಸಗಳು

(₹ ಕೋಟಿಗಳಲ್ಲಿ)

ದತ್ತಾಂಶದ ಮೂಲ	ಸ್ವೀಕರಿಸಿದ ಕೇಂದ್ರದ ಪಾಲು	ವರ್ಗಾಯಿಸಲಾದ ಕೇಂದ್ರದ ಪಾಲು	ವರ್ಗಾಯಿಸಲಾದ ರಾಜ್ಯದ ಪಾಲು
ವಿ ಎಲ್ ಸಿ ಅಂಕಿ ಅಂಶಗಳು	1,733.08	1,299.81	433.27
ಎಸ್‌ಎನ್‌ಎ ಪಿಎಫ್‌ಎಂಎಸ್ ವರದಿ	1,733.08	1,299.81	433.27
ವ್ಯತ್ಯಾಸದ ಮೊತ್ತ	0.00	0.00	0.00

ಆಕರ: ಪಿಎಫ್‌ಎಂಎಸ್ ವೆಬ್‌ಸೈಟ್ ಮತ್ತು ಹಣಕಾಸು ಲೆಕ್ಕಗಳು ಸಂಪುಟ–II

ಎಸ್‌ಎನ್‌ಎ ಗೆ ರಾಜ್ಯ ಪಾಲನ್ನು ವರ್ಗಾಯಿಸುವಲ್ಲಿ ಯಾವುದೇ ಕೊರತೆ ಕಂಡುಬಂದಿಲ್ಲ. ₹433.27 ಕೋಟಿ ಕೇಂದ್ರ ಪಾಲನ್ನು ವರ್ಗಾಯಿಸುವಲ್ಲಿನ ಕೊರತೆಗೆ ಎಸ್‌ಎನ್‌ಎ / ಹಣಕಾಸು ಇಲಾಖೆಯಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ. ಮಾರ್ಚ್ 31, 2025ರಂದು ಎಸ್‌ಎನ್‌ಎ ಖಾತೆಯಲ್ಲಿ ₹73.84 ಕೋಟಿ ಬಾಕಿ ಉಳಿದಿದೆ.

ಬಿ. ಸಮಗ್ರ ಶಿಕ್ಷಾ (ಶೇಕಡಾ 60 ಸಿಎಸ್‌ಎಸ್)

2024–25ರ ಅವಧಿಯಲ್ಲಿ ಸಮಗ್ರ ಶಿಕ್ಷಾ (ಶೇಕಡಾ 60 ಸಿಎಸ್‌ಎಸ್) ಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಷೇರು ವರ್ಗಾವಣೆಯ ವಿವರಗಳನ್ನು **ಕೋಷ್ಟಕ 2.17**ರಲ್ಲಿ ನೀಡಲಾಗಿದೆ.

ಕೋಷ್ಟಕ 2.17: ಕೇಂದ್ರ ಮತ್ತು ರಾಜ್ಯ ಷೇರು ವರ್ಗಾವಣೆಯಲ್ಲಿನ ವ್ಯತ್ಯಾಸಗಳು

(₹ ಕೋಟಿಗಳಲ್ಲಿ)

ದತ್ತಾಂಶದ ಮೂಲ	ಸ್ವೀಕರಿಸಿದ ಕೇಂದ್ರದ ಪಾಲು	ವರ್ಗಾಯಿಸಲಾದ ಕೇಂದ್ರದ ಪಾಲು	ವರ್ಗಾಯಿಸಲಾದ ರಾಜ್ಯದ ಪಾಲು	ಎಸ್‌ಎನ್‌ಎ ಗೆ ರಾಜ್ಯದ ಪಾಲಿನ ಕಡಿಮೆ ಬಿಡುಗಡೆ
ವಿ ಎಲ್ ಸಿ ಅಂಕಿ ಅಂಶಗಳು	893.56	893.56	604.48	8.77
ಎಸ್‌ಎನ್‌ಎ ಪಿಎಫ್‌ಎಂಎಸ್ ವರದಿ	893.56	893.56	595.71	0.00
ವ್ಯತ್ಯಾಸದ ಮೊತ್ತ	0.00	0.00	8.77	8.77

ಆಕರ: ಪಿಎಫ್‌ಎಂಎಸ್ ವೆಬ್‌ಸೈಟ್ ಮತ್ತು ಹಣಕಾಸು ಲೆಕ್ಕಗಳು ಸಂಪುಟ–II

ಮಾರ್ಚ್ 31, 2025ರ ವೇಳೆಗೆ ಎಸ್‌ಎನ್‌ಎ ಖಾತೆಯಲ್ಲಿ ₹172.04 ಕೋಟಿ ಬಾಕಿ ಉಳಿದಿದೆ.

ಸಿ. ಸಕ್ಷಮ್ ಅಂಗನವಾಡಿ ಮತ್ತು ಪೋಶನ್ 2.0

2024–25ರ ಅವಧಿಯಲ್ಲಿ ಸಕ್ಷಮ್ ಅಂಗನವಾಡಿ ಮತ್ತು ಪೋಶನ್ 2.0ಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯದ ಪಾಲಿನ ವರ್ಗಾವಣೆಯ ವಿವರಗಳನ್ನು **ಕೋಷ್ಟಕ 2.18**ರಲ್ಲಿ ನೀಡಲಾಗಿದೆ.

ಕೋಷ್ಟಕ 2.18: ಕೇಂದ್ರ ಮತ್ತು ರಾಜ್ಯ ಪಾಲು ವರ್ಗಾವಣೆಯಲ್ಲಿನ ವ್ಯತ್ಯಾಸಗಳು

(₹ ಕೋಟಿಗಳಲ್ಲಿ)

ದತ್ತಾಂಶದ ಮೂಲ	ಸ್ವೀಕರಿಸಿದ ಕೇಂದ್ರದ ಪಾಲು	ವರ್ಗಾಯಿಸಲಾದ ಕೇಂದ್ರದ ಪಾಲು	ವರ್ಗಾಯಿಸಬೇಕಾದ ಅನುಗುಣವಾದ ಕೇಂದ್ರದ ಪಾಲು	ವರ್ಗಾಯಿಸಲಾದ ರಾಜ್ಯದ ಪಾಲು	ಎಸ್‌ಎನ್‌ಎ ಗೆ ರಾಜ್ಯದ ಪಾಲಿನ ಕಡಿಮೆ ಬಿಡುಗಡೆ
ವಿ ಎಲ್ ಸಿ ಅಂಕಿ ಅಂಶಗಳು	886.34	465.85	727.90	311.99	415.91
ಎಸ್‌ಎನ್‌ಎ ಪಿಎಫ್‌ಎಂಎಸ್ ವರದಿ	886.85	875.84	727.90	721.98	5.92
ವ್ಯತ್ಯಾಸದ ಮೊತ್ತ	0.51	409.74	0.00	475.68	409.99

ಆಕರ: ಪಿಎಫ್‌ಎಂಎಸ್ ವೆಬ್‌ಸೈಟ್ ಮತ್ತು ಹಣಕಾಸು ಲೆಕ್ಕಗಳು ಸಂಪುಟ–II

ಎಸ್‌ಎನ್‌ಎ ಅಂಕಿಅಂಶಗಳು ಮತ್ತು ವಿ ಎಲ್ ಸಿ ಅಂಕಿಅಂಶಗಳ ನಡುವಿನ ವ್ಯತ್ಯಾಸ ಹಾಗೂ ಬಿಡುಗಡೆಯಲ್ಲಿನ ಕೊರತೆಗೆ (ಕೇಂದ್ರ ಮತ್ತು ರಾಜ್ಯ ಎರಡೂ ಪಾಲು) ಕಾರಣಗಳನ್ನು ಎಸ್‌ಎನ್‌ಎ / ಹಣಕಾಸು ಇಲಾಖೆಯಿಂದ ಕೋರಲಾಗಿದೆ. ಉತ್ತರಕ್ಕಾಗಿ ಕಾಯಲಾಗುತ್ತಿದೆ. 31 ಮಾರ್ಚ್ 2025 ರಂತೆ ಎಸ್‌ಎನ್‌ಎ ಖಾತೆಯಲ್ಲಿ ₹370.01 ಕೋಟಿ ಮೊತ್ತ ಬಾಕಿ ಇತ್ತು.

ಡಿ. ಆರ್ ಸಿ ಹೆಚ್ ಮತ್ತು ಆರೋಗ್ಯ ವ್ಯವಸ್ಥೆಯ ಬಲವರ್ಧನೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಮಿಷನ್‌ಗಾಗಿ ಫ್ಲಕ್ಸಿಬಲ್ ಪೂಲ್

2024–25ರ ಅವಧಿಯಲ್ಲಿ ಆರ್ ಸಿ ಹೆಚ್ ಮತ್ತು ಆರೋಗ್ಯ ವ್ಯವಸ್ಥೆಯ ಬಲವರ್ಧನೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಮಿಷನ್ (ಶೇಕಡಾ 60 ಸಿಎಸ್‌ಎಸ್)ಗಾಗಿ ಹೊಂದಿಕೊಳ್ಳುವ ಪೂಲ್‌ಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಪಾಲು ವರ್ಗಾವಣೆಯ ವಿವರಗಳನ್ನು **ಕೋಷ್ಟಕ 2.19**ರಲ್ಲಿ ನೀಡಲಾಗಿದೆ.

ಕೋಷ್ಟಕ 2.19: ಕೇಂದ್ರ ಮತ್ತು ರಾಜ್ಯ ಪಾಲು ವರ್ಗಾವಣೆಯಲ್ಲಿನ ವ್ಯತ್ಯಾಸಗಳು

(₹ ಕೋಟಿಗಳಲ್ಲಿ)

ದತ್ತಾಂಶದ ಮೂಲ	ಸ್ವೀಕರಿಸಿದ ಕೇಂದ್ರದ ಪಾಲು	ವರ್ಗಾಯಿಸಲಾದ ಕೇಂದ್ರದ ಪಾಲು	ವರ್ಗಾಯಿಸಲಾದ ರಾಜ್ಯದ ಪಾಲು	ಎಸ್‌ಎನ್‌ಎ ಗೆ ರಾಜ್ಯದ ಪಾಲಿನ ಹೆಚ್ಚುವರಿ ಬಿಡುಗಡೆ
ವಿ ಎಲ್ ಸಿ ಅಂಕಿ ಅಂಶಗಳು	879.38	879.38	849.80	263.55
ಎಸ್‌ಎನ್‌ಎ ಪಿಎಫ್‌ಎಂಎಸ್ ವರದಿ	1,023.97	879.38	849.80	263.55
ವ್ಯತ್ಯಾಸದ ಮೊತ್ತ	144.59	0.00	0.00	0.00

ಆಕರ: ಪಿಎಫ್‌ಎಂಎಸ್ ವೆಬ್‌ಸೈಟ್ ಮತ್ತು ಹಣಕಾಸು ಲೆಕ್ಕಗಳು ಸಂಪುಟ–II

₹263.55 ಕೋಟಿ ಹೆಚ್ಚುವರಿ ಮೊತ್ತವನ್ನು ರಾಜ್ಯ ಪಾಲಾಗಿ ಎಸ್‌ಎನ್‌ಎಗೆ ವರ್ಗಾಯಿಸಲಾಗಿದೆ. ಕಾರಣಗಳನ್ನು ಕೋರಲಾಗಿದೆ ಮತ್ತು ಉತ್ತರಕ್ಕಾಗಿ ಕಾಯಲಾಗುತ್ತಿದೆ.

ಭಾರತ ಸರ್ಕಾರವು ಸರಕು ರೂಪದಲ್ಲಿ ಬಿಡುಗಡೆ ಮಾಡಿದ ₹144.59 ಕೋಟಿಯನ್ನು ಎಸ್‌ಎನ್‌ಎಗೆ ಬಿಡುಗಡೆ ಮಾಡಿಲ್ಲ ಎಂದು ಗಮನಿಸಲಾಗಿದೆ. ಮಾರ್ಚ್ 31, 2025ರ ಹೊತ್ತಿಗೆ ಎಸ್‌ಎನ್‌ಎ ಖಾತೆಯಲ್ಲಿ ₹14.48 ಕೋಟಿ ಬಾಕಿ ಉಳಿದಿದೆ.

ಇ. ನಗರ ಪುನರುಜ್ಜೀವನ ಮಿಷನ್ – 500 ನಗರಗಳು

2024–25ರ ಅವಧಿಯಲ್ಲಿ ನಗರ ಪುನರುಜ್ಜೀವನ ಮಿಷನ್ – 500 ನಗರಗಳು (ಶೇಕಡಾ 50 ಸಿಎಸ್‌ಎಸ್)ಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಪಾಲು ವರ್ಗಾವಣೆಯ ವಿವರಗಳನ್ನು **ಕೋಷ್ಟಕ 2.20**ರಲ್ಲಿ ನೀಡಲಾಗಿದೆ.

ಕೋಷ್ಟಕ 2.20: ಕೇಂದ್ರ ಮತ್ತು ರಾಜ್ಯ ಪಾಲು ವರ್ಗಾವಣೆಯಲ್ಲಿನ ವ್ಯತ್ಯಾಸಗಳು

(₹ ಕೋಟಿಗಳಲ್ಲಿ)

ದತ್ತಾಂಶದ ಮೂಲ	ಸ್ವೀಕರಿಸಿದ ಕೇಂದ್ರದ ಪಾಲು	ವರ್ಗಾಯಿಸಲಾದ ಕೇಂದ್ರದ ಪಾಲು	ವರ್ಗಾಯಿಸಲಾದ ರಾಜ್ಯದ ಪಾಲು	ಎಸ್‌ಎನ್‌ಎ ಗೆ ರಾಜ್ಯದ ಪಾಲಿನ ಕಡಿಮೆ ಬಿಡುಗಡೆ
ವಿ ಎಲ್ ಸಿ ಅಂಕಿ ಅಂಶಗಳು	723.11	144.35	0.00	144.35
ಎಸ್‌ಎನ್‌ಎ ಪಿಎಫ್‌ಎಂಎಸ್ ವರದಿ	311.23	311.23	264.71	46.52
ವ್ಯತ್ಯಾಸದ ಮೊತ್ತ	411.88	166.88	264.71	97.83

ಆಕರ: ಪಿಎಫ್‌ಎಂಎಸ್ ವೆಬ್‌ಸೈಟ್ ಮತ್ತು ಹಣಕಾಸು ಲೆಕ್ಕಗಳು ಸಂಪುಟ–II

ವಿ ಎಲ್ ಸಿ ಮತ್ತು ಪಿಎಫ್‌ಎಂಎಸ್ ಅಂಕಿಅಂಶಗಳ ನಡುವಿನ ವ್ಯತ್ಯಾಸಕ್ಕೆ ಕಾರಣಗಳು ಹಾಗೂ ಕೇಂದ್ರ ಮತ್ತು ರಾಜ್ಯ ಪಾಲಿನ ಬಿಡುಗಡೆಯಲ್ಲಿನ ಕೊರತೆಯನ್ನು ಪರಿಶೀಲಿಸಲಾಗಿದೆ ಮತ್ತು ಉತ್ತರಕ್ಕಾಗಿ ಕಾಯಲಾಗುತ್ತಿದೆ. ಮಾರ್ಚ್ 31, 2025ರ ವೇಳೆಗೆ ಎಸ್‌ಎನ್‌ಎ ಖಾತೆಯಲ್ಲಿ ₹612.04 ಕೋಟಿ ಬಾಕಿ ಉಳಿದಿದೆ.

2.6.3 ಏಕ ನೋಡಲ್ ಸಂಸ್ಥೆ, ಸಮಗ್ರ ತ್ವರಿತ ವರ್ಗಾವಣೆಗಳಿಗಾಗಿ ನೈಜ–ಸಮಯದ ವ್ಯವಸ್ಥೆ

ರಾಜ್ಯ ಸರ್ಕಾರಗಳಿಗೆ ಕೇಂದ್ರ ಪ್ರಾಯೋಜಿತ ಯೋಜನೆಗಳಿಗಾಗಿ ಹಣವನ್ನು ಬಿಡುಗಡೆ ಮಾಡಲು ಏಕ ನೋಡಲ್ ಸಂಸ್ಥೆ (ಎಸ್‌ಎನ್‌ಎ) ಮಾದರಿಗೆ ಪರ್ಯಾಯವಾಗಿ ಎಸ್‌ಎನ್‌ಎ – ಸ್ಪರ್ಶ (ಏಕ ನೋಡಲ್ ಸಂಸ್ಥೆ, ಸಮಗ್ರ ತ್ವರಿತ ವರ್ಗಾವಣೆಗಳಿಗಾಗಿ ನೈಜ–ಸಮಯದ ವ್ಯವಸ್ಥೆ) ಅನ್ನು ಹಣಕಾಸು ಸಚಿವಾಲಯವು ಜುಲೈ 2023ರಲ್ಲಿ ಪರಿಚಯಿಸಿತು. ಪಿಎಫ್‌ಎಂಎಸ್ ವೇದಿಕೆಯಡಿಯಲ್ಲಿ ಅಭಿವೃದ್ಧಿಪಡಿಸಲಾದ ಈ ವ್ಯವಸ್ಥೆಯು, ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (ಪಿಎಫ್‌ಎಂಎಸ್), ರಾಜ್ಯ ಸಮಗ್ರ ಹಣಕಾಸು ನಿರ್ವಹಣಾ ಮಾಹಿತಿ ವ್ಯವಸ್ಥೆ (ಐಎಫ್‌ಎಮ್‌ಐಎಸ್) ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿ ಐ) ನ ಇ–ಕುಬೇರ್ ಅನ್ನು ಸಂಯೋಜಿಸುವ ಮೂಲಕ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ "ಸಮಯಕ್ಕೆ ಸರಿಯಾಗಿ" ನಿಧಿಯ ಹರಿವನ್ನು ಸಾಧಿಸುವ ಗುರಿಯನ್ನು ಹೊಂದಿದೆ, ಇದು ಪರಿಣಾಮಕಾರಿ ಮತ್ತು ಪಾರದರ್ಶಕ ನಿಧಿ ವಿತರಣೆಯನ್ನು ಸುಗಮಗೊಳಿಸುತ್ತದೆ.

ಕರ್ನಾಟಕದಲ್ಲಿ 2024–25ರ ಹಣಕಾಸು ಲೆಕ್ಕಗಳಲ್ಲಿ ತಿಳಿಸಿದಂತೆ 140 ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಸರ್ಕಾರವು (ಮೇ 2024) ಎಸ್‌ಎನ್‌ಎ – ಸ್ಪರ್ಶಗೆ 27 ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಮತ್ತು ಎಸ್‌ಎನ್‌ಎ – ಸ್ಪರ್ಶಗೆ ಹೆಚ್ಚುವರಿ 37 ಯೋಜನೆಗಳನ್ನು ಸೇರಿಸಲು (ಜೂನ್ 2025) ಸೂಚಿಸಿದೆ. ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿ ಒದಗಿಸಿದ ಮಾಹಿತಿಯ ಪ್ರಕಾರ 29 ಯೋಜನೆಗಳು ಮತ್ತು ಅದಕ್ಕೆ ಅನುಗುಣವಾದ ರಾಜ್ಯ–ಸಂಬಂಧಿತ ಯೋಜನೆಗಳನ್ನು ಸಂಪೂರ್ಣವಾಗಿ ಸೇರಿಸಲಾಗಿದೆ. 111 ಯೋಜನೆಗಳು ಮತ್ತು ಅದಕ್ಕೆ ಅನುಗುಣವಾದ ರಾಜ್ಯ–ಸಂಬಂಧಿತ ಯೋಜನೆಗಳನ್ನು ಇನ್ನೂ ಎಸ್‌ಎನ್‌ಎ – ಸ್ಪರ್ಶಗೆ ಸೇರಿಸಲಾಗಿಲ್ಲ.

ಆಯ್ಕೆ ಮಾಡಲಾದ ಐದು ಯೋಜನೆಗಳಲ್ಲಿ, ಕೇವಲ ಎರಡು ಯೋಜನೆಗಳು ಅಂದರೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ (ಭರವಸೆ ಯೋಜನೆ) ಮತ್ತು ನಗರ ಪುನರುಜ್ಜೀವನ ಮಿಷನ್ – 500 ನಗರಗಳನ್ನು ಎಸ್‌ಎನ್‌ಎ – ಸ್ಪರ್ಶ ವೇದಿಕೆಗೆ ಸೇರಿಸಲಾಗಿದೆ.

ಎ. ಎಸ್‌ಎನ್‌ಎ ಯಿಂದ ಎಸ್‌ಎನ್‌ಎ – ಸ್ಪರ್ಶ ಮಾದರಿಗೆ ವಲಸೆ

ಭಾರತ ಸರ್ಕಾರದ ಪಿಎಫ್‌ಎಂಎಸ್ ವಿಭಾಗದ ವೆಚ್ಚ ಇಲಾಖೆಯ ಹಣಕಾಸು ಸಚಿವಾಲಯವು ದಿನಾಂಕ 13.07.2023 ರಂದು ಹೊರಡಿಸಿದ OM F.No.1(27)/ ಪಿಎಫ್‌ಎಂಎಸ್ /2020ರ ಪ್ರಕಾರ, ಎಸ್‌ಎನ್‌ಎ–ಸ್ಪರ್ಶ ಪ್ಲಾಟ್‌ಫಾರ್ಮ್‌ಗೆ ಒಂದು ಯೋಜನೆಯನ್ನು ಸೇರಿಸಿಕೊಂಡ ನಂತರ, ಎಸ್‌ಎನ್‌ಎ ಯೋಜನೆಗೆ ಸಂಬಂಧಿಸಿದ ಎಲ್ಲಾ ಎಸ್‌ಎನ್‌ಎ ಖಾತೆಗಳನ್ನು ಮುಚ್ಚಬೇಕಾಗುತ್ತದೆ ಮತ್ತು ಎಸ್‌ಎನ್‌ಎ ಖಾತೆಗಳಲ್ಲಿ ಉಳಿದಿರುವ ಖರ್ಚು ಮಾಡದ ಬಾಕಿಯ ಕೇಂದ್ರ / ರಾಜ್ಯ ಪಾಲನ್ನು ಆಯಾ ಕ್ರೋಢೀಕೃತ ನಿಧಿಗಳಿಗೆ ಮರುಪಾವತಿಸಬೇಕಾಗುತ್ತದೆ. ಇದಲ್ಲದೆ, ರಾಜ್ಯ ಖಜಾನೆಯಲ್ಲಿರುವ ಯೋಜನೆಯಡಿಯಲ್ಲಿ ಕೇಂದ್ರ ಪಾಲನ್ನು ಹಂಚಿಕೆ ಮಾದರಿಯ ಪ್ರಕಾರ ಭಾರತದ ಕ್ರೋಢೀಕೃತ ನಿಧಿಗೆ ಮರುಪಾವತಿಸಬೇಕು.

ಸಿಎಸ್‌ಎಸ್ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ (ಭರವಸೆ ಯೋಜನೆ) (ಶೇಕಡಾ 75 ಸಿಎಸ್‌ಎಸ್)' ಅನ್ನು ಮಾರ್ಚ್ 2025ರಲ್ಲಿ ಎಸ್‌ಎನ್‌ಎ – ಸ್ಪರ್ಶ ವ್ಯವಸ್ಥೆಗೆ ಸೇರಿಸಲಾಯಿತು ಮತ್ತು ಮೊದಲ ಪಾವತಿಯನ್ನು ಮಾರ್ಚ್ 2025 ರಂದು ಎಸ್‌ಎನ್‌ಎ – ಸ್ಪರ್ಶ ಮೂಲಕ ಮಾಡಲಾಯಿತು.

ಅದೇ ರೀತಿ, ನಗರ ಪುನರುಜ್ಜೀವನ ಮಿಷನ್ – 500 ನಗರಗಳು (ಶೇಕಡಾ 50 ಸಿಎಸ್‌ಎಸ್) ಅನ್ನು ಮಾರ್ಚ್ 2025ರಲ್ಲಿ ಎಸ್‌ಎನ್‌ಎ – ಸ್ಪರ್ಶ ವ್ಯವಸ್ಥೆಗೆ ಸೇರಿಸಲಾಯಿತು.

2.7 ಆಯ್ದ ಅನುದಾನಗಳ ವಿವರವಾದ ವಿಮರ್ಶೆಯಲ್ಲಿ ಗಮನಿಸಲಾದ ಇತರ ಸಮಸ್ಯೆಗಳು

2.7.1 ಅನುದಾನ ಸಂಖ್ಯೆ 10ರ ವಿಮರ್ಶೆ – ಸಮಾಜ ಕಲ್ಯಾಣ

2.7.1.1 ಪರಿಚಯ

ಅನುದಾನ 10 – ಸಮಾಜ ಕಲ್ಯಾಣವು ಈ ಕೆಳಗಿನ ಕ್ರಿಯಾತ್ಮಕ ಪ್ರಮುಖ ಲೆಕ್ಕ ಶೀರ್ಷಿಕೆಗಳನ್ನು ಒಳಗೊಂಡಿದೆ.

2225 – ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ.

4225 – ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಬಂಡವಾಳ ವಿನಿಯೋಗ.

ಅನುದಾನ ಸಂಖ್ಯೆ 10ರ ಅಡಿಯಲ್ಲಿ ಬಂದ ಆಯವ್ಯಯ ಹಂಚಿಕೆಯನ್ನು ಪ್ರಾಥಮಿಕವಾಗಿ ನಾಲ್ಕು ಇಲಾಖೆಗಳಿಗೆ ವಿತರಿಸಲಾಗುತ್ತದೆ, ಅಂದರೆ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.

ಸಮಾಜ ಕಲ್ಯಾಣ ಇಲಾಖೆ:

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಇಲಾಖೆಯು ಸಮಾಜ ಕಲ್ಯಾಣ ಸಚಿವರು ಮತ್ತು ಪ್ರಧಾನ ಕಾರ್ಯದರ್ಶಿಯವರ ಆಡಳಿತದ ಅಡಿಯಲ್ಲಿ ಕಾರ್ಯನಿರ್ವಹಿಸುವ ಮೂಲಕ ಪರಿಶಿಷ್ಟ ಜಾತಿಗಳು, ಅಂಗವಿಕಲರು, ಹಿರಿಯ ನಾಗರಿಕರು ಮತ್ತು ಇತರ ದುರ್ಬಲ ಗುಂಪುಗಳ ಅಗತ್ಯತೆಗಳನ್ನು ಸಂಬಂಧಿತ ನಿಗಮಗಳು ಮತ್ತು ಪುನರ್ವಸತಿ ಕೇಂದ್ರಗಳೊಂದಿಗಿನ ಸಹಯೋಗದೊಂದಿಗೆ ಪೂರೈಸುತ್ತದೆ. ಪ್ರಮುಖ ಕಾರ್ಯಕ್ರಮಗಳು ವಿದ್ಯಾರ್ಥಿವೇತನಗಳು, ವಸತಿ ಸೌಲಭ್ಯಗಳು, ಕೌಶಲ್ಯ ಅಭಿವೃದ್ಧಿ, ಆರೋಗ್ಯ ಬೆಂಬಲ ಮತ್ತು ಪಿಂಚಣಿ ಯೋಜನೆಗಳನ್ನು ಒಳಗೊಂಡಿವೆ. ಹೊಣೆಗಾರಿಕೆ ಮತ್ತು ನಿಧಿಯ ಪರಿಣಾಮಕಾರಿ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಮೇಲ್ವಿಚಾರಣಾ ಕಾರ್ಯವಿಧಾನಗಳೊಂದಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಣಕಾಸಿನ ಸಂಪನ್ಮೂಲಗಳನ್ನು ಹಂಚುತ್ತವೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಕರ್ನಾಟಕ ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಶಿಕ್ಷಣ, ಆರೋಗ್ಯ ರಕ್ಷಣೆ, ಕೌಶಲ್ಯ ತರಬೇತಿ ಮತ್ತು ಜೀವನೋಪಾಯ ಬೆಂಬಲದಲ್ಲಿ ಉದ್ದೇಶಿತ ಹಸ್ತಕ್ಷೇಪದ ಮೂಲಕ ಪರಿಶಿಷ್ಟ ಪಂಗಡಗಳ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಕಾರ್ಯವನ್ನು ಹೊಂದಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಮತ್ತು ಕಾರ್ಯದರ್ಶಿಯವರ ಮಾರ್ಗದರ್ಶನದಲ್ಲಿ, ಇಲಾಖೆಯು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳು ಮತ್ತು ಕ್ಷೇತ್ರ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುತ್ತದೆ. ಪ್ರಧಾನ ಯೋಜನೆಗಳಲ್ಲಿ ವಿದ್ಯಾರ್ಥಿವೇತನಗಳು, ವಸತಿ ಶಾಲೆಗಳು, ಆರೋಗ್ಯ ಉಪಕ್ರಮಗಳು, ಕೌಶಲ್ಯ ಅಭಿವೃದ್ಧಿ ಮತ್ತು ಮೂಲಸೌಕರ್ಯ ವರ್ಧನೆ ಸೇರಿವೆ. ಪಾರದರ್ಶಕತೆ ಮತ್ತು ಅತ್ಯುತ್ತಮ ಸಂಪನ್ಮೂಲ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಮೇಲ್ವಿಚಾರಣೆಯೊಂದಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಣಕಾಸು ಒದಗಿಸುತ್ತವೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಶಿಕ್ಷಣ, ಆರೋಗ್ಯ ರಕ್ಷಣೆ, ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಕಾರ್ಯಕ್ರಮಗಳ ಮೂಲಕ ಹಿಂದುಳಿದ ವರ್ಗಗಳ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಸುಗಮಗೊಳಿಸುತ್ತದೆ. ಇದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮತ್ತು ಕಾರ್ಯದರ್ಶಿಗಳ ಆಡಳಿತದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ, ಸಂಬಂಧಿತ ನಿಗಮಗಳು ಮತ್ತು ಸಂಶೋಧನೆಯೊಂದಿಗೆ ಸಹಯೋಗ ಹೊಂದಿದೆ. ವಿದ್ಯಾರ್ಥಿವೇತನಗಳು, ವಸತಿ ಶಾಲೆಗಳು, ಕೌಶಲ್ಯ ತರಬೇತಿ ಕಾರ್ಯಕ್ರಮಗಳು, ಆರೋಗ್ಯ ಸೇವೆ ಉಪಕ್ರಮಗಳು ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಳಂತಹ ಪ್ರಮುಖ ಯೋಜನೆಗಳನ್ನು ಹೊಂದಿದೆ. ಪಾರದರ್ಶಕತೆ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ವೆಚ್ಚಗಳನ್ನು ಮೇಲ್ವಿಚಾರಣೆ ಮಾಡುವುದರೊಂದಿಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡರಿಂದಲೂ ಹಣವನ್ನು ಪಡೆಯಲಾಗುತ್ತದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಶಿಕ್ಷಣ, ಆರೋಗ್ಯ ರಕ್ಷಣೆ, ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ವರ್ಧನೆಯಲ್ಲಿ ಸಮಗ್ರ ಕಾರ್ಯಕ್ರಮಗಳ ಮೂಲಕ ಅಲ್ಪಸಂಖ್ಯಾತ ಸಮುದಾಯಗಳ ಸಾಮಾಜಿಕ–ಆರ್ಥಿಕ ಪ್ರಗತಿಗೆ ಬದ್ಧವಾಗಿದೆ. ಈ ಇಲಾಖೆಯು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ, ಪ್ರಧಾನ ಕಾರ್ಯದರ್ಶಿಯವರು ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ನೀಡುತ್ತಾರೆ. ಪ್ರಮುಖ ಉಪಕ್ರಮಗಳಲ್ಲಿ ವಿದ್ಯಾರ್ಥಿವೇತನಗಳು, ವಸತಿ ಶಾಲೆಗಳು, ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಆರೋಗ್ಯ ಸೇವೆಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ಸೇರಿವೆ. ಪಾರದರ್ಶಕತೆ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ವೆಚ್ಚಗಳನ್ನು ಮೇಲ್ವಿಚಾರಣೆ ಮಾಡುವುದರೊಂದಿಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡರಿಂದಲೂ ಹಣವನ್ನು ಪಡೆಯಲಾಗುತ್ತದೆ.

2.7.1.2 ಆಯವ್ಯಯ ಮತ್ತು ವೆಚ್ಚ

ಕಳೆದ ಮೂರು ವರ್ಷಗಳಿಂದ (2022–23 ರಿಂದ 2024–25) ಮೇಲಿನ ಕ್ರಿಯಾತ್ಮಕ ಪ್ರಮುಖ ಶೀರ್ಷಿಕೆಗಳ ಅಡಿಯಲ್ಲಿ ಆಯವ್ಯಯ ಅವಕಾಶ, ವಾಸ್ತವಿಕ ವಿತರಣೆ ಮತ್ತು ಉಳಿತಾಯದ ಒಟ್ಟಾರೆ ಸ್ಥಾನವನ್ನು **ಕೋಷ್ಟಕ 2.21**ರಲ್ಲಿ ನೀಡಲಾಗಿದೆ.

ಕೋಷ್ಟಕ 2.21: ಆಯವ್ಯಯ ಮತ್ತು ವೆಚ್ಚ

(₹ ಕೋಟಿಗಳಲ್ಲಿ)

ವರ್ಷ	ವಿಭಾಗ		ಆಯವ್ಯಯ ಅಪಕಾಶ	ಒಟ್ಟು	ವೆಚ್ಚ	ಬಳಕೆಯಾಗದೇ ಉಳಿದ ಅವಕಾಶ (ಶೇಕಡಾವಾರು)
2022–23	ರಾಜಸ್ವ	ಮೂಲ	7,765.73	9,369.65	8,664.81	704.84
		ಪೂರಕ	1,603.92			(8)
	ಬಂಡವಾಳ	ಮೂಲ	1,622.79	2,152.93	2,360.07	(–)207.13
		ಪೂರಕ	530.14			(–10)
2023–24	ರಾಜಸ್ವ	ಮೂಲ	8,648.95	9,417.62	8,913.07	504.55
		ಪೂರಕ	768.67			(5)
	ಬಂಡವಾಳ	ಮೂಲ	2,524.52	2,852.85	2,764.10	88.75
		ಪೂರಕ	328.33			(3)
2024–25	ರಾಜಸ್ವ	ಮೂಲ	10,123.29	11,140.49	10,382.53	757.96
		ಪೂರಕ	1,017.20			(7)
	ಬಂಡವಾಳ	ಮೂಲ	3,210.43	3,842.48	3,812.11	30.37
		ಪೂರಕ	632.04			(1)

ಆಕರ: ಧನವಿನಿಯೋಗ ಲೆಕ್ಕಗಳು

ಮೇಲಿನ ಕೋಷ್ಟಕದಿಂದ ನೋಡಬಹುದಾದಂತೆ, ರಾಜಸ್ವ ವಿಭಾಗದ ಅಡಿಯಲ್ಲಿ ಬಳಕೆಯಾಗದ ಅವಕಾಶವು ಶೇಕಡಾ ಐದು ರಿಂದ ಎಂಟು ರವರೆಗೆ ಮತ್ತು ಬಂಡವಾಳ ವಿಭಾಗದ ಅಡಿಯಲ್ಲಿ, ಇದು ಶೇಕಡಾ ಒಂದು ಮತ್ತು ಮೂರರ ನಡುವೆ ಇದ್ದು, 2022–23ರಲ್ಲಿ ಅಧಿಕವಾಗಿತ್ತು.

ಇದಲ್ಲದೆ, ಮೇಲಿನ ಕೋಷ್ಟಕದಲ್ಲಿ ಸೂಚಿಸಲಾದ ವೆಚ್ಚವು ವಿವಿಧ ಸಂಘಗಳು/ನಿಗಮಗಳು/ಅನುಷ್ಠಾನ ಏಜೆನ್ಸಿಗಳು ಇತ್ಯಾದಿಗಳಿಗೆ ವರ್ಗಾಯಿಸಲಾದ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ಬಳಕೆಯಾಗದೆ ಬಾಕಿ ಇದ್ದರೂ ಸಹ ವೆಚ್ಚವೆಂದು ಪರಿಗಣಿಸಲಾಗಿರುವುದರಿಂದ ನಿಜವಾದ ವೆಚ್ಚವನ್ನು ಪ್ರತಿನಿಧಿಸುವುದಿಲ್ಲ. ಸರ್ಕಾರಿ ಖಾತೆಗಳ ಹೊರಗೆ ಇರುವ ಬಳಕೆಯಾಗದ ಮೊತ್ತದ ವಿವರಗಳನ್ನು ಮುಂದಿನ ಕಂಡಿಕೆಯಲ್ಲಿ ಚರ್ಚಿಸಲಾಗಿದೆ.

ಎ. ಅನುದಾನಗಳು ಕೈ ತಪ್ಪುವುದನ್ನು ತಪ್ಪಿಸಲು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಹಣವನ್ನು ಇಡುವುದು

2024–25ರ ಅವಧಿಯಲ್ಲಿ, ಖಾಲಿ ಹುದ್ದೆಗಳಿಗೆ ಖಾತೆಯ ಶೀರ್ಷಿಕೆ 2225–01–001–0–50–014 – ಇತರ ಭತ್ಯೆಗಳ ಅಡಿಯಲ್ಲಿ ₹188 ಕೋಟಿಗಳ ಅವಕಾಶ ಮಾಡಲಾಗಿತ್ತು. ಕೆಳಗಿನ **ಕೋಷ್ಟಕ 2.22**ರಲ್ಲಿ ವಿವರಿಸಿದಂತೆ ಸಮಾಜ ಕಲ್ಯಾಣ ಇಲಾಖೆಯು ಮಾರ್ಚ್ 30, 2025 ರಂದು ಒಟ್ಟು ₹145.00 ಕೋಟಿ ಮೊತ್ತವನ್ನು ಎರಡು ಸಂಸ್ಥೆಗಳ ವೈಯಕ್ತಿಕ ಠೇವಣಿ ಖಾತೆಗಳಿಗೆ ವರ್ಗಾಯಿಸಿದೆ.

ಕೋಷ್ಟಕ 2.22: ವೈಯಕ್ತಿಕ ಠೇವಣಿ ಖಾತೆಗಳಿಗೆ ಮೊತ್ತವನ್ನು ವರ್ಗಾಯಿಸಿದ ಸಂಸ್ಥೆಗಳು

ಕ್ರಮ ಸಂಖ್ಯೆ	ನಿಗಮದ ಹೆಸರು	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಮೊತ್ತ (₹ ಕೋಟಿಗಳಲ್ಲಿ)
1	ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ	2225–01–102–0–11–059	50.00
		2225–01–102–0–11–059	50.00
2	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕೆ ಆರ್ ಇ ಐ ಎಸ್)	2225–01–277–0–65–059	45.00

ಆಕರ: ಸಂಸ್ಥೆಗಳ ದಾಖಲೆಗಳು

ಈ ಸಂಸ್ಥೆಗಳು ಯಾವುದೇ ಹೆಚ್ಚುವರಿ ಅನುದಾನವನ್ನು ಕೋರಿಲ್ಲ ಎಂದು ದಾಖಲೆಗಳಿಂದ ತಿಳಿದುಬಂದಿದೆ. ಆದಾಗ್ಯೂ, ಆಗಸ್ಟ್ 2025 ರವರೆಗೆ ಹಣವನ್ನು ಬಳಸಲಾಗಲಿಲ್ಲ.

ಯೋಜನೆಗಳ ನಿಜವಾದ ಅವಶ್ಯಕತೆ ಅಥವಾ ಅನುಷ್ಠಾನಕ್ಕೆ ಸಿದ್ಧತೆಯ ಯಾವುದೇ ಪುರಾವೆಗಳಿಲ್ಲದೆ ಈ ಹಣವನ್ನು ಬಿಡುಗಡೆ ಮಾಡಲಾಗಿತ್ತು. ವರ್ಷಾಂತ್ಯದಲ್ಲಿ ವೈಯಕ್ತಿಕ ಠೇವಣಿ ಖಾತೆಗಳಿಗೆ ದೊಡ್ಡ ಮೊತ್ತವನ್ನು ವರ್ಗಾಯಿಸುವ ಅಭ್ಯಾಸವು ಅನುದಾನದ ತಪ್ಪಿಹೋಗುವುದನ್ನು ತಡೆಯಲು ಕೇವಲ ಹಣವನ್ನು ಠೇವಣಿ ಇಡುವುದಕ್ಕೆ ಸಮನಾಗಿತ್ತು.

ಬಿ. ನಿಗಮಗಳಲ್ಲಿ ನಿಧಿಯನ್ನು ಬಳಸದಿರುವುದು

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ನಿಗಮಗಳಿಗೆ ಸಹಾಯ ಮಾಡುತ್ತದೆ ಮತ್ತು 2022–2025ರ ಅವಧಿಯಲ್ಲಿ ಪರಿಶೀಲಿಸಿದ ಕೆಲವು ನಿಗಮಗಳ ಬಿಡುಗಡೆ ಮತ್ತು ವೆಚ್ಚಗಳ ವಿವರಗಳನ್ನು ಕೆಳಗಿನ **ಕೋಷ್ಟಕ 2.23**ರಲ್ಲಿ ನೀಡಲಾಗಿದೆ.

ಕೋಷ್ಟಕ 2.23: ಬಿಡುಗಡೆ ಮತ್ತು ವೆಚ್ಚದ ನಿಗಮವಾರು ವಿವರಗಳು

(₹ ಕೋಟಿಗಳಲ್ಲಿ)

ನಿಗಮದ ಹೆಸರು	2022–23		2023–24		2024–25		ಮಾರ್ಚ್ 31.03.2025 ರಂತೆ ಶಿಲ್ಕು
	ಸ್ವೀಕರಿಸಿದ ಅನುದಾನ	ಮಾಡಿದ ವೆಚ್ಚ	ಸ್ವೀಕರಿಸಿದ ಅನುದಾನ	ಮಾಡಿದ ವೆಚ್ಚ	ಸ್ವೀಕರಿಸಿದ ಅನುದಾನ	ಮಾಡಿದ ವೆಚ್ಚ	
ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತದ ಅಡಿಯಲ್ಲಿ ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮ	20.00	0.00	15.00	0.00	14.80	0.20	49.00
ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ	100.00	5.00	100.00	5.00	60.00	63.30	191.80

ನಿಗಮದ ಹೆಸರು	2022–23		2023–24		2024–25		ಮಾರ್ಚ್ 31.03.2025 ರಂತೆ ಶಿಲ್ಕು
	ಸ್ವೀಕರಿಸಿದ ಅನುದಾನ	ಮಾಡಿದ ವೆಚ್ಚ	ಸ್ವೀಕರಿಸಿದ ಅನುದಾನ	ಮಾಡಿದ ವೆಚ್ಚ	ಸ್ವೀಕರಿಸಿದ ಅನುದಾನ	ಮಾಡಿದ ವೆಚ್ಚ	
ವಿವಿಧ ಸಮುದಾಯಗಳ ಅಭಿವೃದ್ಧಿ ಅಡಿಯಲ್ಲಿ ಕರ್ನಾಟಕ ಮರಾಠಾ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ	70.00	15.10	50.00	29.60	50.00	19.80	30.20
ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ	105.00	0.00	60.00	32.90	60.00	0.50	141.00
ಒಟ್ಟು	**295.00**	**20.10**	**225.00**	**67.50**	**184.80**	**83.80**	**412.00**

ಆಕರ: ಇಲಾಖಾ ದಾಖಲೆಗಳು

ಹೀಗೆ, ರಾಜ್ಯದ ಸಂಚಿತ ನಿಧಿಯಲ್ಲಿ ಖರ್ಚು ಮಾಡಲಾಗಿದೆ ಎಂದು ತೋರಿಸಿದ್ದರೂ ಸಹ, ಬಳಕೆಯಾಗದ ₹412 ಕೋಟಿ ಅನುದಾನವು ಸರ್ಕಾರಿ ಖಾತೆಯ ಹೊರಗೆ ನಿಗಮಗಳ ಬ್ಯಾಂಕ್ ಖಾತೆಗಳಲ್ಲಿಯೇ ಉಳಿದಿದೆ.

ಸಿ. ಆಂತರಿಕ ಹಣಕಾಸು ಸಲಹೆಗಾರರ ಪಾತ್ರ

ಜುಲೈ 1982ರಲ್ಲಿ ಕರ್ನಾಟಕ ಸರ್ಕಾರವು ಹೊರಡಿಸಿದ ಅಧಿಸೂಚನೆಯ ಪ್ರಕಾರ, ಆಂತರಿಕ ಹಣಕಾಸು ಸಲಹೆಗಾರರು (ಐಎಫ್ಎ) ಆಯವ್ಯಯ ಅಂದಾಜುಗಳನ್ನು ಸರಿಯಾಗಿ ರೂಪಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ, ಸಮಯದ ವೇಳಾಪಟ್ಟಿಯನ್ನು ಎಚ್ಚರಿಕೆಯಿಂದ ಅನುಸರಿಸಲಾಗುತ್ತದೆ ಮತ್ತು ಎಲ್ಲಾ ಹೊಸ ಯೋಜನೆಗಳು ಅಥವಾ ಹೊಸ ವೆಚ್ಚಗಳು ಇತ್ಯಾದಿಗಳನ್ನು ಪರಿಶೀಲಿಸುತ್ತಾರೆ ಮತ್ತು ಸಲಹೆ ನೀಡುತ್ತಾರೆ. ಇದಲ್ಲದೆ, ಐಎಫ್ಎ, ಆರ್ಥಿಕ ಸಲಹೆ, ಇಲಾಖೆಯ ಆಯವ್ಯಯ ತಯಾರಿಕೆ, ಲೆಕ್ಕಪರಿಶೋಧನಾ ವರದಿಗಳು ಮತ್ತು ತೆಗೆದುಕೊಂಡ ಕ್ರಮ ವರದಿಗಳನ್ನು ಟ್ರ್ಯಾಕ್ ಮಾಡುವುದು ಇತ್ಯಾದಿಗಳ ಬಗ್ಗೆ ಸಲಹೆ ನೀಡುತ್ತದೆ.

ಇದಲ್ಲದೆ, ಹೊರಡಿಸಲಾದ ಸುತ್ತೋಲೆ (ಜುಲೈ 2003) ಐಎಫ್ಎ ಪ್ರತಿ ತಿಂಗಳು ತಮ್ಮ ನಿಯಂತ್ರಣ ಅಧಿಕಾರಿಗಳೊಂದಿಗೆ ಸಭೆ ನಡೆಸಿ ವೆಚ್ಚವನ್ನು ಮೇಲ್ವಿಚಾರಣೆ ಮಾಡಲು, ಉಳಿತಾಯ ಸಾಧ್ಯವಿರುವ ಪ್ರದೇಶಗಳನ್ನು ಗುರುತಿಸಲು ಮತ್ತು ಹಣಕಾಸು ಇಲಾಖೆಗೆ ವರದಿ ಮಾಡಲು ಸೂಚಿಸುತ್ತದೆ. ಅವರು ನಿಕಟವಾಗಿ ನಿಗಾ ಇಡಬೇಕು ಮತ್ತು ವೆಚ್ಚವು ಆಯವ್ಯಯ ಮಿತಿಯೊಳಗೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು ಮತ್ತು ಲೆಕ್ಕಪತ್ರ ಜನರಲ್ ಅಂಕಿಅಂಶಗಳೊಳಗೆ ವೆಚ್ಚದ ಅಂಕಿಅಂಶಗಳನ್ನು ಸಮನ್ವಯಗೊಳಿಸಬೇಕು.

ಸುತ್ತೋಲೆಯಲ್ಲಿ ಸೂಚಿಸಿದಂತೆ ವ್ಯಾಖ್ಯಾನಿಸಲಾದ ಉದ್ದೇಶಕ್ಕಾಗಿ ಐಎಫ್ಎ ಪ್ರತಿ ತಿಂಗಳು ತಮ್ಮ ನಿಯಂತ್ರಣ ಅಧಿಕಾರಿಗಳೊಂದಿಗೆ ಸಭೆ ನಡೆಸಿಲ್ಲ ಎಂದು ದಾಖಲೆಗಳಿಂದ ಗಮನಿಸಲಾಗಿದೆ. ಈ ಅಂಶವು ಅವರ ಉತ್ತರದಿಂದ (ನವೆಂಬರ್ 2025) ದೃಢೀಕರಿಸಲ್ಪಟ್ಟಿದೆ, ಅದರಲ್ಲಿ ಆಯವ್ಯಯ ಪ್ರಸ್ತಾವನೆಗಳನ್ನು ಐಎಫ್ಎ ಮೂಲಕ ರವಾನಿಸಲಾಗುವುದಿಲ್ಲ ಮತ್ತು ಅವುಗಳನ್ನು ನೇರವಾಗಿ ಹಣಕಾಸು ಇಲಾಖೆಗೆ ರವಾನಿಸಲಾಗುತ್ತದೆ ಎಂದು ಹೇಳಲಾಗಿದೆ.

2.7.1.3 ಕೇಂದ್ರ ನೆರವಿನ ನಷ್ಟ

ಪ್ರಧಾನ ಮಂತ್ರಿ ಅನುಸೂಚಿತ್ ಜಾತಿ ಅಭ್ಯುದಯ ಯೋಜನೆ (ಪಿಎಮ್–ಎಜೆಎವೈ) ಗಾಗಿ ಭಾರತ ಸರ್ಕಾರ 2022–25ರ ಅವಧಿಯಲ್ಲಿ ₹398.95 ಕೋಟಿಯನ್ನು ಹಂಚಿಕೆ ಮಾಡಿತ್ತು ಮತ್ತು 2022–23ರಲ್ಲಿ ಮೊದಲ ಕಂತಾಗಿ ₹23.77 ಕೋಟಿಯನ್ನು ಒದಗಿಸಿತ್ತು. ರಾಜ್ಯ ಸರ್ಕಾರವು ಲಭ್ಯವಿರುವ ಹಣವನ್ನು ಬಳಸದಿರುವುದು ಗಮನಕ್ಕೆ ಬಂದಿತು. ಮೊತ್ತವನ್ನು ಬಳಸದ ಕಾರಣ, ಭಾರತ ಸರ್ಕಾರ 2022–23ರಲ್ಲಿ ಅಥವಾ 2023–24ರಲ್ಲಿ ಮುಂದಿನ ಕಂತುಗಳಲ್ಲಿ ಹಣವನ್ನು ಬಿಡುಗಡೆ ಮಾಡಲಿಲ್ಲ. 2024–25ರಲ್ಲಿ, ಮೇಲಿನ ಯೋಜನೆಗಾಗಿ ಭಾರತ ಸರ್ಕಾರವು ₹6.01 ಕೋಟಿಯನ್ನು ಬಿಡುಗಡೆ ಮಾಡಿತು.

2022–23ರ ಮೊದಲ ಕಂತಾಗಿ ಭಾರತ ಸರ್ಕಾರ ಬಿಡುಗಡೆ ಮಾಡಿದ ₹23.77 ಕೋಟಿ ಮೊತ್ತವನ್ನು ಅನುಷ್ಠಾನ ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡಲಾಗಿದೆ ಎಂದು ಇಲಾಖೆ (ಆಗಸ್ಟ್ 2025) ತಿಳಿಸಿದೆ. ಈ ಮಧ್ಯೆ ರಾಜ್ಯ ನೋಡಲ್ ಏಜೆನ್ಸಿಯನ್ನು ಖಜಾನೆ–2 ವೇದಿಕೆಗೆ ಸೇರಿಸಿಕೊಳ್ಳಲಾಗಿದೆ ಎಂದು ಅದು ಹೇಳಿದೆ. ಯೋಜನೆಯನ್ನು ಖಜಾನೆ–2 ನೊಂದಿಗೆ ಸಂಯೋಜಿಸುವಲ್ಲಿನ ವಿಳಂಬ ಮತ್ತು ಯೋಜನೆಯಡಿಯಲ್ಲಿ ಜಿಲ್ಲೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಮಿತಿಗಳನ್ನು ನಿಗದಿಪಡಿಸುವುದರ ವಿಳಂಬವು ನಿಧಿಯ ಬಳಕೆಯಾಗದಿರುವಿಕೆಗೆ ಕಾರಣವಾಗಿದೆ ಎಂದು ಅದು ಹೇಳಿತು.

ಹೀಗಾಗಿ, ನಿಧಿಯ ಬಳಕೆಯ ವಿಳಂಬದಿಂದಾಗಿ ರಾಜ್ಯಕ್ಕೆ ಕೇಂದ್ರ ನೆರವು ನಷ್ಟವಾಯಿತು.

2.7.1.4 ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ರಾಜ್ಯ ಹೊಂದಾಣಿಕೆಯ ಪಾಲನ್ನು ಬಿಡುಗಡೆ ಮಾಡದಿರುವುದು

ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿವಿಧ ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ನಿಗದಿಪಡಿಸಲಾದ ಹಣಕಾಸಿನ ಮಾನದಂಡಗಳ ಪ್ರಕಾರ, ಕೇಂದ್ರ ಸಹಾಯದ ಬಿಡುಗಡೆಯು ರಾಜ್ಯ ಸರ್ಕಾರದ ಹೊಂದಾಣಿಕೆಯ ಪಾಲಿನ ಅನುಪಾತ ಮತ್ತು ಸಕಾಲಿಕ ಬಿಡುಗಡೆಯ ಮೇಲೆ ಷರತ್ತುಬದ್ಧವಾಗಿದೆ.

ಕೇಂದ್ರ ಪ್ರಾಯೋಜಿತ ಯೋಜನೆಯಡಿಯಲ್ಲಿ – ಅಸ್ಪೃಶ್ಯತಾ ನಿರ್ಮೂಲನೆ ಅಡಿಯಲ್ಲಿ, ಸರ್ಕಾರ ಮತ್ತು ಸರ್ಕಾರ ನಡುವೆ ಹಣಕಾಸಿನ ಮಾದರಿಯು 50:50 ಆಗಿದ್ದರೆ, ರಾಜ್ಯ ಸರ್ಕಾರ ₹7.5 ಕೋಟಿ ಬಿಡುಗಡೆ ಮಾಡಿದ್ದರೆ, ಕೇಂದ್ರ ಸರ್ಕಾರವು ₹23.15 ಕೋಟಿ ಬಿಡುಗಡೆ ಮಾಡಿದೆ ಎಂದು ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿದೆ. ಹೀಗಾಗಿ, ಸರ್ಕಾರವು ₹15.65 ಕೋಟಿ ಕಡಿಮೆ ಬಿಡುಗಡೆ ಮಾಡಿದೆ.

ನಿಗದಿತ ನಿಧಿಯ ಮಾನದಂಡಗಳಿಂದ ಈ ವಿಚಲನವು ಯೋಜನೆಯ ಮಾರ್ಗಸೂಚಿಗಳ ಅಡಿಯಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಉಲ್ಲಂಘಿಸುವುದಲ್ಲದೆ, ಭವಿಷ್ಯದ ಕೇಂದ್ರ ಬಿಡುಗಡೆಗಳ ಮೇಲೆ ಪರಿಣಾಮ ಬೀರಬಹುದು ಮತ್ತು ಯೋಜನೆಯ ಅನುಷ್ಠಾನದ ನಿರಂತರತೆಯ ಮೇಲೆ ಪರಿಣಾಮ ಬೀರಬಹುದು.

2.7.1.5 ನಿಗಮಗಳು ಬ್ಯಾಂಕ್ ಖಾತೆಗಳನ್ನು ಮುಚ್ಚದಿರುವುದು

ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ನಿಗಮಗಳಿಗೆ ವರ್ಗಾಯಿಸಲಾದ ನಿಧಿಯ ಲಭ್ಯತೆ ಮತ್ತು ಬಳಕೆಯನ್ನು ಮೇಲ್ವಿಚಾರಣೆ ಮಾಡಲು, ಹಣಕಾಸು ಇಲಾಖೆಯು (28 ಫೆಬ್ರವರಿ 2023) ಆದೇಶವನ್ನು ಹೊರಡಿಸಿತು ಮತ್ತು ನಿಗಮಗಳಿಗೆ ಎಲ್ಲಾ ಬ್ಯಾಂಕ್ ಖಾತೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಚ್ಚಲು ಮತ್ತು ವೈಯಕ್ತಿಕ ಠೇವಣಿ ಖಾತೆಯನ್ನು ತೆರೆಯಲು ನಿರ್ದೇಶಿಸಿತು.

ಆದಾಗ್ಯೂ, ಮೇಲಿನ ನಿರ್ದೇಶನಗಳಿಗೆ ವಿರುದ್ಧವಾಗಿ ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ ಕೆಲವು ನಿಗಮಗಳು ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆದಿದ್ದರೂ ಸಹ 32 ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವುದನ್ನು ಮುಂದುವರೆಸಿದವು. 31 ಮಾರ್ಚ್ 2025 ರಂದು ಈ ಬ್ಯಾಂಕ್ ಖಾತೆಗಳಲ್ಲಿನ ಬಾಕಿ ₹410.43 ಕೋಟಿಗಳಷ್ಟಿತ್ತು (**ಅನುಬಂಧ 2.16**). ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುವ ಬ್ಯಾಂಕ್ ಖಾತೆಗಳ ಮುಂದುವರಿಕೆ ಮತ್ತು ಸರ್ಕಾರಿ ನಿಧಿಗಳ ನಿರ್ವಹಣೆಯು ಖಜಾನೆಯಲ್ಲಿ ಪಿಡಿ ಖಾತೆಗಳನ್ನು ತೆರೆಯುವ ಉದ್ದೇಶವನ್ನು ಸೋಲಿಸುತ್ತದೆ.

ಇದಲ್ಲದೆ, ಸರ್ಕಾರವು ಪಿಎಫ್, ಎಲ್ಐಸಿ, ಎನ್ ಪಿ ಎಸ್ ಮತ್ತು ಇ ಎಸ್ ಸಿ ಆರ್ ಒ ಡಬ್ಲೂ ನಂತಹ ಶಾಸನಬದ್ಧ ಕಡಿತಗಳ ಪಾವತಿಗಾಗಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಮೂರು ತಿಂಗಳವರೆಗೆ ಅನುಮತಿ ನೀಡಿತು (ಆಗಸ್ಟ್ 2024), ಆ ಅವಧಿಯೊಳಗೆ ಖಜಾನೆ ಮತ್ತು ಸಂಬಂಧಪಟ್ಟ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಪರ್ಯಾಯ ವಿಧಾನವನ್ನು ಜಾರಿಗೆ ತರಬೇಕಿತ್ತು. ಆದಾಗ್ಯೂ, ನಿಗಮಗಳು ಪರ್ಯಾಯ ವಿಧಾನವನ್ನು ಗುರುತಿಸದೆ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವುದನ್ನು ಮುಂದುವರೆಸಿದವು.

2.7.1.6 ಸಹಾಯಾನುದಾನ ವಹಿಯನ್ನು ನಿರ್ವಹಿಸದಿರುವುದು

1958ರ ಕರ್ನಾಟಕ ಹಣಕಾಸು ಸಂಹಿತೆಯ ಆರ್ಟಿಕಲ್ 162 (ಸಿ) ಪ್ರಕಾರ, ಈ ಕೆಳಗಿನ ಕಾಲಮ್‌ಗಳನ್ನು ಹೊಂದಿರುವ ಸಹಾಯಾನುದಾನ ವಹಿಯನ್ನು ನಿರ್ವಹಿಸಬೇಕು: (i) ಕ್ರಮ ಸಂಖ್ಯೆ; (ii) ಮಂಜೂರಾತಿ

ಆದೇಶದ ಸಂಖ್ಯೆ ಮತ್ತು ದಿನಾಂಕ: (iii) ಅನುದಾನದ ಉದ್ದೇಶ; (iv) ಅನುದಾನಕ್ಕೆ ಲಗತ್ತಿಸಲಾದ ಷರತ್ತುಗಳು, ಯಾವುದಾದರೂ ಇದ್ದರೆ; (v) ಮಂಜೂರಾದ ಮೊತ್ತ: (vi) ಅನುದಾನಿತರಿಂದ ಬಿಲ್ ಸ್ವೀಕರಿಸಿದ ದಿನಾಂಕ ಮತ್ತು ಅದರ ಮೊತ್ತ; (vii) ಅನುದಾನಕ್ಕೆ ಲಗತ್ತಿಸಲಾದ ಷರತ್ತುಗಳನ್ನು ಅನುದಾನಿತರು ಸ್ವೀಕರಿಸಿದ್ದಾರೆಯೇ; (viii) ಮೇಲು–ಸಹಿ ಮಾಡುವ ಪ್ರಾಧಿಕಾರದ ಸಹಿ ಮತ್ತು ದಿನಾಂಕ; (ix) ಲೆಕ್ಕಪತ್ರ ಇತ್ಯಾದಿಗಳ ಲೆಕ್ಕಪರಿಶೋಧಿತ ಹೇಳಿಕೆಗಳನ್ನು ಅನುದಾನಿತರು ಯಾವ ದಿನಾಂಕದ ಮೂಲಕ ಒದಗಿಸಬೇಕು; (x) ಮಂಜೂರಾತಿ ಪ್ರಾಧಿಕಾರವು ಲೆಕ್ಕಪರಿಶೋಧನಾ ಕಚೇರಿಗೆ ಬಳಕೆಯ ಪ್ರಮಾಣಪತ್ರವನ್ನು ಒದಗಿಸಬೇಕಾದ ದಿನಾಂಕ; (xi) ಲೆಕ್ಕಪತ್ರಗಳ ಲೆಕ್ಕಪರಿಶೋಧಿತ ಹೇಳಿಕೆಗಳನ್ನು ವಾಸ್ತವವಾಗಿ ಸ್ವೀಕರಿಸಿದ ದಿನಾಂಕ. ಅಂತಹ ಹೇಳಿಕೆಗಳನ್ನು ಸ್ವೀಕರಿಸುವಲ್ಲಿ ವಿಳಂಬವಾಗಲು ಕಾರಣಗಳು ಮತ್ತು ಅಂತಹ ಹೇಳಿಕೆಯನ್ನು ತ್ವರಿತಗೊಳಿಸಲು ಮಂಜೂರಾತಿ ಪ್ರಾಧಿಕಾರ/ಮೇಲ್ಸಹಿ ಪ್ರಾಧಿಕಾರವು ಮಾಡಿದ ಪ್ರಯತ್ನಗಳನ್ನು ಸಹ ರಿಜಿಸ್ಟರ್‌ನಲ್ಲಿ ಸೂಚಿಸಬೇಕು; (xii) ಬಳಕೆಯ ಪ್ರಮಾಣಪತ್ರವನ್ನು ಲೆಕ್ಕಪರಿಶೋಧನೆಗೆ ಸಲ್ಲಿಸುವಲ್ಲಿ ವಿಳಂಬವಾದರೆ, ಆಡಿಟ್ ಕಚೇರಿಗೆ ಬಳಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ ದಿನಾಂಕ, ಅದಕ್ಕೆ ಕಾರಣಗಳನ್ನು ಸಹ ಸೂಚಿಸಬೇಕು, (xiii) ವೆಚ್ಚ ಮಾಡದ ಬಾಕಿ, (xiv) ಮಂಜೂರಾತಿ ಪ್ರಾಧಿಕಾರದ ಕಚೇರಿಗೆ ನಿಯತಕಾಲಿಕವಾಗಿ ಭೇಟಿ ನೀಡುವ ಸಮಯದಲ್ಲಿ ಉನ್ನತ ಅಧಿಕಾರಿಯು ರಿಜಿಸ್ಟರ್ ಅನ್ನು ಪರಿಶೀಲಿಸಿದ್ದಾರೆಯೇ. ಅನುದಾನ ಪಡೆಯುವ ಸಂಸ್ಥೆಗಳಿಂದ ಲೆಕ್ಕಪತ್ರಗಳ ಲೆಕ್ಕಪರಿಶೋಧಿತ ಹೇಳಿಕೆಗಳನ್ನು ಸ್ವೀಕರಿಸುವಲ್ಲಿ ಅಥವಾ ಬಳಕೆಯ ಪ್ರಮಾಣಪತ್ರವನ್ನು ಸಲ್ಲಿಸುವಲ್ಲಿ ಯಾವುದೇ ವಿಳಂಬವನ್ನು ನಿರ್ದಿಷ್ಟವಾಗಿ ಅವರ ಗಮನಕ್ಕೆ ತರಬೇಕು. ವಿಳಂಬಕ್ಕೆ ಕಾರಣಗಳ ಬಗ್ಗೆ ಅಕೌಂಟೆಂಟ್ ಜನರಲ್‌ಗೆ ತಿಳಿಸಬೇಕು.

2023–24 ಮತ್ತು 2024–25ರಲ್ಲಿ, ಸಹಾಯಾನುದಾನದ ಅಡಿಯಲ್ಲಿ ₹4,197.63 ಕೋಟಿ ಮತ್ತು ₹4,943.60 ಕೋಟಿ ವೆಚ್ಚವನ್ನು ಮಾಡಲಾಗಿದೆ. ಆದಾಗ್ಯೂ, ಎಲ್ಲಾ ನಾಲ್ಕು ಇಲಾಖೆಗಳ ದಾಖಲೆಗಳನ್ನು ಪರಿಶೀಲಿಸಿದಾಗ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗಳು ಸಹಾಯಾನುದಾನ ವಹಿಯನ್ನು ನಿರ್ವಹಿಸುತ್ತಿಲ್ಲವಾದರೂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ನಿಗದಿತ ನಮೂನೆಯಲ್ಲಿಲ್ಲದಿದ್ದರೂ ಸಹಾಯಾನುದಾನದ ವಹಿಯನ್ನು ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ.

2.8 ತೀರ್ಮಾನ

- 2024–25ರಲ್ಲಿ, 28 ಅನುದಾನಗಳು/ವಿನಿಯೋಗಗಳ ಅಡಿಯಲ್ಲಿ ₹22,475.52 ಕೋಟಿಗಳಷ್ಟು ವೆಚ್ಚ ಮಾಡದ ಅವಕಾಶವು ಹಿಂದಿನ ವರ್ಷಕ್ಕಿಂತ (₹19,262.62 ಕೋಟಿ) ಹೆಚ್ಚಾಗಿದೆ. ಖರ್ಚು ಮಾಡದ ಅವಕಾಶವು ವರ್ಷಕ್ಕೆ ಒದಗಿಸಲಾದ ಒಟ್ಟು ಅನುದಾನಗಳು/ವಿನಿಯೋಗಗಳ (₹4,07,598.10 ಕೋಟಿ) ಸುಮಾರು ಐದು ಪ್ರತಿಶತದಷ್ಟಿದ್ದು, ಹಿಂದಿನ ವರ್ಷದಲ್ಲಿ ಇದು ಶೇ. 5.5ರಷ್ಟಿತ್ತು.
- ಪೂರಕ ಅವಕಾಶವು ಮೂಲ ಆಯವ್ಯಯದ ಶೇ. 7.30ರಷ್ಟಿತ್ತು. ಉಳಿತಾಯ/ಹೆಚ್ಚುವರಿ ವೆಚ್ಚಕ್ಕೆ ಕಾರಣವಾದ ಅನಗತ್ಯ ಮತ್ತು ಅತಿಯಾದ ಪೂರಕ ನಿಬಂಧನೆಯ ಪ್ರಕರಣಗಳು ಇದ್ದವು
- ಶಾಸಕಾಂಗದ ಅನುಮೋದನೆಗೆ ಮುಂಚಿತವಾಗಿ ₹10,035.13 ಕೋಟಿಗಳ ವೆಚ್ಚಕ್ಕಾಗಿ ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸಲಾಯಿತು, ಇದು ಬಂಡವಾಳ / ಕಂದಾಯ ವಿಭಾಗದ ಅಡಿಯಲ್ಲಿ 21 ಅನುದಾನಗಳನ್ನು ಒಳಗೊಂಡಿದೆ. ಇದು ಒಟ್ಟು ಪೂರಕ ಅಂದಾಜಿನ ಶೇಕಡಾ 36.21ರಷ್ಟಿತ್ತು. ಇದು ಭಾರತದ ಸಂವಿಧಾನದ 266(3)ನೇ ವಿಧಿಗೆ ವಿರುದ್ಧವಾಗಿತ್ತು.
- 2024–25ನೇ ಸಾಲಿಗೆ ಮೂರು ಅನುದಾನಗಳ ಅಡಿಯಲ್ಲಿ ಮಾಡಿದ ₹4,388.75 ಕೋಟಿ ಹೆಚ್ಚುವರಿ ವೆಚ್ಚವನ್ನು ಸಂವಿಧಾನದ 205 ನೇ ವಿಧಿಯ ಅಡಿಯಲ್ಲಿ ಸಕ್ರಮಗೊಳಿಸಬೇಕಾಗಿದೆ. 2020–21, 2022–23 ಮತ್ತು 2023–24ನೇ ಸಾಲಿಗೆ ₹5,175.21 ಕೋಟಿ ಮೊತ್ತವನ್ನು ಇನ್ನೂ ಸಕ್ರಮಗೊಳಿಸಬೇಕಾಗಿದೆ.
- ಎಲ್ಲಾ 28 ಅನುದಾನಗಳ ಅಡಿಯಲ್ಲಿ, ವರ್ಷದ ಕೊನೆಯ ದಿನದಂದು ಅಂದರೆ ಮಾರ್ಚ್ 31, 2025ರಂದು ₹33,106.23 ಕೋಟಿ ಮೊತ್ತದ ಪುನರ್ವಿನಿಯೋಗ ಆದೇಶಗಳನ್ನು ಹೊರಡಿಸಲಾಗಿದೆ.

- ₹2,020.87 ಕೋಟಿ ಆದಾಯ ವೆಚ್ಚವನ್ನು ಬಂಡವಾಳ ವೆಚ್ಚವಾಗಿ ಮತ್ತು ₹72.46 ಕೋಟಿ ಬಂಡವಾಳ ವೆಚ್ಚವನ್ನು ಆದಾಯ ವೆಚ್ಚವಾಗಿ ತಪ್ಪಾಗಿ ವರ್ಗೀಕರಿಸಿದ ಪರಿಣಾಮವಾಗಿ ರಾಜಸ್ವ ವೆಚ್ಚ ಮತ್ತು ₹1,948.41 ಕೋಟಿ ರಾಜಸ್ವ ಕೊರತೆ ಯನ್ನು ಕಡಿಮೆ ಹೇಳುವಲ್ಲಿ ಪರಿಣಮಿಸಿತು.

2.9 ಶಿಫಾರಸುಗಳು

- ***ಸಾಂವಿಧಾನಿಕ ನಿಬಂಧನೆಗಳ ಉಲ್ಲಂಘನೆಯಾಗಿ, ಶಾಸಕಾಂಗದ ಅನುಮೋದನೆಯ ಮೊದಲು ವೆಚ್ಚವನ್ನು ಭರಿಸಲು ಕಾರ್ಯಕಾರಿ ಮಾರ್ಗವನ್ನು ಆಶ್ರಯಿಸುವುದನ್ನು ತಪ್ಪಿಸಬೇಕು.***
- ***ರಾಜ್ಯ ಸರ್ಕಾರವು ಹೆಚ್ಚುವರಿ ವೆಚ್ಚಕ್ಕೆ ಕಾರಣಗಳನ್ನು ವಿಶ್ಲೇಷಿಸಬೇಕು ಮತ್ತು ಭವಿಷ್ಯದಲ್ಲಿ ಅಂತಹ ಘಟನೆಗಳನ್ನು ತಪ್ಪಿಸಲು ಅದರ ಆಯವ್ಯಯ ತಯಾರಿಕೆಯ ಕೆಲಸ ಮಾಡಬೇಕು.***

ಅಧ್ಯಾಯ 3

ಆರ್ಥಿಕ ನಿರೂಪಣಾ ಪದ್ಧತಿಗಳು

3

ಆರ್ಥಿಕ ನಿರೂಪಣಾ ಪದ್ಧತಿಗಳು

ಈ ಅಧ್ಯಾಯವು ರಾಜ್ಯ ಸರ್ಕಾರದ ವಿವಿಧ ಪ್ರಾಧಿಕಾರಗಳು ಸಲ್ಲಿಸಿದ ರಾಜ್ಯ ಸರ್ಕಾರದ ಲೆಕ್ಕಗಳ ಗುಣಮಟ್ಟ ಮತ್ತು ನಿಗದಿತ ಹಣಕಾಸು ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳ ಅನುಸರಣೆಯ ಅವಲೋಕನ ಮತ್ತು ಸ್ಥಿತಿಯನ್ನು ಒದಗಿಸುತ್ತದೆ.

ಹಣಕಾಸಿನ ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳ ಅನುಸರಣೆ ಮತ್ತು ಅಂತಹ ಅನುಸರಣೆಯ ಸ್ಥಿತಿಯ ಬಗ್ಗೆ ವರದಿ ಸಲ್ಲಿಸುವಲ್ಲಿ ಪೂರ್ಣತೆ, ಸಮಯೋಚಿತತೆ ಮತ್ತು ಗುಣಮಟ್ಟವು ಹಣಕಾಸು ವರದಿಗಳಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ಪ್ರಸ್ತುತತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ.

ಲೆಕ್ಕಗಳ ಸಂಪೂರ್ಣತೆಗೆ ಸಂಬಂಧಿಸಿದ ಅವಲೋಕನಗಳು

3.1 ರಾಜ್ಯ ಸರ್ಕಾರಿ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು (ಪಿಎಸ್‌ಯು) ಮತ್ತು ಪ್ರಾಧಿಕಾರಿಗಳ ಆಯವ್ಯಯೇತರ ಸಾಲಗಳು

ಭಾರತ ಸಂವಿಧಾನದ 293 (3)ನೇ ವಿಧಿಯು ಭಾರತ ಸರ್ಕಾರದಿಂದ ಯಾವುದೇ ಬಾಕಿ ಸಾಲಗಳು ಅಥವಾ ಖಾತರಿಗಳನ್ನು ಹೊಂದಿದ್ದರೆ ರಾಜ್ಯ ಸರ್ಕಾರ ಸಾಲ ಪಡೆಯಲು ಭಾರತ ಸರ್ಕಾರದ ಒಪ್ಪಿಗೆಯನ್ನು ಕಡ್ಡಾಯಗೊಳಿಸುತ್ತದೆ. ಇದಲ್ಲದೆ, 2023–24 ರಿಂದ 2025–26 ರವರೆಗೆ ರಾಜ್ಯ ಸರ್ಕಾರಗಳಿಗೆ ಸಾಮಾನ್ಯ ನಿವ್ವಳ ಸಾಲ ಮಿತಿಯನ್ನು (ಎನ್‌ಬಿಸಿ) ಜಿಎಸ್‌ಡಿಪಿಯ ಶೇಕಡಾ ಮೂರಕ್ಕೆ ನಿಗದಿಪಡಿಸಬಹುದು ಎಂದು ಹದಿನೈದನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ.

ರಾಜ್ಯ ಸರ್ಕಾರವು ಅಂತಹ ಸಾಲಗಳ ಮರುಪಾವತಿಗೆ ಜವಾಬ್ದಾರಿಯಾಗಿದ್ದರೂ, ವಿವಿಧ ರಾಜ್ಯ ಸರ್ಕಾರಿ ಸಾರ್ವಜನಿಕ ಕ್ಷೇತ್ರದದ ಉದ್ಯಮಗಳು(ಎಸ್‌ಪಿಎಸ್‌ಯು) / ನಿಗಮಗಳು / ಇತರ ಸಂಸ್ಥೆಗಳ ಸಾಲಗಳನ್ನು ಆಯವ್ಯಯೇತರ ಸಾಲಗಳನ್ನಾಗಿ ಕಳುಹಿಸುವ ಮೂಲಕ ಸರ್ಕಾರದ ಹಣಕಾಸಿನ ಆರೋಗ್ಯ ಮತ್ತು ಪಾರದರ್ಶಕತೆಗೆ ಗಣನೀಯ ಅಪಾಯವನ್ನುಂಟುಮಾಡುತ್ತದೆ. ರಾಜ್ಯ ಸರ್ಕಾರಗಳ ಹಣಕಾಸು ವರ್ಷದ ಸಾಲದ ಮಿತಿಯನ್ನು ಈಗ ಆಯವ್ಯಯೇತರ ಸಾಲಗಳ ಮಟ್ಟಿಗೆ ಭಾರತ ಸರ್ಕಾರವು ಕಡಿಮೆ ಮಾಡುತ್ತಿದೆ.

ಕೆಎಫ್‌ಆರ್‌ಎ, 2002ಕ್ಕೆ ತಿದ್ದುಪಡಿ ಫೆಬ್ರವರಿ 2014 ಮಾಡುವ ಮೂಲಕ, ಪರಿಚ್ಛೇದ–2(ಜಿ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಒಟ್ಟು ಬಾಧ್ಯತೆಗಳ ವ್ಯಾಪ್ತಿಯನ್ನು ಎಸ್‌ಪಿಎಸ್‌ಯುಗಳು ಮತ್ತು ವಿಶೇಷ ಉದ್ದೇಶದ ವಾಹನಗಳು (ಎಸ್‌ಪಿವಿಗಳು) ಮತ್ತು ಇತರ ಸಮಾನ ಸಾಧನಗಳಿಂದ ರಾಜ್ಯ ಆಯವ್ಯಯದಿಂದ ಅಸಲು ಮತ್ತು / ಅಥವಾ ಬಡ್ಡಿಯನ್ನು ಸೇರಿಸಲು ವರ್ಧಿಸಲಾಯಿತು. ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹಣಕಾಸು ಆಯೋಗಗಳು ಸೂಚಿಸಿದ ನಿಯತಾಂಕಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಹಣಕಾಸಿನ ಪರಿಸ್ಥಿತಿಯ ಆಧಾರದ ಮೇಲೆ ಕೆಎಫ್‌ಆರ್‌ಎಗೆ ತಿದ್ದುಪಡಿ ಮಾಡುತ್ತಿದೆ. ರಾಜ್ಯದಲ್ಲಿ, ಇವುಗಳನ್ನು ಆಯವ್ಯಯ ಅವಲೋಕನದಲ್ಲಿ ಮತ್ತು ಮಧ್ಯಮಾವಧಿ ವಿತ್ತೀಯ ಯೋಜನೆ (ಎಂಟಿಎಫ್‌ಪಿ)ಗಳಲ್ಲಿ ಬಹಿರಂಗಪಡಿಸಲಾಗಿದೆ.

2024–25ನೇ ಸಾಲಿಗೆ, ಸಾಲದ ದಾಸ್ತಾನನ್ನು ಎಂಟಿಎಫ್‌ಪಿ ಅಡಿಯಲ್ಲಿ ಜಿಎಸ್‌ಡಿಪಿಯ ಶೇಕಡಾ 23.24ರಷ್ಟು ಮತ್ತು ಎಫ್‌ಆರ್‌ಬಿಎಂ ಕಾಯ್ದೆಯಡಿ ಶೇಕಡಾ 25ರಷ್ಟು ಎಂದು ಗುರಿಯಾಗಿಸಲಾಗಿದೆ.

ಇದಲ್ಲದೆ, ಭಾರತ ಸರ್ಕಾರವು 2024–25ರಲ್ಲಿ ರಾಜ್ಯಕ್ಕೆ ₹ 85,858 ಕೋಟಿ ಸಾಲದ ಮಿತಿಯನ್ನು (ಜಿಎಸ್‌ಡಿಪಿಯ ಶೇಕಡಾ ಮೂರರಷ್ಟು) ನಿಗದಿಪಡಿಸಿದೆ.

ರಾಜ್ಯ ಸರ್ಕಾರದಿಂದ ನೀಡಲಾದ ಹಾಗೂ ಹಣಕಾಸು ಖಾತೆಗಳ ಭಾಗವಾಗಿರುವ ಮಾಹಿತಿಯ ಪ್ರಕಾರ, 31 ಮಾರ್ಚ್ 2025 ರವರೆಗೆ ಬಾಕಿ ಇರುವ ಆಯವ್ಯಯದ ಸಾಲವು ₹ 14,154.91 ಕೋಟಿಗಳಷ್ಟಿತ್ತು. 2024–25ರಲ್ಲಿ ಪಡೆದ ₹ 5,437.78 ಕೋಟಿಗಳ ಸಾಲವೂ ಒಳಗೊಂಡಿದೆ. ಇದರ ವಿವರಗಳನ್ನು **ಕೋಷ್ಟಕ** 3.1ರಲ್ಲಿ ನೀಡಲಾಗಿದೆ.

ಕೋಷ್ಟಕ 3.1: ರಾಜ್ಯ ಸರ್ಕಾರ ಬಹಿರಂಗಪಡಿಸಿದಂತೆ 31 ಮಾರ್ಚ್ 2025ರಂತೆ ಆಯವ್ಯಯೇತರ ಸಾಲಗಳ ವಿವರಗಳು

(₹ ಕೋಟಿಗಳಲ್ಲಿ)

ಸರ್ಕಾರದ ಪರವಾಗಿ ಸಾಲ ಪಡೆದ ಕಂಪನಿ/ನಿಗಮಗಳು	ಮಂಜೂರಾದ ಸಾಲ	ವಿತರಿಸಿದ ಸಾಲ	ಸಾಲದ ಉದ್ದೇಶ	31 ಮಾರ್ಚ್ 2025ರಂತೆ ಬಾಕಿ ಇರುವ ಸಾಲ
ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ	–	1,400.00	–	2,652.11
ಕರ್ನಾಟಕ ನೀರಾವರಿ ನಿಗಮ ನಿಯಮಿತ	–	1,456.44	–	2,128.28
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ	180.08	25.54	ರಸ್ತೆ ಯೋಜನೆಗಳ ನಿರ್ಮಾಣ	862.28
ಕಾವೇರಿ ನೀರಾವರಿ ನಿಗಮ ನಿಯಮಿತ	–	825.00	–	1,425.00
ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ	–	224.52	–	477.02
ವಿಶ್ವೇಶ್ವರಾಯ ಜಲ ನಿಗಮ ನಿಯಮಿತ	–	735.69	–	1,072.72
ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ	–	93.88	–	279.80
ಪವರ್ ಕಂಪನಿ ಆಫ್ ಕರ್ನಾಟಕ ನಿಯಮಿತ	5,257.70	–	2015 ರಿಂದ 2023 ರವರೆಗೆ ಗ್ರಾಮ ಪಂಚಾಯಿತಿ ಬಾಕಿಗಳ ಭದ್ರತೆ.	5,257.70
ಒಟ್ಟು	**5,437.78**	**4,761.07**		**14,154.91**

ಆಕರ: ರಾಜ್ಯ ಆರ್ಥಿಕ ಇಲಾಖೆ ಮತ್ತು ಹಣಕಾಸು ಲೆಕ್ಕಗಳು ಒದಗಿಸಿದ ಮಾಹಿತಿ

3.2 ಸರ್ಕಾರ ಪಾವತಿಸದಿರುವ ಹೊಣೆಗಾರಿಕೆ

ಸಂಗ್ರಹಿಸಿದ ಸೆಸ್‌ನ್ನು ನಿಗದಿತ ಸಂಸ್ಥೆಗಳಿಗೆ ವರ್ಗಾಯಿಸದಿರುವುದು ಅಥವಾ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್)ಗೆ ಕಡಿಮೆ ಪ್ರಮಾಣದಲ್ಲಿ ಹಣ ಜಮಾ ಮಾಡಿರುವುದು ಮೊದಲಾದ ಪಾವತಿಸದಿರುವ ಹೊಣೆಗಾರಿಕೆಗಳು ದೀರ್ಘಾವಧಿಯಲ್ಲಿ ಮಹತ್ವದ ಹಣಕಾಸು ಹಾಗೂ ಆಡಳಿತಾತ್ಮಕ ಪರಿಣಾಮಗಳನ್ನು ಉಂಟುಮಾಡಬಹುದು. ಇಂತಹ ಪಾವತಿಸದ ಹೊಣೆಗಾರಿಕೆಗಳು ಕಾಲಕ್ರಮೇಣ ಸಂಗ್ರಹವಾಗಿ, ರಾಜ್ಯದ ನಿಜವಾದ ಹಣಕಾಸು ಸ್ಥಿತಿಯನ್ನು ವಿಕೃತಗೊಳಿಸುವ ಅಡಗಿದ ಹೊಣೆಗಾರಿಕೆಗಳಾಗಿ ರೂಪುಗೊಳ್ಳುತ್ತವೆ. ಇದಲ್ಲದೆ, ಸೆಸ್ ವರ್ಗಾವಣೆಯಲ್ಲಿ ಉಂಟಾಗುವ ವಿಳಂಬವು ಅದರ ಮೂಲಕ ಸಾಧಿಸಬೇಕಾಗಿದ್ದ ಅಭಿವೃದ್ಧಿ ಅಥವಾ ಕಲ್ಯಾಣಕಾರಿ ಉದ್ದೇಶಗಳನ್ನು ಹಿನ್ನಡೆಗೊಳಿಸಿ, ಅಂತಹ ವಿಧಿಸಲಾದ ಸೆಸ್‌ಗಳ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಅದೇ ರೀತಿ, ಎನ್‌ಪಿಎಸ್‌ಗೆ ಕಡಿಮೆ ಪ್ರಮಾಣದಲ್ಲಿ ಹಣ ವರ್ಗಾಯಿಸುವುದು ಕಾನೂನುಬದ್ಧ ಹೊಣೆಗಾರಿಕೆಗಳ ಉಲ್ಲಂಘನೆಯಾಗುವುದರ ಜೊತೆಗೆ, ನೌಕರರ ಹಣಕಾಸು ಭದ್ರತೆಯನ್ನು ಹಾನಿಗೊಳಿಸುತ್ತದೆ. ವರ್ಷಗಳಿಂದಲೂ ಇಂತಹ ಕ್ರಮಗಳು ಸಾರ್ವಜನಿಕ ನಂಬಿಕೆಯನ್ನು ಕುಂದಿಸುವುದರ ಜೊತೆಗೆ, ಕಾನೂನುಬದ್ಧ ಹೊಣೆಗಾರಿಕೆಗಳನ್ನು ಉಂಟುಮಾಡಿ, ಭವಿಷ್ಯದಲ್ಲಿ ಹೆಚ್ಚುವರಿ ವೆಚ್ಚದ ಒತ್ತಡವನ್ನು ಸೃಷ್ಟಿಸಬಹುದು ಮತ್ತು ಇದರಿಂದ ಹಣಕಾಸು ಅವಕಾಶ ವಲಯ ಸೀಮಿತಗೊಂಡು, ಹಣಕಾಸು ಸ್ಥಿರತೆ ದುರ್ಬಲಗೊಳ್ಳುತ್ತದೆ. ಇಂತಹ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

3.2.1 ಪಾವತಿಸದಿರುವ ಬಡ್ಡಿ ಹೊಣೆಗಾರಿಕೆಗಳು

ಬಡ್ಡಿ ಇರುವ ಠೇವಣಿಗಳು / ಮೀಸಲು ನಿಧಿಗಳಲ್ಲಿನ ಮೊತ್ತದ ಮೇಲೆ ಬಡ್ಡಿಯನ್ನು ಒದಗಿಸುವ ಮತ್ತು ಪಾವತಿಸುವ ಹೊಣೆಗಾರಿಕೆಯನ್ನು ಸರ್ಕಾರ ಹೊಂದಿರುತ್ತದೆ.

ಪರಿಶೀಲನೆಯಾದಂತೆ, 1 ಏಪ್ರಿಲ್ 2024ರ ವೇಳೆಗೆ ಬಡ್ಡಿ ವಹಿಸುವ ಠೇವಣಿಗಳು / ಮೀಸಲು ನಿಧಿಗಳಲ್ಲಿ

₹1,017.20 ಕೋಟಿ ಮೊತ್ತಕ್ಕೆ ₹57.48 ಕೋಟಿ ಬಡ್ಡಿ ಪಾವತಿಸಬೇಕಾಗಿತ್ತು, ಇದು **ಕೋಷ್ಟಕ 3.2** ನಲ್ಲಿ ನೀಡಲಾಗಿದೆ. ಬಡ್ಡಿ ಬಾಧ್ಯತೆಯನ್ನು ಪಾವತಿಸದಿರುವುದರಿಂದ, ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯನ್ನು ಕಡಿಮೆ ತೋರಿಸಲಾಗಿದೆ.

ಕೋಷ್ಟಕ 3.2: ಬಡ್ಡಿ ಹೊಂದಿರುವ ಠೇವಣಿಗಳು/ಮೀಸಲು ನಿಧಿಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡದ ಬಡ್ಡಿ ಹೊಣೆಗಾರಿಕೆಯ ವಿವರಗಳು

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಬಡ್ಡಿ ನೀಡುವ ಠೇವಣಿಯ ಹೆಸರು	1 ಏಪ್ರಿಲ್ 2024 ರಂತೆ ಆರಂಭಿಕ ಬಾಕಿ	ಬಡ್ಡಿಯ ಲೆಕ್ಕಾಚಾರದ ಆಧಾರ	ಒದಗಿಸಲಾಗದ ಬಡ್ಡಿಯ ಮೊತ್ತ
1	ಸರ್ಕಾರಿ ನೌಕರರಿಗಾಗಿ ನಿರ್ದಿಷ್ಟ ಕೊಡುಗೆ ಪಿಂಚಣಿ ಯೋಜನೆ	15.25	ರಾಜ್ಯ ಸರ್ಕಾರದಿಂದ ಆದೇಶಗಳು ಬರದ ಕಾರಣ ಬಡ್ಡಿಯನ್ನು ವಾರ್ಷಿಕ ಶೇಕಡಾ 7.1ರಷ್ಟು ದರದಲ್ಲಿ(ಮಾಸಿಕ ಆಧಾರದಲ್ಲಿ) ಲೆಕ್ಕಹಾಕಲಾಗಿದೆ.	4.34
2	ರಾಜ್ಯ ಪರಿಹಾರ ಅರಣ್ಯೀಕರಣ ನಿಧಿ	764.85	ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಹೊರಡಿಸಿದ ಸುತ್ತೋಲೆಗಳ ಪ್ರಕಾರ, ಇದು 2024–25ಕ್ಕೆ ಶೇಕಡಾ 3.35 ರಷ್ಟಿದೆ.	33.08
3	ರಾಜ್ಯ ವಿಪತ್ತು ಪರಿಹಾರ ನಿಧಿ	237.10	ಆರ್‌ಬಿಐ ಓವರ್‌ಡ್ರಾಫ್ಟ್‌ಗೆ ವಿಧಿಸಿರುವ ಬಡ್ಡಿ ದರ (ರೆಪೋ ದರ + 2) ಶೇಕಡಾ 8.46 ರಷ್ಟಿದೆ	20.06
ಒಟ್ಟು		**1,017.20**		**57.48**

ಆಕರ: ಹಣಕಾಸು ಲೆಕ್ಕಗಳು 2024–25

3.2.2 ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯಲ್ಲಿ ಕಡಿಮೆ ಕೊಡುಗೆ

ನಿರ್ದಿಷ್ಟ ಕೊಡುಗೆ ಪಿಂಚಣಿ ಯೋಜನೆ ಅಥವಾ ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್), 01 ಏಪ್ರಿಲ್ 2006ರ ನಂತರ ರಾಜ್ಯ ಸರ್ಕಾರದ ಸೇವೆಗೆ ಸೇರಿರುವ ಎಲ್ಲಾ ನೌಕರರಿಗೆ ಅನ್ವಯಿಸುತ್ತದೆ ಮತ್ತು 01 ಏಪ್ರಿಲ್ 2010ರಿಂದ ರಾಜ್ಯದಲ್ಲಿ ಸಂಪೂರ್ಣವಾಗಿ ಕಾರ್ಯಗತವಾಗಿದೆ. ರಾಜ್ಯದಲ್ಲಿ ಎನ್‌ಪಿಎಸ್ ಅನ್ನು ಕಾರ್ಯಗತಗೊಳಿಸಲು ಖಜಾನೆ ಆಯುಕ್ತಾಲಯದ ಅಡಿಯಲ್ಲಿ ಸಮರ್ಪಿತ ಎನ್‌ಪಿಎಸ್ ಕೋಶವನ್ನು ಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರವು ಪಿಂಚಣಿ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ವಿನ್ಯಾಸಗೊಳಿಸಿದ ಎನ್‌ಪಿಎಸ್ ವಿನ್ಯಾಸವನ್ನು ಅಳವಡಿಸಿಕೊಂಡಿದೆ ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ನಿಯಮಿತ (ಎನ್‌ಎಸ್‌ಡಿಎಲ್) ಅನ್ನು ಎನ್‌ಪಿಎಸ್‌ಗಾಗಿ ಕೇಂದ್ರ ದಾಖಲೆ ನಿರ್ವಹಣಾ ಸಂಸ್ಥೆ (ಸಿಆರ್‌ಎ) ಆಗಿ ನೇಮಿಸಿದೆ. ಆಕ್ಸಿಸ್ ಬ್ಯಾಂಕ್ ಪಿಂಚಣಿ ನಿಧಿಗಳ ಕಾರ್ಯಾಚರಣೆಯ ಉಸ್ತುವಾರಿ ಹೊಂದಿರುವ ಟ್ರಸ್ಟಿ ಬ್ಯಾಂಕ್ ಆಗಿದೆ.

2024–25ರ ಅವಧಿಯಲ್ಲಿ, ರಾಜ್ಯ ಸರ್ಕಾರ ಮತ್ತು ನೌಕರರಿಂದ ಸಲ್ಲಿಸಲಾದ ಕೊಡುಗೆಗಳು (ನಿಯಮಿತ ಮತ್ತು ಹಿಂದಿನ ಬಾಕಿ[2] ಸೇರಿದಂತೆ) ಖಜಾನೆ ಆಯುಕ್ತರಿಂದ (ಸೆಪ್ಟೆಂಬರ್ 2025) ನೀಡಿದ ಮಾಹಿತಿಯ ಪ್ರಕಾರ ಕ್ರಮವಾಗಿ ₹2,612.04 ಕೋಟಿ ಮತ್ತು ₹1,865.36 ಕೋಟಿ ಆಗಿವೆ.

ಮಹಾಲೇಖಪಾಲರು (ಎ ಮತ್ತು ಇ) ಕಚೇರಿಯಲ್ಲಿ ನಿರ್ವಹಿಸಲಾದ ದಾಖಲೆಗಳ ಪ್ರಕಾರ, ಸರ್ಕಾರದ ಕೊಡುಗೆ ₹2,615.40 ಕೋಟಿ ಮತ್ತು ನೌಕರರ ಕೊಡುಗೆ (ನಿಯಮಿತ ಮತ್ತು ಹಿಂದಿನ ಬಾಕಿ) ₹1,923.65 ಕೋಟಿ ಆಗಿದೆ.

ಆದ್ದರಿಂದ, ಮಹಾಲೇಖಪಾಲರು (ಎ ಮತ್ತು ಇ) ಕಚೇರಿ ಮತ್ತು ಖಜಾನೆ ಆಯುಕ್ತರ ಎನ್‌ಪಿಎಸ್ ಸೆಲ್‌ನಲ್ಲಿ ದಾಖಲಿಸಿದ ಅಂಕೆಗಳ ನಡುವೆ ₹61.65 ಕೋಟಿ ವ್ಯತ್ಯಾಸವಿದ್ದು, ಅದನ್ನು ಹೊಂದಿಸುವ ಅಗತ್ಯವಿದೆ.

ಇದಲ್ಲದೆ, ಮಹಾಲೇಖಪಾಲರು (ಎ ಮತ್ತು ಇ) ಕಚೇರಿಯ ದಾಖಲಾತಿಗಳ ಪ್ರಕಾರ, 2024–25ರಲ್ಲಿ ಎನ್‌ಪಿಎಸ್‌ಗೆ ಒಟ್ಟು ₹4,539.05 ಕೋಟಿ ಕೊಡುಗೆಯಲ್ಲಿ, ₹4,532.45 ಕೋಟಿ ಎನ್‌ಎಸ್‌ಡಿಎಲ್‌ಗೆ

[2] ಯೋಜನೆ ಜಾರಿಗೆ ಬಂದ ದಿನಾಂಕದವರೆಗೆ, ಉದ್ಯೋಗಿ ಸೇವೆಗೆ ಸೇರಿದ ದಿನಾಂಕದಿಂದ ಅವನು ನೀಡಬೇಕಾಗಿದ್ದ ಕೊಡುಗೆಯನ್ನು ಸೂಚಿಸುತ್ತದೆ.

ವರ್ಗಾಯಿಸಲಾಗಿದ್ದು, ಸಾರ್ವಜನಿಕ ಖಾತೆಯಲ್ಲಿ ₹ 6.60 ಕೋಟಿ ಬಾಕಿಯಾಗಿ ಉಳಿದಿದೆ ಎಂದು ಗಮನಿಸಲಾಗಿದೆ. ಮಾರ್ಚ್ 2025ರ ಅಂತ್ಯದ ವೇಳೆಗೆ ಎನ್‌ಎಸ್‌ಡಿಎಲ್‌ಗೆ ವರ್ಗಾಯಿಸಬೇಕಾದ ಒಟ್ಟು ಮೊತ್ತ ₹ 21.85 ಕೋಟಿ ಆಗಿತ್ತು.

3.2.3 ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಸೆಸ್ ವರ್ಗಾವಣೆ ಮಾಡದಿರುವುದು

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಸೆಸ್ ಅಧಿನಿಯಮ, 1996ರ ಪರಿಚ್ಛೇದ 3(1)ರ ಪ್ರಕಾರ ಮತ್ತು ಕರ್ನಾಟಕ ಸರ್ಕಾರದ ಕಟ್ಟಡ ಮತ್ತು ಇತರ ನಿರ್ಮಾಣ ನೌಕರರ ನಿಯಮಗಳು 2006ರ ಅನುಸಾರವಾಗಿ, ಭೂಮಿಯ ವೆಚ್ಚ ಮತ್ತು ಕಾರ್ಮಿಕರ ಪರಿಹಾರ ಅಧಿನಿಯಮ 1923ಯ ಅಡಿಯಲ್ಲಿ ಪಾವತಿಸಬೇಕಾದ ಯಾವುದೇ ಪರಿಹಾರವನ್ನು ಹೊರತುಪಡಿಸಿ, ಉದ್ಯೋಗದಾತರು/ಬಿಲ್ಡರ್‌ಗಳು ಮಾಡಿದ ನಿರ್ಮಾಣ ವೆಚ್ಚದ ಶೇಕಡಾ ಒಂದರ ದರದಲ್ಲಿ ನೌಕರರ ಸೆಸ್‌ಅನ್ನು ಸಂಗ್ರಹಿಸಬೇಕು. ಎಲ್ಲಾ ಇಲಾಖೆಗಳು, ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಹತ್ತು ಲಕ್ಷಕ್ಕಿಂತ ಹೆಚ್ಚು ವೆಚ್ಚದ ಅನುಮೋದಿತ ವಸತಿ ಕಟ್ಟಡ ಯೋಜನೆಗಳನ್ನು ಹೊಂದಿರುವ ವ್ಯಕ್ತಿಗಳು ಸೇರಿದಂತೆ ಎಲ್ಲಾ ನಿರ್ಮಾಣ ಚಟುವಟಿಕೆಗಳ ಮೇಲೆ ಈ ಸೆಸ್ ಅನ್ನು ಸಂಗ್ರಹಿಸಲು ಮತ್ತು ಅದನ್ನು ರಾಜ್ಯಗಳ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಠೇವಣಿ ಇಡಲು ನಿರ್ದೇಶಿಸಲಾಯಿತು. ಸಂಗ್ರಹಿಸಿದ ಸೆಸ್ ಅನ್ನು ರಾಜ್ಯದ ಕಟ್ಟಡ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಯೋಜನೆಗಳಿಗೆ ಬಳಸಲು ಉದ್ದೇಶಿಸಲಾಗಿದೆ.

2024–25ರ ಹಣಕಾಸು ವರ್ಷದಲ್ಲಿ, ಪ್ರಮುಖ ಶೀರ್ಷಿಕೆ 8449 – ನಾಗರಿಕ ಠೇವಣಿಗಳ ಅಡಿಯಲ್ಲಿ ₹ 499.09 ಕೋಟಿಯನ್ನು ಸಂಗ್ರಹಿಸಲಾಗಿದೆ ಮತ್ತು ₹ 707.17 ಕೋಟಿಗಳನ್ನು (ಹಿಂದಿನ ವರ್ಷದ ಬಾಕಿ ಸೇರಿದಂತೆ) ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ವರ್ಗಾಯಿಸಲಾಗಿದೆ. ಕಲ್ಯಾಣ ಮಂಡಳಿಗೆ ವರ್ಗಾಯಿಸಬೇಕಾದ ₹ 640.44 ಕೋಟಿ ನಿಧಿಯು ಮುಕ್ತಾಯದ ಬಾಕಿಯಾಗಿತ್ತು.

3.2.4 ರಾಷ್ಟ್ರೀಯ ಖನಿಜ ಪರಿಶೋಧನಾ ಟ್ರಸ್ಟ್ ನಿಧಿ

ರಾಷ್ಟ್ರೀಯ ಖನಿಜ ಪರಿಶೋಧನಾ ಟ್ರಸ್ಟ್ (ಎನ್‌ಎಂಇಟಿ) ಅನ್ನು ಎಂಎಂಡಿಆರ್ ಅಧಿನಿಯಮ, 1957 ರ ಪರಿಚ್ಛೇದ 9ಸಿ ಅಡಿಯಲ್ಲಿ ಆಗಸ್ಟ್ 2015 ರಲ್ಲಿ ಸ್ಥಾಪಿಸಲಾಯಿತು. ಈ ಅಧಿನಿಯಮದ ಪರಿಚ್ಛೇದ 9ಸಿ (4) ರ ಪ್ರಕಾರ, ಗಣಿಗಾರಿಕೆ ಪರವಾನಗಿ ಅಥವಾ ಖನಿಜ ರಿಯಾಯಿತಿಯನ್ನು ಹೊಂದಿರುವವರು ಟ್ರಸ್ಟ್‌ಗೆ ಪಾವತಿಸಿದ ರಾಯಧನದ ಶೇಕಡಾ ಎರಡರಷ್ಟು ಮೊತ್ತವನ್ನು ಕೊಡುಗೆಯಾಗಿ ನೀಡಬೇಕಾಗುತ್ತದೆ. ಎನ್‌ಎಂಇಟಿ ನಿಯಮಗಳ ಪ್ರಕಾರ, ಈ ಕೊಡುಗೆಗಳನ್ನು ಸಂಗ್ರಹಿಸುವುದು, ಅವುಗಳನ್ನು ಲೆಕ್ಕ ಶೀರ್ಷಿಕೆ '8449–123–ಎನ್‌ಎಂಇಟಿ ಠೇವಣಿಗಳು' ಅಡಿಯಲ್ಲಿ ಸಾರ್ವಜನಿಕ ಖಾತೆಗೆ ಠೇವಣಿ ಮಾಡುವುದು ಮತ್ತು ತಿಂಗಳಿಗೆ ಒಮ್ಮೆ ಈ ನಿಧಿಯನ್ನು ಭಾರತದ ಸಂಚಿತ ನಿಧಿಗೆ ವರ್ಗಾಯಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ.

2024–25ನೇ ಸಾಲಿನಲ್ಲಿ, ಈ ಶೀರ್ಷಿಕೆಯಡಿಯಲ್ಲಿ ₹ 59.28 ಕೋಟಿಗಳನ್ನು ಠೇವಣಿ ಮಾಡಲಾಗಿದೆ ಮತ್ತು ಸಂಪೂರ್ಣ ಮೊತ್ತವನ್ನು ರಾಜ್ಯ ಸರ್ಕಾರವು ಎನ್‌ಎಂಇಟಿಗೆ ವರ್ಗಾಯಿಸಿದೆ.

ಭಾರತ ಸರ್ಕಾರದ ಗಣಿ ಸಚಿವಾಲಯವು ರಾಜ್ಯ ಖನಿಜ ಪರಿಶೋಧನಾ ಟ್ರಸ್ಟ್ / ರಾಜ್ಯ ಖನಿಜ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲು ರಾಜ್ಯಗಳಿಗೆ (ನವೆಂಬರ್ 2024) ಸಲಹೆ ನೀಡಿದ್ದರೂ, ರಾಜ್ಯವು ಇನ್ನೂ ಅದನ್ನು ಸ್ಥಾಪಿಸಿಲ್ಲ.

3.2.5 ಮರುಪಾವತಿ ಪ್ರಕರಣಗಳ ಬಾಕಿ

ಮರುಪಾವತಿ ಪ್ರಕರಣಗಳ ವಿಲೇವಾರಿಯಲ್ಲಿ ತ್ವರಿತತೆಯು ಸಂಬಂಧಪಟ್ಟ ಇಲಾಖೆಯ ಕಾರ್ಯಕ್ಷಮತೆಯ ಪ್ರಮುಖ ಸೂಚಕವಾಗಿದೆ. ನಾಲ್ಕು[3] ತೆರಿಗೆ ಸಂಗ್ರಹಣಾ ಇಲಾಖೆಗಳ ಪೈಕಿ ಮೂರು ಇಲಾಖೆಗಳು ಮರುಪಾವತಿ ಪ್ರಕರಣಗಳ ಬಾಕಿ ಇರುವ ಬಗ್ಗೆ ಮಾಹಿತಿಯನ್ನು ಒದಗಿಸಿವೆ.

[3] ವಾಹನಗಳ ಮೇಲಿನ ತೆರಿಗೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಇಲಾಖೆಯು ಒದಗಿಸಲಿಲ್ಲ.

2024–25ನೇ ವರ್ಷದ ಅವಧಿಯ ಮರುಪಾವತಿ ಪ್ರಕರಣಗಳ ವಿವರಗಳನ್ನು ಸಂಬಂಧಿತ ಇಲಾಖೆಗಳು ವರದಿ ಮಾಡಿದಂತೆ **ಕೋಷ್ಟಕ 3.3ರಲ್ಲಿ** ನೀಡಲಾಗಿದೆ.

ಕೋಷ್ಟಕ 3.3: ಮರುಪಾವತಿ ಪ್ರಕರಣಗಳ ವಿವರಗಳು

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಜಿಎಸ್‌ಟಿ		ಮಾರಾಟತೆರಿಗೆ/ಮೌಲ್ಯವರ್ಧಿತ ತೆರಿಗೆ		ರಾಜ್ಯ ಅಬಕಾರಿ	
		ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ*	ಮೊತ್ತ
1	ವರ್ಷದ ಆರಂಭದಲ್ಲಿ ಬಾಕಿಯಿದ್ದ ದಾವೆಗಳು	3,046	4,461.18	457	30.28	NA	–
2	ವರ್ಷದ ಅವಧಿಯಲ್ಲಿ ಸ್ವೀಕರಿಸಲಾದ ದಾವೆಗಳು	8,738	7,528.20	465	236.14	NA	1,300
3	ವರ್ಷದ ಅವಧಿಯಲ್ಲಿ ಮಾಡಿದ ಮರುಪಾವತಿಗಳು	6,800	6,696.22	481	229.59	NA	1,300
4	ವರ್ಷದ ಅವಧಿಯಲ್ಲಿ ತಿರಸ್ಕರಿಸಲಾದ ಮರುಪಾವತಿಗಳ	–	–	–	–	NA	–
5	ವರ್ಷದ ಕೊನೆಯಲ್ಲಿ ಬಾಕಿ ಇರುವ ಮೊತ್ತ	4,984	5,293.17	441	36.82	NA	0

ಆಕರ: ಇಲಾಖಾ ಮಾಹಿತಿ

** ಇಲಾಖೆಯಿಂದ ಒದಗಿಸದ ಮಾಹಿತಿ*

ಜಿಎಸ್‌ಟಿಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಮೊತ್ತಗಳು ಹೆಚ್ಚಿದ್ದರೂ, ಮಾರಾಟ ತೆರಿಗೆಯ ಅಡಿಯಲ್ಲಿ ಅದು ಕಡಿಮೆಯಾಗಿದೆ ಎಂಬುದು ಕೋಷ್ಟಕದಿಂದ ಸ್ಪಷ್ಟವಾಗಿದೆ. ರಾಜ್ಯ ಅಬಕಾರಿ ಇಲಾಖೆಯ ಸಂಬಂಧದಲ್ಲಿ, ಎಲ್ಲಾ ಮರುಪಾವತಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಇಲಾಖೆ ಕ್ರಮ ಕೈಗೊಂಡಿರುವುದು ಗಮನಕ್ಕೆ ಬಂದಿದೆ.

ಪಾರದರ್ಶಕತೆಗೆ ಸಂಬಂಧಿಸಿದ ಅವಲೋಕನಗಳು

3.3 ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಲ್ಲಿ ವಿಳಂಬ

ಕರ್ನಾಟಕದ ಆರ್ಥಿಕ ಸಂಹಿತೆ (ಕೆಎಫ್‌ಸಿ), 1958ರ ನಿಯಮ 161 (ಬಿ) (5)ರ ಅನ್ವಯ, ಖರ್ಚಿನ ನಿರ್ದಿಷ್ಟ ಉದ್ದೇಶಗಳಿಗಾಗಿ ಒದಗಿಸಿದ ಅನುದಾನ, ಅಥವಾ ಹಣವನ್ನು ಖರ್ಚು ಮಾಡಬೇಕಾದ ಸಮಯ ಅಥವಾ ಬೇರೆ ರೀತಿಯಲ್ಲಿ ಅನುದಾನದ ಬಳಕೆಗೆ ಷರತ್ತುಗಳನ್ನು ಲಗತ್ತಿಸಲಾದ ಸಂದರ್ಭಗಳಲ್ಲಿ ಬಳಕೆ ಪ್ರಮಾಣ ಪತ್ರಗಳನ್ನು (ಯುಸಿ) ಸಲ್ಲಿಸುವುದು ಕಡ್ಡಾಯವಾಗಿದೆ. ಇಂತಹ ಸಂದರ್ಭಗಳಲ್ಲಿ, ಅನುದಾನ–ಸಹಾಯ ಬಿಲ್ಲನ್ನು ತನ್ನ ಸಹಿ ಅಥವಾ ಪ್ರತಿಸಹಿಯ ಮೂಲಕ ಹೊರಡಿಸಿರುವ ಸಂಬಂಧಿತ ಇಲಾಖಾಧಿಕಾರಿ, ಯಾವುದೇ ವಿಶೇಷ ನಿಯಮ ಅಥವಾ ಆದೇಶ ಭಿನ್ನವಾಗಿ ಇರುವುದಿಲ್ಲದ ಹೊರತು, ಅನುದಾನಕ್ಕೆ ಸಂಬಂಧಿಸಿದ ಷರತ್ತುಗಳು ಪೂರೈಸಲ್ಪಟ್ಟಿರುವುದನ್ನು ಅಗತ್ಯವಿರುವ ಸಂದರ್ಭದಲ್ಲಿ ಮಹಾಲೇಖಪಾಲರು (ಎ ಮತ್ತು ಇ) ಪ್ರಮಾಣೀಕರಿಸುವ ಪ್ರಧಾನ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

ಅನುದಾನ ಸ್ವೀಕರಿಸಿದವರಿಗೆ ಮಂಜೂರಾದ ಷರತ್ತುಬದ್ಧ ಅನುದಾನ–ಸಹಾಯಗಳ ಸಂಬಂಧಿಸಿದ ಬಳಕೆ ಪ್ರಮಾಣ ಪತ್ರಗಳನ್ನು, ಅನುದಾನ ಸ್ವೀಕರಿಸಿದ ದಿನಾಂಕದಿಂದ 18 ತಿಂಗಳೊಳಗೆ ಅಥವಾ ಅದೇ ಉದ್ದೇಶಕ್ಕಾಗಿ ಮುಂದಿನ ಅನುದಾನಕ್ಕೆ ಅರ್ಜಿ ಸಲ್ಲಿಸುವ ಮೊದಲು—ಯಾವುದು ಮೊದಲು ಸಂಭವಿಸುತ್ತದೋ—ಅನುದಾನವನ್ನು ಮಂಜೂರು ಮಾಡಿದ ಪ್ರಾಧಿಕಾರಕ್ಕೆ ಅನುದಾನ ಸ್ವೀಕರಿಸಿದವರು ಸಲ್ಲಿಸಬೇಕು.

2024–25ನೇ ಸಾಲಿನಲ್ಲಿ, ₹ 866.59 ಕೋಟಿಗಳ ಮೊತ್ತದ 399 ಬಳಕೆ ಪ್ರಮಾಣ ಪತ್ರಗಳು ಬಾಕಿ ಉಳಿದಿದ್ದವು (ಸೆಪ್ಟೆಂಬರ್ 2023ರವರೆಗೆ ಸೆಳೆದ ಸಹಾಯಾನುದಾನ ಬಿಲ್ಲುಗಳಿಗೆ ಸಂಬಂಧಿಸಿದವು). ಇದರಲ್ಲಿ, ವರ್ಷದ ಆರಂಭದಲ್ಲಿ ₹ 118.64 ಕೋಟಿಗಳ ಮೊತ್ತದ 92 ಬಳಕೆ ಪ್ರಮಾಣ ಪತ್ರಗಳು ಬಾಕಿ

ಇದ್ದವು. ವರ್ಷದ ಅವಧಿಯಲ್ಲಿ, ₹ 627.15 ಕೋಟಿಗಳ ಮೊತ್ತದ 257 ಬಾಕಿ ಬಳಕೆ ಪ್ರಮಾಣ ಪತ್ರಗಳನ್ನು ತೆರವುಗೊಳಿಸಲಾಯಿತು. ಪರಿಣಾಮವಾಗಿ, 31 ಮಾರ್ಚ್ 2025ರ ಸ್ಥಿತಿಗೆ ₹ 239.45 ಕೋಟಿಗಳ ಮೊತ್ತದ 142 ಬಳಕೆ ಪ್ರಮಾಣ ಪತ್ರಗಳು ಬಾಕಿ ಉಳಿದಿದ್ದು, ವಿವರಗಳನ್ನು **ಕೋಷ್ಟಕ 3.4ರಲ್ಲಿ** ನೀಡಲಾಗಿದೆ.

ಕೋಷ್ಟಕ 3.4: ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವರ್ಷವಾರು ವಿವರ

(₹ ಕೋಟಿಗಳಲ್ಲಿ)

ಬಳಕೆ ಪ್ರಮಾಣ ಪತ್ರಗಳ ಬಾಕಿಯಿರುವ ವರ್ಷ	ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ಸಂಖ್ಯೆ	ಮೊತ್ತ
2021–22 ಕ್ಕಿಂತ ಮೊದಲು	8	11.79
2021–22	4	3.99
2022–23	–	–
2023–24	18	16.65
2024–25 31 ಮಾರ್ಚ್ 2025 ರವರೆಗೆ ಬಾಕಿ ಇದೆ	112	207.02
ಒಟ್ಟು	142	239.45

ಆಕರ : *ಹಣಕಾಸು ಲೆಕ್ಕಪತ್ರಗಳು 2024–25 ಮತ್ತು ಮಹಾಲೇಖಾಪಾಲರ ಕಚೇರಿ (ಎ ಮತ್ತು ಇ), ಕರ್ನಾಟಕ*

*ಮೇಲೆ ತಿಳಿಸಲಾದ ವರ್ಷವು "ಬಾಕಿ ಇರುವ ವರ್ಷ"ಕ್ಕೆ ಸಂಬಂಧಿಸಿದೆ, ಅಂದರೆ, ವಾಸ್ತವವಾಗಿ ಸೆಳೆದ 18 ತಿಂಗಳದ ನಂತರ ಅವಧಿ.

ನಕ್ಷೆ 3.1: 31 ಮಾರ್ಚ್ 2025ರ ಸ್ಥಿತಿಗೆ ಮೂರು ಪ್ರಧಾನ ಇಲಾಖೆಗಳ ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳು

(₹ ಕೋಟಿಗಳಲ್ಲಿ)



ಆಕರ: ಮಹಾಲೇಖಾಪಾಲರ ಕಚೇರಿ (ಎ ಮತ್ತು ಇ)

ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವುದು ಅನುದಾನದ ದುರುಪಯೋಗದ ಅಪಾಯದಿಂದ ಕೂಡಿರುವುದರಿಂದ, ರಾಜ್ಯ ಸರ್ಕಾರವು ಈ ಅಂಶವನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಬೇಕು ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ಸಮಯೋಚಿತವಾಗಿ ಸಲ್ಲಿಸುವುದಕ್ಕಾಗಿ ಸಂಬಂಧಿಸಿದ ವ್ಯಕ್ತಿಗಳನ್ನು ಜವಾಬ್ದಾರರನ್ನಾಗಿ ಮಾಡುವುದು ಅತ್ಯಂತ ಅಗತ್ಯವಾಗಿದೆ.

ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವ ವ್ಯಕ್ತಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಮತ್ತು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳುವ ಮೂಲಕ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತರಲಾಗುವುದು ಎಂದು ರಾಜ್ಯ ಸರ್ಕಾರ ಉತ್ತರಿಸಿತು (ಜನವರಿ 2026).

3.4 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಹಣವನ್ನು ಮುಂಗಡವಾಗಿ ಅಗತ್ಯವಿರುವ ಸಂದರ್ಭಗಳಲ್ಲಿ ಅಥವಾ ಅಗತ್ಯವಿರುವ ನಿಖರ ಮೊತ್ತವನ್ನು ಲೆಕ್ಕ ಹಾಕಲು ಸಾಧ್ಯವಾಗದ ಸಂದರ್ಭಗಳಲ್ಲಿ, ಹಣಸೆಳೆಯುವ ಮತ್ತು ವಿತರಣಾ ಅಧಿಕಾರಿ(ಡಿಡಿಓ) ಬೆಂಬಲ ದಾಖಲೆಗಳಿಲ್ಲದೇ ಸೇವಾ ಶೀರ್ಷಿಕೆಗಳನ್ನು ವೆಚ್ಚ ಮಾಡಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ(ಎಸಿ) ಮೂಲಕ ಹಣವನ್ನು ಸೆಳೆಯಲು ಅನುಮತಿ ನೀಡಲಾಗಿದೆ. ಈ ಮೂಲಕ ಸೆಳೆದ ಮೊತ್ತವನ್ನು ಸಂಬಂಧಿತ ಸೇವಾ ಶೀರ್ಷಿಕೆಯಡಿಯಲ್ಲಿ ವೆಚ್ಚವಾಗಿ ತೋರಿಸಲಾಗುತ್ತದೆ.

ಸಾದೆಲ್ವಾರು ವೆಚ್ಚದ ಕೈಪಿಡಿ (ಎಂಸಿಇ), 1958 ರ ನಿಯಮ 37(ಬಿ) (3)ರ ಅಡಿಯಲ್ಲಿ, ನಿಯಂತ್ರಿಸುವ ಮತ್ತು ವಿತರಿಸುವ ಅಧಿಕಾರಿಗಳು ಸೇವಾ ಶೀರ್ಷಿಕೆಗಳನ್ನು ವೆಚ್ಚ ಮಾಡುವ ಮೂಲಕ ಎಸಿ ಬಿಲ್ಲುಗಳನ್ನು ತಯಾರಿಸುವ ಮೂಲಕ ಹಣವನ್ನು ಸೆಳೆಯಲು ಅಧಿಕಾರ ಹೊಂದಿದ್ದಾರೆ ಮತ್ತು ಬಿಲ್ಲು ಸಂಬಂಧಿಸಿದ ತಿಂಗಳ ನಂತರದ ತಿಂಗಳ 15ನೇ ದಿನಾಂಕದ ಮೊದಲು ಖಜಾನೆಗಳ ಮೂಲಕ ಮಹಾಲೇಖಪಾಲರು (ಎ ಮತ್ತು ಇ) ಪಾವತಿ ಮಾಡದ ವಿವರವಾದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು (ಎನ್‌ಡಿಸಿ) (ಅಂತಿಮ ವೆಚ್ಚವನ್ನು ಬೆಂಬಲಿಸುವ ವೋಚರ್‌ಗಳು) ಪ್ರಸ್ತುತಪಡಿಸಬೇಕು. ನಿಯಂತ್ರಿಸುವ ಅಧಿಕಾರಿಗಳು ತಕ್ಷಣದ ವಿತರಣೆಗೆ ಅಗತ್ಯವಿಲ್ಲದ ಹೊರತು ಎಸಿ ಬಿಲ್ಲುಗಳ ಮೂಲಕ ಖಜಾನೆಯಿಂದ ಯಾವುದೇ ಮೊತ್ತವನ್ನು ತೆಗೆದುಕೊಳ್ಳಲಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು. ವಿಳಂಬಿತ ಸಲ್ಲಿಕೆ ಅಥವಾ ಎನ್‌ಡಿಸಿ ಬಿಲ್ಲುಗಳ ದೀರ್ಘಕಾಲದವರೆಗೆ ಸಲ್ಲಿಸದಿರುವುದು ಖಾತೆಗಳ ಸಂಪೂರ್ಣತೆ ಮತ್ತು ಸತ್ಯಾಸತ್ಯತೆಯನ್ನು ಪರಿಣಾಮ ಬೀರಬಹುದು.

31 ಮಾರ್ಚ್ 2025ರಂತೆ ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ(ಎಸಿ) ವಿವರಗಳನ್ನು **ಕೋಷ್ಟಕ 3.5ರಲ್ಲಿ** ನೀಡಲಾಗಿದೆ.

ಕೋಷ್ಟಕ 3.5: ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವರ್ಷವಾರು ಬಾಕಿ ಇರುವಿಕೆ

(₹ ಕೋಟಿಗಳಲ್ಲಿ)

ನಿಗದಿತ ವರ್ಷ	ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆ	ಮೊತ್ತ
2023–24 ರವರೆಗೆ	638	36.86
2024–25	473	27.04
ಒಟ್ಟು	1,111	63.90

ಆಕರ: ಹಣಕಾಸು ಲೆಕ್ಕಪತ್ರಗಳು 2024–25 ಮತ್ತು ಮಹಾಲೇಖಾಪಾಲರ ಕಚೇರಿ (ಎ ಮತ್ತು ಇ) ಕರ್ನಾಟಕ

2024–25ರ ಅವಧಿಯಲ್ಲಿ, 2,797 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ₹ 275.80ಕೋಟಿ ಮೊತ್ತವನ್ನು ಪಡೆಯಲಾಗಿತ್ತು ಮತ್ತು ಈ ಪೈಕಿ 185 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೊತ್ತ ₹ 12.80 ಕೋಟಿಯಷ್ಟು (ಶೇಕಡಾ 4.64) ಮಾರ್ಚ್ 2025 ರಲ್ಲಿ ಸೆಳೆಯಲಾಗಿತ್ತು. 2024–25ರಲ್ಲಿ ಹೊಂದಾಣಿಕೆಗೆ ಬಾಕಿಯಾಗಿದ್ದ ₹280.20 ಕೋಟಿ ಬಾಕಿ ಇರುವ 2,821 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ (ಮಾರ್ಚ್ 2024 ರಲ್ಲಿ ಸೆಳೆಯಲಾದ 209 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು 2025ರಲ್ಲಿ ಸೆಳೆಯಲಾದ ಮಾಡಲಾದ 185 ಬಿಲ್ಲುಗಳನ್ನು ಹೊರತುಪಡಿಸಿ), 2,346 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ₹ 253.12 ಕೋಟಿಗಳನ್ನು 31 ಮಾರ್ಚ್ 2025 ರವರೆಗೆ ಹೊಂದಾಣಿಕೆ ಮಾಡಲಾಗಿದೆ.

ನಕ್ಷೆ 3.2: ನಾಲ್ಕು ಪ್ರಮುಖ ಇಲಾಖೆಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ವಿವರವಾದ ಸವಿವರ ಸಾದಿಲ್ವಾರು ಬಿಲ್ಲುಗಳು

(₹ ಕೋಟಿಗಳಲ್ಲಿ)



ಆಕರ: ಮಹಾಲೇಖಾಪಾಲರ ಕಚೇರಿ (ಎ ಮತ್ತು ಇ), ಕರ್ನಾಟಕ

ದೀರ್ಘಾವಧಿಯವರೆಗೆ ಮುಂಗಡಗಳನ್ನು ಹೊಂದಾಣಿಕೆ ಮಾಡದಿರುವುದು ದುರುಪಯೋಗದ ಅಪಾಯದಿಂದ ಕೂಡಿದೆ ಮತ್ತು ಆದ್ದರಿಂದ, ಎನ್‌ಡಿಸಿ ಬಿಲ್ಲುಗಳ ಸಲ್ಲಿಕೆಯನ್ನು ಖಚಿತಪಡಿಸಿಕೊಳ್ಳಲು ಆಯಾ ಡಿಡಿಒಗಳ ನಿಕಟ ಮೇಲ್ವಿಚಾರಣೆಯ ಅಗತ್ಯವಿರುತ್ತದೆ. ಇದಲ್ಲದೆ, ಎನ್‌ಡಿಸಿ ಬಿಲ್ಲುಗಳನ್ನು

ಸ್ವೀಕರಿಸದ ಮಟ್ಟಿಗೆ, ಹಣಕಾಸು ಲೆಕ್ಕಪತ್ರಗಳಲ್ಲಿ ತೋರಿಸಲಾದ ವೆಚ್ಚವನ್ನು ಸರಿ ಅಥವಾ ಅಂತಿಮ ಎಂದು ದೃಢಪಡಿಸಲು ಸಾಧ್ಯವಿಲ್ಲ.

3.5 ವೈಯಕ್ತಿಕ ಠೇವಣಿ ಖಾತೆಗಳು

ಕೇಂದ್ರ ಮತ್ತು ರಾಜ್ಯಗಳ ಪ್ರಮುಖ ಮತ್ತು ಉಪ ಲೆಕ್ಕ ಶೀರ್ಷಿಕೆಗಳ ಪಟ್ಟಿಯಡಿಯಲ್ಲಿ, ವೈಯಕ್ತಿಕ ಠೇವಣಿಗಳು(ಪಿಡಿ) ಬಡ್ಡಿ ನೀಡದ ಠೇವಣಿಗಳ ಸ್ವಭಾವವನ್ನು ಹೊಂದಿದ್ದು 8443–ನಾಗರಿಕ ಠೇವಣಿಗಳು–106–ವೈಯಕ್ತಿಕ ಠೇವಣಿಗಳ ಶೀರ್ಷಿಕೆಯಡಿ ತೆರೆಯಲಾಗುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ 286ರ ಪ್ರಕಾರ ಸಾಮಾನ್ಯ ಲೆಕ್ಕಪತ್ರ ವ್ಯವಸ್ಥೆಯು ವಹಿವಾಟುಗಳಿಗೆ ಸೂಕ್ತವಲ್ಲದ ಸಂದರ್ಭಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆಯಲು ಅವಕಾಶ ನೀಡುತ್ತದೆ. ರಾಜ್ಯದ ಸಂಚಿತ ನಿಧಿಗೆ ವೆಚ್ಚದ ಮೂಲಕ ರಚಿಸಲಾದ ಪಿಡಿ ಖಾತೆಗಳನ್ನು ಹಣಕಾಸು ವರ್ಷದ ಅಂತ್ಯದಲ್ಲಿ ಮುಚ್ಚಬೇಕು. ಆದಾಗ್ಯೂ, ಈ ನಿಯಮವನ್ನು ರಾಜ್ಯವು ಕಟ್ಟುನಿಟ್ಟಾಗಿ ಅನುಸರಿಸುವುದಿಲ್ಲ ಏಕೆಂದರೆ ಗಮನಾರ್ಹ ಬಾಕಿ ಮೊತ್ತವನ್ನು ಮುಂದಿನ ವರ್ಷಕ್ಕೆ ಮುಂದಕ್ಕೆ ಕೊಂಡೊಯ್ಯಲಾಗುತ್ತದೆ, ಇದನ್ನು ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ. ಖಾತೆಗಳ ನಿರ್ವಾಹಕರು ಸಂಚಿತ ನಿಧಿಗೆ ವರ್ಗಾಯಿಸಬೇಕಾದ ಬಾಕಿ ಮೊತ್ತದ ಬಗ್ಗೆ ಖಜಾನೆ ಅಧಿಕಾರಿಗೆ ತಿಳಿಸಬೇಕು. ವೈಯಕ್ತಿಕ ಠೇವಣಿ ಖಾತೆಗಳನ್ನು ತಮ್ಮ ಕರೆನ್ಸಿಯ ಅವಧಿಯನ್ನು ಮೀರಿ ಮುಂದುವರಿಸಲು, ನಿರ್ವಾಹಕರು ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕಾಗುತ್ತದೆ. ವೈಯಕ್ತಿಕ ಠೇವಣಿ ಖಾತೆಗಳನ್ನು ಖಜಾನೆ ಖಾತೆಗಳೊಂದಿಗೆ ನಿಯತಕಾಲಿಕವಾಗಿ ಹೊಂದಾಣಿಕೆ ಮಾಡಿಕೊಳ್ಳುವುದು ಸಂಬಂಧಪಟ್ಟ ನಿರ್ವಾಹಕರ ಜವಾಬ್ದಾರಿಯಾಗಿದೆ.

3.5.1 ವೈಯಕ್ತಿಕ ಠೇವಣಿ ಖಾತೆಗಳ ಸ್ಥಿತಿ

2024–25ನೇ ಸಾಲಿನಲ್ಲಿ, ₹ 12,926.77 ಕೋಟಿಗಳನ್ನು ರಾಜ್ಯದ ಸಂಚಿತ ನಿಧಿಯಿಂದ 8443–106 ಶೀರ್ಷಿಕೆಯಡಿಯಲ್ಲಿ ಪಿಡಿ ಖಾತೆಗಳಿಗೆ ವರ್ಗಾಯಿಸಲಾಗಿದೆ. ಇದರಲ್ಲಿ ಮಾರ್ಚ್ 2025 ರಲ್ಲಿ ಪಿಡಿ ಖಾತೆಗಳಿಗೆ ವರ್ಗಾಯಿಸಲಾದ ₹ 6,026.22 ಕೋಟಿಗಳ ಮೊತ್ತವೂ ಒಳಗೊಂಡಿದೆ. 31 ಮಾರ್ಚ್ 2025ರಂತೆ ಪಿಡಿ ಖಾತೆಗಳ ವಿವರಗಳನ್ನು **ಕೋಷ್ಟಕ 3.6ರಲ್ಲಿ** ನೀಡಲಾಗಿದೆ.

ಕೋಷ್ಟಕ 3.6: 2024–25ನೇ ಸಾಲಿನಲ್ಲಿ ವೈಯಕ್ತಿಕ ಠೇವಣಿ ಖಾತೆಗಳ ಸ್ಥಿತಿ

(₹ ಕೋಟಿಗಳಲ್ಲಿ)

ಆರಂಭಿಕ ಶಿಲ್ಕು (01–04–2024 ರಂತೆ)		2024–25ನೇ ಸಾಲಿನಲ್ಲಿ ಸೇರ್ಪಡೆ		2024–25ನೇ ಸಾಲಿನಲ್ಲಿ ವಿತರಣೆ		ಅಂತಿಮ ಶಿಲ್ಕು (31–03–2025 ರಂತೆ)	
ನಿರ್ವಾಹಕರ ಸಂಖ್ಯೆ	ಮೊತ್ತ	ನಿರ್ವಾಹಕರ ಸಂಖ್ಯೆ	ಮೊತ್ತ	ನಿರ್ವಾಹಕರ ಸಂಖ್ಯೆ	ಮೊತ್ತ	ನಿರ್ವಾಹಕರ ಸಂಖ್ಯೆ	ಮೊತ್ತ
91	32,834.69	06	12,926.77	–	15,991.01	97	29,770.45

ಆಕರ: ಹಣಕಾಸು ಲೆಕ್ಕಪತ್ರಗಳು 2024–25 ಮತ್ತು ಕರ್ನಾಟಕ ಮಹಾಲೇಖಾಪಾಲರು (ಎ ಮತ್ತು ಇ) ನಿರ್ವಹಿಸುವ ಮಾಹಿತಿ

3.5.2 ವೈಯುಕ್ತಿಕ ಠೇವಣಿ ಖಾತೆಗಳ ಅಂತಿಮ ಬಾಕಿಯ ಪ್ರವೃತ್ತಿಗಳು

2020–21 ರಿಂದ 2024–25 ರವರೆಗಿನ ಅವಧಿಗೆ ಸಂಬಂಧಿಸಿದ ಪಿಡಿ ಖಾತೆಗಳಲ್ಲಿನ ಅಂತಿಮ ಬಾಕಿಗಳನ್ನು **ಕೋಷ್ಟಕ 3.7ರಲ್ಲಿ ತೋರಿಸಲಾಗಿದೆ.**

ಕೋಷ್ಟಕ 3.7: ವೈಯುಕ್ತಿಕ ಠೇವಣಿ ಖಾತೆಗಳಲ್ಲಿ ಇರಿಸಲಾದ ನಿಧಿಗಳು

(₹ ಕೋಟಿಗಳಲ್ಲಿ)

ವರ್ಷ	ಆರಂಭಿಕ ಶಿಲ್ಕು	ಸ್ವೀಕೃತಿಗಳು/ಠೇವಣಿಗಳು	ಹಿಂಪಡೆತಗಳು	ಅಂತಿಮ ಶಿಲ್ಕು
2020–21	4,421.56	4,711.16	5,143.49	3,989.23
2021–22	3,989.23	4,787.13	4,670.75	4,105.61
2022–23	4,105.61	32,201.44	6,797.51	29,509.54
2023–24	29,509.54	11,055.28	7,730.13	32,834.69
2024–25	32,834.69	12,926.77	15,991.01	29,770.45

ಆಕರ: ಮಹಾಲೇಖಾಪಾಲರ ಕಚೇರಿ (ಎ ಮತ್ತು ಇ)

2024–25ರ ಅಂತ್ಯದ ವೇಳೆಗೆ ಭಾರಿ ಶಿಲ್ಕು (ನೂರು ಕೋಟಿಗಿಂತ ಹೆಚ್ಚು) ಹೊಂದಿರುವ ಕೆಲವು ನಿರ್ವಾಹಕರ ಪಿಡಿ ಖಾತೆಗಳಿಗೆ ಸಂಬಂಧಿಸಿದಂತೆ ನಿವ್ವಳ ಅಂತಿಮ ಬಾಕಿಯನ್ನು **ಕೋಷ್ಟಕ 3.8ರಲ್ಲಿ** ತೋರಿಸಲಾಗಿದೆ. ಋಣಾತ್ಮಕ ಶಿಲ್ಕು ಹೊಂದಿರುವ ಕೆಲವು ಪಿಡಿಗಳ ಮೂಲಕ ಸಮನ್ವಯಗೊಳಿಸಲಾಗಿದೆ.

ಕೋಷ್ಟಕ 3.8: ವೈಯುಕ್ತಿಕ ಠೇವಣಿ ಖಾತೆಗಳಲ್ಲಿ ಅಂತಿಮ ಬಾಕಿ

(₹ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ನಿರ್ವಾಹಕರು	ಮೊತ್ತ
1	ಸಾಮಾನ್ಯ	403.99
2	ಜಿಲ್ಲಾಧಿಕಾರಿಗಳ	8,390.66
3	ವಿಶೇಷ ಭೂಸ್ವಾಧೀನ ಅಧಿಕಾರಿ ಎಸ್ ಸಿಆರ್ ಯೋಜನೆ ಕರ್ನಾಟಕ	1,035.80
4	ಅಧೀನ ಕಾರ್ಯದರ್ಶಿ 1 ಮತ್ತು 3 ಕರ್ನಾಟಕ ವಿಧಾನಸಭೆ (ಕರ್ನಾಟಕ ವಿಧಾನಸಭಾ ಗೃಹ), ಬೆಂಗಳೂರು	120.09
5	ಸಹಾಯಕ ಆಯುಕ್ತರು ಕಂದಾಯ ಇಲಾಖೆ ಅಡಿಯಲ್ಲಿ	332.73
6	ವಿಶೇಷ ಭೂಸ್ವಾಧೀನ ಅಧಿಕಾರಿ, ಮಂಡ್ಯ	166.04
7	ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ (ಕೆಎಂಇಆರ್ ಸಿ)	22,115.31
8	ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	1,641.20
9	ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ, ಕಲಬುರಗಿ ಕಾರ್ಯದರ್ಶಿ	755.21
10	ವಿಶೇಷ ಭೂಸ್ವಾಧೀನ ಅಧಿಕಾರಿ, ಚಿತ್ರದುರ್ಗ	283.06
11	ಆಯುಕ್ತರ , ಪದವಿ ಶಿಕ್ಷಣ ಇಲಾಖೆ, ಬೆಂಗಳೂರು	197.41
12	ವಿಶೇಷ ಭೂಸ್ವಾಧೀನಾಧಿಕಾರಿ, ಕಬಿನಿ ಜಲಾಶಯ ಯೋಜನೆ, ಮೈಸೂರು	602.37
13	ಪರಿಶಿಷ್ಟ ಪಂಗಡಗಳ ಇಲಾಖೆಯ ನಿರ್ದೇಶಕ	351.46

ಆಕರ: ಮಹಾಲೇಖಾಪಾಲರ ಕಚೇರಿ (ಎ ಮತ್ತು ಇ)

₹ 29,770.45 ಕೋಟಿಗಳ ಅಂತಿಮ ಶಿಲ್ಕು ಮೊತ್ತದಲ್ಲಿ, ₹ 22,115.31 ಕೋಟಿಗಳ ಶಿಲ್ಕು ಯನ್ನು ಹೊಂದಿದ್ದ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ಪ್ರಮುಖ ಪಾಲುದಾರವಾಗಿತ್ತು. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು 21 ಏಪ್ರಿಲ್ 2022ರ ತನ್ನ ಆದೇಶದಲ್ಲಿ ರಾಜ್ಯದ ಸಾರ್ವಜನಿಕ ಖಾತೆಗಳಲ್ಲಿ ಪಿಡಿ ಖಾತೆಯನ್ನು ತೆರೆಯುವ ಮೂಲಕ ಗಣಿಗಾರಿಕೆ ಪರಿಣಾಮ ವಲಯಕ್ಕಾಗಿ ಸಮಗ್ರ ಪರಿಸರ ಯೋಜನೆಯನ್ನು ಕಾರ್ಯಗತಗೊಳಿಸಲು ಎಸ್‌ಪಿವಿಯ ಆದಾಯಗಳು ಮತ್ತು ವೆಚ್ಚಗಳನ್ನು ನಿರ್ವಹಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು. ಇದರ ನಂತರ, ಜಿಲ್ಲಾಧಿಕಾರಿಗಳ ಪಿಡಿ ಖಾತೆ ತೆರೆಯಲಾಗಿತ್ತು

(ಎ) ನಿಷ್ಕ್ರಿಯ ವೈಯುಕ್ತಿಕ ಠೇವಣಿ ಖಾತೆಗಳು

ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 286–ಎ ಪ್ರಕಾರ, ಪಿಡಿ ಖಾತೆಯನ್ನು ಗಣನೀಯ ಅವಧಿಯವರೆಗೆ ನಿರ್ವಹಿಸದಿದ್ದರೆ ಮತ್ತು ನಂತರ ಠೇವಣಿ ಖಾತೆಯ ಅಗತ್ಯವು ಸ್ಥಗಿತಗೊಂಡರೆ, ಠೇವಣಿ ಖಾತೆಯನ್ನು ತೆರೆಯುವ ಅಧಿಕಾರಿಯೊಂದಿಗೆ ಸಮಾಲೋಚಿಸಿ ಅದನ್ನು ಮುಕ್ತಾಯಗೊಳಿಸಬೇಕು.

2024–25ನೇ ಸಾಲಿನಲ್ಲಿ, 97 ಪಿಡಿ ಖಾತೆಗಳಲ್ಲಿ, 25 ಪಿಡಿ ಖಾತೆಗಳು **ಅನುಬಂಧ 3.1ರಲ್ಲಿ** ವಿವರಿಸಿರುವಂತೆ ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಕಾರ್ಯ ನಿಷ್ಕ್ರಿಯವಾಗಲಿಲ್ಲ ಎಂದು ಕಂಡುಬಂದವು. ಈ ಪೈಕಿ ಒಂದು ಪಿಡಿ ಖಾತೆಯಲ್ಲಿ ಶೂನ್ಯ ಶಿಲ್ಕು ಇದ್ದು, ಈ ಕಾರ್ಯನಿರ್ವಹಣೆ ಯಾಗಿಲ್ಲದೇ ಇದ್ದ ಪಿಡಿ ಖಾತೆಗಳನ್ನು ಮುಕ್ತಾಯಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬಹುದು.

(ಬಿ) ಋಣಾತ್ಮಕ ಶಿಲ್ಕು ಹೊಂದಿರುವ ವೈಯುಕ್ತಿಕ ಠೇವಣಿ ಖಾತೆಗಳು

ಪಿಡಿ ಖಾತೆಗಳ ಅಡಿಯಲ್ಲಿ ಇರುವ ಆದಾಯಗಳನ್ನು, ರಾಜ್ಯದ ಏಕೀಕೃತ ನಿಧಿಗೆ ಖರ್ಚು ಮಾಡಿ ಪಿಡಿ ಖಾತೆಗಳಿಗೆ ಜಮೆ ಮಾಡಲಾಗುತ್ತದೆ ಅಥವಾ ಇತರ ಆಕರಗಳಿಂದ ಜಮಾ ಮಾಡಲಾಗುತ್ತದೆ. ಪಿಡಿ ಖಾತೆಗಳ ಅಡಿಯಲ್ಲಿ ಲಭ್ಯವಿರುವ ಬಾಕಿಗಳಿಂದಲೇ ವೆಚ್ಚವನ್ನು ಮಾಡಲಾಗುತ್ತದೆ. ಆದ್ದರಿಂದ, ಪಿಡಿ ಖಾತೆಗಳಲ್ಲಿ ಯಾವುದೇ ಋಣಾತ್ಮಕ ಶಿಲ್ಕುಗಳು ಇರಬಾರದು. ಆದರೆ, 31 ಮಾರ್ಚ್ 2025ರಂತೆ, ಮಹಾಲೇಖಾಪಾಲರ (ಎ ಮತ್ತು ಇ) ಲೆಕ್ಕಪತ್ರಗಳ ಪ್ರಕಾರ ಪಿಡಿ ಖಾತೆಗಳು ₹ 1,911.92 ಕೋಟಿ

ಋಣಾತ್ಮಕ ಶಿಲ್ಕುಗಳಿದ್ದವು. (**ಅನುಬಂಧ 3.2**).

ಈ ಕುರಿತು ರಾಜ್ಯ ಸರ್ಕಾರವು (ಜನವರಿ 2026) ನೀಡಿದ ಉತ್ತರದಲ್ಲಿ, ಕಾರ್ಯನಿರ್ವಹಣೆಯಲ್ಲದ ಪಿಡಿ ಖಾತೆಗಳನ್ನು ಮುಕ್ತಾಯಗೊಳಿಸುವಂತೆ ಆರ್ಥಿಕ ಇಲಾಖೆ ಆದೇಶಗಳನ್ನು ಹೊರಡಿಸಿದ್ದರೂ, ಮಹಾಲೇಖಾಪಾಲರ (ಎ ಮತ್ತು ಇ) ಹಾಗೂ ಖಜಾನೆ ಆಯುಕ್ತರ ನಡುವೆ ಅಂಕಿ–ಅಂಶಗಳ ಹೊಂದಾಣಿಕೆ ಆಗದ ಕಾರಣದಿಂದಾಗಿ ಅವುಗಳನ್ನು ಮುಕ್ತಾಯಗೊಳಿಸಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದೆ. ಇದರ ಫಲವಾಗಿ, ಪಿಡಿ ಖಾತೆಗಳ ನಿರ್ವಾಹಕರು ಮಹಾಲೇಖಾಪಾಲರ (ಎ ಮತ್ತು ಇ) ಹಾಗೂ ಖಜಾನೆ ಎರಡರ ಜೊತೆಯಲ್ಲಿಯೂ ಶಿಲ್ಕುಗಳನ್ನು ಹೊಂದಾಣಿಕೆ ಮಾಡಿ, ಶಿಲ್ಕು ದೃಢೀಕರಣ ಪತ್ರವನ್ನು ಮಹಾಲೇಖಾಪಾಲರಿಗೆ (ಎ ಮತ್ತು ಇ) ಸಲ್ಲಿಸುವಂತೆ ಸೂಚಿಸುವ ವೃತ್ತಪತ್ರಿಕೆಯನ್ನು (ಜನವರಿ 2025) ಹೊರಡಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿದೆ.

3.6 ಕಿರು ಶೀರ್ಷಿಕೆ–800ರ ನಿರ್ವಹಣೆ

ಇತರೆ ಸ್ವೀಕೃತಿಗಳು ಮತ್ತು ಇತರ ವೆಚ್ಚಗಳಿಗೆ ಸಂಬಂಧಿಸಿದ ಕಿರು ಶೀರ್ಷಿಕೆ–800 ಅನ್ನು ಲೆಕ್ಕಪತ್ರಗಳಲ್ಲಿ ಸೂಕ್ತ ಕಿರು ಶೀರ್ಷಿಕೆಯನ್ನು ಒದಗಿಸದಿದ್ದಾಗ ಮಾತ್ರ ಕಾರ್ಯ ನಿರ್ವಹಿಸಲು ಉದ್ದೇಶಿಸಲಾಗಿದೆ. ಕಿರು ಶೀರ್ಷಿಕೆ–800ರ ವಾಡಿಕೆಯಂತೆ ಕಾರ್ಯಾಚರಣೆ ಮಾಡುವುದನ್ನು ಉತ್ತೇಜಿಸಬಾರದು, ಏಕೆಂದರೆ ಅದು ಲೆಕ್ಕಪತ್ರಗಳನ್ನು ಅಪಾರದರ್ಶಕವಾಗಿಸುತ್ತದೆ. ಬಹುಉದ್ದೇಶಿತ ಕಿರು ಶೀರ್ಷಿಕೆ–800 ಅಡಿಯಲ್ಲಿ ದೊಡ್ಡ ಮೊತ್ತಗಳ ವರ್ಗೀಕರಣವು ಹಣಕಾಸಿನ ವರದಿಯಲ್ಲಿ ಪಾರದರ್ಶಕತೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಹಂಚಿಕೆ ಆದ್ಯತೆಗಳು ಮತ್ತು ವೆಚ್ಚದ ಗುಣಮಟ್ಟದ ಸರಿಯಾದ ವಿಶ್ಲೇಷಣೆಯನ್ನು ವಿರೂಪಗೊಳಿಸುತ್ತದೆ.

2024–25ನೇ ಸಾಲಿನಲ್ಲಿ, 31 ಪ್ರಮುಖ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ₹7,588.39 ಕೋಟಿಗಳನ್ನು ಒಟ್ಟು ರಾಜಸ್ವ ಮತ್ತು ಬಂಡವಾಳ ವೆಚ್ಚದ (₹3,36,892.80 ಕೋಟಿ) ಶೇಕಡಾ 2.25 ರಷ್ಟಿದ್ದು, ಲೆಕ್ಕಪತ್ರಗಳಲ್ಲಿ ಕಿರು ಶೀರ್ಷಿಕೆ–800–ಇತರೆ ವೆಚ್ಚದ ಅಡಿಯಲ್ಲಿ ವರ್ಗೀಕರಿಸಲಾಗಿತ್ತು. ಇವುಗಳಲ್ಲಿ, ಸೂಕ್ತ ಕಿರು ಶೀರ್ಷಿಕೆಗಳು ಲಭ್ಯವಿದ್ದರೂ ಸಹ, ನಾಲ್ಕು ಮುಖ್ಯ ಶೀರ್ಷಿಕೆಗಳ ಅಡಿಯಲ್ಲಿ ₹2,532.53 ಕೋಟಿಗಳ ಮೊತ್ತವನ್ನು ಕಿರು ಶೀರ್ಷಿಕೆ–800 – ಇತರೆ ವೆಚ್ಚ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಇದರ ವಿವರಗಳನ್ನು **ಕೋಷ್ಟಕ 3.9ರಲ್ಲಿ** ನೀಡಲಾಗಿದೆ.

ಕೋಷ್ಟಕ 3.9: 2024–25ರ ಅವಧಿಯಲ್ಲಿ ಕಿರು ಶೀರ್ಷಿಕೆ 800–ಇತರ ವೆಚ್ಚಗಳ ಅಡಿಯಲ್ಲಿ ತಪ್ಪಾಗಿ ವರ್ಗೀಕರಿಸಲಾದ ವೆಚ್ಚ

(₹ ಕೋಟಿಗಳಲ್ಲಿ)

ಬುಕ್ಕಿಂಗ್ ಮಾಡಿದ ಶೀರ್ಷಿಕೆಯ ವಿವರಗಳು (ತಪ್ಪಾಗಿ ವರ್ಗೀಕರಿಸಲಾಗಿದೆ)	ಮೊತ್ತ	ವೆಚ್ಚದ ಸ್ವಭಾವ	ಸರಿಯಾದ ವರ್ಗೀಕರಣ
2210	1,729.18	ಕೇಂದ್ರ ಮತ್ತು ರಾಜ್ಯ ಎರಡೂ ಪಾಲುಗಳನ್ನು ಹೊಂದಿರುವ ಕೇಂದ್ರ ಪ್ರಾಯೋಜಿತ ಯೋಜನೆಗಳು.	ಯಾವುದೇ ಮುಖ್ಯ ಶೀರ್ಷಿಕೆಯ ಅಡಿಯಲ್ಲಿ ಉಪ ಶೀರ್ಷಿಕೆ–800 ಅಸ್ತಿತ್ವದಲ್ಲಿದ್ದಲ್ಲಿ, ಅಲ್ಲಿ 'ಇತರೆ ಯೋಜನೆಗಳು ಮುಂತಾದವುಗಳಿಗೆ ಉಪ ಶೀರ್ಷಿಕೆಯ ಕೋಡ್ ಅನ್ನು 600 ಎಂದು ನಿಗದಿಪಡಿಸಬೇಕು.
2216	266.99		
2217	4.40		
4701	531.96		
ಒಟ್ಟು	**2,532.53**		

ಆಕರ: ಹಣಕಾಸು ಖಾತೆಗಳು ಮತ್ತು ಮಹಾಲೇಖಾಪಾಲರು (ಎ&ಇ) ನಿರ್ವಹಿಸುವ ವಿಎಲ್‌ಸಿ ದತ್ತಾಂಶ

ಹಾಗೆಯೇ, ಒಟ್ಟು ಆದಾಯ ಸ್ವೀಕೃತಿಗಳು (₹ 2,58,152.52 ಕೋಟಿ) ರಲ್ಲಿ 1.24 ಶೇಕಡವನ್ನು ರೂಪಿಸುತ್ತಿರುವ 49 ಪ್ರಮುಖ ಖಾತೆಗಳಡಿ ₹ 3,203.05 ಕೋಟಿ ಖಾತೆಗಳ 800–ಇತರ ಸ್ವೀಕಾರಗಳ ಅಡಿಯಲ್ಲಿ ವರ್ಗೀಕರಿಸಲಾಯಿತು. ಇದರಲ್ಲಿ, ಮೂರು ಪ್ರಮುಖ ಖಾತೆಗಳಡಿ ₹ 55.01 ಕೋಟಿ, ಸಂಬಂಧಿತ ಸೂಕ್ತ ಉಪಶೀರ್ಷಿಕೆಗಳ ಲಭ್ಯತೆ ಇದ್ದರೂ, ಉಪಶೀರ್ಷಿಕೆ–800–ಇತರ ಸ್ವೀಕಾರಗಳ ಅಡಿಯಲ್ಲಿ ವರ್ಗೀಕರಿಸಲಾಯಿತು (ವಿವರಗಳಿಗಾಗಿ **ಕೋಷ್ಟಕ 3.10** ನೋಡಿ).

ಕೋಷ್ಟಕ 3.10:
2024–25ರಲ್ಲಿ ಉಪ ಶೀರ್ಷಿಕೆ 800–ಇತರ ಸ್ವೀಕೃತಿಗಳ ಅಡಿಯಲ್ಲಿ ತಪ್ಪಾಗಿ ವರ್ಗೀಕರಿಸಲಾದ ಸ್ವೀಕೃತಿಗಳು

(₹ ಕೋಟಿಗಳಲ್ಲಿ)

ಖಾತೆ ಅಡಿಯಲ್ಲಿ ಬುಕ್ಕಿಂಗ್ ವಿವರಗಳು ತಪ್ಪಾಗಿ ವರ್ಗೀಕರಿಸಲಾಯಿತು	ಮೊತ್ತ	ವೆಚ್ಚದ ಸ್ವರೂಪ	ಸರಿಯಾದ ವರ್ಗೀಕರಣ
0049	54.36	ಸಾಲಗಳ ಮೇಲಿನ ಪ್ರೀಮಿಯಂ	116–ಮಾರುಕಟ್ಟೆ ಸಾಲಗಳ ಮೇಲೆ ಪ್ರೀಮಿಯಂ
0070	0.01	ಮಾಹಿತಿ ಹಕ್ಕು ಕಾಯ್ದೆಯಡಿ ಸ್ವೀಕೃತಿಗಳು	118– ಮಾಹಿತಿ ಹಕ್ಕು ಅಡಿಯಲ್ಲಿ ಸ್ವೀಕೃತಿಗಳು
0217	0.64	ಸ್ಥಳೀಯ ಸಂಸ್ಥೆಗಳಿಂದ ವೇತನ ಇತ್ಯಾದಿ ಕುರಿತು ಸ್ವೀಕೃತಿಗಳು	191–ಪುರಸಭೆಗಳಿಂದ ಸ್ವೀಕೃತಿಗಳು
ಒಟ್ಟು	**55.01**		

ಆಕರ: ಕರ್ನಾಟಕದ ಮಹಾಲೇಖಪಾಲರು (ಎ ಮತ್ತು ಇ) ನಿರ್ವಹಿಸುವ ಹಣಕಾಸು ಖಾತೆಗಳು ಮತ್ತು ವಿಎಲ್‌ಸಿ ದತ್ತಾಂಶ

ಮಾಪನಗಳಿಗೆ ಸಂಬಂಧಿಸಿದ ಅವಲೋಕನಗಳು

3.7 ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು

ಹಣಕಾಸು ಖಾತೆಗಳು ಸಸ್ಪೆನ್ಸ್ ಮತ್ತು ರವಾನೆ ಶೀರ್ಷಿಕೆಗಳ ಅಡಿಯಲ್ಲಿ ನಿವ್ವಳ ಬಾಕಿಯನ್ನು ಪ್ರತಿಬಿಂಬಿಸುತ್ತವೆ. ಈ ಶೀರ್ಷಿಕೆಗಳ ಅಡಿಯಲ್ಲಿ ಶಿಲ್ಕು ಇರುವ ಶಿಲ್ಕು ಮೊತ್ತಗಳನ್ನು ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಖರ್ಚು ಮತ್ತು ಜಮೆ ಶಿಲ್ಕುಗಳನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸುವ ಮೂಲಕ ಲೆಕ್ಕಹಾಕಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಗಮನಾರ್ಹ ಅಮಾನತ್ತು ಶೀರ್ಷಿಕೆಯಲ್ಲಿ ಶಿಲ್ಕುವನ್ನು **ಕೋಷ್ಟಕ 3.11**ರಲ್ಲಿ ತೋರಿಸಲಾಗಿದೆ.

ಕೋಷ್ಟಕ 3.11: ಅಮಾನತ್ತು ಮತ್ತು ಇರಸಾಲು ಶೀರ್ಷಿಕೆಗಳಡಿಯಲ್ಲಿ ಶಿಲ್ಕುಗಳು

(₹ ಕೋಟಿಗಳಲ್ಲಿ)

ಲೆಕ್ಕ ಶೀರ್ಷಿಕೆ		2022–23		2023–24		2024–25	
		ಖರ್ಚು	ಜಮೆ	ಖರ್ಚು	ಜಮೆ	ಖರ್ಚು	ಜಮೆ
8658	**ಅಮಾನತ್ತು ಲೆಕ್ಕ**						
101	ವೇತನ ಮತ್ತು ಲೆಕ್ಕಪತ್ರ ಕಚೇರಿ–ಅಮಾನತ್ತು	245.19	ಶೂನ್ಯ	343.40	ಶೂನ್ಯ	198.30	ಶೂನ್ಯ
	ನಿವ್ವಳ ಖರ್ಚು/ ಜಮೆ.	ಖರ್ಚು 245.19		ಖರ್ಚು 343.40		ಖರ್ಚು 198.30	
102	ಅಮಾನತ್ತು –(ಸಿವಿಲ್)	ಶೂನ್ಯ	411.74	0.05	ಶೂನ್ಯ	ಶೂನ್ಯ	592.85
	ನಿವ್ವಳ ಖರ್ಚು/ ಜಮೆ.	ಜಮೆ 411.74		ಖರ್ಚು 0.05		ಜಮೆ. 592.85	
109	ರಿಸರ್ವ್ ಬ್ಯಾಂಕ್ ಅಮಾನತ್ತು – (ಪ್ರಧಾನ ಕಚೇರಿ)	ಶೂನ್ಯ	ಶೂನ್ಯ	ಶೂನ್ಯ	ಶೂನ್ಯ	ಶೂನ್ಯ	0.01
	ನಿವ್ವಳ ಖರ್ಚು/ ಜಮೆ.	–		–		Cr. 0.01	
110	ರಿಸರ್ವ್ ಬ್ಯಾಂಕ್ ಅಮಾನತ್ತು – (ಕೇಂದ್ರ ಲೆಕ್ಕಪತ್ರ ಕಚೇರಿ)	273.45	ಶೂನ್ಯ	134.73	114.27	ಶೂನ್ಯ	8.62
	ನಿವ್ವಳ ಖರ್ಚ./ ಜಮೆ.	ಖರ್ಚು.273.45		ಖರ್ಚು.20.46		ಕ್ರೆಡಿಟ್ 8.62	
112	ಮೂಲದಲ್ಲಿ ಕಡಿತಗೊಳಿಸಿದ ತೆರಿಗೆ (ಟಿಡಿಎಸ್) ಅಮಾನತ್ತು	ಶೂನ್ಯ	39.62	ಶೂನ್ಯ	665.10	ಶೂನ್ಯ	793.95
	ನಿವ್ವಳ ಖರ್ಚ./ ಜಮೆ.	ಜಮೆ. 39.62		ಜಮೆ. 665.10		ಜಮೆ 793.95	
123	ಎಐಎಸ್ ಅಧಿಕಾರಿಗಳ ಗುಂಪು ವಿಮಾ ಯೋಜನೆ	1.32	ಶೂನ್ಯ	1.37	ಶೂನ್ಯ	1.36	ಶೂನ್ಯ
	ನಿವ್ವಳ ಖರ್ಚು / ಜಮೆ.	ಖರ್ಚು 1.32		ಸಿಆರ್ 1.37		ಖರ್ಚು 1.36	
8782	**ಅದೇ ಲೆಕ್ಕಾಧಿಕಾರಿಗೆ ಖಾತೆ ನೀಡುವ ಅಧಿಕಾರಿಗಳ ನಡುವೆ ನಗದು ಜಮೆಗಳು ಮತ್ತು ಹೊಂದಾಣಿಕೆಗಳು**						
102	ಲೋಕೋಪಯೋಗಿ ಕಾಮಗಾರಿಗಳು	82.61	ಶೂನ್ಯ	82.61	ಶೂನ್ಯ	964.68	ಶೂನ್ಯ
	ನಿವ್ವಳ ಖರ್ಚು / ಜಮೆ.	ಖರ್ಚು 82.61		ಖರ್ಚು 82.61		ಖರ್ಚು 964.68	
103	ಅರಣ್ಯ ಜಮೆಗಳು	13.71	ಶೂನ್ಯ	13.71	ಶೂನ್ಯ	13.71	ಶೂನ್ಯ
	ನಿವ್ವಳ ಖರ್ಚು / ಜಮೆ.	ಖರ್ಚು 13.71		ಖರ್ಚು 13.71		ಖರ್ಚು 13.71	
8793	**ಅಂತರ–ರಾಜ್ಯ ಅಮಾನತ್ತು ಲೆಕ್ಕ**	55.72	ಶೂನ್ಯ	0.02	ಶೂನ್ಯ	96.35	ಶೂನ್ಯ
	ನಿವ್ವಳ ಖರ್ಚು / ಶೂನ್ಯ	ಖರ್ಚು.55.72		ಖರ್ಚು.0.02		ಖರ್ಚು 96.35	

ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು

ಈ ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಇರುವ ಮೊತ್ತಗಳನ್ನು ತೆರವುಗೊಳಿಸದಿರುವುದು ರಾಜ್ಯ ಸರ್ಕಾರದ ವಿವಿಧ ಖಾತೆಗಳ ಶೀರ್ಷಿಕೆಗಳ (ವರ್ಷದಿಂದ ವರ್ಷಕ್ಕೆ ಮುಂದುವರೆಯುವ) ಆದಾಯ / ವೆಚ್ಚದ ಅಂಕಿಅಂಶಗಳು ಮತ್ತು ಬಾಕಿ ಮೊತ್ತಗಳ ನಿಖರತೆಯ ಮೇಲೆ ಪರಿಣಾಮ ಬೀರುತ್ತದೆ.

ಪ್ರಮುಖ ಶೀರ್ಷಿಕೆಗಳ ಅಡಿಯಲ್ಲಿ ಬಾಕಿಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

- **ವೇತನ ಮತ್ತು ಲೆಕ್ಕಪತ್ರ ಕಚೇರಿ ಅಮಾನತ್ತು**

ಈ ಶೀರ್ಷಿಕೆಯು ಮಹಾಲೇಖಾಪಾಲರು ಮತ್ತು ಭಾರತ ಸರ್ಕಾರದ ವಿವಿಧ ಪ್ರತ್ಯೇಕ ವೇತನ ಮತ್ತು ಲೆಕ್ಕಪತ್ರ ಕಚೇರಿಗಳ (ಪಿಎಒ) ನಡುವಿನ ವಹಿವಾಟುಗಳನ್ನು ಇತ್ಯರ್ಥಪಡಿಸುವ ಉದ್ದೇಶವನ್ನು ಹೊಂದಿದೆ. ಮಹಾಲೇಖಾಪಾಲರ ಪುಸ್ತಕಗಳಲ್ಲಿ ಆರಂಭದಲ್ಲಿ ಈ ಶೀರ್ಷಿಕೆಯಡಿಯಲ್ಲಿ ದಾಖಲಾದ ವಹಿವಾಟುಗಳನ್ನು ಪಿಎಒಯಿಂದ ಚೆಕ್ / ಡಿಮ್ಯಾಂಡ್ ಡ್ರಾಫ್ಟ್ ಗಳನ್ನು ಸ್ವೀಕರಿಸಿದ ನಂತರ ಮತ್ತು ಪಿಎಒ ಪರವಾಗಿ ರಾಜ್ಯ ಖಜಾನೆಗಳಲ್ಲಿ ಸ್ವೀಕರಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ ಚೆಕ್ / ಡಿಮ್ಯಾಂಡ್ ಡ್ರಾಫ್ಟ್ ವಿತರಣೆಯ ಮೇಲೆ ತೆರವುಗೊಳಿಸಲಾಗುತ್ತದೆ. ಈ ಶೀರ್ಷಿಕೆಯಡಿಯಲ್ಲಿ ಬಾಕಿ ಇರುವ ವೆಚ್ಚ ಶಿಲ್ಕು ಎಂದರೆ ಪಿಎಒ ಪರವಾಗಿ ಮಹಾಲೇಖಪಾಲರು ಪಾವತಿಗಳನ್ನು ಮಾಡಿದ್ದಾರೆ, ಅದನ್ನು ಇನ್ನೂ ಮರುಪಡೆಯಬೇಕಾಗಿದೆ. ಬಾಕಿ ಇರುವ ಜಮೆ ಶಿಲ್ಕು ಬಾಕಿ ಎಂದರೆ ಪಿಎಒ ಪರವಾಗಿ ಮಹಾಲೇಖಪಾಲರು ಪಾವತಿಗಳನ್ನು ಸ್ವೀಕರಿಸಿದ್ದಾರೆ, ಅದನ್ನು ಇನ್ನೂ ಪಾವತಿಸಬೇಕಾಗಿದೆ. ಈ ಶೀರ್ಷಿಕೆಯಡಿಯಲ್ಲಿ ನಿವ್ವಳ ವೆಚ್ಚ ಬಾಕಿಯು ವರ್ಷದ ವ್ಯತ್ಯಾಸವನ್ನು ತೋರಿಸಿದೆ. ಆದಾಗ್ಯೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷದಲ್ಲಿ ಇದು ₹ 145.10 ಕೋಟಿಗಳಷ್ಟು ಕಡಿಮೆಯಾಗಿದೆ. ಇದನ್ನು ಇತ್ಯರ್ಥಪಡಿಸಿದ ನಂತರ, ರಾಜ್ಯ ಸರ್ಕಾರದ ನಗದು ಶಿಲ್ಕು ಹೆಚ್ಚಾಗುತ್ತದೆ. ಈ ವಹಿವಾಟುಗಳು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದ್ದಾಗಿದ್ದವು ಮತ್ತು ಕೇಂದ್ರ ಸರ್ಕಾರದ ನಾಗರಿಕ ಪಿಂಚಣಿದಾರರಿಗೆ ರಾಜ್ಯ ಸರ್ಕಾರ ಮಾಡಿದ ಪಾವತಿಗಳಿಗೆ ಸಂಬಂಧಿಸಿದ್ದಾಗಿದ್ದವು.

- **ಅಮಾನತ್ತು ಲೆಕ್ಕ (ಸಿವಿಲ್)**

ವರ್ಗೀಕರಣದ ಸಂಪೂರ್ಣ ವಿವರಗಳು ಲಭ್ಯವಿಲ್ಲದ ವಹಿವಾಟುಗಳು, ಅಥವಾ ಅದಕ್ಕೆ ಪೂರಕವಾದ ಸಂಬಂಧಿತ ವೋಚರ್‌ಗಳು / ಅನುಸೂಚಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ಪಾವತಿ / ನಗದು ಲೆಕ್ಕಗಳ ಖಜಾನೆ ಅನುಸೂಚಿಗಳಲ್ಲಿ ವರದಿ ಮಾಡಲಾದ ಅಂಕಿ ಅಂಶಗಳು ಮತ್ತು ಪೂರಕ ವೋಚರ್‌ಗಳ ಅಂಕಿಗಳ ನಡುವೆ ವ್ಯತ್ಯಾಸಗಳಿದ್ದರೆ ಇತ್ಯಾದಿಗಳು ಈ ಶೀರ್ಷಿಕೆಯಲ್ಲಿ ಬಾಕಿ ಇರುವ ಅಂಕಿಗಳ ಪ್ರಮುಖ ಭಾಗವಾಗಿರುತ್ತದೆ. ರೈಲ್ವೇ, ರಕ್ಷಣಾ ಮತ್ತು ಅಂಚೆ ಮತ್ತು ದೂರಸಂಪರ್ಕ ಇಲಾಖೆಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ನಡೆಯುವ ವಹಿವಾಟುಗಳನ್ನು ಸಂಬಂಧಿಸಿದ ಅಧಿಕಾರಿಗಳು ಬಾಕಿಗಳನ್ನು ಇತ್ಯರ್ಥಗೊಳಿಸುವವರೆಗೆ ಆರಂಭದಲ್ಲಿ ಈ ಶೀರ್ಷಿಕೆಯಡಿ ವರ್ಗೀಕರಿಸಲಾಗುತ್ತದೆ. ಈ ಶೀರ್ಷಿಕೆಯಡಿಯಲ್ಲಿ 2024–25ನೇ ಸಾಲಿನಲ್ಲಿ ನಿವ್ವಳ ಖರ್ಚು ಶುಲ್ಕ (ಹೊಂದಾಣಿಕೆಯಾಗದ ಮೊತ್ತ) ₹ 592.85 ಕೋಟಿಯಷ್ಟಿತ್ತು. ರೈಲ್ವೆ (₹ 3.13 ಕೋಟಿ) ಮತ್ತು ರಕ್ಷಣಾ ಇಲಾಖೆಗೆ (₹ 0.39 ಕೋಟಿ)ಗೆ ಸಂಬಂಧಿಸಿದಂತೆ, ಅಮಾನತ್ತು ಇತ್ಯರ್ಥದ ನಂತರ ನಗದು ಶಿಲ್ಕು ಹೆಚ್ಚಾಗುತ್ತದೆ. ಉಳಿದವುಗಳಿಗೆ ಸಂಬಂಧಿಸಿದಂತೆ ನಗದು ಶಿಲ್ಕಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

- **ರಿಸರ್ವ್ ಬ್ಯಾಂಕ್ ಅಮಾನತ್ತು, ಕೇಂದ್ರ ಲೆಕ್ಕಪತ್ರ ಕಛೇರಿ**

ಅಂತರ–ಸರ್ಕಾರಿ ವಹಿವಾಟುಗಳನ್ನು ದಾಖಲಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ, ಅಲ್ಲಿ ಎರಡು ಸರ್ಕಾರಗಳ ನಗದು ಶಿಲ್ಕುಗಳ ನಡುವಿನ ವಿತ್ತೀಯ ಇತ್ಯರ್ಥವನ್ನು ಆರ್‌ಬಿಐನ ಕೇಂದ್ರ ಖಾತೆಗಳ ವಿಭಾಗಕ್ಕೆ ಸಲಹೆ ಕಳುಹಿಸುವ ಆಕರಕ ಮಾಡಲಾಗುತ್ತದೆ. ಆರ್‌ಬಿಐ ನಡೆಸಿದ ವಿತ್ತೀಯ ಇತ್ಯರ್ಥದ ಮಾಹಿತಿಯನ್ನು ಸ್ವೀಕರಿಸಿದ ನಂತರ ಮೊತ್ತವನ್ನು ಅಂತಿಮ ಖಾತೆಯ ಶೀರ್ಷಿಕೆಗೆ ವರ್ಗಾಯಿಸುವ ಆಕರಕ ಈ ಶೀರ್ಷಿಕೆಯನ್ನು ತೆರವುಗೊಳಿಸಲಾಗುತ್ತದೆ. ಈ ಸಸ್ಪೆನ್ಸ್ ಶೀರ್ಷಿಕೆ ಆಕರಕ ಇತ್ಯರ್ಥವಾಗುವ ಮುಖ್ಯ ವಹಿವಾಟುಗಳೆಂದರೆ ಅನುದಾನಗಳು, ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಅವುಗಳ ಮರುಪಾವತಿಗಳು, ಆರ್‌ಬಿಐನ ಸಾರ್ವಜನಿಕ ಸಾಲ ಕಚೇರಿಗಳು ಭದ್ರತೆಗಳ ಬಿಡುಗಡೆ ಮತ್ತು ಅದರ ಮೇಲೆ ಪಾವತಿಸಿದ ಬಡ್ಡಿ ಮತ್ತು ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮತ್ತು ವಿಲೇವಾರಿ

ಮಹಾನಿರ್ದೇಶಕರು ಮಾಡಿದ ಪಾವತಿಗಳು. 2024–25ರ ಅವಧಿಯಲ್ಲಿ, ಈ ಶೀರ್ಷಿಕೆಯಡಿಯಲ್ಲಿ ವೆಚ್ಚ ಬಾಕಿಯ ಹಿಂದಿನ ವರ್ಷಕ್ಕೆ ಹೋಲಿಸಿದರೆ ₹ 29.08 ಕೋಟಿಗಳಷ್ಟು ಹೆಚ್ಚಾಗಿದೆ ಮತ್ತು ಕ್ರೆಡಿಟ್ ಬಾಕಿಯು ₹ 8.62 ಕೋಟಿ ಇತ್ತು. ಇದನ್ನು ಇತ್ಯರ್ಥಪಡಿಸಿದ ನಂತರ, ರಾಜ್ಯ ಸರ್ಕಾರದ ನಗದು ಬಾಕಿಯು ಹೆಚ್ಚಾಗುತ್ತದೆ.

- **ಸಾರ್ವಜನಿಕ ಕಾರ್ಯಗಳ ಖಜಾನೆಗೆ ರವಾನೆ**

ಸಾರ್ವಜನಿಕ ಕಾರ್ಯಗಳ ವಿಭಾಗೀಯ ಅಧಿಕಾರಿಗಳು ರವಾನಿಸಿರುವ ಮೊತ್ತವನ್ನು ಖಜಾನೆಯು ಅಂಗೀಕರಿಸುತ್ತದೆಯೇ ಎಂದು ಪರಿಶೀಲಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. 2024–25ರ ವರ್ಷದ ಅಂತ್ಯದಲ್ಲಿ ₹ 964.68 ಕೋಟಿಗಳ ವೆಚ್ಚ ಬಾಕಿ ಖಜಾನೆಯೊಂದಿಗೆ ವಿಭಾಗೀಯ ಕಚೇರಿಗಳು ಹೊಂದಾಣಿಕೆ ಮಾಡಿಕೊಳ್ಳದಿರುವುದರಿಂದ ಮತ್ತು ಈ ವ್ಯತ್ಯಾಸಗಳು ವಂಚನೆ ಪ್ರಕರಣಗಳನ್ನು ಪತ್ತೆಹಚ್ಚದಿರಲು ಕಾರಣವಾಗಬಹುದು, ಇದರಿಂದ ಸರ್ಕಾರಕ್ಕೂ ನಷ್ಟಕ್ಕೆ ಕಾರಣವಾಗಬಹುದು.

- **ಖಜಾನೆಗೆ ಅರಣ್ಯ ಇರಸಾಲುಗಳು**

ಅರಣ್ಯ ವಿಭಾಗಗಳ ಮೂಲಕ ಅರಣ್ಯ ಆದಾಯ ಸಂಗ್ರಹಣೆ ಮತ್ತು ಖಜಾನೆಯಲ್ಲಿ ಸರ್ಕಾರಿ ಲೆಕ್ಕಗಳಿಗೆ ಅವುಗಳ ಜಮೆಯು ಆರಂಭದಲ್ಲಿ ಈ ಶೀರ್ಷಿಕೆಯಡಿಯಲ್ಲಿ ನಡೆಯುತ್ತದೆ. ಹಣ ಇರಸಾಲುಗಳನ್ನು ಖಜಾನೆ ಅಧಿಕಾರಿಗಳು ಒಪ್ಪಿಕೊಂಡು ಲೆಕ್ಕ ಹಾಕಿದ ನಂತರ ಖಜಾನೆ ಲೆಕ್ಕದಲ್ಲಿ ಕಾಣಿಸಿಕೊಳ್ಳುವ ಈ ಶೀರ್ಷಿಕೆಯಲ್ಲಿನ ಖರ್ಚುಗಳು ಜಮೆಗಳಿಂದ ತೀರುವಳಿಗೊಳ್ಳುತ್ತವೆ. ಆದಾಯದ ನಿಜವಾದ ವಸೂಲಿ ಮತ್ತು ಖಜಾನೆಗೆ ಅದರ ಜಮೆಯ ನಡುವಿನ ಸಮಯದ ವಿಳಂಬದಿಂದಾಗಿ, ಈ ಶೀರ್ಷಿಕೆಯ ಅಡಿಯಲ್ಲಿ ವಿಭಾಗದ ಖಾತೆಗಳಲ್ಲಿ ಕಾಣಿಸಿಕೊಳ್ಳುವ ಖರ್ಚುಗಳು ಜಮೆ ಮಾಡಿದ ಹಣವನ್ನು ಅಂತಿಮವಾಗಿ ಖಜಾನೆ ಲೆಕ್ಕಗಳಲ್ಲಿ ಲೆಕ್ಕ ಹಾಕುವವರೆಗೂ ಕಾಣಿಸಿಕೊಳ್ಳುತ್ತವೆ. ಈ ಶೀರ್ಷಿಕೆಯಡಿಯಲ್ಲಿ 2024–25ರ ವರ್ಷದ ಅಂತ್ಯದಲ್ಲಿ ₹ 13.71 ಕೋಟಿಗಳ ಖರ್ಚು ಶಿಲ್ಕು ಬಾಕಿಯಿತ್ತು.

- **ಅಂತರ ರಾಜ್ಯ ಅಮಾನತ್ತು ಖಾತೆ**

ಸರಿಯಾದ ಖಾತೆಯ ಶೀರ್ಷಿಕೆಯಡಿಯಲ್ಲಿ ಲೆಕ್ಕ ಹಾಕಲು ಅಗತ್ಯವಾದ ಮಾಹಿತಿಯ ಕೊರತೆಯಿರುವ ರಾಜ್ಯಗಳ ನಡುವಿನ ವಹಿವಾಟುಗಳನ್ನು ತಾತ್ಕಾಲಿಕವಾಗಿ ದಾಖಲಿಸಲು ಅಂತರ ರಾಜ್ಯ ಅಮಾನತ್ತು ಲೆಕ್ಕ ವನ್ನು ಬಳಸಲಾಗುತ್ತದೆ. ವಹಿವಾಟುಗಳ ಬಗ್ಗೆ ಅಗತ್ಯ ಮಾಹಿತಿಯನ್ನು ಸ್ವೀಕರಿಸಿದ ನಂತರ, ಅದನ್ನು ಸಂಬಂಧಪಟ್ಟ ರಾಜ್ಯದ ಸರಿಯಾದ ಶೀರ್ಷಿಕೆಯಡಿಯಲ್ಲಿ ಲೆಕ್ಕಹಾಕಲಾಗುತ್ತದೆ. ಈ ಶೀರ್ಷಿಕೆಯಡಿಯಲ್ಲಿನ ಶಿಲ್ಕುವು ಕಡಿಮೆಯಾಗುತ್ತಿರುವ ಪ್ರವೃತ್ತಿಯಲ್ಲಿದೆ ಮತ್ತು 2024–25ರ ಅವಧಿಯಲ್ಲಿ, ಖಾತೆಯು ₹ 96.35 ಕೋಟಿ ಖರ್ಚು ಶಿಲ್ಕುವನ್ನು ಹೊಂದಿದೆ. ಇದನ್ನು ಇತ್ಯರ್ಥಪಡಿಸಿದ ನಂತರ, ರಾಜ್ಯ ಸರ್ಕಾರದ ನಗದು ಶಿಲ್ಕುವು ಹೆಚ್ಚಾಗುತ್ತದೆ.

3.8 ಇಲಾಖೆಗಳ ಅಂಕಿಅಂಶಗಳನ್ನು ಸಮನ್ವಯ ಮಾಡಿರುವುದು

ಆದಾಯ / ವೆಚ್ಚದ ಮೇಲೆ ಪರಿಣಾಮಕಾರಿ ಆಯವ್ಯಯ ನಿಯಂತ್ರಣವನ್ನು ನಡೆಸಲು ಮತ್ತು ಲೆಕ್ಕಪತ್ರಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ರಾಜ್ಯ ಹಣಕಾಸು ನಿಯಮಗಳು ಮುಖ್ಯ ನಿಯಂತ್ರಣಾಧಿಕಾರಿಗಳು (ಸಿಸಿಒಗಳು) / ನಿಯಂತ್ರಣಾಧಿಕಾರಿಗಳು (ಸಿಒಗಳು) ಪ್ರತಿ ತಿಂಗಳು, ತಮ್ಮ ದಾಖಲಾತಿಗಳಲ್ಲಿ ದಾಖಲಾದ ಆದಾಯಗಳು ಮತ್ತು ವೆಚ್ಚಗಳನ್ನು ಮಹಾಲೇಖಪಾಲರು (ಎ ಮತ್ತು ಇ) ಅಂಕಿಅಂಶಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.

ನಿಯಂತ್ರಣಾಧಿಕಾರಿಗಳು ಆದಾಯ ಮತ್ತು ವೆಚ್ಚದ ಅಂಕಿಅಂಶಗಳ ಹೊಂದಾಣಿಕೆಯ ಸ್ಥಿತಿಯನ್ನು **ಕೋಷ್ಟಕ 3.12** ಮತ್ತು **ನಕ್ಷೆ 3.3**ರಲ್ಲಿ ನೀಡಲಾಗಿದೆ.

ಕೋಷ್ಟಕ 3.12: ನಿಯಂತ್ರಣಾಧಿಕಾರಿಗಳಿಂದ ಆದಾಯ ಮತ್ತು ವೆಚ್ಚದ ಹೊಂದಾಣಿಕೆಯ ಸ್ಥಿತಿ

ವರ್ಷ	ಒಟ್ಟು ನಿಯಂತ್ರಣಾಧಿಕಾರಿಗಳ ಸಂಖ್ಯೆ	ಆದಾಯ/ವೆಚ್ಚವನ್ನು ಸರಿಹೊಂದಿಸಿದ ನಿಯಂತ್ರಣಾಧಿಕಾರಿಗಳ ಸಂಖ್ಯೆ		
		ಪೂರ್ಣವಾಗಿ ಸರಿಹೊಂದಿಸಲಾಗಿದೆ	ಭಾಗಶಃ ಸರಿಹೊಂದಿಸಲಾಗಿದೆ	ಸರಿ ಹೊಂದಿಸಲಾಗಿಲ್ಲ
ರಸೀದಿಗಳು				
2022–23	96	72	14	7 + 3 (ವಹಿವಾಟು ಮಾಡಲಾಗಿಲ್ಲ)
2023–24	103	51	32	15 + 5 (ವಹಿವಾಟು ಮಾಡಲಾಗಿಲ್ಲ)
2024–25	104	88	05	2 + 9 (ವಹಿವಾಟು ಮಾಡಲಾಗಿಲ್ಲ)
ವೆಚ್ಚ				
2022–23	346	280	23	7 + 36 (ವಹಿವಾಟು ಮಾಡಲಾಗಿಲ್ಲ)
2023–24	346	156	114	32 + 44 (ವಹಿವಾಟು ಮಾಡಲಾಗಿಲ್ಲ)
2024–25	354	223	41	82 + 8 (ವಹಿವಾಟು ಮಾಡಲಾಗಿಲ್ಲ)

ಆಕರ: ಕರ್ನಾಟಕ ಮಹಾಲೇಖಾಪಾಲರು (ಎ ಮತ್ತು ಇ) ಕಚೇರಿಯಿಂದ ನಿರ್ವಹಿಸಲ್ಪಟ್ಟ ಮಾಹಿತಿ

ನಕ್ಷೆ 3.3: 2022–25ರ ಅವಧಿಯಲ್ಲಿ ಆದಾಯಗಳು ಮತ್ತು ವೆಚ್ಚಗಳ ಹೊಂದಾಣಿಕೆಯ ಸ್ಥಿತಿ

(₹ ಕೋಟಿಗಳಲ್ಲಿ)



ಆಕರ: ಮಹಾಲೇಖಾಪಾಲರು (ಎ ಮತ್ತು ಇ) ನಿರ್ವಹಿಸುವ ಮಾಹಿತಿ

2024–25ರಲ್ಲಿ, ಆದಾಯಗಳನ್ನು ಶೇಕಡಾ 99ರಷ್ಟು ಹೊಂದಾಣಿಕೆ ಮಾಡಲಾಗಿದ್ದರೂ, ವೆಚ್ಚವನ್ನು ಶೇಕಡಾ 96ರಷ್ಟು ಹೊಂದಾಣಿಕೆ ಮಾಡಲಾಗಿದೆ.

3.9 ನಗದು ಶಿಲ್ಕುಗಳ ಸಮನ್ವಯ

ಕರ್ನಾಟಕ ಮಹಾಲೇಖಾಪಾಲರ (ಎ ಮತ್ತು ಇ) ಲೆಕ್ಕಗಳ ಪ್ರಕಾರ, 31 ಮಾರ್ಚ್ 2025ರ ಹೊತ್ತಿಗೆ ರಾಜ್ಯ ಸರ್ಕಾರದ ನಗದು ಶಿಲ್ಕು ₹ 1,445.62 ಕೋಟಿಗಳು (ಖರ್ಚು) ಆಗಿದ್ದರೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ₹ 2.39 ಕೋಟಿಗಳನ್ನು (ಜಮೆ) ಎಂದು ವರದಿ ಮಾಡಿದೆ. ಅದರಂತೆ, ಮುಖ್ಯವಾಗಿ ಬ್ಯಾಂಕ್ ಸುರುಳಿಗಳನ್ನು ಸ್ವೀಕರಿಸದ ಕಾರಣ ಮತ್ತು ಖಜಾನೆ, ಆರ್‌ಬಿಐ, ಏಜೆನ್ಸಿ ಬ್ಯಾಂಕುಗಳು ಮತ್ತು ಮಹಾಲೇಖಪಾಲರು ಕಚೇರಿಯ ನಡುವೆ ಹೊಂದಾಣಿಕೆ ಬಾಕಿ ಇರುವ ಕಾರಣ ₹ 1,443.23 ಕೋಟಿಗಳ (ವೆಚ್ಚ) ವ್ಯತ್ಯಾಸವಿದೆ. ಈ ವ್ಯತ್ಯಾಸವು ಪ್ರಸ್ತುತ ಹೊಂದಾಣಿಕೆ ಪ್ರಕ್ರಿಯೆಯಲ್ಲಿ ಇದೆ.

ಬಹಿರಂಗಪಡಿಸುವಿಕೆಗೆ ಸಂಬಂಧಿಸಿದ ಅವಲೋಕನಗಳು

3.10 ಲೆಕ್ಕಪತ್ರ ಮಾನದಂಡಗಳ ಅನುಸರಣೆ

ಭಾರತದ ಸಂವಿಧಾನದ ಅನುಚ್ಛೇದ 150ರ ಪ್ರಕಾರ, ಭಾರತದ ರಾಷ್ಟ್ರಪತಿಗಳು, ಭಾರತದ ಲೆಕ್ಕಪರಿಶೋಧಕ ಮತ್ತು ಮಹಾಲೇಖಾಪಾಲರು ಅವರ ಸಲಹೆಯ ಮೇರೆಗೆ, ಕೇಂದ್ರ ಮತ್ತು ರಾಜ್ಯಗಳ

ಲೆಕ್ಕಪತ್ರಗಳ ನಮೂನೆಯನ್ನು ಸೂಚಿಸಬಹುದು. ಮಹಾಲೇಖಪಾಲರ ಸಲಹೆಯ ಮೇರೆಗೆ, ಭಾರತದ ರಾಷ್ಟ್ರಪತಿಗಳು ಇದುವರೆಗೆ ನಾಲ್ಕು ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳನ್ನು (ಐಜಿಎಎಸ್) ಅಧಿಸೂಚನೆ ಹೊರಡಿಸಿದ್ದಾರೆ. 2024–25ರ ಅವಧಿಯಲ್ಲಿ ರಾಜ್ಯ ಸರ್ಕಾರವು ಈ ಲೆಕ್ಕಪತ್ರ ಮಾನದಂಡಗಳ ಅನುಸರಣೆ ಮತ್ತು ಅದರಲ್ಲಿರುವ ನ್ಯೂನತೆಗಳನ್ನು **ಕೋಷ್ಟಕ 3.13** ರಲ್ಲಿ ವಿವರಿಸಲಾಗಿದೆ.

ಕೋಷ್ಟಕ 3.13: ಲೆಕ್ಕಪತ್ರ ನಿರ್ವಹಣಾ ಮಾನದಂಡಗಳ ಅನುಸರಣೆ

ಕ್ರಮ ಸಂಖ್ಯೆ	ಲೆಕ್ಕಪತ್ರ ಮಾನದಂಡಗಳು	ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡದ ಸಾರಾಂಶ	ರಾಜ್ಯ ಸರ್ಕಾರದ ಅನುಸರಣೆ	ಕೊರತೆಗಳು
1	ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ–1:	ಸರ್ಕಾರ ನೀಡಿದ ಕಾತರಿಗಳು ಅಗತ್ಯವಿರುವ ಕಾಣಿಸುವಿಕೆಗಳು	ಅನುಪಾಲನೆಯಾಗಿದೆ	ಯಾವುದೇ ಕೊರತೆ ಇಲ್ಲ
2	ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ–2:	ಸಹಾಯನುದಾನುಗಳ ಲೆಕ್ಕಹಾಕುವಿಕೆ ಮತ್ತು ವರ್ಗಿಕರಣ	ಭಾಗಶಃ ಅನುಸರಿಸಲಾಗಿದೆ	ಕೆಲವು ಸಹಾಯನುದಾನುಗಳು ಸ್ವೀಕರಿಸುವ ಸಂಸ್ಥೆಗಳಿಗೆ (ಉದಾಹರಣೆಗೆ ಮಲ್ನಾಡ್ ಪ್ರದೇಶ ಅಭಿವೃದ್ಧಿ ಮಂಡಳಿ ಇತ್ಯಾದಿ) ನೀಡಲಾದ ಸಹಾಯನುದಾನುಗಳನ್ನು ಬಂಡವಾಳ ವೆಚ್ಚವಾಗಿ ದಾಖಲಿಸಲಾಗಿದೆ. ಇದರ ಪರಿಣಾಮವಾಗಿ ಆದಾಯ ಮತ್ತು ಬಂಡವಾಳದ ನಡುವಿನ ತಪ್ಪು ವರ್ಗೀಕರಣ ಉಂಟಾಗಿ, ಆದಾಯ ವೆಚ್ಚವನ್ನು ಕಡಿಮೆ ತೋರಿಸಿರುವುದಲ್ಲದೆ ಆದಾಯ ಉಳಿದಿದ್ದನ್ನು ಹೆಚ್ಚಾಗಿ ತೋರಿಸಲಾಗಿದೆ.
3	ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ–3:	ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು	ಭಾಗಶಃ ಅನುಸರಿಸಲಾಗಿದೆ	ರಾಜ್ಯ ಸರ್ಕಾರವು ಮಾನದಂಡವು ಸೂಚಿಸಿದ ನಮೂನೆಯನ್ನು ಅನುಸರಿಸಿತು. ಆದಾಗ್ಯೂ, ರಾಜ್ಯ ಸರ್ಕಾರದ ಇಲಾಖೆಗಳು ನಿರ್ವಹಿಸುವ ಸಾಲದ ಖಾತೆಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಅಸಲು ಮತ್ತು ಬಡ್ಡಿಗೆ ಸಂಬಂಧಿಸಿದ ಮಾಹಿತಿಯು ಅಪೂರ್ಣವಾಗಿದೆ, ಏಕೆಂದರೆ ಎಲ್ಲಾ ಇಲಾಖೆಗಳ ಮಾಹಿತಿಯನ್ನು ಮಹಾಲೇಖಪಾಲರು (ಎ ಮತ್ತು ಇ) ಗೆ ಒದಗಿಸಲಾಗಿಲ್ಲ.
4	ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ–4:	ಹಿಂದಿನ ಅವಧಿಯ ಹೊಂದಾಣಿಕೆ	ಅನುಪಾಲನೆಯಾಗಿದೆ	ಯಾವುದೇ ಕೊರತೆ ಇಲ್ಲ

ಆಕರ: ಹಣಕಾಸು ಲೆಕ್ಕಗಳು

3.11 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ

31 ಮಾರ್ಚ್ 2025ರಂತೆ, ಒಂಬತ್ತು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ 16 ಲೆಕ್ಕಪತ್ರಗಳು **ಕೋಷ್ಟಕ 3.14** ರಲ್ಲಿ ವಿವರಿಸಿದಂತೆ ಬಾಕಿ ಉಳಿದಿವೆ. ಏಳು[4] ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಯಾವುದೇ ಲೆಕ್ಕಪತ್ರಗಳು ಸಲ್ಲಿಕೆಗೆ ಬಾಕಿ ಉಳಿದಿಲ್ಲ.

[4] ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.

ಕೋಷ್ಟಕ 3.14: 31 ಮಾರ್ಚ್ 2025ರಂತೆ ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಬಾಕಿ ವಿವರಗಳು

ಕ್ರಮ ಸಂಖ್ಯೆ	ಸಂಸ್ಥೆ ಅಥವಾ ಪ್ರಾಧಿಕಾರದ ಹೆಸರು	ಅಂದಿನಿಂದ ಬಾಕಿ ಉಳಿದಿರುವ ಖಾತೆಗಳು	ಬಾಕಿ ಇರುವ ಖಾತೆಗಳ ಸಂಖ್ಯೆ
1	ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್ ಸಿ)	2024–25	1
2	ಕರ್ನಾಟಕ ಪರಿಹಾರದ ಅರಣ್ಯೀಕರಣ ನಿಧಿ ನಿರ್ವಹಣಾ ಪ್ರಾಧಿಕಾರ (CAMPA)	2024–25	1
3	ಕರ್ನಾಟಕ ಜೀವ ವೈವಿಧ್ಯ ಮಂಡಳಿ (ಕೆಬಿಬಿ)	2023–24	2
4	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ)	2023–24	2
5	ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (ಕೆವಿಐಬಿ)	2023–24	2
6	ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ (ಕೆಎಸ್ಎಲ್ಎಸ್ಎ)	2023–24	2
7	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ	2023–24	2
8	ಕರ್ನಾಟಕ ಪಠ್ಯಪುಸ್ತಕ ಸಂಘ	2023–24	1
9	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	2021–22	3
	ಒಟ್ಟು		**16**

ಆಕರ: ಇಲಾಖಾ ದತ್ತಾಂಶ / ಮಾಹಿತಿ

ಲೆಕ್ಕಪತ್ರಗಳ ವಿಳಂಬ ಸಲ್ಲಿಕೆಯು ಪಾರದರ್ಶಕತೆಯನ್ನು ಕಡಿಮೆ ಮಾಡುತ್ತದೆ ಮತ್ತು ಹಣಕಾಸು ಮೇಲ್ವಿಚಾರಣೆಗೆ ಅಡ್ಡಿಯಾಗುತ್ತದೆ. ಆದ್ದರಿಂದ ಆಡಳಿತಾತ್ಮಕ ಇಲಾಖೆಗಳು ಲೆಕ್ಕಪತ್ರಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸುವುದನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ಈ ಸಂಸ್ಥೆಗಳೊಳಗೆ ಯಾವುದೇ ಸಾಮರ್ಥ್ಯ ಸಂಬಂಧಿತ ಸಮಸ್ಯೆಗಳು ಇದ್ದಲ್ಲಿ ಅವುಗಳನ್ನು ಪರಿಹರಿಸುವ ಕ್ರಮಗಳನ್ನು ಕೈಗೊಂಡು, ನವೀಕರಿತ ಹಣಕಾಸು ವರದಿಯನ್ನು ಖಚಿತಪಡಿಸಬೇಕು.

ಇತರ ವಿಷಯಗಳು

3.12 ಹಣ ದುರ್ಬಳಕೆ, ನಷ್ಟಗಳು, ಕಳ್ಳತನ, ಇತ್ಯಾದಿ .

ಕರ್ನಾಟಕ ಹಣಕಾಸು ಸಂಹಿತೆಯ ಕಂಡಿಕೆ 349ರ ಪ್ರಕಾರ, ಸರ್ಕಾರಿ ನೌಕರನು ತನ್ನ ವಂಚನೆ ಅಥವಾ ನಿರ್ಲಕ್ಷ್ಯದಿಂದ ಸರ್ಕಾರಕ್ಕೆ ಉಂಟಾದ ಯಾವುದೇ ನಷ್ಟಕ್ಕೆ ವೈಯಕ್ತಿಕವಾಗಿ ಜವಾಬ್ದಾರನಾಗಿರುತ್ತಾನೆ ಮತ್ತು ಇತರ ಯಾವುದೇ ಸರ್ಕಾರಿ ನೌಕರನ ವಂಚನೆ ಅಥವಾ ನಿರ್ಲಕ್ಷ್ಯದಿಂದ ಉಂಟಾಗುವ ಯಾವುದೇ ನಷ್ಟಕ್ಕೆ ಅವನು ತನ್ನ ಸ್ವಂತ ಕ್ರಮ ಅಥವಾ ನಿರ್ಲಕ್ಷ್ಯದಿಂದ ಉಂಟಾಗುವ ಯಾವುದೇ ನಷ್ಟಕ್ಕೆ ಕಾರಣನಾಗಿರುತ್ತಾನೆ.

31 ಮಾರ್ಚ್ 2025ರ ವೇಳೆಗೆ, ಹಣ ದುರ್ಬಳಕೆ, ನಷ್ಟ, ಕಳವು ಇತ್ಯಾದಿಗಳಿಗೆ ಸಂಬಂಧಿಸಿದಂತೆ ₹149.83 ಕೋಟಿ ಮೊತ್ತವನ್ನು ಒಳಗೊಂಡ 41 ಪ್ರಕರಣಗಳು ಬಾಕಿ ಇದ್ದವು. ಬಾಕಿ ಇರುವ ಪ್ರಕರಣಗಳ ಇಲಾಖಾವಾರು ವಿವರಗಳನ್ನು **ಕೋಷ್ಟಕ 3.15**ರಲ್ಲಿ ನೀಡಲಾಗಿದೆ.

ಕೋಷ್ಟಕ 3.15: ಹಣ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿಗಳ ಬಾಕಿ ಇರುವ ಪ್ರಕರಣಗಳ ವಿವರಗಳು.

(₹ ಕೋಟಿಗಳಲ್ಲಿ)

ಇಲಾಖೆ/ನಿಗಮದ ಹೆಸರು	ಹಣ ದುರ್ಬಳಕೆ / ನಷ್ಟ / ಕಳ್ಳತನದ ಪ್ರಕರಣಗಳು		ಹಣ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿಗಳ ಬಾಕಿ ಇರುವ ಪ್ರಕರಣಗಳ ಅಂತಿಮ ವಿಲೇವಾರಿಯಲ್ಲಿ ವಿಳಂಬಕ್ಕೆ ಕಾರಣಗಳು.					
			ಇಲಾಖಾ ಮತ್ತು ದಂಡಾರ್ಹ ಪರಿಶೋಧನೆಗಳು ನೀರಕ್ಷಣೆಯಲ್ಲಿರುವುದು		ಇಲಾಖಾ ಕ್ರಮ ಪ್ರಾರಂಭವಾಗಿದ್ದು ಅಂತಿಮಗೊಳ್ಳದಿರುವುದು		ದಂಡ ಪ್ರಕ್ರಿಯೆ ಅಂತಿಮಗೊಂಡಿದ್ದು, ಹಣ ವಸೂಲಿ ಬಾಕಿಯಿರುವುದು	
	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ
ಗೃಹ	5	1.25	–	–	5	1.25	–	–
ಕಾನೂನು	1	2.27	–	–	1	2.27	–	–
ಲೋಕೋಪಯೋಗಿ ಕಾಮಗಾರಿಗಳು	2	11.80	–	–	2	11.80	–	–
ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ	1	4.99	–	–	1	4.99	–	–
ಶಿಕ್ಷಣ ಕಾಲೇಜು ಇಲಾಖೆ	1	0.11	1	0.11	–	–	–	–
ನೌಕರರ ರಾಜ್ಯ ವಿಮಾ ಇಲಾಖೆ (ಇಎಸ್ಐ)	1	3.99	1	3.99	–	–	–	–

ಇಲಾಖೆ/ನಿಗಮದ ಹೆಸರು	ಹಣ ದುರ್ಬಳಕೆ / ನಷ್ಟ / ಕಳ್ಳತನದ ಪ್ರಕರಣಗಳು		ಹಣ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿಗಳ ಬಾಕಿ ಇರುವ ಪ್ರಕರಣಗಳ ಅಂತಿಮ ವಿಲೇವಾರಿಯಲ್ಲಿ ವಿಳಂಬಕ್ಕೆ ಕಾರಣಗಳು.					
			ಇಲಾಖಾ ಮತ್ತು ದಂಡಾರ್ಹ ಪರಿಶೋಧನೆಗಳು ನೀರಕ್ಷಣೆಯಲ್ಲಿರುವುದು		ಇಲಾಖಾ ಕ್ರಮ ಪ್ರಾರಂಭವಾಗಿದ್ದು ಅಂತಿಮಗೊಳ್ಳದಿರುವುದು		ದಂಡ ಪ್ರಕ್ರಿಯೆ ಅಂತಿಮಗೊಂಡಿದ್ದು, ಹಣ ವಸೂಲಿ ಬಾಕಿಯಿರುವುದು	
	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ
ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	1	0.13	–	–	1	0.13	–	–
ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ	8	0.30	2	0.04	5	0.27	1	0.0
ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ ಬೆಸ್ಕಾಂ	3	1.18	1	0.05	1	0.80	1	0.33
ಚಾಮರಾಜನಗರ ವಿದ್ಯುತ್ ಸರಬರಾಜು ನಿಗಮ ನಿಯಮಿತ ಸೆಸ್ಕಾಂ	2	1.00			1	0.45	1	0.54
ಗುಲ್ಬರ್ಗಾ ವಿದ್ಯುತ್ ಸರಬರಾಜು ನಿಗಮ ನಿಯಮಿತ ಜೆಸ್ಕಾಂ	3	2.28	1	0.37	2	1.91	–	–
ಹುಬ್ಬಳ್ಳಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಹೆಸ್ಕಾಂ	4	115.47	1	114.64	2	0.82	1	0.01
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್)	3	4.50	–		2	3.51	1	0.99
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ	1	0.03	–	–	1	0.03	–	–
ಮೀನುಗಾರಿಕೆ	1	0.06	–	–	1	0.06	–	–
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	3	0.42	3	0.42	–	–	–	–
ಕಂದಾಯ	1	0.05	1	0.05	–	–	–	–
ಒಟ್ಟು	**41**	**149.83**	**11**	**119.67**	**25**	**28.29**	**5**	**1.87**

ಆಕರ ಇಲಾಖಾ ದತ್ತಾಂಶ / ಮಾಹಿತಿ

41 ಪ್ರಕರಣಗಳಿಗೆ ಸಂಬಂಧಿಸಿದಂತೆ ಗಮನಾರ್ಹ ಅಂಶಗಳನ್ನು ಕೆಳಗಿನಂತೆ ವಿವರಿಸಲಾಗಿದೆ:

- ಒಂಬತ್ತು ಪ್ರಕರಣಗಳು 2013–14 ರಿಂದ 2023–24 ರ ಅವಧಿಯಲ್ಲಿ ಮುದ್ರಿತಗೊಂಡ ಎಜಿ ಅವರ ಪರಿಶೋಧನಾ ವರದಿಗಳ ಭಾಗವಾಗಿವೆ. ಉಳಿದ ಪ್ರಕರಣಗಳನ್ನು ಸಂಬಂಧಿತ ಇಲಾಖೆಗಳು ಗುರುತಿಸಿದ್ದು, ಅವುಗಳು ವಿವಿಧ ಹಂತಗಳಲ್ಲಿ ತನಿಖೆಯಲ್ಲಿವೆ.
- 25 ಪ್ರಕರಣಗಳ (₹28.29 ಕೋಟಿ) ಸಂಬಂಧದಲ್ಲಿ ಇಲಾಖಾ ಕ್ರಮವನ್ನು ಆರಂಭಿಸಲಾಗಿದ್ದರೂ, ಅಂತಿಮಗೊಳಿಸಲಾಗಿಲ್ಲ; ಇವುಗಳಲ್ಲಿ 14 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇವೆ.
- ಬಾಕಿ ಇರುವ ಪ್ರಕರಣಗಳ ವಯೇವಾರು ವಿವರ ಹಾಗೂ ಕಳವು ಮತ್ತು ಸರ್ಕಾರದ ಸಾಮಗ್ರಿಗಳ ಹಣ ದುರ್ಬಳಕೆ/ನಷ್ಟ ವರ್ಗಗಳಲ್ಲಿನ ಪ್ರಕರಣಗಳ ಸಂಖ್ಯೆಯನ್ನು **ಕೋಷ್ಟಕ.3.16**ರಲ್ಲಿ ಸಾರಾಂಶವಾಗಿ ನೀಡಲಾಗಿದೆ.

ಕೋಷ್ಟಕ 3.16: ಹಣ ದುರ್ಬಳಕೆ, ನಷ್ಟಗಳು, ವಂಚನೆಗಳು ಇತ್ಯಾದಿಗಳ ವಿವರ.

(₹ ಕೋಟಿಗಳಲ್ಲಿ)

ಬಾಕಿ ಇರುವ ಪ್ರಕರಣಗಳ ವಯೇವಾರು ವಿವರ			ಬಾಕಿ ಇರುವ ಪ್ರಕರಣಗಳ ಸ್ವರೂಪ	ಪ್ರಕರಣಗಳ ಸಂಖ್ಯೆ	ಒಳಗೊಂಡಿರುವ ಮೊತ್ತ
ವರ್ಷಗಳ ವ್ಯಾಪ್ತಿ	ಪ್ರಕರಣಗಳ ಸಂಖ್ಯೆ	ಒಳಗೊಂಡಿರುವ ಮೊತ್ತ			
0–5	13	128.35	ಕಳ್ಳತನ ಪ್ರಕರಣಗಳು	3	0.45
			ಹಣ ದುರ್ಬಳಕೆ / ನಷ್ಟಗಳು / ವಂಚನೆಗಳು, ಇತ್ಯಾದಿ	10	127.90
5–10	14	7.95	ಹಣ ದುರ್ಬಳಕೆ / ನಷ್ಟಗಳು / ವಂಚನೆಗಳು, ಇತ್ಯಾದಿ	14	7.95
10–15	14	13.53	ಹಣ ದುರ್ಬಳಕೆ / ನಷ್ಟಗಳು / ವಂಚನೆಗಳು, ಇತ್ಯಾದಿ	14	13.53
ಒಟ್ಟು	**41**	**149.83**	**ಒಟ್ಟು**	**41**	**149.83**

ಆಕರ: ಇಲಾಖಾ ದತ್ತಾಂಶ / ಮಾಹಿತಿ

ಒಟ್ಟು 41 ಪ್ರಕರಣಗಳ ಪೈಕಿ, 10 ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ಬಾಕಿ ಇರುವ 14 ಪ್ರಕರಣಗಳು (ಶೇಕಡಾ 34ರಷ್ಟು) ಸೇರಿವೆ.

3.13 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ

ಪ್ರತಿ ರಾಜ್ಯದಲ್ಲೂ, ವಿಧಾನಸಭೆಯಲ್ಲಿ ಪರಿಶೋಧನಾ ವರದಿಗಳನ್ನು ಮಂಡಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ, ವರದಿಗಳಲ್ಲಿ ಉಲ್ಲೇಖಿಸಲಾದ ಕಂಡಿಕೆಗಳ ಕುರಿತು ಸಂಬಂಧಿತ ಇಲಾಖೆಗಳು ಸ್ವಯಂಪ್ರೇರಿತ ವಿವರಣಾತ್ಮಕ ಟಿಪ್ಪಣಿ(ಇಎನ್) ಸಲ್ಲಿಸಬೇಕೆಂದು ಸಾರ್ವಜನಿಕ ಲೆಕ್ಕಗಳ ಸಮಿತಿ (ಪಿಎಸಿ)/ಹಣಕಾಸು ಇಲಾಖೆ ಸೂಚಿಸುತ್ತವೆ. ಅದೇ ರೀತಿ, ವರದಿಗಳನ್ನು ಮಂಡಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ, ಕೈಗೊಂಡ ಕ್ರಮಗಳ ಟಿಪ್ಪಣಿಗಳನ್ನು (ಎಟಿಎಮ್) ಮಹಾಲೇಖಪಾಲರು ಅವರಿಗೆ (ಪರಿಶೀಲನೆ ಮತ್ತು ಮುಂದಿನ ಪಿಎಸಿ ಗೆ ರವಾನಿಸಲು) ಸಂಬಂಧಿತ ಇಲಾಖೆಗಳು ಒದಗಿಸಬೇಕಾಗುತ್ತದೆ.

2019–20ನೇ ಸಾಲಿನ ರಾಜ್ಯ ಹಣಕಾಸು ಕುರಿತ ಭಾರತದ ಲೆಕ್ಕಪರಿಶೋಧಕ ಮತ್ತು ಮಹಾಲೇಖಾಪಾಲರ ಅವರ ವರದಿಯನ್ನು ಜುಲೈ 2022 ರಲ್ಲಿ ಸಾರ್ವಜನಿಕ ಲೆಕ್ಕಗಳ ಸಮಿತಿ ಚರ್ಚಿಸಿತು. 2012–13 ರಿಂದ 2018–19ನೇ ಸಾಲಿನ ರಾಜ್ಯ ಹಣಕಾಸುಗಳ ಪರಿಶೋಧನಾ ವರದಿಗಳ (ಎಸ್ಎಫ್ಎಆರ್) ಇದೇ ರೀತಿಯ ಕಂಡಿಕೆಗಳು ಮತ್ತು ಪ್ರಮುಖ ಅಂಶಗಳನ್ನು ಪಿಎಸಿಯಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. 2012–13 ರಿಂದ 2017–18ರ ಅವಧಿಗೆ ₹ 2,409.53 ಕೋಟಿಗಳ ಮೀತಿ ಮೀರಿದ ವೆಚ್ಚವನ್ನು ಸಕ್ರಮಗೊಳಿಸುವ ಬಗ್ಗೆ ಅದು ಚರ್ಚಿಸಿತು. ಪಿಎಸಿಯ ಶಿಫಾರಸನ್ನು ರಾಜ್ಯ ಶಾಸಕಾಂಗದಲ್ಲಿ (ಫೆಬ್ರವರಿ 2023) ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗಿದೆ. 2020–21 ಮತ್ತು 2021–22 ವರ್ಷಗಳ ಎಸ್ಎಫ್ಎಆರ್‌ಗೆ ಸಂಬಂಧಿಸಿದಂತೆ ಹಣಕಾಸು ಇಲಾಖೆಯು ಉತ್ತರಗಳನ್ನು ಒದಗಿಸಿದ್ದರೂ, 2022–23 ಮತ್ತು 2023–24ಕ್ಕೆ ಸಂಬಂಧಿಸಿದಂತೆ ಉತ್ತರಗಳಿಗಾಗಿ ಇನ್ನೂ ಕಾಯಲಾಗುತ್ತಿದೆ.

3.14 ತೀರ್ಮಾನ

ಬಡ್ಡಿ ಇರುವ ಮೀಸಲು ನಿಧಿಗಳು ಮತ್ತು ಠೇವಣಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ತನ್ನ ಬಡ್ಡಿ ಹೊಣೆಗಾರಿಕೆಯನ್ನು ನಿರ್ವಹಿಸಲಿಲ್ಲ.

ರಾಜ್ಯ ಸರ್ಕಾರವು ತನ್ನ ಹೆಚ್ಚಿನ ಹೂಡಿಕೆಗಾಗಿ ನಿಯೋಜಿತ ನಿಧಿ ವ್ಯವಸ್ಥಾಪಕರಿಗೆ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆಗೆ ನೌಕರರು ಮತ್ತು ಉದ್ಯೋಗದಾತರ ಕೊಡುಗೆಗಳ ಸಂಪೂರ್ಣ ಮೊತ್ತವನ್ನು ಪಾವತಿಸಲಿಲ್ಲ.

ಬಳಕೆ ಪ್ರಮಾಣಪತ್ರವನ್ನು (ಯುಸಿಗಳು) ಸಲ್ಲಿಕೆಯಲ್ಲಿ ಬಾಕಿ ಇರುವ ಪ್ರಮಾಣವು 2022–23 ರಿಂದ ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸುತ್ತಿದ್ದು, 2024–25ರಲ್ಲಿ 142 ಬಳಕೆ ಪ್ರಮಾಣಪತ್ರಗಳು ₹ 239.45 ಕೋಟಿ ಮೊತ್ತವನ್ನು ಒಳಗೊಂಡಂತೆ ಬಾಕಿ ಉಳಿದಿವೆ. ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಲ್ಲಿ ಉಂಟಾಗುವ ಬಾಕಿ, ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಪ್ರಯೋಜನಕ್ಕಾಗಿ ಬಳಸಲಾಗಿದೆ ಎಂಬ ಭರವಸೆ ಕೊರತೆಯೊಂದಿಗೆ, ಅನುದಾನಗಳ ಬಳಕೆಯ ಮೇಲ್ವಿಚಾರಣೆಯ ಕೊರತೆಯನ್ನೂಂಟುಮಾಡುತ್ತದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ ಬಾಕಿ ಉಳಿದಿರುವ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ (ಎನ್‌ಡಿಸಿ) ಶೇಕಡಾ 18.95 ರಷ್ಟು ಹೆಚ್ಚಾಗಿದೆ.

2020–21ರಿಂದ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮುಕ್ತಾಯದ ಶಿಲ್ಕು (ಕೆಎಂಇಆರ್‌ಸಿ ಹೊರತುಪಡಿಸಿ) ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ. ಅಂತಹ ಬೃಹತ್ ಮೊತ್ತದ ಹಣವನ್ನು ಉಳಿಸಿಕೊಳ್ಳುವುದು ಶಾಸಕಾಂಗ ಹಣಕಾಸು ನಿಯಂತ್ರಣದ ತತ್ವಕ್ಕೆ ವಿರುದ್ಧವಾಗಿತ್ತು.

ಒಂಬತ್ತು ಸ್ವಾಯತ್ತ ಸಂಸ್ಥೆಗಳು / ಪ್ರಾಧಿಕಾರಗಳ (2024–25 ರವರೆಗೆ ಬಾಕಿ) 16 ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗಾಗಿ ಸಲ್ಲಿಸಿಲ್ಲ. ವಾರ್ಷಿಕ ಲೆಕ್ಕಪತ್ರಗಳು ಮತ್ತು ಅವುಗಳ ಲೆಕ್ಕಪರಿಶೋಧನೆಯ ಅನುಪಸ್ಥಿತಿಯಲ್ಲಿ, ಈ ಸ್ವಾಯತ್ತ ಸಂಸ್ಥೆಗಳು / ಪ್ರಾಧಿಕಾರಗಳಿಗೆ ವಿತರಿಸಿದ ಅನುದಾನ ಮತ್ತು ಸಾಲಗಳ ಸರಿಯಾದ ಬಳಕೆಯನ್ನು ದೃಢೀಕರಿಸಲಾಗುವುದಿಲ್ಲ.

3.15 ಶಿಫಾರಸುಗಳು

